# ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ

## ರಾಜಸ್ವ ವಲಯ

## ಮಾರ್ಚ್ 2017ಕ್ಕೆ ಅಂತ್ಯಗೊಂಡ ಸಾಲಿಗೆ

**ಕರ್ನಾಟಕ ಸರ್ಕಾರ**

***2017ನೇ ಸಾಲಿನ ವರದಿ ಸಂಖ್ಯೆ 7***

# ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ

## ರಾಜಸ್ವ ವಲಯ

**ಮಾರ್ಚ್ 2017ಕ್ಕೆ ಅಂತ್ಯಗೊಂಡ ಸಾಲಿಗೆ**

**ಕರ್ನಾಟಕ ಸರ್ಕಾರ**

***2017ನೇ ಸಾಲಿನ ವರದಿ ಸಂಖ್ಯೆ 7***

## ವಿಷಯಸೂಚಿ


| | ಕಂಡಿಕೆ | ಪುಟ |
|---|---|---|
| **ಪೀಠಿಕೆ** | | v |
| **ಸಾಮಾನ್ಯ ಅವಲೋಕನ** | | vii |
| **ಅಧ್ಯಾಯ - I : ಸಾಮಾನ್ಯ** | | |
| ರಾಜಸ್ವ ಸ್ವೀಕೃತಿಗಳ ಪ್ರವೃತ್ತಿ | 1.1 | 1 |
| ರಾಜಸ್ವ/ವರಮಾನ ಬಾಕಿಗಳ ವಿಶ್ಲೇಷಣೆ | 1.2 | 3 |
| ಇಲಾಖೆಯು ಪತ್ತೆಹಚ್ಚಿರುವ ತೆರಿಗೆ ವಂಚನೆಯ ಪ್ರಕರಣಗಳು | 1.3 | 4 |
| ಬಾಕಿಯಿರುವ ಮರುಪಾವತಿ ಪ್ರಕರಣಗಳು | 1.4 | 4 |
| ಲೆಕ್ಕಪರಿಶೋಧನೆಯ ಕಡೆಗೆ ಸರ್ಕಾರ/ಇಲಾಖೆಗಳ ಪ್ರತಿಕ್ರಿಯೆ | 1.5 | 5 |
| ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳ ಬಗ್ಗೆ ಅನುಸರಣಾ ಕ್ರಮಗಳನ್ನು ಗಮನಿಸುವ ಸಲುವಾಗಿನ ವ್ಯವಸ್ಥೆಯ ವಿಶ್ಲೇಷಣೆ | 1.6 | 7 |
| ಲೆಕ್ಕಪರಿಶೋಧನೆಯ ಪೂರ್ವಭಾವಿ ಯೋಜನೆ | 1.7 | 9 |
| ಲೆಕ್ಕಪರಿಶೋಧನೆಯ ಫಲಿತಾಂಶಗಳು | 1.8 | 10 |
| ಈ ವರದಿಯ ವ್ಯಾಪ್ತಿ | 1.9 | 10 |
| **ಅಧ್ಯಾಯ - II : ಮಾರಾಟಗಳು, ವ್ಯಾಪಾರ, ಇತ್ಯಾದಿಗಳ ಮೇಲಿನ ತೆರಿಗೆಗಳು/ಮೌಲ್ಯ ವರ್ಧಿತ ತೆರಿಗೆ** | | |
| ತೆರಿಗೆ ನಿರ್ವಹಣೆ | 2.1 | 11 |
| ಆಂತರಿಕ ಲೆಕ್ಕಪರಿಶೋಧನೆ | 2.2 | 11 |
| ಲೆಕ್ಕಪರಿಶೋಧನೆಯ ಫಲಿತಾಂಶಗಳು | 2.3 | 11 |
| **ಕಂಡಿಕೆಗಳು** | | |
| ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಿಂದ (ಕರ್ನಾಟಕ ರೆಸಿಡೆನ್ಷಿಯಲ್ ಎಜುಕೇಶನ್ ಇನ್‌ಸ್ಟಿಟ್ಯೂಷನ್ಸ್ ಸೊಸೈಟಿ) ಸ್ವೀಕರಿಸಲಾದ ಗುತ್ತಿಗೆ ಕಾಮಗಾರಿಗಳಿಗೆ ಸಂಬಂಧಿತ ಸ್ವೀಕೃತಿಗಳನ್ನು ಘೋಷಿಸಿಕೊಳ್ಳದಿದ್ದ ಕಾರಣ ತೆರಿಗೆಯನ್ನು ವಿಧಿಸದಿದ್ದುದು | 2.4 | 12 |
| ಸಿಎಲ್–9 ಪರವಾನಿಗೆದಾರರುಗಳಿಂದ ಮಾಡಲಾದ ಮದ್ಯ ಮಾರಾಟದ ಮೇಲೆ ತೆರಿಗೆಯನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು | 2.5 | 14 |
| ಕರ್ನಾಟಕ ಮೌಲ್ಯವರ್ಧಿತ ಅಧಿನಿಯಮದ ಪರಿಚ್ಛೇದ 72(1)ರ ಅಡಿಯಲ್ಲಿ ದಂಡವನ್ನು ವಿಧಿಸದಿದ್ದುದು | 2.6 | 15 |
| ಲೆಕ್ಕಪರಿಶೋಧನೆಗೆ ಒಳಪಟ್ಟ ಲೆಕ್ಕಪತ್ರಗಳಲ್ಲಿ ಘೋಷಿಸಲಾಗಿದ್ದ ವ್ಯತ್ಯಾಸದ ತೆರಿಗೆ ಬಾಧ್ಯತೆಯನ್ನು ಪಾವತಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ಪಾವತಿಸಿದ್ದುದು | 2.7 | 16 |

| | ಕಂಡಿಕೆ | ಪುಟ |
|---|---|---|
| ಸಲ್ಲಿಕೆಗಳಲ್ಲಿ ಘೋಷಿಸಿಕೊಳ್ಳಲಾಗಿದ್ದ ತೆರಿಗೆ ಬಾಧ್ಯತೆಯ ವಸೂಲಾತಿಗಾಗಿ ವಾಣಿಜ್ಯ ತೆರಿಗೆ ಇಲಾಖೆಯು ಅನುಸರಣಾ ಕ್ರಮಗಳನ್ನು ತೆಗೆದುಕೊಳ್ಳದಿದ್ದುದು | 2.8 | 17 |
| ಬಡ್ಡಿಯನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು | 2.9 | 18 |
| **ಅಧ್ಯಾಯ III ರಾಜ್ಯ ಅಬಕಾರಿ** | | |
| ತೆರಿಗೆ ನಿರ್ವಹಣೆ | 3.1 | 21 |
| ಆಂತರಿಕ ಲೆಕ್ಕಪರಿಶೋಧನೆ | 3.2 | 21 |
| ಲೆಕ್ಕಪರಿಶೋಧನೆಯ ಫಲಿತಾಂಶಗಳು | 3.3 | 22 |
| **ಕರ್ನಾಟಕ ರಾಜ್ಯದಲ್ಲಿ ಆಲ್ಕೊಹಾಲಿನ ಉತ್ಪನ್ನಗಳ ತಯಾರಿಕೆ, ಹೊಂದಿರುವಿಕೆ, ಸಾಗಾಣಿಕೆ, ವಿತರಣೆ ಮತ್ತು ಮಾರಾಟಗಳು, ಇವುಗಳ ಮೇಲಿನ ನಿಬಂಧನೆ ಮತ್ತು ನಿಯಂತ್ರಣಗಳು ಈ ವಿಷಯದ ಮೇಲೆ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ** | 3.4 | 23 |
| **ಅಧ್ಯಾಯ-IV : ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕ** | | |
| ತೆರಿಗೆ ನಿರ್ವಹಣೆ | 4.1 | 55 |
| ಆಂತರಿಕ ಲೆಕ್ಕಪರಿಶೋಧನೆ | 4.2 | 55 |
| ಲೆಕ್ಕಪರಿಶೋಧನೆಯ ಫಲಿತಾಂಶಗಳು | 4.3 | 55 |
| **ಕಂಡಿಕೆಗಳು** | | |
| ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕದ ನಷ್ಟ | 4.4 | 56 |
| ವಾಸ್ತವಾಂಶಗಳನ್ನು ಬಚ್ಚಿಟ್ಟಿದ್ದರ ಕಾರಣ ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕವನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು | 4.5 | 57 |
| ಕಡಿಮೆ ಪ್ರಮಾಣದಲ್ಲಿ ಮಾಡಿದ್ದ ಮೌಲ್ಯಮಾಪನದ ಕಾರಣ ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕವನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು | 4.6 | 58 |
| **ಅಧ್ಯಾಯ-V : ಖನಿಜ ಸ್ವೀಕೃತಿಗಳು** | | |
| ತೆರಿಗೆ ನಿರ್ವಹಣೆ | 5.1 | 61 |
| ಆಂತರಿಕ ಲೆಕ್ಕಪರಿಶೋಧನೆ | 5.2 | 61 |
| ಲೆಕ್ಕಪರಿಶೋಧನೆಯ ಫಲಿತಾಂಶಗಳು | 5.3 | 61 |
| **ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳಿಂದ ಅಪ್ರಧಾನ ಖನಿಜಗಳ ಮೇಲೆ ರಾಜಧನವನ್ನು ಮೂಲದಲ್ಲಿಯೇ ಕಡಿದುಕೊಂಡಿರುವುದರ ಮೇಲಿನ ವಿಷಯಾಧಾರಿತ ಲೆಕ್ಕಪರಿಶೋಧನೆ** | 5.4 | 62 |
| **ಕಂಡಿಕೆಗಳು** | | |
| ಖನಿಜ ರವಾನೆ ಪರವಾನಿಗೆಗಳನ್ನು ಪಡೆಯದೆಯೇ ರವಾನಿಸಲಾದ ಅಪ್ರಧಾನ ಖನಿಜಗಳ ಮೇಲೆ ರಾಜಧನವನ್ನು ವಿಧಿಸದಿದ್ದುದು | 5.5 | 73 |
| ಖನಿಜ ರವಾನೆ ಪರವಾನಿಗೆಗಳನ್ನು ಪಡೆಯದೆಯೇ ರವಾನಿಸಲಾದ ಅಪ್ರಧಾನ ಖನಿಜಗಳ ಮೇಲೆ ದಂಡವನ್ನು ವಿಧಿಸದಿದ್ದುದು | 5.6 | 74 |

| | ಕಂಡಿಕೆ | ಪುಟ |
|---|---|---|
| **ಅಧ್ಯಾಯ-VI : ಭೂ ಕಂದಾಯ** | | |
| ತೆರಿಗೆ ನಿರ್ವಹಣೆ | 6.1 | 77 |
| ಆಂತರಿಕ ಲೆಕ್ಕಪರಿಶೋಧನೆ | 6.2 | 77 |
| ಲೆಕ್ಕಪರಿಶೋಧನೆಯ ಫಲಿತಾಂಶಗಳು | 6.3 | 77 |
| **ಕಂಡಿಕೆಗಳು** | | |
| ಸಂಯೋಜನಾ ಮೊತ್ತವನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು | 6.4 | 78 |
| **ಅನುಬಂಧಗಳು** | | |
| ಅನುಬಂಧ I | | 81 |
| ಅನುಬಂಧ II | | 84 |
| ಅನುಬಂಧ III | | 97 |
| ಅನುಬಂಧ IV | | 111 |
| ಅನುಬಂಧ V | | 112 |

## ಪೀಠಿಕೆ

ರಾಜ್ಯ ಶಾಸಕಾಂಗದ ಮುಂದೆ ಮಂಡಿಸುವ ಸಲುವಾಗಿ, ಮಾರ್ಚ್ 2017ಕ್ಕೆ ಅಂತ್ಯಗೊಂಡ ಸಾಲಿನ ಈ ವರದಿಯನ್ನು ಭಾರತದ ಸಂವಿಧಾನದ ಕಲಮು 151ರ ಅಡಿಯಲ್ಲಿ ಕರ್ನಾಟಕದ ರಾಜ್ಯಪಾಲರಿಗೆ ಸಲ್ಲಿಸುವುದಕ್ಕಾಗಿ ತಯಾರಿಸಲಾಗಿದೆ.

ಈ ವರದಿಯು ವಾಣಿಜ್ಯ ತೆರಿಗೆಗಳ ಇಲಾಖೆ, ಮುದ್ರಾಂಕಗಳು ಮತ್ತು ನೋಂದಣಿ ಇಲಾಖೆ, ಕಂದಾಯ ಇಲಾಖೆ, ರಾಜ್ಯ ಅಬಕಾರಿ ಇಲಾಖೆ ಹಾಗೂ ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಗಳು ಸೇರಿದಂತೆ ರಾಜಸ್ವ ವಲಯದ ಅಡಿಯಲ್ಲಿನ ಕರ್ನಾಟಕ ಸರ್ಕಾರದ ಇಲಾಖೆಗಳ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ ಹಾಗೂ ವಿಷಯಾಧಾರಿತ ಲೆಕ್ಕಪರಿಶೋಧನೆಯ ಗಮನಾರ್ಹ ಫಲಿತಾಂಶಗಳನ್ನು ಒಳಗೊಂಡಿರುತ್ತದೆ.

ಈ ವರದಿಯಲ್ಲಿ ತಿಳಿಸಲಾಗಿರುವ ದೃಷ್ಟಾಂತಗಳು 2016–17ರ ಅವಧಿಗೆ ಮಾಡಲಾದಂತಹ ಪರೀಕ್ಷಾ-ಪರಿಶೀಲನೆಯ ಸಮಯದಲ್ಲಿ ಗಮನಿಸಲಾದವುಗಳಷ್ಟೇ ಅಲ್ಲದೆಯೇ ಹಿಂದಿನ ಸಾಲುಗಳಲ್ಲಿ ಗಮನಿಸಲಾಗಿದ್ದು, ಆದರೆ ಹಿಂದಿನ ಲೆಕ್ಕಪರಿಶೋಧನಾ ವರದಿಗಳಲ್ಲಿ ವರದಿ ಮಾಡಲು ಸಾಧ್ಯವಾಗದವುಗಳು ಆಗಿರುತ್ತವೆ. 2016–17ರ ನಂತರದ ಅವಧಿಗೆ ಸಂಬಂಧಿತ ದೃಷ್ಟಾಂತಗಳನ್ನು ಅಗತ್ಯವಿರುವೆಡೆಗಳಲ್ಲಿ ಸೇರಿಸಲಾಗಿದೆ.

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ಲೆಕ್ಕಪರಿಶೋಧನಾ ಮಾನದಂಡಗಳ ಅನುಸಾರ ಲೆಕ್ಕಪರಿಶೋಧನೆಯನ್ನು ನಡೆಸಲಾಗಿದೆ.

# ಸಾಮಾನ್ಯ

# ಅವಲೋಕನ

## ಸಾಮಾನ್ಯ ಅವಲೋಕನ

ಈ ವರದಿಯು ₹ 311.58 ಕೋಟಿ ಮೊತ್ತದಷ್ಟು ತೆರಿಗೆ, ಬಡ್ಡಿ, ದಂಡವನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು, ಬರಬೇಕಾದ ವರಮಾನವನ್ನು ವಸೂಲಾತಿ ಮಾಡದೆಯೇ ಬಿಟ್ಟಿದ್ದುದು, ಇತ್ಯಾದಿಗಳಿಗೆ ಸಂಬಂಧಿಸಿದಂತೆ ಒಂದು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ ಹಾಗೂ ಒಂದು ವಿಷಯಾಧಾರಿತ ಲೆಕ್ಕಪರಿಶೋಧನೆಯೂ ಸೇರಿದಂತೆ 14 ಕಂಡಿಕೆಗಳನ್ನು ಒಳಗೊಂಡಿರುತ್ತದೆ. ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದಂತಹ ಕೆಲವು ಪ್ರಮುಖಾಂಶಗಳನ್ನು ಈ ಕೆಳಗೆ ತಿಳಿಸಲಾಗಿದೆ:

## I ಸಾಮಾನ್ಯ

2016–17 ಸಾಲಿಗೆ ರಾಜ್ಯ ಸರ್ಕಾರದ ಒಟ್ಟಾರೆ ರಾಜಸ್ವ/ವರಮಾನ ಸ್ವೀಕೃತಿಗಳು ಹಿಂದಿನ ಸಾಲಿನ ₹ 1,18,817.31 ಕೋಟಿಗೆ ಪ್ರತಿಯಾಗಿ ₹ 1,33,213.79 ಕೋಟಿ ಆಗಿದ್ದಿತು. ಇದರ ಪೈಕಿ ಶೇಕಡಾ 67ರಷ್ಟನ್ನು ರಾಜ್ಯವು ತೆರಿಗೆ ವರಮಾನ/ರಾಜಸ್ವದ (₹ 82,956.13 ಕೋಟಿ) ಮೂಲಕ ಹಾಗೂ ತೆರಿಗೆಯೇತರ ವರಮಾನ/ರಾಜಸ್ವದ (₹ 5,794.53 ಕೋಟಿ) ಮೂಲಕ ಸಂಗ್ರಹಿಸಿದ್ದಿತು. ಉಳಿಕೆ ಶೇಕಡಾ 33ರಷ್ಟನ್ನು ಭಾರತ ಸರ್ಕಾರದಿಂದ (ಕೇಂದ್ರ ಸರ್ಕಾರ) ವಿಭಜನೀಯ ಕೇಂದ್ರ ತೆರಿಗೆಗಳ ರಾಜ್ಯದ ಪಾಲಾಗಿ (₹ 28,759.94 ಕೋಟಿ) ಹಾಗೂ ಸಹಾಯಾನುಧಾನಗಳಾಗಿ (₹ 15,703.19 ಕೋಟಿ) ಸ್ವೀಕರಿಸಲಾಗಿದ್ದಿತು

**(ಕಂಡಿಕೆ 1.1)**

₹ 2,010.14 ಕೋಟಿ ಮೊತ್ತವು ಒಳಗೊಂಡಂತೆ 5,527 ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳನ್ನು ಒಳಗೊಂಡಂತೆ ಒಟ್ಟಾರೆ 2,282 ಪರೀಕ್ಷಣಾ ವರದಿಗಳು ಜೂನ್ 2017ರ ಅಂತ್ಯದಲ್ಲಿದ್ದಂತೆ ಇಲಾಖೆಗಳಲ್ಲಿ ಇತ್ಯರ್ಥಗೊಳ್ಳಲು ಬಾಕಿ ಉಳಿದಿದ್ದವು.

**(ಕಂಡಿಕೆ 1.5)**

ಮೌಲ್ಯವರ್ಧಿತ ತೆರಿಗೆ, ರಾಜ್ಯ ಅಬಕಾರಿ, ಮೋಟಾರು ವಾಹನಗಳ ಮೇಲಿನ ತೆರಿಗೆ, ಮುದ್ರಾಂಕಗಳು ಮತ್ತು ನೋಂದಣಿ ಶುಲ್ಕ, ಭೂ ಕಂದಾಯ ಹಾಗೂ ಇತರೆ ಇಲಾಖಾ ಕಚೇರಿಗಳ 377 ಘಟಕಗಳ/ಕಚೇರಿಗಳ 2016–17 ಸಾಲಿನಲ್ಲಿ ನಡೆಸಲಾದ ಪರೀಕ್ಷಾ-ಪರಿಶೀಲನೆಯು 1,245 ಕಂಡಿಕೆಗಳ ಮೂಲಕ ಸ್ಪಷ್ಟಪಡಿಸಲಾಗಿರುವಂತಹ ಪ್ರಕರಣಗಳಲ್ಲಿ ₹ 440.95 ಕೋಟಿ ಒಟ್ಟಾರೆ ರಾಜಸ್ವ/ ವರಮಾನವನ್ನು ಕಡಿಮೆ ಪ್ರಮಾಣದಲ್ಲಿ ನಿರ್ಧಾರಣೆ ಮತೋರಿಸಿಕೊಟ್ಟಿತು.

**(ಕಂಡಿಕೆ 1.8)**

## II ಮಾರಾಟಗಳು, ವ್ಯಾಪಾರ, ಇತ್ಯಾದಿಗಳ ಮೇಲೆ ತೆರಿಗೆಗಳು/ಮೌಲ್ಯ ವರ್ಧಿತ ತೆರಿಗೆ

**ಕಂಡಿಕೆಗಳು**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಿಂದ (ಕರ್ನಾಟಕ ರೆಸಿಡೆನ್ಸಿಯಲ್ ಎಜುಕೇಶನ್ ಇನ್ಸ್ಟಿಟ್ಯೂಷನ್ಸ್ ಸೊಸೈಟಿ) 54 ವರ್ತಕರುಗಳು 2012–13ರಿಂದ 2015–16ರಲ್ಲಿ ಪಡೆದ ₹ 201.27 ಕೋಟಿ ಮೊತ್ತದಷ್ಟು ಗುತ್ತಿಗೆ ವಹಿವಾಟಿನ ಸ್ವೀಕೃತಿಗಳ ಮೇಲೆ ತೆರಿಗೆಯನ್ನು ವಿಧಿಸದಿದ್ದುದು ₹ 13.81 ಕೋಟಿ ಮೊತದಷ್ಟು ತೆರಿಗೆಯನ್ನು ವಿಧಿಸದಿರುವಲ್ಲಿ ಪರಿಣಮಿಸಿತು.

**(ಕಂಡಿಕೆ 2.4)**

ನಗರ ಪ್ರದೇಶಗಳಲ್ಲಿ ಇದ್ದಂತಹ 96 ಬಾರು ಮತ್ತು ರೆಸ್ಟೋರೆಂಟುಗಳು ಮಾರ್ಚ್ 2014ರಿಂದ ಮಾರ್ಚ್ 2016ರ ಅವಧಿಗಳಲ್ಲಿ ಮಾಡಿದ್ದ ಮದ್ಯದ ಮಾರಾಟಗಳ ಮೇಲೆ ಕಡಿಮೆ ಪ್ರಮಾಣದಲ್ಲಿ ವಿಧಿಸಲಾಗಿದ್ದ ತೆರಿಗೆಯ ಮೊತ್ತವು ₹ 11.62 ಕೋಟಿ ಆಗಿದ್ದಿತು.

**(ಕಂಡಿಕೆ 2.5)**

274 ಕರದಾತರುಗಳು ತೆರಿಗೆಯನ್ನು ವಿಳಂಬವಾಗಿ ಪಾವತಿಸಿದ್ದಕ್ಕಾಗಿ ಕರ್ನಾಟಕ ಮೌವತೆ ಅಧಿನಿಯಮದ ಪರಿಚ್ಛೇದ 72(1)ರ ಅಡಿಯಲ್ಲಿ ದಂಡವನ್ನು ವಿಧಿಸದಿದ್ದುದು ₹ 6.81 ಕೋಟಿ ಆಗಿದ್ದಿತು.

**(ಕಂಡಿಕೆ 2.6)**

ಲೆಕ್ಕಪರಿಶೋಧನೆಗೆ ಒಳಪಟ್ಟ ಲೆಕ್ಕಪತ್ರಗಳಲ್ಲಿ ಲೆಕ್ಕಪರಿಶೋಧಕರು ನಿರ್ಧಾರಣೆ ಮಾಡಿದ್ದ ₹ 3.67 ಕೋಟಿ ಮೊತ್ತದಷ್ಟು ಹೆಚ್ಚುವರಿ ತೆರಿಗೆಯನ್ನು 24 ವರ್ತಕರುಗಳು ಪಾವತಿಸಿರಲಿಲ್ಲ.

**(ಕಂಡಿಕೆ 2.7)**

178 ಕರದಾತರುಗಳು ತಮ್ಮ 399 ಸಲ್ಲಿಕೆಗಳಲ್ಲಿ ಘೋಷಿಸಿಕೊಂಡಿದ್ದ ₹ 3.55 ಕೋಟಿ ಮೊತ್ತದಷ್ಟು ತೆರಿಗೆಯನ್ನು ಪಾವತಿಸಿರಲಿಲ್ಲ.

**(ಕಂಡಿಕೆ 2.8)**

81 ವರ್ತಕರುಗಳು ತೆರಿಗೆಯನ್ನು ಪಾವತಿಸುವಲ್ಲಿನ ವಿಳಂಬಕ್ಕೆ ಕರ್ನಾಟಕ ಮೌವತೆ ಅಧಿನಿಯಮದ ಪರಿಚ್ಛೇದ 36(2)ರ ಅಡಿಯಲ್ಲಿ ಬಡ್ಡಿಯನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು ₹ 5.08 ಕೋಟಿ ಆಗಿದ್ದಿತು.

**(ಕಂಡಿಕೆ 2.9)**

## III ರಾಜ್ಯ ಅಬಕಾರಿ

**ಕರ್ನಾಟಕ ರಾಜ್ಯದಲ್ಲಿ ಆಲ್ಕಹಾಲಿನ ಉತ್ಪನ್ನಗಳ ತಯಾರಿಕೆ, ಹೊಂದಿರುವಿಕೆ, ಸಾಗಾಣಿಕೆ, ವಿತರಣೆ ಮತ್ತು ಮಾರಾಟಗಳು, ಇವುಗಳ ಮೇಲಿನ ನಿಬಂಧನೆ ಮತ್ತು ನಿಯಂತ್ರಣಗಳು" ಈ ವಿಷಯದ ಮೇಲೆ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ**

ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪತ್ತಿಯ ಬಗ್ಗೆ ಪ್ರಮಾಣಕಗಳನ್ನು ಪರಿಷ್ಕರಿಸುವಲ್ಲಿನ ವಿಳಂಬವು ಏಪ್ರಿಲ್ 2012 ಮತ್ತು ಸೆಪ್ಟಂಬರ್ 2015ರ ಅವಧಿಯಲ್ಲಿ 12 ಬಟ್ಟಿಗೃಹಗಳಿಂದ (ಡಿಸ್ಟಿಲರಿಗಳು) ಸರ್ಕಾರಕ್ಕೆ ₹ 64.84 ಕೋಟಿ ಕನಿಷ್ಠ ಸಂಭಾವ್ಯ ನಷ್ಟ ಉಂಟಾಗುವಲ್ಲಿ ಪರಿಣಮಿತು.

**(ಕಂಡಿಕೆ ಸಂಖ್ಯೆ 3.4.8)**

ಇಲಾಖೆಯು ನಿರ್ದಿಷ್ಟಪಡಿಸಿದ್ದ ತಾಂತ್ರಿಕ ಮುನ್ನಡೆಗಳು ಹಾಗೂ ದಕ್ಷತೆಗಳ ಮೇಲೆ ಪ್ರಭಾವವನ್ನು ಭೀರಲಿಲ್ಲ, ಇದರಿಂದಾಗಿ ಹೆಚ್ಚುವರಿ ಉತ್ಪತ್ತಿಯನ್ನು ಇಲಾಖೆಯಿಂದ ನಿರ್ದಿಷ್ಟಪಡಿಸಲ್ಪಟ್ಟ ಪ್ರಮಾಣಕಗಳು ಹುದುಗುಕಾರಕ ಸ್ಥಾವರಗಳಿಗಾಗಿ ವಿನ್ಯಾಸಗೊಳಿಸಲ್ಪಟ್ಟಿದ್ದ ಮಾಡುವುದಕ್ಕಾಗಿ ತಮ್ಮ ಅನುಕೂಲಕ್ಕೆ ತಕ್ಕಂತೆ ಕೆಲಸ ಮಾಡಲು ಬಟ್ಟಿಕಾರರಿಗೆ ಸಾಕಷ್ಟು ಅಧಿಕ ಉತ್ಪತ್ತಿಯನ್ನು ತಂದುಕೊಟ್ಟಿತು. 2.19 ಕೋಟಿಯಿಂದ 4.23 ಕೋಟಿ ಬೃಹತ್ ಲೀಟರುಗಳಷ್ಟು ಸಾಕಷ್ಟು ಅಧಿಕ ಉತ್ಪತ್ತಿಯ ಶುದ್ಧೀಕರಿಸಲ್ಪಟ್ಟ ಮದ್ಯಸಾರವನ್ನು ಕುಡಿಯಲು ಯೋಗ್ಯವಾದಂತಹ ಮದ್ಯಸಾರವನ್ನಾಗಿ ಪರಿವರ್ತಿಸಿದಲ್ಲಿ, ಅದರಿಂದ ಬರುವ ಕನಿಷ್ಠ ವರಮಾನವು ಅನುಕ್ರಮವಾಗಿ ₹ 633.32 ಕೋಟಿ ಹಾಗೂ ₹ 1,222.62 ಕೋಟಿ ಆಗುತ್ತದೆ ಎಂಬುದನ್ನು ಲೆಕ್ಕಪರಿಶೋಧನೆಯ ವಿಶ್ಲೇಷಣೆಯು ತೋರಿಸಿಕೊಟ್ಟಿತು.

**(ಕಂಡಿಕೆಗಳು 3.4.9.1 ಮತ್ತು 3.4.9.2)**

ಬಟ್ಟಿಗೃಹದ ಅಧಿಕಾರಿಗಳ ದಕ್ಷತೆಯಿಂದ ಕೂಡಿರದ ಕಾರ್ಯನಿರ್ವಹಣೆಯು ನಿಯಂತ್ರಣ ಲೋಪದೋಷಗಳು ಸಂಭವಿಸುವಲ್ಲಿ ಪರಿಣಮಿಸಿತು ಹಾಗೂ ಇದು ಈ ಕೆಳಗಿನವುಗಳ ಕಡೆಗೆ ದಾರಿ ಮಾಡಿಕೊಟ್ಟಿತು:

- ರಾಜ್ಯದಲ್ಲಿನ ಮೂರು ಬಟ್ಟಿಗೃಹಗಳು ಮೇ 2012 ಮತ್ತು ಏಪ್ರಿಲ್ 2014ರ ನಡುವೆ ಖರೀದಿಸಿದ್ದ 19,555 ಮೆಟ್ರಿಕ್ ಟನ್ನುಗಳಷ್ಟು ಕಾಕಂಬಿಯನ್ನು (ಮೊಲಾಸಿಸ್) ಲೆಕ್ಕಯಿಡದಿದ್ದುದು ₹ 124.97 ಕೋಟಿ ಮೊತ್ತದಷ್ಟು ಸಂಭಾವ್ಯ ವರಮಾನ ನಷ್ಟ ಸಂಭವಿಸುವಲ್ಲಿ ಪರಿಣಮಿಸಿದ್ದಿತು/ವರಮಾನದ ಮೇಲೆ ಪ್ರಭಾವವನ್ನು ಭೀರಿದ್ದಿತು.;
- ಶೇಕಡಾ 96.72ರಿಂದ ಶೇಕಡಾ 99.33ರ ಅಂತರದಲ್ಲಿ ಕಾಕಂಬಿಯ ಮಾದರಿಗಳ ರಸಾಯನಿಕ ವಿಶ್ಲೇಷಣೆ ಮಾಡುವಲ್ಲಿನ ಕೊರತೆಯು ವಾಸ್ತವಿಕ ಉತ್ಪಾದನೆ/ಮಾರಾಟವನ್ನು ಅಂದಾಜು ಮಾಡುವಲ್ಲಿ ಇಲಾಖೆಯನ್ನು ನಿರ್ಬಂಧಿಸಿತು; ಮತ್ತು
- ನಾಲ್ಕು ಬಟ್ಟಿಗೃಹಗಳು ಏಪ್ರಿಲ್ 2012ರಿಂದ ಮಾರ್ಚ್ 2017ರ ಅವಧಿಗೆ ಕೋರಿದ ಅಧಿಕ ಪ್ರಮಾಣದ ಸಂಗ್ರಹಣಾ ನಷ್ಟವು 1,119.241 ಮೆಟ್ರಿಕ್ ಟನ್ನುಗಳಾಗಿದ್ದಿತು, ಅದರ ಮೇಲೆ ₹ 7.60 ಕೋಟಿ ಮೊತ್ತದಷ್ಟು ದಂಡವನ್ನು ವಿಧಿಸಲಿಲ್ಲ.

**(ಕಂಡಿಕೆ 3.4.10)**

ಅಬಕಾರಿ ಅಂಟು ಲೇಬಲ್ಲುಗಳಿಗೆ ಸಂಬಂಧಿತ ದತ್ತಸಂಚಯವನ್ನು ಸಗಟು ಮಾರಾಟ ಮದ್ಯ ಸಾಗಣೆ ಸಂಸ್ಥೆಯಾಗಿರುವ ಮೆ. ಕರ್ನಾಟಕ ರಾಜ್ಯ ಪಾನೀಯಗಳ ನಿಗಮ ನಿಯಮಿತದ (ಕೆಎಸ್‌ಬಿಸಿಎಲ್) ದತ್ತಸಂಚಯದೊಂದಿಗೆ ಅಂತರ-ಸಂಪರ್ಕವನ್ನು ಕಲ್ಪಿಸಿರಲಿಲ್ಲ, ಇದು ಅನಧಿಕೃತ ಲೇಬಲ್ಲುಗಳೊಂದಿಗೆ ಕರ್ನಾಟಕ ರಾಜ್ಯ ಪಾನೀಯಗಳ ನಿಗಮ ನಿಯಮಿತವು ಮದ್ಯವನ್ನು ಬಿಡುಗಡೆಗೊಳಿಸುವಲ್ಲಿ ಪರಿಣಮಿಸಿದ್ದಿತು.

**(ಕಂಡಿಕೆ 3.4.11)**

ಪರವಾನಿಗೆ ಷರತ್ತುಗಳ ಉಲ್ಲಂಘನೆಗಳು ಹಾಗೂ ಪರವಾನಿಗೆ ಇಲ್ಲದವರಿಂದ ಕುಡಿಯಲು ಯೋಗ್ಯವಾದ ಮದ್ಯ ಮಾರಾಟವು ಲೆಕ್ಕಪರಿಶೋಧನೆಯ ಅವಧಿಯಲ್ಲಿ ಕೊನೆಯಿಲ್ಲದಂತೆ ಮುಂದುವರೆದುಕೊಂಡು ಹೋಗಿದ್ದಿತು ಹಾಗೂ ಇಲಾಖೆಯ ಜಾರಿ ಕ್ರಮಗಳು ಅಂತಹ ನಿಯಮಬಾಹಿರ ಚಟುವಟಿಕೆಗಳನ್ನು ನಿಯಂತ್ರಿಸಲು ಸಮರ್ಪಕ ನಿರೋಧಕಗಳಾಗಿರಲಿಲ್ಲ.

**(ಕಂಡಿಕೆ 3.4.12)**

## IV ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕಗಳು

**ಕಂಡಿಕೆಗಳು**

ಪ್ರೆಸ್ಟೀಜ್ ಟೆಕ್ ಪಾರ್ಕ್ IIIಕ್ಕಾಗಿ ಮಾರ್ಗಸೂಚಿ ಮಾರುಕಟ್ಟೆ ಮೌಲ್ಯದಲ್ಲಿ ನಿರ್ದಿಷ್ಟ ದರವನ್ನು ನಿಗದಿಗೊಳಿಸದಿದ್ದುದು ₹ 17.25 ಕೋಟಿ ಮೊತ್ತದಷ್ಟು ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕಗಳ ನಷ್ಟ ಸಂಭವಿಸುವಲ್ಲಿಗೆ ದಾರಿ ಮಾಡಿಕೊಟ್ಟಿತು.

**(ಕಂಡಿಕೆ 4.4)**

21 ಮಾರಾಟ ಪತ್ರಗಳಲ್ಲಿ ಮತ್ತು ಮೂರು ಮಾರಾಟ ಒಡಂಬಡಿಕೆಗಳಲ್ಲಿ ವಾಸ್ತವಾಂಶಗಳನ್ನು ಹಾಗೂ ಅಂಕಿಸಂಖ್ಯೆಗಳನ್ನು ಬಚ್ಚಿಟ್ಟಿದ್ದುದು ₹ 1.60 ಕೋಟಿ ಮೊತ್ತದಷ್ಟು ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕವನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸುವಲ್ಲಿ ಪರಿಣಮಿಸಿತು.

**(ಕಂಡಿಕೆ 4.5)**

ಮಾರುಕಟ್ಟೆ ಮೌಲ್ಯ ಮಾರ್ಗಸೂಚಿಗಳ ದರಗಳನ್ನು ತಪ್ಪಾಗಿ ಅಳವಡಿಸಿಕೊಂಡ ಕಾರಣ 19 ಮಾರಾಟ ಪತ್ರಗಳಿಗೆ ಸಂಬಂಧಿಸಿದಂತೆ ಆಸ್ತಿಗಳನ್ನು ಕಡಿಮೆ ಪ್ರಮಾಣದಲ್ಲಿ ಮೌಲ್ಯಮಾಪನ ಮಾಡಲಾಗಿದ್ದಿತು, ಇದು ₹ 1.27 ಕೋಟಿ ಮೊತ್ತದಷ್ಟು ಮುದ್ರಾಂಕ ಸುಂಕ ಮತ್ತು ₹ 0.24 ಕೋಟಿ ಮೊತ್ತದಷ್ಟು ನೋಂದಣಿ ಶುಲ್ಕವನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸುವಲ್ಲಿ ಪರಿಣಮಿಸಿದ್ದಿತು

**(ಕಂಡಿಕೆ 4.6)**

## V ಗಣಿಗಳು ಮತ್ತು ಭೂವಿಜ್ಞಾನ

**"ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳು ಅಪ್ರಧಾನ ಖನಿಜಗಳ ಮೇಲೆ ರಾಜಧನವನ್ನು ಮೂಲದಲ್ಲಿಯೇ ಕಡಿದುಕೊಳ್ಳುವುದರ" ಮೇಲೆ ಒಂದು ವಿಷಯಾಧಾರಿತ ಲೆಕ್ಕಪರಿಶೋಧನೆ**

ಕಾನೂನಾತ್ಮಕ ಗಣಿ ಗುತ್ತಿಗೆ/ಪರವಾನಿಗೆಗಳನ್ನು ಹೊಂದಿರುವವರಿಂದ ರಾಜಧನದ ಪಾವತಿಗಾಗಿ ತಗಾದೆಯನ್ನು ಸೃಷ್ಟಿಸಲು ಆಧಾರವಾಗಿದ್ದಂತಹ ಅಗೆದ ಹೊಂಡದ ಅಳತೆಯ ಮೂಲಕ ಕೇವಲ ಶೇಕಡಾ 21ರಿಂದ 26ರಷ್ಟು ಅಪ್ರಧಾನ ಖನಿಜಗಳ ಪ್ರಮಾಣವನ್ನು ಮಾತ್ರ ಗಣಿ ಮತ್ತು ಭೂವಿಜ್ಞಾನ ಇಲಾಖೆಯು ನೇರವಾಗಿ ನಿರ್ಧಾರಣೆ ಮಾಡಿದ್ದಿತು. ಉಳಿದ ಅಪ್ರಧಾನ ಖನಿಜಗಳ ಪರಿಮಾಣವನ್ನು ಖನಿಜ ರವಾನೆ ಪರವಾನಿಗೆಗಳನ್ನು ಹೊಂದಿರದೆಯೇ ಸಾಗಾಣಿಕೆ ಮಾಡಲಾಗುತ್ತಿದ್ದಿತು ಹಾಗೂ ಕಾಮಗಾರಿಗಳನ್ನು ಕಾರ್ಯಗತಗೊಳಿಸುತ್ತಿದ್ದ ಇಲಾಖೆಗಳು/ಸಂಸ್ಥೆಗಳು ಗಣಿಗಾರಿಕೆಯ ಮೂಲಗಳನ್ನು ಖಚಿತಪಡಿಸಿಕೊಳ್ಳದೆಯೇ ರಾಜಧನವನ್ನು ವಿಧಿಸುತ್ತಿದ್ದವು/ಮೂಲದಲ್ಲಿಯೇ ಕಡಿದುಕೊಳ್ಳುತ್ತಿದ್ದವು. ಇದು, ರಾಜ್ಯದಲ್ಲಿ ಅಧಿಕ ಪ್ರಮಾಣದಲ್ಲಿನ ನಿಯಮಬಾಹಿರ ಗಣಿಗಾರಿಕೆಯ ಸಂಭಾವ್ಯತೆಯನ್ನು ಸೂಚಿಸುತ್ತಿದ್ದಿತು ಹಾಗೂ ಇದರ ಬಗ್ಗೆ ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯು ತನಿಖೆಯನ್ನು ನಡೆಸುವ ಅಗತ್ಯತೆಯಿರುತ್ತದೆ.

**(ಕಂಡಿಕೆ 5.4.2)**

ಪರೀಕ್ಷಾ-ಪರಿಶೀಲನೆ ಮಾಡಲಾದ ಹತ್ತು ಜಿಲ್ಲೆಗಳ ಪೈಕಿ, ಏಳು ಜಿಲ್ಲೆಗಳ ನಿರ್ಮಿತಿ ಕೇಂದ್ರಗಳು ಹಾಗೂ ಎಲ್ಲಾ ಹತ್ತು ಜಿಲ್ಲೆಗಳಲ್ಲಿನ ಮೆ. ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ನಿಯಮಿತವು ರಾಜಧನವನ್ನು ಮೂಲದಲ್ಲಿಯೇ ಕಡಿದುಕೊಂಡಿರಲಿಲ್ಲ. ಏಳು ನಿರ್ಮಿತಿ ಕೇಂದ್ರಗಳ ಪೈಕಿ ನಾಲ್ಕು ನಿರ್ಮಿತಿ ಕೇಂದ್ರಗಳು ಹಾಗೂ ಮೆ.ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತದ ಹತ್ತು ಕಚೇರಿಗಳ ಪೈಕಿ ಆರು ಕಚೇರಿಗಳು ತಾವು ಬಳಸಿಕೊಂಡ ಅಪ್ರಧಾನ ಖನಿಜಗಳ ಯಾವುದೇ ಲೆಕ್ಕಪತ್ರಗಳನ್ನು ಇಟ್ಟಿರಲಿಲ್ಲ/ತಮ್ಮ ವರದಿಗಳಲ್ಲಿ ತೋರಿಸಿರಲಿಲ್ಲ. ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇತರೆ ಏಳು ಇಲಾಖೆಗಳು/ಸಂಸ್ಥೆಗಳೂ ಸೇರಿದಂತೆ ನಿರ್ಮಿತಿ ಕೇಂದ್ರಗಳು ಮತ್ತು ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತದ ಅಡಿಯಲ್ಲಿ ವಿಧಿಸದಿದ್ದಂತಹ ಒಟ್ಟಾರೆ ರಾಜಧನದ ಮೊತ್ತವು ₹ 3.66 ಕೋಟಿ ಆಗಿದ್ದಿತು.

**(ಕಂಡಿಕೆ 5.4.3.1)**

ಪರೀಕ್ಷಾ-ಪರಿಶೀಲನೆ ಮಾಡಲಾದ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ 87 ಇಲಾಖೆಗಳು/ ಸಂಸ್ಥೆಗಳ ಪೈಕಿ:

- ಹತ್ತು ಜಿಲ್ಲೆಗಳಲ್ಲಿ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ 19 ಇಲಾಖೆಗಳು/ಸಂಸ್ಥೆಗಳು ಕಾಮಗಾರಿ ಸ್ಥಳಗಳಲ್ಲಿ ತಾವು ಪಡೆದುಕೊಳ್ಳಲಾದ ಹಾಗೂ ಕಾಮಗಾರಿಗಳಲ್ಲಿ ಬಳಸಿಕೊಳ್ಳಲಾದ ಅಪ್ರಧಾನ ಖನಿಜಗಳಿಗೆ ಸಂಬಂಧಿಸಿದಂತೆ ರಾಜಧನವನ್ನು ಮೂಲದಲ್ಲಿಯೇ ಕಡಿದುಕೊಂಡಿರಲಿಲ್ಲ, ಇದು ₹ 39.56 ಕೋಟಿ ಮೊತ್ತದಷ್ಟು ರಾಜಧನವನ್ನು ಮೂಲದಲ್ಲಿಯೇ ಕಡಿದುಕೊಳ್ಳದಿರುವಲ್ಲಿ ಪರಿಣಮಿಸಿತು;
- ಏಳು ಜಿಲ್ಲೆಗಳಲ್ಲಿ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಒಂಬತ್ತು ಇಲಾಖೆಗಳು/ಸಂಸ್ಥೆಗಳು ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ವೇಳೆಯಲ್ಲಿ 40.06 ಲಕ್ಷ ಘನ ಮೀಟರುಗಳಷ್ಟು ಮುರ್ರಂ ಅನ್ನು ಹೊರತೆಗೆದಿದ್ದವು. ಹೊರತೆಗೆಯಲಾದ ಮುರ್ರಂನ ಸಾಗಾಣಿಕೆ/ಬಳಕೆಯು ₹ 12.02 ಕೋಟಿ ಮೊತ್ತದಷ್ಟು ರಾಜಧನವನ್ನು ಆಕರ್ಷಿಸುತ್ತಿದ್ದಿತು, ಆದಾಗ್ಯೂ, ಬಳಕೆಗಳ ಬಗ್ಗೆ ವರದಿಗಳು ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳಲ್ಲಿ ಅಥವಾ ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಾಗಲೀ ಲಭ್ಯವಿರಲಿಲ್ಲ ಮತ್ತು
- ಏಳು ಜಿಲ್ಲೆಗಳಲ್ಲಿ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ 12 ಇಲಾಖೆಗಳು/ಸಂಸ್ಥೆಗಳು ಪರಿಷ್ಕರಣಾ-ಪೂರ್ವ ದರಗಳಲ್ಲಿ ರಾಜಧನವನ್ನು ವಸೂಲಾತಿ ಮಾಡಿದ್ದವು, ಇದು ₹ 2.38 ಕೋಟಿ ಮೊತ್ತದಷ್ಟು ರಾಜಧನವನ್ನು ಕಡಿಮೆ ಪ್ರಮಾಣದಲ್ಲಿ ವಸೂಲಾತಿ ಮಾಡುವಲ್ಲಿ ಪರಿಣಮಿಸಿತು.

**(ಕಂಡಿಕೆ 5.4.3.2 ಮತ್ತು 5.4.4)**

ಖನಿಜ ರವಾನೆ ಪರವಾನಿಗೆಗಳ ಹೊರತಾಗಿ ಅಪ್ರಧಾನ ಖನಿಜಗಳ ಸಾಗಣೆಗಾಗಿ ದಂಡವನ್ನು ವಿಧಿಸುವ ಷರತ್ತನ್ನು ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳ ಮೇಲೆ ವಿಧಿಸುವಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯು ವಿಫಲಗೊಂಡಿದ್ದಿತು. ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳು ಬಳಸಿಕೊಂಡಿದ್ದ ಅಪ್ರಧಾನ ಖನಿಜಗಳ ಮೂಲಗಳನ್ನು ಗುರುತಿಸಿರಲಿಲ್ಲ, ಇದು ಕಾನೂನುಬಾಹಿರ ಗಣಿಗಾರಿಕೆಯ ಸಾಧ್ಯತೆಗೆ/ಸಂಭಾವ್ಯತೆಗೆ ಹಾಗೂ ಖನಿಜ ರವಾನೆ ಪರವಾನಿಗೆಗಳ ಹೊರತಾಗಿ ಅಪ್ರಧಾನ ಖನಿಜಗಳ ಅನಿರ್ಬಂಧಿತ ರವಾನೆಗೆ ದಾರಿ ಮಾಡಿಕೊಟ್ಟಿದ್ದಿತು.

**(ಕಂಡಿಕೆ 5.4.6)**

**ಕಂಡಿಕೆ**

ಖನಿಜ ರವಾನೆ ಪರವಾನಿಗೆಗಳ ಹೊರತಾಗಿ ಅಪ್ರಧಾನ ಖನಿಜಗಳ ಸಾಗಾಣಿಕೆಗಾಗಿ ₹ 51.45 ಕೋಟಿ ಮೊತ್ತದಷ್ಟು ದಂಡವನ್ನು ಪಾವತಿಸುವಂತೆ ಗಣಿಗಾರಿಕೆ ಗುತ್ತಿಗೆದಾರರುಗಳಿಗೆ ತಗಾದೆಯನ್ನು ಸೃಷ್ಟಿಸಿರಲಿಲ್ಲ.

**(ಕಂಡಿಕೆ 5.6)**

## VI ಭೂ ಕಂದಾಯ

**ಕಂಡಿಕೆ**

ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಗಳಿಗಾಗಿ ಮಾರ್ಗಾಂತರಣ ಮಾಡಿದ್ದಕ್ಕಾಗಿ 13 ಪ್ರಕರಣಗಳಲ್ಲಿ ₹ 1.11 ಕೋಟಿ ಮೊತ್ತದಷ್ಟು ಸಂಯೋಜನಾ ಮೊತ್ತವನ್ನು ವಿಧಿಸಿರಲಿಲ್ಲ ಅಥವಾ ಕಡಿಮೆ ಪ್ರಮಾಣದಲ್ಲಿ ವಿಧಿಸಲಾಗಿದ್ದಿತು.

**(ಕಂಡಿಕೆ 6.4)**

# ಅಧ್ಯಾಯ – I
# ಸಾಮಾನ್ಯ

# ಅಧ್ಯಾಯ – I
# ಸಾಮಾನ್ಯ

## 1.1 ರಾಜಸ್ವ ಸ್ವೀಕೃತಿಗಳ ಪ್ರವೃತ್ತಿ

2016–17 ಸಾಲಿನಲ್ಲಿ ಕರ್ನಾಟಕ ಸರ್ಕಾರವು ಸಂಗ್ರಹಿಸಿದ ತೆರಿಗೆ ಮತ್ತು ತೆರಿಗೆಯೇತರ ರಾಜಸ್ವ/ವರಮಾನ, ಪ್ರಸಕ್ತ ಸಾಲಿನಲ್ಲಿ ಕೇಂದ್ರ ಸರ್ಕಾರದ ವಿಭಜನೀಯ ತೆರಿಗೆಗಳಿಗೆ ಸಂಬಂಧಿಸಿದಂತೆ ರಾಜ್ಯದ ಪಾಲು ಮತ್ತು ಭಾರತ ಸರ್ಕಾರದಿಂದ ಸ್ವೀಕರಿಸಲಾದಂತಹ ಅನುದಾನಗಳು ಹಾಗೂ ತತ್ಸಂಬಂಧಿತ ಹಿಂದಿನ ನಾಲ್ಕು ವರ್ಷಗಳ ಅಂಕಿ–ಸಂಖ್ಯೆಗಳನ್ನು **ಕೋಷ್ಟಕ – 1.1.1**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.1.1**
**ರಾಜಸ್ವ ಸ್ವೀಕೃತಿಗಳ ಪ್ರವೃತ್ತಿ**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ವಿವರಗಳು | 2012-13 | 2013-14 | 2014-15 | 2015-16 | 2016-17 |
|---|---|---|---|---|---|---|
| **1.** | ರಾಜ್ಯ ಸರ್ಕಾರವು ಸಂಗ್ರಹಿಸಿದ ರಾಜಸ್ವ/ವರಮಾನ | | | | | |
| | • ತೆರಿಗೆ ರಾಜಸ್ವ/ವರಮಾನ | 53,753.55 | 62,603.53 | 70,180.21 | **75,550.18** | **82,956.13** |
| | • ತೆರಿಗೆಯೇತರ ರಾಜಸ್ವ/ವರಮಾನ | 3,966.11 | 4,031.90 | 4,688.24 | **5,355.04** | **5,794.53** |
| | ಒಟ್ಟು | **57,719.66** | **66,635.43** | **74,868.45** | **80,905.22** | **88,750.66** |
| **2.** | ಭಾರತ ಸರ್ಕಾರದಿಂದ ಸ್ವೀಕೃತಿಗಳು | | | | | |
| | • ಕೇಂದ್ರದ ವಿಭಜನೀಯ ತೆರಿಗೆಗಳು ಮತ್ತು ಸುಂಕಗಳ ನಿವ್ವಳ ಸ್ವೀಕೃತಿಗಳ ಪಾಲು[1] | 12,647.14 | 13,808.28 | 14,654.25 | 23,983.34 | 28,759.94 |
| | • ಅನುದಾನಗಳು | 7,809.42 | 9,098.82 | 14,619.45 | 13,928.75 | 15,703.19 |
| | ಒಟ್ಟು | **20,456.56** | **22,907.10** | **29,273.70** | **37,912.09** | **44,463.13** |
| **3.** | ರಾಜ್ಯ ಸರ್ಕಾರದ ಒಟ್ಟಾರೆ ರಾಜಸ್ವ/ವರಮಾನ ಸ್ವೀಕೃತಿಗಳು (1 ಮತ್ತು 2) | **78,176.22** | **89,542.53** | **1,04,142.15** | **1,18,817.31** | **1,33,213.79** |
| **4.** | ಒಟ್ಟಾರೆ ರಾಜಸ್ವ/ವರಮಾನಕ್ಕೆ ಹೋಲಿಸಿದ್ದಲ್ಲಿ ರಾಜ್ಯ ಸರ್ಕಾರವು ಸಂಗ್ರಹಿಸಿದ ರಾಜಸ್ವ/ವರಮಾನ ಶೇಕಡಾವಾರು (1 ಮತ್ತು 3) | **74** | **74** | **72** | **68** | **67** |

2016–17 ಸಾಲಿನಲ್ಲಿ ರಾಜ್ಯ ಸರ್ಕಾರವು ಗಳಿಸಿದ ರಾಜಸ್ವವು/ವರಮಾನವು (₹ 88,750.66 ಕೋಟಿ) ಒಟ್ಟು ರಾಜಸ್ವ/ವರಮಾನ ಸ್ವೀಕೃತಿಗಳ ಶೇಕಡಾ 67ರಷ್ಟು ಆಗಿದ್ದಿತು ಎಂಬುದನ್ನು ಮೇಲ್ಕಂಡ ಕೋಷ್ಟಕವು ಸೂಚಿಸುತ್ತದೆ. 2016–17 ಸಾಲಿನಲ್ಲಿನ ಉಳಿದ ಶೇಕಡಾ 33ರಷ್ಟು ಸ್ವೀಕೃತಿಗಳು ಭಾರತ ಸರ್ಕಾರದಿಂದ ಬಂದಿರುವುದು.

**1.1.2** 2012–13ರಿಂದ 2016–17ರ ಅವಧಿಯಲ್ಲಿ ಸಂಗ್ರಹಿಸಲಾದಂತಹ ತೆರಿಗೆ ರಾಜಸ್ವ/ವರಮಾನದ ವಿವರಗಳನ್ನು **ಕೋಷ್ಟಕ 1.1.2**ರಲ್ಲಿ ನೀಡಲಾಗಿದೆ.

---

[1] 'ಎ ತೆರಿಗೆ ರಾಜಸ್ವ' ದಡಿಯಲ್ಲಿದ್ದ ಲೆಕ್ಕಪತ್ರಗಳ ಪ್ರಧಾನ ಶೀರ್ಷಿಕೆಗಳು 0020 ಸಂಸ್ಥೀಯ ತೆರಿಗೆ, 0021–ಸಂಸ್ಥೀಯ ತೆರಿಗೆಯಲ್ಲದ ಆದಾಯದ ಮೇಲಿನ ತೆರಿಗೆಗಳು, 0028–ಆದಾಯ ಮತ್ತು ವೆಚ್ಚಗಳ ಮೇಲಿನ ಇತರೆ ತೆರಿಗೆಗಳು – ಅಪ್ರಧಾನ ಲೆಕ್ಕಶೀರ್ಷಿಕೆ–901, 0032–ಐಶ್ವರ್ಯದ ಮೇಲಿನ ತೆರಿಗೆಗಳು, 0037–ಸೀಮಾ ಸುಂಕ, 0038–ಕೇಂದ್ರ ಅಬಕಾರಿ ಸುಂಕಗಳು, 0044–ಸೇವಾ ತೆರಿಗೆ, ಹಾಗೂ 0045–ಸಾಮಗ್ರಿಗಳು ಮತ್ತು ಸೇವೆಗಳ ಮೇಲಿನ ಇತರೆ ತೆರಿಗೆಗಳು ಮತ್ತು ಸುಂಕಗಳು–ಅಪ್ರಧಾನ ಲೆಕ್ಕಶೀರ್ಷಿಕೆ–901, ಇವುಗಳನ್ನು 2016–17ನೇ ಸಾಲಿಗೆ ಕರ್ನಾಟಕ ಸರ್ಕಾರದ ಹಣಕಾಸು ಲೆಕ್ಕಪತ್ರಗಳಲ್ಲಿ ದಾಖಲಿಸಿದ್ದಂತೆ ರಾಜ್ಯಗಳಿಗೆ ಹಂಚಿಕೆ ಮಾಡಲಾಗಿದ್ದ ನಿವ್ವಳ ಸ್ವೀಕೃತಿಗಳ ಪಾಲು, ಇವುಗಳ ಅಡಿಯಲ್ಲಿನ ಅಂಕಿಸಂಖ್ಯೆಗಳನ್ನು ರಾಜ್ಯ ಸರ್ಕಾರ ಗಳಿಸಿದ ತೆರಿಗೆಗಳಿಂದ ಪ್ರತ್ಯೇಕಿಸಿ ಕೇಂದ್ರದ ವಿಭಜನೀಯ ತೆರಿಗೆಗಳು ಮತ್ತು ಸುಂಕಗಳ ನಿವ್ವಳ ಸ್ವೀಕೃತಿಗಳ ಪಾಲಿನಲ್ಲಿ ಸೇರಿಸಲಾಗಿದೆ.

**ಕೋಷ್ಟಕ 1.1.2**
**ತೆರಿಗೆ ರಾಜಸ್ವ/ವರಮಾನ ಸ್ವೀಕೃತಿಗಳ ವಿವರಗಳು**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ರಾಜಸ್ವ ವರಮಾನದ ಶೀರ್ಷಿಕೆ | 2012-13 | | 2013-14 | | 2014-15 | | 2015-16 | | 2016-17 | | 2015–16ಕ್ಕೆ ಹೋಲಿಸಿದಲ್ಲಿ 2016–17ರಲ್ಲಿನ ಶೇಕಡಾವಾರು ಹೆಚ್ಚಳ (+)/ ಇಳಿಕೆ (–) | |
|---|---|---|---|---|---|---|---|---|---|---|---|---|---|
| | | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯ ವ್ಯಯ ಅಂದಾಜು | ವಾಸ್ತವಿಕ |
| 1. | ಮಾರಾಟಗಳು, ವಾಣಿಜ್ಯ ಮುಂತಾದವುಗಳ ಮೇಲಿನ ತೆರಿಗೆಗಳು | 27,735.00 | 28,414.44 | 33,590.00 | 33,719.35 | 37,250.00 | 38,286.03 | 41,329.00 | 40,448.63 | 46,504.10 | 46,105.17 | 12.52 | 13.98 |
| 2. | ರಾಜ್ಯ ಅಬಕಾರಿ | 10,775.00 | 11,069.73 | 12,600.00 | 12,828.36 | 14,430.00 | 13,801.08 | 15,200.00 | 15,332.88 | 16,510.00 | 16,483.75 | 8.62 | 7.51 |
| 3. | ಮುದ್ರಾಂಕ ಸುಂಕ ಹಾಗೂ ನೋಂದಣಿ ಶುಲ್ಕ | 5,200.00 | 5,225.02 | 6,500.00 | 6,188.76 | 7,450.00 | 7,025.85 | 8,200.00 | 8,214.71 | 9,100.00 | 7,805.98 | 10.98 | (-) 4.98 |
| 4. | ಮೋಟಾರು ವಾಹನಗಳ ಮೇಲಿನ ತೆರಿಗೆಗಳು | 3,350.00 | 3,829.52 | 4,120.00 | 3,911.50 | 4,350.00 | 4,541.57 | 4,800.00 | 5,001.69 | 5,160.00 | 5,594.39 | 7.50 | 11.85 |
| 5. | ಇತರವುಗಳು | 4,760.69 | 5,214.84 | 5,653.99 | 5,955.56 | 6,389.75 | 6,525.68 | 6,916.39 | 6,552.27 | 6,590.34 | 6,966.84 | (-) 4.71 | 6.33 |
| **ಒಟ್ಟು** | | **51,820.69** | **53,753.55** | **62,463.99** | **62,603.53** | **69,869.75** | **70,180.21** | **76,445.39** | **75,550.18** | **83,864.44** | **82,956.13** | **9.70** | **9.80** |

**1.1.3** 2012–13ರಿಂದ 2016–17ರ ಅವಧಿಯಲ್ಲಿ ಸಂಗ್ರಹಿಸಲಾದಂತಹ ತೆರಿಗೆಯೇತರ ರಾಜಸ್ವ/ವರಮಾನದ ವಿವರಗಳನ್ನು **ಕೋಷ್ಟಕ 1.1.3**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.1.3**
**ಸಂಗ್ರಹಿಸಲಾದಂತಹ ತೆರಿಗೆಯೇತರ ರಾಜಸ್ವ/ವರಮಾನದ ವಿವರಗಳು**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ರಾಜಸ್ವ/ ವರಮಾನದ ಶೀರ್ಷಿಕೆ | 2012-13 | | 2013-14 | | 2014-15 | | 2015-16 | | 2016-17 | | 2015–16ಕ್ಕೆ ಹೋಲಿಸಿದಲ್ಲಿ 2016–17ರಲ್ಲಿನ ಶೇಕಡಾವಾರು ಹೆಚ್ಚಳ (+)/ ಇಳಿಕೆ (–) | |
|---|---|---|---|---|---|---|---|---|---|---|---|---|---|
| | | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯ ವ್ಯಯ ಅಂದಾಜು | ವಾಸ್ತವಿಕ |
| 1 | ಕಬ್ಬಿಣೇತರ ಲೋಹಗಳ ಗಣಿಗಾರಿಕೆ ಮತ್ತು ಲೋಹ ಉದ್ಯಮಗಳು | 1,500.00 | 1,496.49 | 1,750.00 | 1,474.49 | 1,750.00 | 1,931.10 | 2,048.15 | 2,003.80 | 2,402.83 | 2,419.43 | 17.32 | 20.74 |
| 2. | ಇತರೆ ತೆರಿಗೆಯೇತರ ಸ್ವೀಕೃತಿಗಳು | 1,692.82 | 2,469.62 | 2,288.28 | 2,557.41 | 2,723.43 | 2,757.14 | 3,158.02 | 3,351.24 | 3,817.62 | 3,375.10 | 20.89 | 0.71 |
| **ಒಟ್ಟು** | | **3,192.82** | **3,966.11** | **4,038.28** | **4,031.90** | **4,473.43** | **4,688.24** | **5,206.17** | **5,355.04** | **6,220.45** | **5,794.53** | **19.48** | **8.21** |

## 1.2 ರಾಜಸ್ವ/ವರಮಾನ ಬಾಕಿಗಳ ವಿಶ್ಲೇಷಣೆ

ರಾಜಸ್ವ/ವರಮಾನದ ಕೆಲವು ಪ್ರಧಾನ ಶೀರ್ಷಿಕೆಗಳಿಗೆ ಸಂಬಂಧಿಸಿದಂತೆ 31 ಮಾರ್ಚ್ 2017ರಲ್ಲಿದ್ದಂತೆ ರಾಜಸ್ವ/ವರಮಾನ ಬಾಕಿಗಳು **ಕೋಷ್ಟಕ – 1.2**ರಲ್ಲಿ ವಿವರಿಸಿರುವಂತೆ ₹ 16,394.48 ಕೋಟಿಯಷ್ಟಿದ್ದವು.

**ಕೋಷ್ಟಕ -1.2**

**ರಾಜಸ್ವ/ವರಮಾನದ ಬಾಕಿಗಳು**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ರಾಜಸ್ವ/ವರಮಾನದ ಶೀರ್ಷಿಕೆ | 31 ಮಾರ್ಚ್ 2017ರಲ್ಲಿದ್ದಂತೆ ಬಾಕಿ ಇದ್ದಂತಹ ಒಟ್ಟಾರೆ ಮೊತ್ತ | ಇಲಾಖೆಯ ಉತ್ತರಗಳು |
|---|---|---|---|
| 1. | 0039 (ರಾಜ್ಯ ಅಬಕಾರಿ) | 808.71 | ಒಟ್ಟಾರೆ ಬಾಕಿಗಳ ಪೈಕಿ, ₹ 75.22 ಕೋಟಿ ಮೊತ್ತವು ನ್ಯಾಯಾಲಯಗಳ ತಡೆಯಲ್ಲಿರುತ್ತದೆ, ₹ 374.56 ಕೋಟಿ ಮೊತ್ತವು ಕಂದಾಯ ವಸೂಲಾತಿ ಪ್ರಮಾಣಪತ್ರಗಳಿಂದ ವ್ಯಾಪಿಸಿರುತ್ತದೆ ಹಾಗೂ ಉಳಿದ ₹358.93 ಕೋಟಿ ಮೊತ್ತಕ್ಕೆ ಸಂಬಂಧಿಸಿದಂತೆ ವಸೂಲಾತಿಯು ಪ್ರಗತಿಯಲ್ಲಿದೆ. |
| 2. | 0040 (ಮಾರಾಟಗಳು, ವ್ಯಾಪಾರ, ಇತ್ಯಾದಿಗಳ ಮೇಲಿನ ತೆರಿಗೆಗಳು) | 14,651.42 | ಒಟ್ಟಾರೆ ಬಾಕಿಗಳ ಪೈಕಿ, ₹ 2,647.55 ಕೋಟಿ ಮೊತ್ತಕ್ಕೆ ನ್ಯಾಯಾಲಯಗಳಿಂದ ತಡೆಯಿದೆ, ₹ 142.41 ಕೋಟಿ ಮೊತ್ತವು ಬಿಐಎಫ್ಆರ್ [2] ಮುಂದಿದೆ, ₹ 203.28 ಕೋಟಿ ಮೊತ್ತಕ್ಕೆ ಸಂಬಂಧಿಸಿದಂತೆ ಸಂಸ್ಥೆಗಳು ಸಮಾಪನ ಪ್ರಕ್ರಿಯೆಯ ಅಡಿಯಲ್ಲಿವೆ, ₹ 85.62 ಕೋಟಿ ಮೊತ್ತವು ಕಂದಾಯ ವಸೂಲಾತಿ ಪ್ರಮಾಣ ಪತ್ರಗಳ ವ್ಯಾಪ್ತಿಯಲ್ಲಿರುತ್ತದೆ, ₹ 11,337.44 ಕೋಟಿ ಮೊತ್ತವು ನ್ಯಾಯಾಲಯಗಳ ಹಾಗೂ ಇಲಾಖಾ ವಸೂಲಾತಿಯ ವ್ಯಾಪ್ತಿಯಲ್ಲಿವೆ ಹಾಗೂ ₹ 76.33 ಕೋಟಿ ಮೊತ್ತಕ್ಕೆ ಸಂಬಂಧಿಸಿದಂತೆ ವಸೂಲಾತಿಯು ಸಾಧ್ಯವಿಲ್ಲದೆಯೇ ದಾಖಲೆಗಳಿಂದ ತೆಗೆದುಹಾಕುವ (ರೈಟ್ ಆಫ್) ಪ್ರಸ್ತಾವನೆಗಳನ್ನು ಮಾಡಲಾಗಿದೆ ಹಾಗೂ ಸ್ವೀಕರಿಸಲಾಗಿರುವಂತಹ ₹ 158.79 ಕೋಟಿ ಮೊತ್ತವು ಪರಿಶೀಲನೆಯ ಅಡಿಯಲ್ಲಿದೆ. |
| 3. | 0853 (ಕಬ್ಬಿಣೇತರ ಲೋಹಗಳ ಗಣಿಗಾರಿಕೆ ಮತ್ತು ಲೋಹ ಉದ್ಯಮಗಳು) | 934.35 | ಮಾಹಿತಿಯನ್ನು ಒದಗಿಸಿರುವುದಿಲ್ಲ. |
| **ಒಟ್ಟು** | | **16,394.48** | |

ಮುದ್ರಾಂಕಗಳು ಮತ್ತು ನೋಂದಣಿ, ಇಂಧನ, ಸಾರಿಗೆ ಮತ್ತು ಕಂದಾಯ ಇಲಾಖೆಗಳಿಗೆ ಸಂಬಂಧಿಸಿದಂತೆ ರಾಜಸ್ವ/ವರಮಾನದ ಬಾಕಿಗಳು, ಯಾವುದಾದರೂ ಇದ್ದಲ್ಲಿ, ಅವುಗಳ ವಿವರಗಳನ್ನು ಕೋರಲಾಗಿದೆಯಾದರೂ (ಮೇ 2017), ಅವುಗಳ ಮಾಹಿತಿಯನ್ನು ಸ್ವೀಕರಿಸಲಾಗಿರುವುದಿಲ್ಲ (ನವಂಬರ್ 2017).

[2] ಕೈಗಾರಿಕಾ ಮತ್ತು ಹಣಕಾಸು ಪುನರ್–ನಿರ್ಮಾಣ ಮಂಡಳಿ (ಬಿಐಎಫ್ಆರ್).

## 1.3 ಇಲಾಖೆಯು ಪತ್ತೆ ಹಚ್ಚಿರುವ ತೆರಿಗೆ ವಂಚನೆಯ ಪ್ರಕರಣಗಳು

ರಾಜ್ಯ ಅಬಕಾರಿ ಮತ್ತು ವಾಣಿಜ್ಯ ತೆರಿಗೆಗಳ ಇಲಾಖೆಗಳು ಪತ್ತೆ ಹಚ್ಚಿರುವಂತಹ ತೆರಿಗೆ ವಂಚನೆಯ ಪ್ರಕರಣಗಳ ವಿವರಗಳನ್ನು **ಕೋಷ್ಟಕ 1.3** ರಲ್ಲಿ ನೀಡಲಾಗಿದೆ.

**ಕೋಷ್ಟಕ -1.3**
**ತೆರಿಗೆ ಪಾವತಿಯಿಂದ ತಪ್ಪಿಸಿಕೊಂಡಿರುವಂತಹ ಪ್ರಕರಣಗಳು**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ರಾಜಸ್ವ/ ವರಮಾನದ ಶೀರ್ಷಿಕೆ | 31 ಮಾರ್ಚ್ 2016ರಲ್ಲಿದ್ದಂತೆ ಬಾಕಿ ಇದ್ದಂತಹ ಪ್ರಕರಣಗಳು | 2016–17ರಲ್ಲಿ ಪತ್ತೆ ಹಚ್ಚಿರುವಂತಹ ಪ್ರಕರಣಗಳು | ಒಟ್ಟು | ಕರನಿರ್ಧಾರಣೆ/ವಿಚಾರಣೆ/ತನಿಖೆಗಳನ್ನು ಪೂರ್ಣಗೊಳಿಸಲಾಗಿರುವಂತಹ ಹಾಗೂ ದಂಡ ಇತ್ಯಾದಿಗಳ ಜೊತೆಯಲ್ಲಿ ಹೆಚ್ಚುವರಿ ತಗಾದೆಯನ್ನು ಸೃಷ್ಟಿಸಲಾದಂತಹ ಪ್ರಕರಣಗಳ ಸಂಖ್ಯೆ | | 31 ಮಾರ್ಚ್ 2017ರಲ್ಲಿದ್ದಂತೆ ಅಂತಿಮ ಗೊಳಿಸಲು ಬಾಕಿಯಿದ್ದಂತಹ ಪ್ರಕರಣಗಳ ಸಂಖ್ಯೆ |
|---|---|---|---|---|---|---|---|
| | | | | | ಪ್ರಕರಣಗಳ ಸಂಖ್ಯೆ | ಪಾವತಿಗಾಗಿ ತಗಾದೆಯ ಮೊತ್ತ | |
| 1. | 0039 (ರಾಜ್ಯ ಅಬಕಾರಿ) | 02 | 0 | 02 | 0 | 0 | 02 |
| 2. | 0040 (ಮಾರಾಟಗಳು, ವ್ಯಾಪಾರ, ಇತ್ಯಾದಿಗಳ ಮೇಲಿನ ತೆರಿಗೆ) | 5,182 | 27,310 | 32,492 | 25,806 | 2,949.74 | 6,686 |

ಮೇಲಿನ ಕೋಷ್ಟಕದಿಂದ ಕಾಣಬಹುದಾದಂತೆ, ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ಪತ್ತೆ ಹಚ್ಚಲಾದಂತಹ ಪ್ರಕರಣಗಳ ಬಹುಪಾಲನ್ನು ಇತ್ಯರ್ಥಗೊಳಿಸಲಾಗಿದೆಯಾದರೂ, ವರ್ಷದ ಕೊನೆಯಲ್ಲಿ ಗಮನಾರ್ಹ ಸಂಖ್ಯೆಯ ಪ್ರಕರಣಗಳು ಇನ್ನೂ ಬಾಕಿಯಿದ್ದವು. ರಾಜಸ್ವ/ವರಮಾನದ ವಸೂಲಾತಿಯ ಹಿತದೃಷ್ಟಿಯಿಂದ ಈ ಪ್ರಕರಣಗಳನ್ನು ಇತ್ಯರ್ಥಗೊಳಿಸುವುದಕ್ಕಾಗಿ ವಾಣಿಜ್ಯ ತೆರಿಗೆಗಳ ಇಲಾಖೆಯು ತ್ವರಿತ ಕ್ರಮವನ್ನು ತೆಗೆದುಕೊಳ್ಳಬೇಕು.

ವಂಚನೆಗಳು ಹಾಗೂ ತೆರಿಗೆ ಪಾವತಿಯಿಂದ ತಪ್ಪಿಸಿಕೊಂಡಿರುವಂತಹ ಪ್ರಕರಣಗಳು ಯಾವುದಾದರೂ ಇದ್ದಲ್ಲಿ, ಅವುಗಳ ವಿವರಗಳನ್ನು ಒದಗಿಸುವಂತೆ ಕೋರಲಾಯಿತಾದರೂ (ಮೇ 2017) ಆ ವಿವರಗಳನ್ನು ಮುದ್ರಾಂಕಗಳು ಮತ್ತು ನೋಂದಣಿ, ಸಾರಿಗೆ, ಇಂಧನ ಮತ್ತು ಕಂದಾಯ ಇಲಾಖೆಗಳಿಂದ ಇನ್ನೂ ಸ್ವೀಕರಿಸಲಾಗಿರುವುದಿಲ್ಲ (ನವಂಬರ್ 2017), ಅಂತಹ ಯಾವುದೇ ಪ್ರಕರಣಗಳನ್ನೂ ಪತ್ತೆ ಹಚ್ಚಲಾಗಿರುವುದಿಲ್ಲ ಎಂಬುದಾಗಿ ಗಣಿಗಳು ಮತ್ತು ಭೂ ವಿಜ್ಞಾನ ಇಲಾಖೆ ವರದಿ ಮಾಡಿದೆ.

## 1.4 ಬಾಕಿಯಿರುವ ಮರುಪಾವತಿ ಪ್ರಕರಣಗಳು

ವಾಣಿಜ್ಯ ತೆರಿಗೆಗಳ ಇಲಾಖೆಯು ಸಲ್ಲಿಸಿರುವ ವರದಿಯಂತೆ, ವರ್ಷದ ಪ್ರಾರಂಭದಲ್ಲಿ ಬಾಕಿಯಿದ್ದಂತಹ ಮರುಪಾವತಿ ಪ್ರಕರಣಗಳ ಸಂಖ್ಯೆ, ಪ್ರಸಕ್ತ ಸಾಲಿನಲ್ಲಿ ಸ್ವೀಕರಿಸಲಾದಂತಹ ಮರುಪಾವತಿ ಕೋರಿಕೆಗಳು, ಪ್ರಸಕ್ತ ಸಾಲಿನಲ್ಲಿ ಮಾಡಲಾದ ಮರುಪಾವತಿಗಳು ಹಾಗೂ 2016–17 ಸಾಲಿನ ಅಂತ್ಯದಲ್ಲಿ ಬಾಕಿ ಉಳಿದಿದ್ದಂತಹ ಪ್ರಕರಣಗಳ ವಿವರಗಳನ್ನು **ಕೋಷ್ಟಕ 1.4** ರಲ್ಲಿ ನೀಡಲಾಗಿದೆ.

**ಕೋಷ್ಟಕ -1.4**
**ಬಾಕಿಯಿರುವ ಮರುಪಾವತಿ ಪ್ರಕರಣಗಳ ವಿವರಗಳು**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ವಿವರಗಳು | 2016-17 | |
|---|---|---|---|
| | | ಪ್ರಕರಣಗಳ ಸಂಖ್ಯೆ | ಮೊತ್ತ |
| 1. | ಮರುಪಾವತಿಗಾಗಿ ವರ್ಷದ ಪ್ರಾರಂಭದಲ್ಲಿ ಬಾಕಿಯಿದ್ದಂತಹ ಕೋರಿಕೆಗಳು | 1,534 | 577.79 |
| 2. | ಮರುಪಾವತಿಗಾಗಿ ಪ್ರಸಕ್ತ ಸಾಲಿನಲ್ಲಿ ಸ್ವೀಕರಿಸಲಾದಂತಹ ಕೋರಿಕೆಗಳು | 6,277 | 2,152.05 |
| 3. | ಪ್ರಸಕ್ತ ಸಾಲಿನಲ್ಲಿ ಮಾಡಲಾದ ಮರುಪಾವತಿಗಳು | 5,820 | 1,875.93 |
| 4. | ವರ್ಷದ ಅಂತ್ಯದಲ್ಲಿ ಬಾಕಿ ಉಳಿದಿದ್ದವುಗಳು | 1,991 | 853.91 |

ಮರುಪಾವತಿಗೆ ಸಂಬಂಧಿಸಿದಂತೆ ಬಾಕಿಯಿರುವಂತಹ ಪ್ರಕರಣಗಳು ಯಾವುದಾದರೂ ಇದ್ದಲ್ಲಿ, ಅವುಗಳ ವಿವರಗಳನ್ನು ಒದಗಿಸುವಂತೆ ಮುದ್ರಾಂಕಗಳು ಮತ್ತು ನೋಂದಣಿ, ಇಂಧನ, ಸಾರಿಗೆ, ಕಂದಾಯ ಹಾಗೂ ಗಣಿಗಳು ಮತ್ತು ಭೂ ವಿಜ್ಞಾನ ಇಲಾಖೆಗಳನ್ನು ಕೋರಲಾಯಿತಾದರೂ (ಮೇ 2017), ಆ ವಿವರಗಳು ಸ್ವೀಕೃತಗೊಂಡಿರುವುದಿಲ್ಲ (ನವಂಬರ್ 2017). ಮರುಪಾವತಿಯ ಯಾವುದೇ ಪ್ರಕರಣಗಳು ಬಾಕಿಯಿರುವುದಿಲ್ಲ ಎಂಬುದಾಗಿ ರಾಜ್ಯ ಅಬಕಾರಿ ಇಲಾಖೆ ವರದಿಯನ್ನು ಸಲ್ಲಿಸಿರುತ್ತದೆ.

## 1.5 ಲೆಕ್ಕಪರಿಶೋಧನೆಯ ಕಡೆಗೆ ಸರ್ಕಾರ/ಇಲಾಖೆಗಳ ಪ್ರತಿಕ್ರಿಯೆ

ಮಹಾಲೇಖಾಪಾಲರು (ಆರ್ಥಿಕ ಮತ್ತು ರಾಜಸ್ವ ವಲಯ ಲೆಕ್ಕಪರಿಶೋಧನೆ), ಇವರು ಹಣಕಾಸು ವ್ಯವಹಾರಗಳ ಪರೀಕ್ಷಾ–ಪರಿಶೀಲನೆ ಮಾಡುವುದಕ್ಕಾಗಿ ನಿಗದಿತ ನಿಯಮಗಳು ಮತ್ತು ಕಾರ್ಯವಿಧಾನಗಳ ಪ್ರಕಾರ ಪ್ರಮುಖ ಲೆಕ್ಕಪತ್ರಗಳು ಹಾಗೂ ಇನ್ನಿತರೆ ದಾಖಲೆಗಳನ್ನು ಇಟ್ಟಿರುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಸರ್ಕಾರದ ಇಲಾಖೆಗಳನ್ನು ನಿಯತಕಾಲಿಕವಾಗಿ ಪರೀಕ್ಷಣೆ ಮಾಡುತ್ತಾರೆ. ಪರೀಕ್ಷಣೆಗಳ ಸಮಯದಲ್ಲಿ ಪತ್ತೆ ಹಚ್ಚಲಾದಂತಹ ಆದರೆ, ಸ್ಥಳದಲ್ಲಿಯೇ ಇತ್ಯರ್ಥಗೊಳಿಸಲು ಸಾಧ್ಯವಾಗದಂತಹ ನಿಯಮಬಾಹಿರತೆಗಳನ್ನು ಅಳವಡಿಸಿಕೊಳ್ಳುವ ಮೂಲಕ ಪರೀಕ್ಷಣೆ ಮಾಡಲಾದಂತಹ ಕಚೇರಿಯ ಮುಖ್ಯಸ್ಥರಿಗೆ ಪರೀಕ್ಷಣಾ ವರದಿಗಳನ್ನು ನೀಡುವ ಮೂಲಕ ಹಾಗೂ ಅದರ ಪ್ರತಿಗಳನ್ನು ಉನ್ನತ ಅಧಿಕಾರಿಗಳಿಗೆ ಕಳುಹಿಸಿಕೊಡುವ ಮೂಲಕ ಈ ಪರೀಕ್ಷಣೆಗಳಿಗೆ ಸಂಬಂಧಿಸಿದಂತೆ ಅನುಸರಣಾ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ. ಕಚೇರಿಗಳ ಮುಖ್ಯಸ್ಥರುಗಳು/ಸರ್ಕಾರ ಪರೀಕ್ಷಣಾ ವರದಿಗಳಲ್ಲಿ ಒಳಗೊಂಡಿರುವಂತಹ ಅಂಶಗಳಿಗೆ ತ್ವರಿತ ಕ್ರಮಗಳನ್ನು ತೆಗೆದುಕೊಳ್ಳುವ, ತಪ್ಪುಗಳು ಹಾಗೂ ಲೋಪದೋಷಗಳನ್ನು ಸರಿಪಡಿಸುವ ಹಾಗೂ ಪರೀಕ್ಷಣಾ ವರದಿಗಳನ್ನು ನೀಡಿದ ದಿನಾಂಕದಿಂದ ಒಂದು ತಿಂಗಳಿನ ಒಳಗೆ ಮಹಾಲೇಖಾಪಾಲರಿಗೆ ಪ್ರಾರಂಭಿಕ/ಮೂಲ ಉತ್ತರವನ್ನು ನೀಡುವ ಮೂಲಕ ಅನುಪಾಲನಾ ಕ್ರಮಗಳ ಬಗ್ಗೆ ವರದಿಯನ್ನು ಸಲ್ಲಿಸುವ ಅಗತ್ಯತೆಯಿರುತ್ತದೆ. ಹಣಕಾಸಿಗೆ ಸಂಬಂಧಿಸಿದಂತೆ ಗಮನಿಸಲಾದಂತಹ ಗುರುತರವಾದ ನಿಯಮಬಾಹಿರತೆಗಳನ್ನು ಇಲಾಖೆಗಳ ಮುಖ್ಯಸ್ಥರುಗಳಿಗೆ ಹಾಗೂ ಸರ್ಕಾರಕ್ಕೆ ವರದಿ ಮಾಡಲಾಗುವುದು.

2,282 ಪರೀಕ್ಷಣಾ ವರದಿಗಳಲ್ಲಿ ₹ 2,010.14 ಕೋಟಿ ಮೊತ್ತವು ಒಳಗೊಂಡಂತೆ 5,527 ಕಂಡಿಕೆಗಳು ಜೂನ್ 2017ರ ಅಂತ್ಯದಲ್ಲಿದ್ದಂತೆ ಬಾಕಿ ಉಳಿದಿದ್ದವು. ವಿವರಗಳನ್ನು ಹಿಂದಿನ ಎರಡು ವರ್ಷಗಳ ಅಂಕಿಸಂಖ್ಯೆಗಳ ಜೊತೆಯಲ್ಲಿ **ಕೋಷ್ಟಕ 1.5**ರಲ್ಲಿ ನೀಡಲಾಗಿದೆ.

**ಕೋಷ್ಟಕ -1.5**

**ಬಾಕಿ ಉಳಿದಿರುವಂತಹ ಪರೀಕ್ಷಣಾ ವರದಿಗಳ ವಿವರಗಳು**

| | ಜೂನ್ 2015 | ಜೂನ್ 2016 | ಜೂನ್ 2017 |
|---|---|---|---|
| ಇತ್ಯರ್ಥಗೊಳ್ಳಲು ಬಾಕಿ ಇರುವಂತಹ ಪರೀಕ್ಷಣಾ ವರದಿಗಳ ಸಂಖ್ಯೆ | 4,022 | 4,443 | 2,282 |
| ಬಾಕಿ ಉಳಿದಿರುವಂತಹ ಕಂಡಿಕೆಗಳ ಸಂಖ್ಯೆ | 9,573 | 9,305 | 5,527 |
| ಒಳಗೊಂಡಿರುವಂತಹ ರಾಜಸ್ವ/ವರಮಾನದ ಮೊತ್ತ (₹ ಕೋಟಿಯಲ್ಲಿ) | 2,061.05 | 2,162.61 | 2,010.14 |

**1.5.1** 30 ಜೂನ್ 2017ರಲ್ಲಿದ್ದಂತೆ ಬಾಕಿ ಉಳಿದಿರುವಂತಹ ಪರೀಕ್ಷಣಾ ವರದಿಗಳು ಹಾಗೂ ಕಂಡಿಕೆಗಳ ಇಲಾಖಾವಾರು ವಿವರಗಳನ್ನು **ಕೋಷ್ಟಕ 1.5.1**ರಲ್ಲಿ ನೀಡಲಾಗಿದೆ.

**ಕೋಷ್ಟಕ – 1.5.1**

**ಪರೀಕ್ಷಣಾ ವರದಿಗಳ ಇಲಾಖಾವಾರು ವಿವರಗಳು**

| ಕ್ರಮ ಸಂಖ್ಯೆ | ಇಲಾಖೆಯ ಹೆಸರು | ಸ್ವೀಕೃತಿಗಳ ಸ್ವರೂಪ | ಬಾಕಿ ಉಳಿದಿರುವಂತಹ ಪರೀಕ್ಷಣಾ ವರದಿಗಳ ಸಂಖ್ಯೆ | ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದ್ದು ಬಾಕಿ ಉಳಿದಿರುವಂತಹ ಅಂಶಗಳ ಸಂಖ್ಯೆ | ಒಳಗೊಂಡಿರುವ ಹಣಕಾಸಿನ ಮೌಲ್ಯ (₹ ಕೋಟಿಯಲ್ಲಿ) |
|---|---|---|---|---|---|
| 1. | ಹಣಕಾಸು | ವಾಣಿಜ್ಯ ತೆರಿಗೆಗಳು | 536 | 2,082 | 202.57 |
| 2. | | ರಾಜ್ಯ ಅಬಕಾರಿ | 511 | 766 | 319.64 |
| 3. | ಕಂದಾಯ | ಭೂ ಕಂದಾಯ | 200 | 459 | 347.52 |
| 4. | | ಮುದ್ರಾಂಕಗಳು ಮತ್ತು ನೋಂದಣಿ ಶುಲ್ಕಗಳು | 425 | 1,035 | 107.30 |
| 5. | ಸಾರಿಗೆ | ಮೋಟಾರು ವಾಹನಗಳ ಮೇಲಿನ ತೆರಿಗೆಗಳು | 417 | 685 | 49.05 |
| 6. | ವಾಣಿಜ್ಯ ಮತ್ತು ಕೈಗಾರಿಕೆಗಳು | ಖನಿಜ ಸ್ವೀಕೃತಿಗಳು | 185 | 485 | 960.19 |
| 7. | ಇಂಧನ | ವಿದ್ಯುಚ್ಛಕ್ತಿಯ ಮೇಲಿನ ತೆರಿಗೆ | 8 | 15 | 23.87 |
| **ಒಟ್ಟು** | | | **2,282** | **5,527** | **2,010.14** |

2016–17 ಸಾಲಿನಲ್ಲಿ ನೀಡಲಾದ 325 ಪರೀಕ್ಷಣಾ ವರದಿಗಳಿಗೆ ಮೊದಲ ಉತ್ತರಗಳನ್ನೂ (ಪರೀಕ್ಷಣಾ ವರದಿಗಳನ್ನು ನೀಡಲಾದ ದಿನಾಂಕದಿಂದ ಒಂದು ತಿಂಗಳಿನ ಒಳಗೆ ಕಚೇರಿಗಳ ಮುಖ್ಯಸ್ಥರುಗಳಿಂದ ಸ್ವೀಕರಿಸುವ ಅಗತ್ಯತೆಯಿದ್ದಂತಹ) ಸಹ ಲೆಕ್ಕಪರಿಶೋಧನೆಯು ಸ್ವೀಕರಿಸಿರುವುದಿಲ್ಲ. ಉತ್ತರಗಳನ್ನು ಸ್ವೀಕರಿಸದ ಕಾರಣ

ಇರುವಂತಹ ಪರೀಕ್ಷಣಾ ವರದಿಗಳ ಬಹಳಷ್ಟು ಸಂಖ್ಯೆಯ ಬಾಕಿಗಳು, ಮಹಾಲೇಖಾಪಾಲರು ಸ್ಪಷ್ಟಪಡಿಸಿರುವಂತಹ ತಪ್ಪುಗಳು, ಲೋಪದೋಷಗಳು ಹಾಗೂ ನಿಯಮಬಾಹಿರತೆಗಳನ್ನು ಸರಿಪಡಿಸುವಲ್ಲಿ ಕಚೇರಿಗಳ ಹಾಗೂ ಇಲಾಖೆಗಳ ಮುಖ್ಯಸ್ಥರುಗಳು ಯಾವುದೇ ಕ್ರಮಗಳನ್ನೂ ತೆಗೆದುಕೊಂಡಿರಲಿಲ್ಲ ಎಂಬ ವಾಸ್ತವಾಂಶವನ್ನು ಸೂಚಿಸುತ್ತವೆ.

## 1.5.2 ಇಲಾಖಾ ಲೆಕ್ಕಪರಿಶೋಧನಾ ಸಮಿತಿಯ ಸಭೆಗಳು

ಪರೀಕ್ಷಣಾ ವರದಿಗಳಲ್ಲಿ ಒಳಗೊಂಡಿರುವ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸುವ ಸಲುವಾಗಿ ಎಲ್ಲಾ ಇಲಾಖೆಗಳ ಸಚಿವಾಲಯದಲ್ಲಿ ಇಲಾಖಾ ಲೆಕ್ಕಪರಿಶೋಧನಾ ಸಮಿತಿಯನ್ನು ರಚಿಸುವಂತೆ ಸರ್ಕಾರವು ನಿರ್ದೇಶನಗಳನ್ನು ನೀಡಿದ್ದಿತು (ಮಾರ್ಚ್ 1968). ಈ ಸಮಿತಿಗಳು ಸಂಬಂಧಿತ ಆಡಳಿತಾತ್ಮಕ ಇಲಾಖೆಗಳ ಕಾರ್ಯದರ್ಶಿಯವರ ನೇತೃತ್ವದಲ್ಲಿದ್ದು ಹಾಗೂ ರಾಜ್ಯ ಸರ್ಕಾರದ ಪದನಿಮಿತ್ತ ಅಧಿಕಾರಿಗಳು ಹಾಗೂ ಮಹಾಲೇಖಾಪಾಲರಿಂದ ನಾಮನಿರ್ದೇಶನವನ್ನು ಹೊಂದಿದ ಓರ್ವ ಅಧಿಕಾರಿಯವರು ಸಭೆಗೆ ಹಾಜರಾಗಬೇಕಿದ್ದಿತು. ಈ ಸಮಿತಿಗಳು ನಿಯತಕಾಲಿಕವಾಗಿ, ಯಾವುದೇ ಸಂದರ್ಭದಲ್ಲಿಯೂ, ಪ್ರತೀ ತ್ರೈಮಾಸಿಕದಲ್ಲಿ ಒಂದು ಸಲವಾದರೂ ಸಭೆ ಸೇರಬೇಕಿದ್ದಿತು.

2016–17 ಸಾಲಿನಲ್ಲಿ ಯಾವುದೇ ಇಲಾಖೆಗಳು ಸಮಿತಿಯ ಯಾವುದೇ ಸಭೆಗಳನ್ನೂ ಕರೆದಿರಲಿಲ್ಲ. ಬಾಕಿ ಉಳಿದಿರುವ ಪರೀಕ್ಷಣಾ ವರದಿಗಳು ಮತ್ತು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಅಂಶಗಳ ಇತ್ಯರ್ಥಕ್ಕಾಗಿ ಇಲಾಖಾ ಲೆಕ್ಕಪರಿಶೋಧನಾ ಸಮಿತಿಯ ಸಭೆಗಳನ್ನು ನಡೆಸುವ ಸಲುವಾಗಿ ಕ್ರಮವನ್ನು ತೆಗೆದುಕೊಳ್ಳಬೇಕು.

## 1.5.3 ಲೆಕ್ಕಪರಿಶೋಧನೆಯ ಪರಿಶೀಲನೆಗಾಗಿ ದಾಖಲೆಗಳನ್ನು ಒದಗಿಸದಿದ್ದುದು

ರಾಜಸ್ವ/ವರಮಾನದ ಹಾಗೂ ತೆರಿಗೆಯೇತರ ರಾಜಸ್ವ/ವರಮಾನದ ಕಚೇರಿಗಳ ಸ್ಥಳೀಯ ಲೆಕ್ಕಪರಿಶೋಧನೆಯ ಕಾರ್ಯಕ್ರಮವನ್ನು ಸಾಕಷ್ಟು ಮುಂಚಿತವಾಗಿ ತಯಾರಿಸಲಾಗುವುದು ಹಾಗೂ ಲೆಕ್ಕಪರಿಶೋಧನೆಯ ಪರಿಶೀಲನೆಗಾಗಿ ಸಂಬಂಧಿಸಿದ ದಾಖಲೆಗಳನ್ನು ಸಿದ್ಧವಾಗಿಡುವುದಕ್ಕೆ ಅನುಕೂಲ ಕಲ್ಪಿಸುವುದಕ್ಕಾಗಿ, ಈ ಬಗ್ಗೆ ತಿಳುವಳಿಕೆ ಪತ್ರಗಳನ್ನು ಸಂಬಂಧಪಟ್ಟ ಕಚೇರಿ/ಇಲಾಖೆಗಳಿಗೆ ಲೆಕ್ಕಪರಿಶೋಧನೆಯು ಪ್ರಾರಂಭಗೊಳ್ಳುವ ದಿನಾಂಕಕ್ಕೆ ಸಾಮಾನ್ಯವಾಗಿ ಒಂದು ತಿಂಗಳ ಮುಂಚಿತವಾಗಿ ನೀಡಲಾಗುವುದು.

2016–17 ಸಾಲಿನಲ್ಲಿ 712ರಷ್ಟು ಸಂಖ್ಯೆಯ ಕರನಿರ್ಧಾರಣಾ ಕಡತಗಳು, ಮರುಪಾವತಿಗಳು, ವಹಿಗಳು ಹಾಗೂ ಇನ್ನಿತರೆ ಸಂಬಂಧಿತ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲಿಲ್ಲ. ಈ ಪ್ರಕರಣಗಳ ಇಲಾಖಾವಾರು ವಿವರಗಳನ್ನು **ಕೋಷ್ಟಕ 1.5.3**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.5.3**
**ಲೆಕ್ಕಪರಿಶೋಧನಾ ಪರಿಶೀಲನೆಗಾಗಿ ಒದಗಿಸದಿದ್ದಂತಹ ದಾಖಲೆಗಳ ವಿವರಗಳು**

| ಕ್ರಮ ಸಂಖ್ಯೆ | ಕಚೇರಿ/ಇಲಾಖೆಯ ಹೆಸರು | ಲೆಕ್ಕಪರಿಶೋಧನೆಗೆ ಒದಗಿಸದಿದ್ದಂತಹ ದಾಖಲೆಗಳ ಸಂಖ್ಯೆ |
|---|---|---|
| 1. | ವಾಣಿಜ್ಯ ತೆರಿಗೆಗಳ ಇಲಾಖೆ | 24 |
| 2. | ಭೂ ಕಂದಾಯ ಇಲಾಖೆ | 651 |
| 3. | ಸಾರಿಗೆ ಇಲಾಖೆ | 37 |
| | **ಒಟ್ಟು** | **712** |

## 1.5.4 ಕರಡು ಲೆಕ್ಕಪರಿಶೋಧನಾ ಕಂಡಿಕೆಗಳಿಗೆ ಇಲಾಖೆಗಳ ಪ್ರತಿಕ್ರಿಯೆ

ಲೆಕ್ಕಪರಿಶೋಧನಾ ವರದಿಯಲ್ಲಿ ಸೇರಿಸಲು ಪ್ರಸ್ತಾಪಿಸಲಾಗಿರುವ ಕರಡು ಕಂಡಿಕೆಗಳು/ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ ವರದಿಗಳನ್ನು ಮಹಾಲೇಖಾಪಾಲರು ಸಂಬಂಧಿತ ಇಲಾಖೆಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳಿಗೆ, ಪ್ರಧಾನ ಕಾರ್ಯದರ್ಶಿಗಳಿಗೆ/ಕಾರ್ಯದರ್ಶಿಗಳಿಗೆ ಅರೆ–ಸರ್ಕಾರಿ ಪತ್ರಗಳ ಜೊತೆಯಲ್ಲಿ ಕಳುಹಿಸಿಕೊಡುವರು. ಸರ್ಕಾರವು ನೀಡಿರುವ (ಏಪ್ರಿಲ್ 1952), ನಿರ್ದೇಶನಗಳಂತೆ ಕರಡು ಕಂಡಿಕೆಗಳು/ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ ವರದಿಗಳನ್ನು ಸ್ವೀಕರಿಸಿದ ದಿನಾಂಕದಿಂದ ಆರು ವಾರಗಳ ಒಳಗೆ ಎಲ್ಲಾ ಇಲಾಖೆಗಳು ತಮ್ಮ ಉತ್ತರಗಳನ್ನು ನೀಡುವ ಅಗತ್ಯತೆಯಿರುತ್ತದೆ. ಸರ್ಕಾರದಿಂದ ಉತ್ತರಗಳನ್ನು ಸ್ವೀಕರಿಸದೇ ಇರುವಂತಹ ವಾಸ್ತವಾಂಶವನ್ನು ಲೆಕ್ಕಪರಿಶೋಧನಾ ವರದಿಯಲ್ಲಿ ಅಂತಹ ಪ್ರತಿಯೊಂದು ಕಂಡಿಕೆಯ ಅಂತ್ಯದಲ್ಲಿಯೂ ತಪ್ಪದೇ ಸೂಚಿಸಲ್ಪಟ್ಟಿರುತ್ತದೆ.

31 ಮಾರ್ಚ್ 2017ಕ್ಕೆ ಅಂತ್ಯಗೊಂಡಂತಹ ಸಾಲಿಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಯಲ್ಲಿ ಸೇರಿಸುವ ಸಲುವಾಗಿ ಪ್ರಸ್ತಾಪಿಸಲಾಗಿದ್ದಂತಹ ಹದಿನಾಲ್ಕು ಕರಡು ಕಂಡಿಕೆಗಳನ್ನು (ಒಂದು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ ಹಾಗೂ ಒಂದು ವಿಷಯಾಧಾರಿತ ಲೆಕ್ಕಪರಿಶೋಧನೆಯೂ ಸೇರಿದಂತೆ)

ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳಿಗೆ ಮಾರ್ಚ್ ಮತ್ತು ಸೆಪ್ಟಂಬರ್ 2017ರ ನಡುವೆ ಕಳುಹಿಸಿಕೊಡಲಾಗಿದ್ದಿತು ಹಾಗೂ ಅವುಗಳ ಪ್ರತಿಗಳನ್ನು ಸಂಬಂಧಿತ ಇಲಾಖೆಗಳ ಮುಖ್ಯಸ್ಥರುಗಳಿಗೆ ಕಳುಹಿಸಿಕೊಡಲಾಗಿದ್ದಿತು.

ಒಂಬತ್ತು ಕರಡು ಕಂಡಿಕೆಗಳಿಗೆ (ವಾಣಿಜ್ಯ ತೆರಿಗೆಗಳು ಮತ್ತು ಮುದ್ರಾಂಕಗಳು ಮತ್ತು ನೋಂದಣಿ ಇಲಾಖೆಗಳಿಗೆ ಸಂಬಂಧಿತ) ಸರ್ಕಾರದಿಂದ ಉತ್ತರಗಳನ್ನು ಸ್ವೀಕರಿಸಲಾಯಿತು. ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಸರ್ಕಾರದ ಜೊತೆಯಲ್ಲಿ ನಿರ್ಗಮನ ಸಭೆಯನ್ನು ನಡೆಸಲಾಯಿತು (ಅಕ್ಟೋಬರ್ 2017). ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಸರ್ಕಾರದಿಂದ ಉತ್ತರವನ್ನು ಸ್ವೀಕರಿಸಲಾಯಿತು (ಅಕ್ಟೋಬರ್ 2017). ವಿಷಯಾಧಾರಿತ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಸಂಬಂಧಿತ ಇಲಾಖೆಗಳ ಮುಖ್ಯಸ್ಥರೊಂದಿಗೆ ನಿರ್ಗಮನ ಸಭೆಯನ್ನು ನಡೆಸಲಾಯಿತು (ಆಗಸ್ಟ್ 2017).

ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಗೆ ಸಂಬಂಧಿಸಿದ ಉಳಿದ ಮೂರು ಕರಡು ಕಂಡಿಕೆಗಳು ಮತ್ತು ಒಂದು ವಿಷಯಾಧಾರಿತ ಲೆಕ್ಕಪರಿಶೋಧನೆಗೆ ಉತ್ತರಗಳು ಇನ್ನೂ ಸ್ವೀಕೃತಗೊಂಡಿರುವುದಿಲ್ಲ (ನವಂಬರ್ 2017).

## 1.5.5 ಲೆಕ್ಕಪರಿಶೋಧನಾ ವರದಿಗಳಿಗೆ ಅನುಸರಣಾ ಕ್ರಮಗಳು – ಸಂಕ್ಷಿಪ್ತ ಸ್ಥಿತಿಗತಿ

ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ (ಪಿ.ಎ.ಸಿ) ನಿಯಮಗಳು ಮತ್ತು ಕಾರ್ಯವಿಧಾನದ (ಆಂತರಿಕ ಕಾರ್ಯವಿಧಾನ) ಅನುಸಾರ ಲೆಕ್ಕಪರಿಶೋಧನಾ ವರದಿಯೊಂದನ್ನು ಶಾಸನ ಸಭೆಯಲ್ಲಿ ಮಂಡಿಸಲ್ಪಟ್ಟ ದಿನಾಂಕದಿಂದ ನಾಲ್ಕು ತಿಂಗಳುಗಳ ಒಳಗೆ ಸರ್ಕಾರದ ಇಲಾಖೆಗಳು ಲೆಕ್ಕಪರಿಶೋಧನಾ ಕಂಡಿಕೆಗಳ ಮೇಲೆ ಸವಿವರ ವಿವರಣೆಗಳನ್ನು (ಇಲಾಖಾ ಟಿಪ್ಪಣಿಗಳು) ಕರ್ನಾಟಕ ವಿಧಾನಸಭಾ ಸಚಿವಾಲಯಕ್ಕೆ ಸಲ್ಲಿಸುವ ಅಗತ್ಯತೆಯಿರುತ್ತದೆ. ಆ ರೀತಿ ಸಲ್ಲಿಸುವ ಮೊದಲು, ಅಂತಹ ಇಲಾಖಾ ಟಿಪ್ಪಣಿಗಳನ್ನು ಮಹಾಲೇಖಾಪಾಲರ ಪರಿಶೀಲನೆಗೆ ಒಳಪಡಿಸಬೇಕೆಂಬುದರ ಅಗತ್ಯತೆಯನ್ನೂ ಸಹ ಈ ನಿಯಮಗಳು ಹೊಂದಿರುತ್ತವೆ.

31 ಮಾರ್ಚ್ 2012, 2013, 2014, 2015 ಹಾಗೂ 2016ಕ್ಕೆ ಅಂತ್ಯಗೊಂಡ ಸಾಲುಗಳಿಗೆ ಕರ್ನಾಟಕ ಸರ್ಕಾರದ ರಾಜಸ್ವ ವಲಯದ ಮೇಲೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಗಳಲ್ಲಿ ಸೇರಿಸಲಾಗಿದ್ದ 174 ಕಂಡಿಕೆಗಳನ್ನು ಹಾಗೂ ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಗೆ ಸಂಬಂಧಿಸಿದಂತಹ ಒಂದು ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಯನ್ನು ಕರ್ನಾಟಕ ವಿಧಾನ ಸಭೆಯ ಮುಂದೆ ಮಾರ್ಚ್ 2013 ಹಾಗೂ ಮಾರ್ಚ್ 2017ರ ನಡುವಿನ ಅವಧಿಯಲ್ಲಿ ಮಂಡಿಸಲಾಗಿದ್ದಿತು.

ಸೆಪ್ಟಂಬರ್ 2017ರಲ್ಲಿದ್ದಂತೆ, 174 ಕಂಡಿಕೆಗಳ ಪೈಕಿ, 48 ಕಂಡಿಕೆಗಳಿಗೆ ವಾಯಿದೆ ದಿನಾಂಕದ ಒಳಗೆ ಇಲಾಖಾ ಟಿಪ್ಪಣಿಗಳನ್ನು ಸ್ವೀಕರಿಸಲಾಯಿತು. 2011–12ರಿಂದ 2014–15 ಸಾಲುಗಳ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಲಾಗಿದ್ದ ಈ ಕಂಡಿಕೆಗಳ ಪೈಕಿ 81 ಕಂಡಿಕೆಗಳಿಗೆ ಇಲಾಖೆಗಳಿಂದ ಒಂಬತ್ತು ತಿಂಗಳುಗಳ ಸರಾಸರಿ ವಿಳಂಬದೊಂದಿಗೆ ಸ್ವೀಕರಿಸಲಾಗಿದ್ದಿತು. ಆದಾಗ್ಯೂ, 45 ಕಂಡಿಕೆಗಳಿಗೆ ಸಂಬಂಧಿಸಿದಂತೆ ಏಳು ಇಲಾಖೆಗಳಿಂದ (ವಾಣಿಜ್ಯ ತೆರಿಗೆಗಳು, ಭೂ ಕಂದಾಯ, ಮುದ್ರಾಂಕಗಳು ಮತ್ತು ನೋಂದಣಿ, ರಾಜ್ಯ ಅಬಕಾರಿ, ಸಾರಿಗೆ, ಇಂಧನ ಮತ್ತು ಗಣಿಗಳು ಮತ್ತು ಭೂವಿಜ್ಞಾನ ಇಲಾಖೆ) ಇಲಾಖಾ ಟಿಪ್ಪಣಿಗಳು ಇನ್ನೂ ಸ್ವೀಕೃತಗೊಂಡಿರುವುದಿಲ್ಲ.

ಇದು, ವಸೂಲಾತಿಯಾಗದೇ ಉಳಿದಿರುವಂತಹ ರಾಜಸ್ವ/ವರಮಾನ ಸಂಗ್ರಹಣೆಗೆ ಸಹಾಯಕವೂ ಆಗಿರುವಂತಹ ಲೆಕ್ಕಪರಿಶೋಧನಾ ವರದಿಗಳಲ್ಲಿ ಎತ್ತಿತೋರಿಸಲಾಗಿರುವಂತಹ ಪ್ರಮುಖ ಅಂಶಗಳ ಬಗ್ಗೆ ಅನುಸರಣಾ ಕ್ರಮಗಳನ್ನು ಕೈಗೊಳ್ಳುವಲ್ಲಿ ಕಾರ್ಯಾಂಗವು ಇನ್ನೂ ಹೆಚ್ಚಿನ ನಿಯಾಮಕ/ನಿಯಂತ್ರಕ ಕ್ರಮಗಳನ್ನು ತೆಗೆದುಕೊಳ್ಳುವ ಅಗತ್ಯತೆಯಿರುತ್ತದೆ ಎಂಬುದನ್ನು ಸೂಚಿಸುತ್ತದೆ.

## 1.6 ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳ ಬಗ್ಗೆ ಅನುಸರಣಾ ಕ್ರಮಗಳನ್ನು ಗಮನಿಸುವ ಸಲುವಾಗಿನ ವ್ಯವಸ್ಥೆಯ ವಿಶ್ಲೇಷಣೆ

ಪರೀಕ್ಷಣಾ ವರದಿಗಳು/ಲೆಕ್ಕಪರಿಶೋಧನಾ ವರದಿಗಳಲ್ಲಿ ಎತ್ತಿ ತೋರಿಸಲಾಗಿರುವ ಅಂಶಗಳಿಗೆ ಅನುಸರಣಾ ಕ್ರಮಗಳನ್ನು ಗಮನಿಸುವ ವ್ಯವಸ್ಥೆಯನ್ನು ವಿಶ್ಲೇಷಿಸುವುದಕ್ಕಾಗಿ ಒಂದು ಇಲಾಖೆಗೆ ಸಂಬಂಧಿಸಿದಂತೆ ಕಳೆದ 10 ವರ್ಷಗಳಲ್ಲಿ ನೀಡಲಾದ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಲಾಗಿದ್ದ ಕಂಡಿಕೆಗಳು ಮತ್ತು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳ ಮೇಲೆ ತೆಗೆದುಕೊಳ್ಳಲಾದ ಕ್ರಮಗಳನ್ನು ಮೌಲ್ಯಮಾಪನ ಮಾಡಲಾಯಿತು ಹಾಗೂ ಈ ಲೆಕ್ಕಪರಿಶೋಧನಾ ವರದಿಯಲ್ಲಿ ಸೇರಿಸಲಾಯಿತು.

ಮುಂದಿನ 1.6.1 ಹಾಗೂ 1.6.2 ಕಂಡಿಕೆಗಳು, ಕಳೆದ ಹತ್ತು ವರ್ಷಗಳಲ್ಲಿ ಸ್ಥಳೀಯ ಲೆಕ್ಕಪರಿಶೋಧನೆಯ ವೇಳೆಯಲ್ಲಿ ಕಂಡುಹಿಡಿಯಲಾದ ಪ್ರಕರಣಗಳಿಗೆ ಸಂಬಂಧಿಸಿದಂತೆ ರಾಜ್ಯ ಅಬಕಾರಿ ಇಲಾಖೆಯ [3] ಕಾರ್ಯನಿರ್ವಹಣೆಯನ್ನು ಹಾಗೂ ಅಲ್ಲದೆಯೇ 2006–07ರಿಂದ 2015–16 ಸಾಲುಗಳ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಲ್ಪಟ್ಟಿರುವ ಪ್ರಕರಣಗಳನ್ನು ಚರ್ಚಿಸುತ್ತವೆ.

## 1.6.1 ಪರೀಕ್ಷಣಾ ವರದಿಗಳ ಸ್ಥಿತಿಗತಿ

ಕಳೆದ 10 ವರ್ಷಗಳಲ್ಲಿ ನೀಡಲಾದ ಪರೀಕ್ಷಣಾ ವರದಿಗಳು, ಈ ವರದಿಗಳಲ್ಲಿ ಸೇರಿಸಲ್ಪಟ್ಟಿರುವ ಕಂಡಿಕೆಗಳು ಹಾಗೂ 31 ಮಾರ್ಚ್ 2017ರಲ್ಲಿ ಅವುಗಳ ಸ್ಥಿತಿಗತಿಯ ಒಂದು ಸಂಕ್ಷಿಪ್ತ ಚಿತ್ರಣವನ್ನು ಕೆಳಗಿನ **ಕೋಷ್ಟಕ 1.6.1**ರಲ್ಲಿ ಅಂಕಣಪಟ್ಟಿಯ ರೂಪದಲ್ಲಿ ನೀಡಲಾಗಿದೆ.

**ಕೋಷ್ಟಕ 1.6.1**
**ಪರೀಕ್ಷಣಾ ವರದಿಗಳ ಸ್ಥಿತಿಗತಿ**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ವರ್ಷ | ಪ್ರಾರಂಭಿಕ ಶಿಲ್ಕು | | | ಪ್ರಸಕ್ತ ಸಾಲಿನ ಸೇರ್ಪಡೆ | | | ಪ್ರಸಕ್ತ ಸಾಲಿನಲ್ಲಿ ಇತ್ಯರ್ಥಗೊಂಡಿದ್ದು | | | ಅಂತಿಮ ಶಿಲ್ಕು | | |
|---|---|---|---|---|---|---|---|---|---|---|---|---|---|
| | | ಪರೀಕ್ಷಣಾ ವರದಿಗಳು | ಕಂಡಿಕೆಗಳು | ಹಣಕಾಸಿನ ಮೌಲ್ಯ | ಪರೀಕ್ಷಣಾ ವರದಿಗಳು | ಕಂಡಿಕೆಗಳು | ಹಣಕಾಸಿನ ಮೌಲ್ಯ | ಪರೀಕ್ಷಣಾ ವರದಿಗಳು | ಕಂಡಿಕೆಗಳು | ಹಣಕಾಸಿನ ಮೌಲ್ಯ | ಪರೀಕ್ಷಣಾ ವರದಿಗಳು | ಕಂಡಿಕೆಗಳು | ಹಣಕಾಸಿನ ಮೌಲ್ಯ |
| 1. | 2007-08 | 945 | 1396 | 333.90 | 43 | 129 | 69.83 | 38 | 118 | 51.84 | 950 | 1407 | 351.89 |
| 2. | 2008-09 | 950 | 1407 | 351.89 | 20 | 36 | 5.23 | 10 | 112 | 3.77 | 960 | 1331 | 353.35 |
| 3. | 2009-10 | 960 | 1331 | 353.35 | 15 | 31 | 11.66 | 21 | 55 | 8.81 | 954 | 1307 | 356.20 |
| 4. | 2010-11 | 954 | 1307 | 356.21 | 15 | 49 | 21.00 | 0 | 10 | 0.29 | 969 | 1346 | 376.91 |
| 5. | 2011-12 | 969 | 1346 | 376.91 | 01 | 01 | 0.01 | 0 | 0 | 0.00 | 970 | 1347 | 376.92 |
| 6. | 2012-13 | 970 | 1347 | 376.91 | 25 | 63 | 58.67 | 07 | 24 | 2.13 | 988 | 1386 | 433.46 |
| 7. | 2013-14 | 988 | 1386 | 433.45 | 18 | 230 | 13.18 | 12 | 90 | 56.42 | 994 | 1526 | 390.22 |
| 8. | 2014-15 | 994 | 1526 | 390.21 | 38 | 103 | 21.67 | 23 | 200 | 21.83 | 1009 | 1429 | 390.06 |
| 9. | 2015-16 | 1009 | 1429 | 390.05 | 31 | 66 | 9.40 | 38 | 85 | 11.72 | 1002 | 1410 | 387.74 |
| 10. | 2016-17 | 1002 | 1410 | 387.73 | 30 | 29 | 7.07 | 15 | 46 | 17.01 | 1017 | 1393 | 377.80 |

2016–17 ಸಾಲಿನಲ್ಲಿ ಪರೀಕ್ಷಣಾ ವರದಿಗಳು/ಕಂಡಿಕೆಗಳನ್ನು ಇತ್ಯರ್ಥಗೊಳಿಸುವುದಕ್ಕಾಗಿ ರಾಜ್ಯ ಅಬಕಾರಿ ಇಲಾಖೆಯು ಯಾವುದೇ ಇಲಾಖಾ ಲೆಕ್ಕಪರಿಶೋಧನಾ ಸಮಿತಿಯ ಸಭೆಗಳನ್ನೂ ನಡೆಸಿರಲಿಲ್ಲ.

ಕಚೇರಿಗಳ ನಿಯತಕಾಲಿಕ ಪರೀಕ್ಷಣೆಗಳ ವೇಳೆಯಲ್ಲಿ, ಸ್ಥಳದಲ್ಲಿಯೇ ಅನುಪಾಲನಾ ವರದಿಯನ್ನು ಪಡೆದುಕೊಂಡನಂತರ, ಬಾಕಿ ಇರುವಂತಹ ಪರೀಕ್ಷಣಾ ವರದಿಗಳನ್ನು/ಕಂಡಿಕೆಗಳನ್ನು ಸಮೀಕ್ಷಿಸಲಾಗುವುದು. ಇಲಾಖೆಗಳಿಂದ ಅನುಪಾಲನಾ ವರದಿಯು ಸ್ವೀಕೃತಗೊಂಡನಂತರ ಪರೀಕ್ಷಣಾ ವರದಿಗಳು/ಕಂಡಿಕೆಗಳನ್ನು ಇತ್ಯರ್ಥಗೊಳಿಸಲಾಗುವುದು.

## 1.6.2 ಇಲಾಖೆಗಳು ಒಪ್ಪಿಕೊಂಡಿರುವ ಪ್ರಕರಣಗಳಲ್ಲಿ ಮಾಡಲಾಗಿರುವ ವಸೂಲಾತಿ

ಕಳೆದ 10 ವರ್ಷಗಳಲ್ಲಿ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಲಾಗಿರುವ ಕಂಡಿಕೆಗಳು, ಅವುಗಳ ಪೈಕಿ ಇಲಾಖೆಯು ಒಪ್ಪಿಕೊಂಡಿದ್ದವುಗಳು ಹಾಗೂ ಅವುಗಳಿಗೆ ಪ್ರತಿಯಾಗಿ ವಸೂಲಾತಿ ಮಾಡಲಾಗಿರುವ ಮೊತ್ತ, ಇವುಗಳ ಸ್ಥಿತಿಗತಿಯನ್ನು **ಕೋಷ್ಟಕ 1.6.2**ರಲ್ಲಿ ನಮೂದಿಸಲಾಗಿದೆ.

[3] ರಾಜಸ್ವ/ವರಮಾನ ಲೆಕ್ಕಶೀರ್ಷಿಕೆ 0039ರ ಅಡಿಯಲ್ಲಿ.

**ಕೋಷ್ಟಕ 1.6.2**
**ಇಲಾಖೆಗಳು ಒಪ್ಪಿಕೊಂಡಿರುವ ಪ್ರಕರಣಗಳಲ್ಲಿ ಮಾಡಲಾಗಿರುವ ವಸೂಲಾತಿ**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ಲೆಕ್ಕಪರಿಶೋಧನಾ ವರದಿಯ ಸಂಬಂಧಿಸಿದ್ದ ವರ್ಷ | ಸೇರ್ಪಡೆಗೊಂಡಿದ್ದ ಕಂಡಿಕೆಗಳ ಸಂಖ್ಯೆ | ಕಂಡಿಕೆಗಳಲ್ಲಿ ಅಡಕವಾಗಿದ್ದ ಹಣಕಾಸಿನ ಮೌಲ್ಯ | ಒಪ್ಪಿ ಕೊಳ್ಳಲಾಗಿದ್ದ ಕಂಡಿಕೆಗಳ ಸಂಖ್ಯೆ | ಒಪ್ಪಿ ಕೊಳ್ಳಲಾಗಿದ್ದ ಕಂಡಿಕೆಗಳಲ್ಲಿ ಅಡಕವಾಗಿದ್ದ ಹಣಕಾಸಿನ ಮೌಲ್ಯ | ಪ್ರಸಕ್ತ ಸಾಲಿನಲ್ಲಿ ವಸೂಲಾತಿ ಮಾಡಲಾದ ಮೊತ್ತ | 31–03–2017 ರಲ್ಲಿದ್ದಂತೆ ಒಪ್ಪಿಕೊಳ್ಳಲಾದ ಪ್ರಕರಣಗಳಲ್ಲಿ ವಸೂಲಾತಿಯ ಕ್ರೋಢೀಕೃತ ಸ್ಥಿತಿಗತಿ |
|---|---|---|---|---|---|---|---|
| 1. | 2006-07 | - | - | - | - | - | - |
| 2. | 2007-08 | 01 | 0.23 | 01 | 0.23 | - | 0.09 |
| 3. | 2008-09 | - | - | - | - | - | - |
| 4. | 2009-10 | 01 | 1.02 | - | - | - | - |
| 5. | 2010-11 | 01 | 182.29 | 01 | 11.98 | - | 0.18 |
| 6. | 2011-12 | - | - | - | - | - | - |
| 7. | 2012-13 | 02 | 3.10 | 01 | 0.26 | - | 0.26 |
| 8. | 2013-14 | 01 | 2.14 | 01 | 2.14 | - | - |
| 9. | 2014-15 | 04 | 10.57 | 03 | 10.37 | - | 0.48 |
| 10. | 2015-16 | - | - | - | - | - | - |

ಮೇಲಿನ ಕೋಷ್ಟಕದಿಂದ ಕಾಣಬಹುದಾದಂತೆ, 2006–07ರಿಂದ 2015–16 ಸಾಲುಗಳಿಗೆ ಒಪ್ಪಿಕೊಳ್ಳಲಾಗಿರುವ ಪ್ರಕರಣಗಳಲ್ಲಿ ಇಲಾಖೆಯು ಮಾಡಿರುವ ವಸೂಲಾತಿಯು ಕೇವಲ ಶೇಕಡಾ 4.04ರಷ್ಟು ಆಗಿದೆ. ಆದ್ದರಿಂದ, ಒಪ್ಪಿಕೊಳ್ಳಲಾಗಿರುವ ಪ್ರಕರಣಗಳಲ್ಲಿ ಒಳಗೊಂಡಿರುವ ಬಾಕಿಗಳ ವಸೂಲಾತಿಯ ಕ್ರಮಗಳನ್ನು ಅನುಸರಿಸಲು ಇಲಾಖೆಯು ತತ್‌ಕ್ಷಣದ ಕ್ರಮವನ್ನು ತೆಗೆದುಕೊಳ್ಳಬೇಕು.

## 1.7 ಲೆಕ್ಕಪರಿಶೋಧನೆಯ ಪೂರ್ವಭಾವಿ ಯೋಜನೆ

ವಿವಿಧ ಇಲಾಖೆಗಳ ಅಡಿಯಲ್ಲಿ ಲೆಕ್ಕಪರಿಶೋಧನೆ ಮಾಡಬೇಕಾದಂತಹ ಘಟಕಗಳನ್ನು/ಕಚೇರಿಗಳನ್ನು, ಅವುಗಳ ರಾಜಸ್ವದ ಸ್ಥಿತಿಗತಿ, ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದಂತಹ ಅಂಶಗಳ ಹಿಂದಿನ ಪ್ರವೃತ್ತಿ ಮತ್ತು ಇನ್ನಿತರೆ ಪ್ರಮಿತಿಗಳಿಗೆ ತಕ್ಕಂತೆ ಅಧಿಕ, ಮಧ್ಯಮ ಹಾಗೂ ಅಲ್ಪ ಪ್ರಮಾಣದ ಸಂಭಾವ್ಯ ಅಪಾಯಗಳುಳ್ಳ ಸಂಸ್ಥೆಗಳೆಂಬುದಾಗಿ ವರ್ಗೀಕರಿಸಲಾಗುವುದು. ವಾರ್ಷಿಕ ಲೆಕ್ಕಪರಿಶೋಧನಾ ಪೂರ್ವಭಾವಿ ಯೋಜನೆಯನ್ನು, ಇನ್ನಿತರವುಗಳೊಂದಿಗೆ ಸರ್ಕಾರದ ರಾಜಸ್ವ/ವರಮಾನಗಳಲ್ಲಿನ ಪ್ರಮುಖ ಅಂಶಗಳು ಹಾಗೂ ಆಯವ್ಯಯ ಭಾಷಣ, ರಾಜ್ಯದ ಹಣಕಾಸಿನ ಮೇಲಿನ ಶ್ವೇತ ಪತ್ರ, ಹಣಕಾಸು ಆಯೋಗದ ವರದಿಗಳು (ರಾಜ್ಯ ಮತ್ತು ಕೇಂದ್ರ), ತೆರಿಗೆ ಸುಧಾರಣಾ ಸಮಿತಿಯ ಶಿಫಾರಸುಗಳು, ಕಳೆದ ಐದು ವರ್ಷಗಳಲ್ಲಿನ ರಾಜಸ್ವ/ವರಮಾನ ಗಳಿಗೆಗಳ ಸಂಖ್ಯಾಶಾಸ್ತ್ರೀಯ ವಿಶ್ಲೇಷಣೆ, ತೆರಿಗೆ ನಿರ್ವಹಣೆಯ ವೈಶಿಷ್ಟ್ಯತೆಗಳು, ಕಳೆದ ಐದು ವರ್ಷಗಳಲ್ಲಿ ಲೆಕ್ಕಪರಿಶೋಧನಾ ವ್ಯಾಪ್ತಿ ಮತ್ತು ಅದರ ಪ್ರಭಾವ, ಇತ್ಯಾದಿಗಳನ್ನು ಒಳಗೊಂಡಂತೆ ಸಂಭಾವ್ಯ ಅಪಾಯದ ವಿಶ್ಲೇಷಣೆಯ ಆಧಾರದ ಮೇರೆಗೆ ತಯಾರಿಸಲಾಗುವುದು.

2016–17ರಲ್ಲಿ ಲೆಕ್ಕಪರಿಶೋಧನೆ ಮಾಡಬೇಕಾದಂತಹ 1,218 ಘಟಕ/ಕಚೇರಿಗಳಿದ್ದವು, ಅವುಗಳ ಪೈಕಿ 364 ಘಟಕ/ಕಚೇರಿಗಳು ಲೆಕ್ಕಪರಿಶೋಧನಾ ಪೂರ್ವಭಾವಿ ಯೋಜನೆಯನ್ನು ತಯಾರಿಸಲಾಯಿತು ಹಾಗೂ 377 ಘಟಕಗಳ/ಕಚೇರಿಗಳ ಲೆಕ್ಕಪರಿಶೋಧನೆ ಮಾಡಲಾಯಿತು, ಅವು ಲೆಕ್ಕಪರಿಶೋಧನೆ ಮಾಡಬೇಕಾದ ಒಟ್ಟಾರೆ ಘಟಕಗಳ ಶೇಕಡ 31ರಷ್ಟು ಆಗುತ್ತದೆ. ವಿವರಗಳನ್ನು **ಕೋಷ್ಟಕ 1.7.1** ರಲ್ಲಿ ತೋರಿಸಲಾಗಿದೆ:

**ಕೋಷ್ಟಕ 1.7.1**
**ಲೆಕ್ಕಪರಿಶೋಧನೆ ಮಾಡಲಾದ ಘಟಕ/ಕಚೇರಿಗಳ ವಿವರಗಳು**

| ಕ್ರಮ ಸಂಖ್ಯೆ | ಇಲಾಖೆ | ಘಟಕಗಳ ಸಂಖ್ಯೆ | | |
|---|---|---|---|---|
| | | 2016–17 ಸಾಲಿನಲ್ಲಿ ಲೆಕ್ಕಪರಿಶೋಧನೆಗೆ ಒಳಪಡಿಸಬೇಕಾಗಿದ್ದ ಘಟಕ/ಕಚೇರಿಗಳು | 2016–17ರಲ್ಲಿ ಲೆಕ್ಕಪರಿಶೋಧನೆಗಾಗಿ ಪೂರ್ವಭಾವಿ ಯೋಜನೆ ಮಾಡಲಾದ ಘಟಕ/ಕಚೇರಿಗಳು | 2016–17ರಲ್ಲಿ ಲೆಕ್ಕಪರಿಶೋಧನೆ ಮಾಡಲಾದ ಘಟಕ/ಕಚೇರಿಗಳು |
| 1. | ವಾಣಿಜ್ಯ ತೆರಿಗೆಗಳು | 416 | 137 | 146 |
| 2. | ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕಗಳು | 282 | 94 | 94 |
| 3. | ಮೋಟಾರು ವಾಹನಗಳ ಮೇಲಿನ ತೆರಿಗೆಗಳು | 72 | 40 | 41 |

| ಕ್ರಮ ಸಂಖ್ಯೆ | ಇಲಾಖೆ | ಘಟಕಗಳ ಸಂಖ್ಯೆ | | |
|---|---|---|---|---|
| | | 2016–17 ಸಾಲಿನಲ್ಲಿ ಲೆಕ್ಕಪರಿಶೋಧನೆಗೆ ಒಳಪಡಿಸಬೇಕಾಗಿದ್ದ ಘಟಕ/ಕಚೇರಿಗಳು | 2016–17ರಲ್ಲಿ ಲೆಕ್ಕಪರಿಶೋಧನೆಗಾಗಿ ಪೂರ್ವಭಾವಿ ಯೋಜನೆ ಮಾಡಲಾದ ಘಟಕ/ಕಚೇರಿಗಳು | 2016–17ರಲ್ಲಿ ಲೆಕ್ಕಪರಿಶೋಧನೆ ಮಾಡಲಾದ ಘಟಕ/ಕಚೇರಿಗಳು |
| 4. | ಭೂ ಕಂದಾಯ | 254 | 42 | 46 |
| 5. | ರಾಜ್ಯ ಅಬಕಾರಿ | 129 | 31 | 30[4] |
| 6. | ಖನಿಜ ಸ್ವೀಕೃತಿಗಳು | 34 | 13 | 13 |
| 7. | ಇಂಧನ | 31 | 07 | 07 |
| | ಒಟ್ಟು | **1218** | **364** | **377** |

ಮೇಲೆ ತಿಳಿಸಲಾದಂತಹ ಘಟಕಗಳ ಲೆಕ್ಕಪರಿಶೋಧನೆಯಲ್ಲದೆಯೇ, 'ಕರ್ನಾಟಕ ರಾಜ್ಯದಲ್ಲಿ ಆಲ್ಕಹಾಲಿನ ಉತ್ಪನ್ನಗಳ ತಯಾರಿಕೆ, ಹೊಂದಿರುವಿಕೆ, ಸಾಗಾಣಿಕೆ, ವಿತರಣೆ ಮತ್ತು ಮಾರಾಟದ ಮೇಲೆ ರಾಜ್ಯ ಅಬಕಾರಿ ಇಲಾಖೆಯಿಂದ ನಿಬಂಧನೆ ಮತ್ತು ನಿಯಂತ್ರಣ' ಇದರ ಮೇಲೆ ಒಂದು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ಹಾಗೂ ಅಲ್ಲದೆಯೇ 'ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ ಸಂಸ್ಥೆಗಳು ಅಪ್ರದಾನ ಖನಿಜಗಳ ಮೇಲೆ ಮೂಲದಲ್ಲಿಯೇ ಕಡಿದುಕೊಳ್ಳುವ ರಾಜಧನ (ರಾಯಲ್ಟಿ), ಇದರ ಮೇಲೆ ಒಂದು ವಿಷಯಾಧಾರಿತ ಲೆಕ್ಕಪರಿಶೋಧನೆಯನ್ನೂ ಸಹ ಪ್ರಸಕ್ತ ಸಾಲಿನಲ್ಲಿ ಕೈಗೆತ್ತಿಕೊಳ್ಳಲಾಯಿತು.

## 1.8 ಲೆಕ್ಕಪರಿಶೋಧನೆಯ ಫಲಿತಾಂಶಗಳು

**ಪ್ರಸಕ್ತ ಸಾಲಿನಲ್ಲಿ ನಡೆಸಲಾದಂತಹ ಸ್ಥಳೀಯ ಲೆಕ್ಕಪರಿಶೋಧನೆಯ ಸ್ಥಿತಿಗತಿ**

ಮಾರಾಟಗಳ ಮೇಲಿನ ತೆರಿಗೆ/ಮೌಲ್ಯ ವರ್ಧಿತ ತೆರಿಗೆ, ರಾಜ್ಯ ಅಬಕಾರಿ, ಮೋಟಾರು ವಾಹನಗಳ ಮೇಲಿನ ತೆರಿಗೆಗಳು, ಮುದ್ರಾಂಕಗಳು ಮತ್ತು ನೋಂದಣಿ ಶುಲ್ಕ, ಭೂ ಕಂದಾಯ ಮತ್ತು ಇತರೆ ಇಲಾಖಾಗಳ 377 ಘಟಕ/ಕಚೇರಿಗಳ ದಾಖಲೆಗಳ 2016–17 ಸಾಲಿನಲ್ಲಿ ನಡೆಸಲಾದಂತಹ ಪರೀಕ್ಷಾ ಪರಿಶೀಲನೆಯು 1,245 ಕಂಡಿಕೆಗಳ ಮೂಲಕ ಸ್ಪಷ್ಟಪಡಿಸಲಾಗಿರುವಂತಹ ಪ್ರಕರಣಗಳಲ್ಲಿ ₹ 440.95 ಕೋಟಿ ಒಟ್ಟಾರೆ ರಾಜಸ್ವ/ವರಮಾನವನ್ನು ಕಡಿಮೆ ಪ್ರಮಾಣದಲ್ಲಿ ನಿರ್ಧಾರಣೆ ಮಾಡಿರುವುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿರುವುದು/ರಾಜಸ್ವ/ವರಮಾನದ ನಷ್ಟ, ಇವುಗಳನ್ನು ತೋರಿಸಿಕೊಟ್ಟಿತು. ಪ್ರಸಕ್ತ ಸಾಲಿನಲ್ಲಿ, ಸಂಬಂಧಪಟ್ಟ ಇಲಾಖೆಗಳು 264 ಕಂಡಿಕೆಗಳ ಮೂಲಕ ₹ 72.11 ಕೋಟಿ ಮೊತ್ತವು ಒಳಗೊಂಡಂತೆ ಸ್ಪಷ್ಟಪಡಿಸಲಾಗಿದ್ದಂತಹ ಕರನಿರ್ಧಾರಣೆಯನ್ನು ಕಡಿಮೆ ಪ್ರಮಾಣದಲ್ಲಿ ಮಾಡಿದ್ದುದು ಹಾಗೂ ಇನ್ನಿತರೆ ಲೋಪದೋಷಗಳನ್ನು ಒಪ್ಪಿಕೊಂಡಿದ್ದವು. ಈ ಹಿಂದಿನ ಸಾಲುಗಳ ಲೆಕ್ಕಪರಿಶೋಧನೆಯ ಅಂಶಗಳಿಗೆ ಸಂಬಂಧಿಸಿದಂತೆ 2016–17ರಲ್ಲಿ 423 ಕಂಡಿಕೆಗಳಲ್ಲಿ ಸ್ಪಷ್ಟಪಡಿಸಲಾಗಿದ್ದ ₹ 20.50 ಕೋಟಿ ಮೊತ್ತವನ್ನು ಇಲಾಖೆಗಳು ವಸೂಲಾತಿ ಮಾಡಿದವು.

## 1.9 ಈ ವರದಿಯ ವ್ಯಾಪ್ತಿ

ಈ ವರದಿಯು, ಮೇಲೆ ಉಲ್ಲೇಖಿಸಲ್ಪಟ್ಟಿರುವಂತೆ ₹311.58 ಕೋಟಿ ಮೊತ್ತವು ಒಳಗೊಂಡಂತೆ ಒಂದು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ ಹಾಗೂ ಒಂದು ವಿಷಯಾಧಾರಿತ ಲೆಕ್ಕಪರಿಶೋಧನೆಯೂ ಒಳಗೊಂಡಂತೆ ಸ್ಥಳೀಯ ಲೆಕ್ಕಪರಿಶೋಧನೆಯ ವೇಳೆಯಲ್ಲಿ ಗಮನಿಸಲಾದಂತಹ ಹಾಗೂ ಹಿಂದಿನ ಸಾಲುಗಳಲ್ಲಿ ಗಮನಿಸಲಾದಂತಹ (ಹಿಂದಿನ ವರದಿಗಳಲ್ಲಿ ಸೇರಿಸಲು ಸಾಧ್ಯವಾಗದಿದ್ದಂತಹ) ಲೆಕ್ಕಪರಿಶೋಧನಾ ಅಂಶಗಳಿಂದ ಆಯ್ಕೆ ಮಾಡಲಾಗಿರುವ 14 ಕಂಡಿಕೆಗಳನ್ನು ಒಳಗೊಂಡಿದೆ.

ಇಲಾಖೆಗಳು/ಸರ್ಕಾರವು ₹ 25.85 ಕೋಟಿ ಮೊತ್ತವು ಒಳಗೊಂಡಂತೆ ಲೆಕ್ಕಪರಿಶೋಧನೆಯ ಅಭಿಪ್ರಾಯಗಳನ್ನು ಒಪ್ಪಿಕೊಂಡವು ಹಾಗೂ ಅದರ ಪೈಕಿ ₹ 2.09 ಕೋಟಿ ಮೊತ್ತವನ್ನು ವಸೂಲಾತಿ ಮಾಡಿದವು. ಉಳಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ಉತ್ತರಗಳು ಸ್ವೀಕೃತಗೊಂಡಿರುವುದಿಲ್ಲ (ನವಂಬರ್ 2017). ಇವುಗಳ ಬಗ್ಗೆ ಮುಂದಿನ II ರಿಂದ VIರವರೆಗಿನ ಅಧ್ಯಾಯಗಳಲ್ಲಿ ಚರ್ಚಿಸಲಾಗಿದೆ.

[4] ರಾಜ್ಯ ಅಬಕಾರಿ ಇಲಾಖೆಯ ಅಡಿಯಲ್ಲಿನ ಒಂದು ಘಟಕವು ಕಾರ್ಯಸ್ಥಗಿತಗೊಂಡಿದ್ದಿತು.

# ಅಧ್ಯಾಯ–II

# ಮಾರಾಟಗಳು, ವ್ಯಾಪಾರ, ಇತ್ಯಾದಿಗಳ ಮೇಲಿನ ತೆರಿಗೆಗಳು/ಮೌಲ್ಯ ವರ್ಧಿತ ತೆರಿಗೆ

# ಅಧ್ಯಾಯ–II
# ಮಾರಾಟಗಳು, ವ್ಯಾಪಾರ, ಇತ್ಯಾದಿಗಳ ಮೇಲಿನ ತೆರಿಗೆಗಳು/ಮೌಲ್ಯ ವರ್ಧಿತ ತೆರಿಗೆ

## 2.1 ತೆರಿಗೆ ನಿರ್ವಹಣೆ

ಮಾರಾಟಗಳ ಮೇಲಿನ ತೆರಿಗೆ/ಮೌಲ್ಯ ವರ್ಧಿತ ತೆರಿಗೆ (ಮೌವತೆ) ಅಧಿನಿಯಮಗಳು ಹಾಗೂ ಅವುಗಳ ಅಡಿಯಲ್ಲಿ ರೂಪಿಸಲ್ಪಟ್ಟಿರುವಂತಹ ನಿಯಮಗಳು ಸರ್ಕಾರದ ಮಟ್ಟದಲ್ಲಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು, ಹಣಕಾಸು ಇಲಾಖೆ, ಇವರಿಂದ ನಿರ್ವಹಿಸಲ್ಪಡುತ್ತವೆ. ವಾಣಿಜ್ಯ ತೆರಿಗೆಗಳ ಆಯುಕ್ತರು ವಾಣಿಜ್ಯ ತೆರಿಗೆಗಳ ಇಲಾಖೆಯ ಮುಖ್ಯಸ್ಥರಾಗಿರುತ್ತರೆ ಹಾಗೂ ಅವರು 14 ಹೆಚ್ಚುವರಿ (ಅಡಿಷನಲ್) ಆಯುಕ್ತರವರುಗಳ ಮತ್ತು ಏಳು ಜಂಟಿ ಆಯುಕ್ತರವರುಗಳ ಸಹಾಯದಿಂದ ಕಾರ್ಯನಿರ್ವಹಿಸುತ್ತಾರೆ. ರಾಜ್ಯದಲ್ಲಿ 13 ವಿಭಾಗೀಯ ಮೌಲ್ಯ ವರ್ಧಿತ ತೆರಿಗೆ ಕಚೇರಿಗಳು (ವಿಭಾಗೀಯ ಮೌವತೆ ಕಚೇರಿ), 13 ಮನವಿ (ಅಪೀಲ್) ಅಧಿಕಾರಿಗಳ ಕಚೇರಿಗಳು, ಎಂಟು ಜಾರಿ/ಜಾಗೃತ ದಳ ಕಚೇರಿಗಳು ಹಾಗೂ ಒಂದು ಅಪ್ರಧಾನ ಅಧಿನಿಯಮಗಳ ವಿಭಾಗವು 35 ಜಂಟಿ ಆಯುಕ್ತರವರುಗಳಿಂದ ನಿರ್ವಹಿಸಲ್ಪಡುತ್ತಿದ್ದವು. ರಾಜ್ಯದಲ್ಲಿ 123 ಉಪ ಆಯುಕ್ತರುಗಳು (ವಾತೆಉಆ), 321 ಸಹಾಯಕ ಆಯುಕ್ತರುಗಳು (ವಾತೆಸಆ) ಹಾಗೂ 526 ವಾಣಿಜ್ಯ ತೆರಿಗೆ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿರುವರು. ಅನುಕ್ರಮವಾಗಿ, ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರುಗಳು ಹಾಗೂ ವಾಣಿಜ್ಯ ತೆರಿಗೆ ಅಧಿಕಾರಿಗಳ ನೇತೃತ್ವದಲ್ಲಿ ಕಾರ್ಯನಿರ್ವಹಿಸುತ್ತಿದ್ದ 118 ಸ್ಥಳೀಯ ಮೌವತೆ ಕಚೇರಿಗಳು ಹಾಗೂ ಮೌವತೆ ಉಪ ಕಚೇರಿಗಳು ಕ್ಷೇತ್ರ ಮಟ್ಟದಲ್ಲಿ ಮೌವತೆಯನ್ನು ನಿರ್ವಹಿಸುತ್ತಿದ್ದಾರೆ ಇಲಾಖೆಯಿಂದ ಕರನಿರ್ಧಾರಣೆಗಳು/ಪುನರ್–ಕರನಿರ್ಧಾರಣೆಗಳನ್ನು ಅಂತಿಮ ರೂಪಕ್ಕೆ ತರಲ್ಪಡುತ್ತಿದ್ದಂತಹ 266 ಲೆಕ್ಕಪರಿಶೋಧನಾ ಕಚೇರಿಗಳ ನೇತೃತ್ವವನ್ನು ವಾಣಿಜ್ಯ ತೆರಿಗೆಗಳ ಉಪ ಆಯುಕ್ತರುಗಳು, ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರುಗಳು ಹಾಗೂ ವಾಣಿಜ್ಯ ತೆರಿಗೆ ಅಧಿಕಾರಿಗಳು ಹೊಂದಿರುತ್ತಾರೆ.

## 2.2 ಆಂತರಿಕ ಲೆಕ್ಕಪರಿಶೋಧನೆ

ಇಲಾಖೆಯು ಒದಗಿಸಿದ ಮಾಹಿತಿಯ ಅನುಸಾರ, ಆಂತರಿಕ ಲೆಕ್ಕಪರಿಶೋಧನಾ ವಿಭಾಗವು 2011–12ನೇ ಸಾಲಿನಿಂದ ಕಾರ್ಯನಿರ್ವಹಿಸುತ್ತಿದ್ದಿತು. 2016–17 ಸಾಲಿನಲ್ಲಿ ಲೆಕ್ಕಪರಿಶೋಧನೆ ನಡೆಸಲು 344 ಕಚೇರಿಗಳು ಬಾಕಿಯಿದ್ದವು, ಅವುಗಳ ಪೈಕಿ 227 ಕಚೇರಿಗಳ ಲೆಕ್ಕಪರಿಶೋಧನೆಯನ್ನು ನಡೆಸಲಾಗಿದ್ದಿತು. ಕಚೇರಿಗಳ ವ್ಯಾಪ್ತಿಯಲ್ಲಿನ ಕೊರತೆಗೆ ಕಾರಣವೆಂದರೆ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು ಕಾರ್ಯಗತಗೊಳಿಸುವ ಸಲುವಾಗಿನ ಪೂರ್ವ–ತಯಾರಿಗಳು ಆಗಿದ್ದವು. ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಅಂಶಗಳ ಸಂಖ್ಯೆ, ಇತ್ಯರ್ಥಗೊಂಡವುಗಳು ಹಾಗೂ ಒಳಗೊಂಡಿರುವಂತಹ ಹಣಕಾಸಿನ ಮೌಲ್ಯದ ಜೊತೆಯಲ್ಲಿ ಬಾಕಿಗಳ ವರ್ಷವಾರು ವಿವರಗಳನ್ನು **ಕೋಷ್ಟಕ 2.1**ರಲ್ಲಿ ನೀಡಲಾಗಿದೆ.

**ಕೋಷ್ಟಕ 2.1**
**ಆಂತರಿಕ ಲೆಕ್ಕಪರಿಶೋಧನಾ ವಿಭಾಗವು ಗಮನಿಸಿದ್ದ ಅಂಶಗಳ ವರ್ಷವಾರು ವಿವರಗಳು**

**(₹ ಕೋಟಿಯಲ್ಲಿ)**

| ವರ್ಷ | ಗಮನಿಸಲಾಗಿದ್ದ ಅಂಶಗಳು | | ಇತ್ಯರ್ಥಗೊಂಡ ಅಂಶಗಳು | | ಬಾಕಿಯಿರುವ ಅಂಶಗಳು | |
|---|---|---|---|---|---|---|
| | ಪ್ರಕರಣಗಳ ಸಂಖ್ಯೆ | ಮೊತ್ತ | ಪ್ರಕರಣಗಳ ಸಂಖ್ಯೆ | ಮೊತ್ತ | ಪ್ರಕರಣಗಳ ಸಂಖ್ಯೆ | ಮೊತ್ತ |
| 2012–13 | 3,814 | 189.00 | 1,122 | 57.75 | 2,692 | 131.25 |
| 2013–14 | 4,183 | 15.23 | 319 | 0.18 | 3,864 | 15.05 |
| 2014–15 | 6,742 | 22.00 | 1,046 | 4.13 | 5,696 | 17.87 |
| 2015–16 | 1,129 | 34.59 | 595 | 3.15 | 534 | 31.44 |
| 2016–17 | 500 | 104.85 | 10 | 0.03 | 490 | 104.82 |
| **ಒಟ್ಟು** | **16,368** | **365.67** | **3,092** | **65.24** | **13,276** | **300.43** |

ಮೇಲಿನ ಕೋಷ್ಟಕದಿಂದ ಕಾಣಬಹುದಾದಂತೆ, 31 ಮಾರ್ಚ್ 2017ರಲ್ಲಿದ್ದಂತೆ ₹ 300.43 ಕೋಟಿ ಮೊತ್ತವು ಒಳಗೊಂಡಂತೆ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದಂತಹ 13,276 ಅಂಶಗಳು ಬಾಕಿಯಿದ್ದವು. ಬಾಕಿಯಿರುವ ಈ ಅಂಶಗಳನ್ನು ಇತ್ಯರ್ಥಗೊಳಿಸುವ ಸಲುವಾಗಿ ತ್ವರಿತ ಕ್ರಮಗಳನ್ನು ತೆಗೆದುಕೊಳ್ಳಬೇಕು.

## 2.3 ಲೆಕ್ಕಪರಿಶೋಧನೆಯ ಫಲಿತಾಂಶಗಳು

2016–17ರಲ್ಲಿ ಮೌವತೆ, ಪ್ರವೇಶ ತೆರಿಗೆ ಹಾಗೂ ವೃತ್ತಿಗಳ ಮೇಲಿನ ತೆರಿಗೆಗೆ ಸಂಬಂಧಿಸಿದಂತೆ ವಾಣಿಜ್ಯ ತೆರಿಗೆಗಳ ಇಲಾಖೆಯ 146 ಕಚೇರಿಗಳ ದಾಖಲೆಗಳ ಪರೀಕ್ಷಾ–ಪರಿಶೀಲನೆಯು ₹ 154.39 ಕೋಟಿ ಮೊತ್ತವು ಒಳಗೊಂಡಂತೆ 878 ಕಂಡಿಕೆಗಳಲ್ಲಿ ತೆರಿಗೆಯನ್ನು ಕಡಿಮೆ ಪ್ರಮಾಣದಲ್ಲಿ ನಿರ್ಧಾರಣೆ ಮಾಡಿದ್ದುದು ಹಾಗೂ

ಇನ್ನಿತರೆ ನಿಯಮ ಬಾಹಿರತೆಗಳನ್ನು ತೋರಿಸಿಕೊಟ್ಟಿತು, ಅವು **ಕೋಷ್ಟಕ 2.2**ರಲ್ಲಿ ವಿವರಿಸಲಾಗಿರುವ ಪ್ರವರ್ಗಗಳ ಅಡಿಯಲ್ಲಿ ವಿವರಿಸಲಾಗಿದೆ.

**ಕೋಷ್ಟಕ 2.2**
**ಲೆಕ್ಕಪರಿಶೋಧನೆಯ ಫಲಿತಾಂಶಗಳು**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ಪ್ರವರ್ಗ | ಪ್ರಕರಣಗಳ ಸಂಖ್ಯೆ | ಮೊತ್ತ |
|---|---|---|---|
| | **ಮೌಲ್ಯ ವರ್ಧಿತ ತೆರಿಗೆ** | | |
| 1. | ತೆರಿಗೆಯನ್ನು ಪಾವತಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ಪಾವತಿಸಿದ್ದುದು | 56 | 11.36 |
| 2. | ದಂಡವನ್ನು ಪಾವತಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ಪಾವತಿಸಿದ್ದುದು | 160 | 15.82 |
| 3. | ಬಡ್ಡಿಯನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು | 86 | 38.59 |
| 4. | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಿಂದ (ಕರ್ನಾಟಕ ರೆಸಿಡೆನ್ಷಿಯಲ್ ಎಜುಕೇಶನ್ ಇನ್ಸ್‌ಟಿಟ್ಯೂಷನ್ಸ್ ಸೊಸೈಟಿ) ಪಡೆದ ಗುತ್ತಿಗೆ ಸ್ವೀಕೃತಿಗಳ ಮೇಲೆ ತೆರಿಗೆಯನ್ನು ವಿಧಿಸದಿದ್ದುದು | 67 | 20.06 |
| 5. | ಮದ್ಯ ಮಾರಾಟದ ಮೇಲೆ ತೆರಿಗೆಯನ್ನು ವಿಧಿಸದಿದ್ದುದು | 28 | 21.89 |
| 6. | ಸಲ್ಲಿಕೆಗಳ ಸ್ವೀಕೃತಿಪತ್ರಗಳನ್ನು ನೀಡದಿರುವುದು | 35 | 5.67 |
| 7. | ಖರೀದಿಗಳ ಮೇಲಿನ ತೆರಿಗೆ ಜಮೆಯನ್ನು ತಪ್ಪಾಗಿ/ಅಧಿಕ ಪ್ರಮಾಣದಲ್ಲಿ ಅನುಮೋದಿಸಿದ್ದುದು | 98 | 4.59 |
| 8. | ಖರೀದಿಗಳ ಮೇಲಿನ ತೆರಿಗೆ ಜಮೆಯನ್ನು ಮುಂದಿನ ತೆರಿಗೆ ಅವಧಿಗೆ ಅಧಿಕ ಪ್ರಮಾಣದಲ್ಲಿ ಮುಂದಕ್ಕೆ ತೆಗೆದುಕೊಂಡು ಹೋಗಿದ್ದುದು | 54 | 3.91 |
| 9. | ಮರುಪಾವತಿಗಳನ್ನು ಅಧಿಕ ಪ್ರಮಾಣದಲ್ಲಿ ಮಾಡಿದ್ದುದು | 07 | 2.63 |
| 10. | ನೋಂದಾಯಿತರಲ್ಲದ ವರ್ತಕರಿಂದ ಮಾಡಲಾದ ಖರೀದಿಗಳ ಮೇಲೆ ತೆರಿಗೆಯನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು | 22 | 1.98 |
| 11. | ಇತರೆ ನಿಯಮಬಾಹಿರತೆಗಳು | 242 | 27.08 |
| | **ಒಟ್ಟು** | **855** | **153.58** |
| | **ಸರಕುಗಳ ಪ್ರವೇಶದ ಮೇಲಿನ ತೆರಿಗೆ** | | |
| 12. | ಪ್ರವೇಶ ತೆರಿಗೆ/ಬಡ್ಡಿ ಪಾವತಿಗಾಗಿ ತಗಾದೆಯನ್ನು ಸೃಷ್ಟಿಸದಿದ್ದುದು | 23 | 0.81 |
| | **ಒಟ್ಟು ಮೊತ್ತ** | **878** | **154.39** |

ಪ್ರಸಕ್ತ ಸಾಲಿನಲ್ಲಿ, ಇಲಾಖೆಯು 158 ಕಂಡಿಕೆಗಳಲ್ಲಿ ₹ 48.59 ಕೋಟಿ ಮೊತ್ತವು ಒಳಗೊಂಡಂತೆ ತೆರಿಗೆ ನಿರ್ಧಾರಣೆಯನ್ನು ಕಡಿಮೆ ಪ್ರಮಾಣದಲ್ಲಿ ಮಾಡಿದ್ದುದು ಹಾಗೂ ಇತರೆ ಲೋಪದೋಷಗಳನ್ನು ಒಪ್ಪಿಕೊಂಡಿತು. ಈ ಹಿಂದಿನ ಸಾಲುಗಳಲ್ಲಿ ಸ್ಪಷ್ಟಪಡಿಸಲಾಗಿದ್ದ 251 ಕಂಡಿಕೆಗಳಿಗೆ ಸಂಬಂಧಿಸಿದಂತೆ ₹ 11.10 ಕೋಟಿ ಮೊತ್ತವನ್ನೂ ಸಹ ವಸೂಲಾತಿ ಮಾಡಲಾಯಿತು.

₹ 57.72 ಕೋಟಿ ಮೊತ್ತವು ಒಳಗೊಂಡಂತೆ ವಸೂಲಾತಿಯಾಗದಿದ್ದ/ಕಡಿಮೆ ಪ್ರಮಾಣದಲ್ಲಿ ವಸೂಲಾತಿಯಾಗಿದ್ದ ಮೌಲ್ಯವತೆ, ದಂಡ ಮತ್ತು ಬಡ್ಡಿಯ ಕೆಲವು ದೃಷ್ಟಾಂತ ಪ್ರಕರಣಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

## 2.4 ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಿಂದ (ಕರ್ನಾಟಕ ರೆಸಿಡೆನ್ಷಿಯಲ್ ಎಜುಕೇಶನ್ ಇನ್ಸ್‌ಟಿಟ್ಯೂಷನ್ಸ್ ಸೊಸೈಟಿ) ಸ್ವೀಕರಿಸಲಾದ ಗುತ್ತಿಗೆ ಕಾಮಗಾರಿಗಳಿಗೆ ಸಂಬಂಧಿತ ಸ್ವೀಕೃತಿಗಳನ್ನು ಘೋಷಿಸಿಕೊಳ್ಳದಿದ್ದ ಕಾರಣ ತೆರಿಗೆಯನ್ನು ವಿಧಿಸದಿದ್ದುದು

ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮ, 2003ರ ಪರಿಚ್ಛೇದ 4(1) (ಸಿ) ಅನುಸಾರ, ಕಾಮಗಾರಿಗಳ ಗುತ್ತಿಗೆಯನ್ನು ಕಾರ್ಯಗತಗೊಳಿಸುವಲ್ಲಿ ಸರಕುಗಳ ರೂಪದಲ್ಲಿ (ಸರಕು ಅಥವಾ ಮತ್ಯಾವುದೇ ರೂಪದಲ್ಲಿ) ವರ್ಗಾವಣೆಗೊಳ್ಳುವ ಆಸ್ತಿಗೆ ಸಂಬಂಧಿಸಿದಂತೆ ಅಧಿನಿಯಮದ ಆರನೇ ಷೆಡ್ಯೂಲಿನಲ್ಲಿ ನಿರ್ದಿಷ್ಟಪಡಿಸಲಾಗಿರುವ ದರಗಳಲ್ಲಿ ತೆರಿಗೆಯನ್ನು ವಿಧಿಸತಕ್ಕದ್ದು. ಕಾಮಗಾರಿಗಳ ಗುತ್ತಿಗೆಯನ್ನು ಕಾರ್ಯಗತಗೊಳಿಸುವ ಓರ್ವ ವರ್ತಕರು ಈ ಅಧಿನಿಯಮದ ಅಡಿಯಲ್ಲಿ ತಾವು ಪಾವತಿಸಬೇಕಾದ ತೆರಿಗೆಯ ನಿವ್ವಳ ಮೊತ್ತಕ್ಕೆ ಬದಲಾಗಿ ಕಾರ್ಯಗತಗೊಳಿಸಲಾದ ಕಾಮಗಾರಿಗಳ ಗುತ್ತಿಗೆಯಿಂದ ಬಂದಂತಹ ಒಟ್ಟಾರೆ ಪ್ರತಿಫಲದ ಮೇಲೆ ನಿರ್ದಿಷ್ಟ ದರದಲ್ಲಿ ಸಂಯೋಜನಾ ತೆರಿಗೆ ಪಾವತಿ ಮಾಡಲು ಆಯ್ಕೆ ಮಾಡಿಕೊಳ್ಳಬಹುದು ಎಂಬುದಾಗಿ ಕರ್ನಾಟಕ ಮೌವತೆ ಅಧಿನಿಯಮ, 2003ರ ಪರಿಚ್ಛೇದ 15(1) (ಬಿ) ಅನುವು ಮಾಡಿರುತ್ತದೆ. 2012–13ರಿಂದ 2015–16 ಸಾಲುಗಳಿಗೆ ಸಂಯೋಜನಾ ತೆರಿಗೆ ಪಾವತಿಯನ್ನು ಆಯ್ಕೆ ಮಾಡಿಕೊಂಡ ಹಾಗೂ ಇತರೆ ಸಾಮಾನ್ಯ ವರ್ತಕರು ಕಾಮಗಾರಿಗಳ ಗುತ್ತಿಗೆಯ ಮೇಲೆ ಪಾವತಿಸಬೇಕಾದ ತೆರಿಗೆ ದರವು ಅನುಕ್ರಮವಾಗಿ ಶೇಕಡಾ ನಾಲ್ಕು ಹಾಗೂ ಶೇಕಡಾ 14.50 ಆಗಿದ್ದಿತು. ಮುಂದುವರೆದು, ಕೇಂದ್ರ ಸರ್ಕಾರ, ಅಥವಾ ರಾಜ್ಯ ಸರ್ಕಾರ ಅಥವಾ ಕೇಂದ್ರ ಅಥವಾ ರಾಜ್ಯ ಸರ್ಕಾರದ ಒಂದು ಕೈಗಾರಿಕಾ ಸಂಸ್ಥೆ, ವಾಣಿಜ್ಯ ಅಥವಾ ವ್ಯಾಪಾರ ಸಂಸ್ಥೆ ಅಥವಾ ಸ್ಥಳೀಯ ಪ್ರಾಧಿಕಾರ ಅಥವಾ ಒಂದು ಶಾಸನಬದ್ಧ ಸಂಸ್ಥೆ, ಇತ್ಯಾದಿಗಳಿಗೆ ಕಾರ್ಯಗತಗೊಳಿಸಲಾದ ಯಾವುದೇ ಕಾಮಗಾರಿಗಳ ಗುತ್ತಿಗೆಗೆ ಸಂಬಂಧಿಸಿದಂತೆ ಓರ್ವ ವರ್ತಕರಿಗೆ ಪಾವತಿಸಬೇಕಾದ ಮೊತ್ತಗಳಿಂದ ತೆರಿಗೆಯನ್ನು

ಮೂಲದಲ್ಲಿಯೇ ಕಡಿದುಕೊಳ್ಳಲು ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ರ ಪರಿಚ್ಛೇದ 9–ಎ ಅನುವು ಮಾಡಿರುತ್ತದೆ.

ರಾಜ್ಯದಲ್ಲಿನ ಎಲ್ಲಾ ವಸತಿ ಶಿಕ್ಷಣ ಸಂಸ್ಥೆಗಳ ಸ್ಥಾಪನೆ, ಸುಸ್ಥಿತಿಯಲ್ಲಿಡುವಿಕೆ, ನಿಯಂತ್ರಣ ಮತ್ತು ಅವುಗಳ ಆಡಳಿತ ನಿರ್ವಹಣೆಗಾಗಿ ಕರ್ನಾಟಕ ಸರ್ಕಾರವು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವನ್ನು (ಕರ್ನಾಟಕ ರೆಸಿಡೆನ್ಷಿಯಲ್ ಎಜುಕೇಶನಲ್ ಇನ್ಸ್ಟಿಟ್ಯೂಷನ್ಸ್ ಸೊಸೈಟಿಯನ್ನು) ಕರ್ನಾಟಕ ಸರ್ಕಾರವು 2000ನೇ[1] ಇಸವಿಯಲ್ಲಿ ಸ್ಥಾಪಿಸಿತು. ಅಂದಿನಿಂದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು, ಶಾಲೆಗಳು/ಕಾಲೇಜುಗಳ ನಿರ್ಮಾಣಕ್ಕಾಗಿ ಕಾಮಗಾರಿಗಳ ಗುತ್ತಿಗೆಯನ್ನು ನೀಡುತ್ತಾ ಬಂದಿದೆ. ಗುತ್ತಿಗೆದಾರರುಗಳಿಗೆ ಮಾಡಲಾದ ಪಾವತಿಗಳಿಂದ ತೆರಿಗೆಯನ್ನು ಮೂಲದಲ್ಲಿಯೇ ಕಡಿದುಕೊಳ್ಳುವ ಸಲುವಾಗಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ವಾಣಿಜ್ಯ ತೆರಿಗೆ ಇಲಾಖೆಯಿಂದ ಸ್ಪಷ್ಟನೆಯನ್ನು ಕೋರಿತು, ಅದಕ್ಕೆ ಪ್ರತಿಯಾಗಿ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ಒಂದು ಸಂಘವಾಗಿರುವುದರಿಂದ ತೆರಿಗೆಯನ್ನು ಮೂಲದಲ್ಲಿಯೇ ಕಡಿದುಕೊಳ್ಳಲು ಅನುಮತಿ ಇರುವುದಿಲ್ಲ/ಅದರ ಅಗತ್ಯತೆಯಿರುವುದಿಲ್ಲ ಎಂಬುದಾಗಿ ಇಲಾಖೆಯು ತಿಳಿಸಿತು. ಆದ್ದರಿಂದ ಕಾರ್ಯಗತಗೊಳಿಸಲಾದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು, ಗುತ್ತಿಗೆದಾರರಿಗೆ ಮಾಡಲಾದ ಪಾವತಿಗಳಿಂದ ತೆರಿಗೆಯನ್ನು ಮೂಲದಲ್ಲಿಯೇ ಕಡಿದುಕೊಳ್ಳುತ್ತಿರಲಿಲ್ಲ.

2012–13ರಿಂದ 2015–16ರ ಅವಧಿಯಲ್ಲಿ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ವಿವಿಧ ವರ್ತಕರುಗಳಿಗೆ ಕಾಮಗಾರಿಗಳ ಗುತ್ತಿಗೆಗಳ ಕಡೆಗೆ ₹ 1,425.30 ಕೋಟಿ ಮೊತ್ತದಷ್ಟು ಪಾವತಿಗಳನ್ನು ಮಾಡಿದ್ದಿತು. ವರ್ತಕರುಗಳು ಸಲ್ಲಿಸಿದ್ದ ಸಲ್ಲಿಕೆಗಳ ಜೊತೆ ಅಂತಹ ಪಾವತಿಗಳನ್ನು ಲೆಕ್ಕಪರಿಶೋಧನೆಯು ಅಡ್ಡ–ಪರಿಶೀಲನೆ ಮಾಡಲಾಗಿ, ಈ ಕೆಳಗೆ ನಮೂದಿಸಿರುವಂತೆ 17 ಜಿಲ್ಲೆಗಳಲ್ಲಿ[2] 23 ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಕಚೇರಿಗಳು, ಮೂರು ಮೌಲ್ಯವರ್ಧಿತ ತೆರಿಗೆ ಉಪ–ಕಚೇರಿಗಳು ಮತ್ತು 10 ಲೆಕ್ಕಪರಿಶೋಧನಾ ಕಚೇರಿಗಳಲ್ಲಿ ಸಲ್ಲಿಸಲಾಗಿದ್ದ ಸಲ್ಲಿಕೆಗಳಲ್ಲಿ ವಹಿವಾಟನ್ನು ಕಡಿಮೆ ಪ್ರಮಾಣದಲ್ಲಿ ಘೋಷಿಸಿಕೊಂಡಿದ್ದುದು/ಘೋಷಿಸಿಕೊಂಡಿರದಿದ್ದುದನ್ನು ಅದು ತೋರಿಸಿಕೊಟ್ಟಿತು.

(ಎ) 31 ವರ್ತಕರುಗಳಿಗೆ ಸಂಬಂಧಿಸಿದಂತೆ (ಸಂಯೋಜನಾ ತೆರಿಗೆ ಯೋಜನೆಯ ಅಡಿಯಲ್ಲಿ) ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಿಂದ ಸ್ವೀಕರಿಸಲಾಗಿದ್ದ ಕಾಮಗಾರಿಗಳ ಮೊತ್ತ ₹ 108.96 ಕೋಟಿ ಆಗಿದ್ದಿತು, ಅದರ ಪೈಕಿ ₹ 34.16 ಕೋಟಿ ಮೊತ್ತವನ್ನು ಈ ವರ್ತಕರುಗಳು ಘೋಷಿಸಿಕೊಂಡಿದ್ದರಾದ್ದರಿಂದ ಅದು ₹ 74.80 ಕೋಟಿ ಮೊತ್ತದಷ್ಟು ವಹಿವಾಟನ್ನು ಕಡಿಮೆ ಪ್ರಮಾಣದಲ್ಲಿ ಘೋಷಿಸಿಕೊಳ್ಳುವಲ್ಲಿ ಪರಿಣಮಿಸಿತು. ₹ 74.80 ಕೋಟಿ ಮೊತ್ತದಷ್ಟು ವಹಿವಾಟಿನ ಮೇಲೆ ಶೇಕಡಾ ನಾಲ್ಕರ ದರದಲ್ಲಿ ತೆರಿಗೆಯನ್ನು ವಿಧಿಸದಿದ್ದುದು ₹ 2.99 ಕೋಟಿ ಮೊತ್ತದಷ್ಟು ಆಗಿದ್ದಿತು.

(ಬಿ) 14 ವರ್ತಕರುಗಳಿಗೆ ಸಂಬಂಧಿಸಿದಂತೆ (ಸಾಮಾನ್ಯ ಮೌಲ್ಯವರ್ಧಿತ ತೆರಿಗೆ ಅಡಿಯಲ್ಲಿ), ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಿಂದ ಸ್ವೀಕರಿಸಲಾದ ಕಾಮಗಾರಿಗಳ ಗುತ್ತಿಗೆಗೆ ಸಂಬಂಧಿತ ಮೊತ್ತವು ₹ 119.97 ಕೋಟಿ ಆಗಿದ್ದಿತು, ಅದರ ಪೈಕಿ, ಈ ವರ್ತಕರುಗಳು ₹ 26.40 ಕೋಟಿ ಮೊತ್ತವನ್ನು ಮಾತ್ರ ಘೋಷಿಸಿಕೊಂಡಿದ್ದರು, ಇದರಿಂದಾಗಿ ₹ 93.57 ಕೋಟಿ ವಹಿವಾಟನ್ನು ಕಡಿಮೆ ಪ್ರಮಾಣದಲ್ಲಿ ಘೋಷಿಸಿಕೊಳ್ಳುವಲ್ಲಿ ಪರಿಣಮಿಸಿತು. ₹ 93.57 ಕೋಟಿ ಮೊತ್ತದಷ್ಟು (ಶೇಕಡಾ 30ರ ದರದಲ್ಲಿ ಕೂಲಿ ಮತ್ತು ಅಂತಹುದೇ ರೀತಿಯ ವೆಚ್ಚಗಳನ್ನು ಕಳೆದನಂತರ) ವಹಿವಾಟಿನ ಮೇಲೆ ಶೇಕಡಾ 14.50 ದರದಲ್ಲಿ ವಿಧಿಸದಿದ್ದ ತೆರಿಗೆಯು ₹ 9.50 ಕೋಟಿ ಆಗಿದ್ದಿತು.

(ಸಿ) ವಾಣಿಜ್ಯ ತೆರಿಗೆಗಳ ಇಲಾಖೆಯ ದಾಖಲೆಗಳಲ್ಲಿ ನೋಂದಣಿಯನ್ನು ರದ್ದುಗೊಳಿಸಿಕೊಂಡಿದ್ದ ಒಂಬತ್ತು ವರ್ತಕರುಗಳು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಿಂದ ಕಾಮಗಾರಿಗಳ ಗುತ್ತಿಗೆಗಳ ಮೊತ್ತ ₹ 32.90 ಕೋಟಿಗಳನ್ನು ಸ್ವೀಕರಿಸಿದ್ದರು. ಈ ವರ್ತಕರುಗಳು ನೋಂದಣಿಯನ್ನು ರದ್ದುಗೊಳಿಸಿಕೊಂಡಿದ್ದರಿಂದ, ಯಾವುದೇ ಸಲ್ಲಿಕೆಗಳನ್ನೂ ಸಲ್ಲಿಸಿರಲಿಲ್ಲ ಹಾಗೂ ಸ್ವೀಕರಿಸಲಾಗಿದ್ದ ಮೊತ್ತದ ಮೇಲೆ ಅನ್ವಯಗೊಳ್ಳುತ್ತಿದ್ದ ₹ 1.32 ಕೋಟಿ ಮೊತ್ತದಷ್ಟು ತೆರಿಗೆಯನ್ನು ಪಾವತಿಸಿರಲಿಲ್ಲ.

ಈ ರೀತಿಯಾಗಿ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಿಂದ ಸ್ವೀಕರಿಸಿದ್ದ ಮೊತ್ತಗಳ ಮೇಲೆ ವಿಧಿಸದಿದ್ದಂತಹ ತೆರಿಗೆಯ ಮೊತ್ತವು ₹ 13.81 ಕೋಟಿ ಆಗಿದ್ದಿತು. ಮುಂದುವರೆದು, ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದ ಅಡಿಯಲ್ಲಿ ವಿಧಿಸಬೇಕಿದ್ದ ದಂಡ ಮತ್ತು ಬಡ್ಡಿಯ ಮೊತ್ತಗಳು ಅನುಕ್ರಮವಾಗಿ ₹ 1.38 ಕೋಟಿ

---

1 ಸರ್ಕಾರಿ ಆದೇಶ ಸಂಖ್ಯೆ ಸಕ ಇ 532 ಎಸ್.ಇ.ಡಬ್ಲ್ಯೂ 96 ದಿನಾಂಕ 06 ಅಕ್ಟೋಬರ್ 1999 ಹಾಗೂ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ತನ್ನ ಕಾರ್ಯಚಟುವಟಿಕೆಗಳನ್ನು 03 ಫೆಬ್ರವರಿ 2000ದಿಂದ ಪ್ರಾರಂಭಿಸಿತು.

2 ಬಳ್ಳಾರಿ, ಬೆಂಗಳೂರು (ನಗರ), ಬೆಂಗಳೂರು (ಗ್ರಾಮಾಂತರ), ಬಿದರ್, ಚಿಕ್ಕಮಗಳೂರು, ಧಾರವಾಡ, ಗದಗ, ಹಾಸನ, ಕಲಬುರಗಿ, ಕೋಲಾರ, ಕೊಪ್ಪಳ, ಮೈಸೂರು, ರಾಯಚೂರು, ಶಿವಮೊಗ್ಗ, ತುಮಕೂರು, ವಿಜಯಪುರ ಮತ್ತು ಯಾದಗಿರ.

ಹಾಗೂ ₹ 4.60 ಕೋಟಿ ಆಗಿದ್ದವು. ದಂಡ ಮತ್ತು ಬಡ್ಡಿಯ ಮೊತ್ತಗಳು ಸೇರಿದಂತೆ ವಿಧಿಸದಿದ್ದಂತಹ ಒಟ್ಟಾರೆ ತೆರಿಗೆಯ ಮೊತ್ತವು ₹ 19.79 ಕೋಟಿ ಆಗಿದ್ದಿತು. ಮೂಲದಲ್ಲಿಯೇ ತೆರಿಗೆಯನ್ನು ಕಡಿದುಕೊಳ್ಳಲು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ಲೋಕೋಪಯೋಗಿ ಇಲಾಖೆ, ಕರ್ನಾಟಕ ಗೃಹ ಮಂಡಳಿ, ಭಾರತೀಯ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರದ ರೀತಿಯಲ್ಲಿಯೇ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಸಂಸ್ಥೆಯಾಗಿದ್ದಿತಾದರೂ, ಅನುಮತಿಯನ್ನು ನೀಡದಿರುವಲ್ಲಿನ ವಾಣಿಜ್ಯ ತೆರಿಗೆ ಇಲಾಖೆಯ ಕ್ರಮವು ಕಾಮಗಾರಿಗಳ ಗುತ್ತಿಗೆ ವಹಿವಾಟನ್ನು ಘೋಷಿಸಿಕೊಳ್ಳದಿರುವಲ್ಲಿ ಹಾಗೂ ಅದರ ತತ್ಪರಿಣಾಮವಾಗಿ ತೆರಿಗೆಯನ್ನು ಮೂಲದಲ್ಲಿಯೇ ಕಡಿದುಕೊಳ್ಳದಿರುವಲ್ಲಿ ಪರಿಣಮಿಸಿದ್ದಿತು.

ಲೆಕ್ಕಪರಿಶೋಧನೆಯು ಈ ಪ್ರಕರಣಗಳನ್ನು ವಾಣಿಜ್ಯ ತೆರಿಗೆ ಇಲಾಖೆಯ ಆಯುಕ್ತರವರು ಮತ್ತು ಸರ್ಕಾರದ ಗಮನಕ್ಕೆ ಮೇ ಹಾಗೂ ಜೂನ್ 2017ರಲ್ಲಿ ತಂದಿತು. ನಾಲ್ಕು ಪ್ರಕರಣಗಳಲ್ಲಿ ₹ 17.33 ಲಕ್ಷ ಮೊತ್ತವನ್ನು ವಸೂಲಾತಿ ಮಾಡಲಾಗಿದೆ ಹಾಗೂ ಒಂದು ಪ್ರಕರಣದಲ್ಲಿ ಇಲಾಖೆಯು ಬಾಕಿಯಿರುವ ತೆರಿಗೆಯನ್ನು ಪಾವತಿಸುವಂತೆ ಒತ್ತಾಯಿಸಿ ಅದೇಶವನ್ನು ಜಾರಿಗೊಳಿಸಿದೆ ಎಂಬುದಾಗಿ ಸರ್ಕಾರವು ಉತ್ತರಿಸಿತು. ಮುಂದುವರೆದು, ಒಂದು ಪ್ರಕರಣದಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಹಿವಾಟಿನ ಮೇಲೆ ತೆರಿಗೆಯನ್ನು ಪಾವತಿಸಲಾಗಿದೆ ಎಂಬುದಾಗಿ ಉತ್ತರಿಸಿತು, ಆದಾಗ್ಯೂ, ಈ ನಿಟ್ಟಿನಲ್ಲಿ ಪಾವತಿ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲಿಲ್ಲ. ಉಳಿದ ಪ್ರಕರಣಗಳಲ್ಲಿ ಉತ್ತರವನ್ನು ನಿರೀಕ್ಷಿಸಲಾಗುತ್ತಿದೆ (ನವಂಬರ್ 2017).

## 2.5 ಸಿಎಲ್–9 ಪರವಾನಿಗೆದಾರರುಗಳಿಂದ ಮಾಡಲಾದ ಮದ್ಯ ಮಾರಾಟದ ಮೇಲೆ ತೆರಿಗೆಯನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು

ಕರ್ನಾಟಕ ಮೌಲ್ಯವರ್ಧಿತ ಅಧಿನಿಯಮ, 2003ರ ಪರಿಚ್ಛೇದ 4(1)(ಎ)(ii)ರ ಅನುಸಾರ ಅಧಿನಿಯಮದ ಮೂರನೇ ಷೆಡ್ಯೂಲಿನಲ್ಲಿ ನಮೂದಿತವಾಗಿರುವ ಸರಕುಗಳ ಮಾರಾಟದ ತೆರಿಗೆಯನ್ನು ವಿಧಿಸಬಹುದಾದ ತಮ್ಮ ವಹಿವಾಟಿನ ಮೇಲೆ ಶೇಕಡಾ ಐದುವರೆ ದರದಲ್ಲಿ ತೆರಿಗೆ ಪಾವತಿಗೆ ಪ್ರತಿಯೋರ್ವ ನೋಂದಾಯಿತ ವರ್ತಕರೂ ಬಾಧ್ಯರಾಗಿರುತ್ತಾರೆ. ಕರ್ನಾಟಕ ಮೌಲ್ಯವರ್ಧಿತ ಅಧಿನಿಯಮದ ಪರಿಚ್ಛೇದ 5(1)ರ ಅಡಿಯಲ್ಲಿ, ಅಧಿನಿಯಮದ ಮೊದಲನೆಯ ಷೆಡ್ಯೂಲಿನಲ್ಲಿ ನಿರ್ದಿಷ್ಟಪಡಿಸಲಾಗಿರುವ ಸರಕುಗಳ ಮಾರಾಟದ ಮೇಲಿನ ತೆರಿಗೆ ಪಾವತಿಗೆ ವಿನಾಯಿತಿಯನ್ನು ನೀಡತಕ್ಕದ್ದು. ಕರ್ನಾಟಕ ಮೌಲ್ಯವರ್ಧಿತ ಅಧಿನಿಯಮ, 2003ರ ಮೊದಲನೆಯ ಷೆಡ್ಯೂಲಿನ ಅನುಸಾರ, ಬಿಯರ್, ಫೆನ್ನಿ, ಮದ್ಯ ಹಾಗೂ ವೈನು ಮಾರಾಟದ ಮೇಲೆ ಪಾವತಿಸಬೇಕಾದ ತೆರಿಗೆಗೆ ವಿನಾಯಿತಿಯನ್ನು ನೀಡಲಾಗಿದ್ದಿತು.

ಸರ್ಕಾರವು 28 ಫೆಬ್ರವರಿ 2014ರ ತನ್ನ ಅಧಿಸೂಚನೆಯ[3] ಮೂಲಕ ಮದ್ಯ ಮಾರಾಟದ ಮೇಲಿನ ತೆರಿಗೆ ವಿನಾಯಿತಿಯನ್ನು ತೆಗೆದುಹಾಕಿತು ಹಾಗೂ ಸಿಎಲ್–9 ಪರವಾನಿಗೆಗಳನ್ನು[4] ಹೊಂದಿರುವವರಿಂದ ಅಂದರೆ ಬೃಹತ್ ಬೆಂಗಳೂರು ಮಹಾನಗರಪಾಲಿಕೆ, ನಗರ ಸಭೆ ಮತ್ತು ಪಟ್ಟಣ ಪಂಚಾಯತಿಯ ಆಡಳಿತ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ ಇರುವಂತಹ ಬಾರು ಮತ್ತು ರೆಸ್ಟೋರೆಂಟುಗಳು ಮಾಡುವ ಮಾರಾಟದ ಮೇಲೆ ಶೇಕಡಾ ಐದು ಮತ್ತು ಒಂದು ಅರ್ದದಷ್ಟು ದರದಲ್ಲಿ ಮೌಲ್ಯವರ್ಧಿತ ವಿಧಿಸುವಿಕೆಯನ್ನು 1 ಮಾರ್ಚ್ 2014ರಿಂದ ಜಾರಿಗೆ ತಂದಿತು.

ಡಿಸೆಂಬರ್ 2016 ಮತ್ತು ಏಪ್ರಿಲ್ 2017ರ ನಡುವೆ ನಾಲ್ಕು[5] ಜಿಲ್ಲೆಗಳ 16 ಸ್ಥಳೀಯ ಮೌಲ್ಯವರ್ಧಿತ ಕಚೇರಿಗಳು ಮತ್ತು ಎರಡು ಮೌಲ್ಯವರ್ಧಿತ ಉಪ–ಕಚೇರಿಗಳ ದಾಖಲೆಗಳನ್ನು ಪರೀಕ್ಷಾ–ಪರಿಶೀಲನೆ ಮಾಡುವ ವೇಳೆಯಲ್ಲಿ ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು:

(ಎ) 76 ವರ್ತಕರಿಗೆ ಸಂಬಂಧಿಸಿದಂತೆ (ನಗರ ಪ್ರದೇಶಗಳಲ್ಲಿ ಇದ್ದಂತಹ ಬಾರು ಮತ್ತು ರೆಸ್ಟೋರೆಂಟುಗಳು), ಮಾರ್ಚ್ 2014ರಿಂದ ಮಾರ್ಚ್ 2016ರ ಅವಧಿಗೆ ಮದ್ಯ ಮಾರಾಟದ ವಹಿವಾಟು ₹ 180.91 ಕೋಟಿ ಆಗಿದ್ದಿತು. ಶೇಕಡಾ ಐದುವರೆಯ ದರದಲ್ಲಿ ಪಾವತಿಸಬೇಕಾದ ತೆರಿಗೆಯು ₹ 9.95 ಕೋಟಿ ಆಗಿದ್ದಿತು, ಅದರ ಪೈಕಿ ಕೇವಲ ₹ 42 ಲಕ್ಷ ಮೊತ್ತವನ್ನು ಮಾತ್ರ ಪಾವತಿಸಲಾಗಿದ್ದಿತು. ಇದು ₹ 9.53 ಕೋಟಿ ಮೊತ್ತದಷ್ಟು ತೆರಿಗೆಯನ್ನು ಕಡಿಮೆ ಪ್ರಮಾಣದಲ್ಲಿ ಪಾವತಿಸುವಲ್ಲಿ ಪರಿಣಮಿಸಿದ್ದಿತು.

(ಬಿ) 20 ವರ್ತಕರುಗಳಿಗೆ ಸಂಬಂಧಿಸಿದಂತೆ (ನಗರ ಪ್ರದೇಶಗಳಲ್ಲಿ ಇದ್ದಂತಹ ಬಾರು ಮತ್ತು ರೆಸ್ಟೋರೆಂಟುಗಳು), ಚಾರ್ಟರ್ಡ್ ಅಕೌಂಟೆಂಟ್‌ಗಳು/ಕರದಾತರ ಪರವಾಗಿ ತೆರಿಗೆ ಪಾವತಿ ವ್ಯವಹಾರಗಳನ್ನು ನೋಡಿಕೊಳ್ಳುವವರು, 2014–15 ಮತ್ತು 2015–16 ಸಾಲುಗಳಿಗೆ ಮದ್ಯ ಮಾರಾಟದ

3 ಅಧಿಸೂಚನೆ ಸಂಖ್ಯೆ ಎಫ್‌ಡಿ 21 ಸಿಎಸ್‌ಎಲ್ 2014 (II) ದಿನಾಂಕ 28 ಫೆಬ್ರವರಿ 2014.

4 ಬಾರು ಮತ್ತು ರೆಸ್ಟೋರೆಂಟುಗಳಲ್ಲಿ ಮದ್ಯದ ಮಾರಾಟಕ್ಕಾಗಿ ಅಬಕಾರಿ ಇಲಾಖೆಯು ಸಿಎಲ್–9 ಪರವಾನಿಗೆಯನ್ನು ನೀಡುತ್ತದೆ.

5 ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಬಿದರ್ ಮತ್ತು ಚಿಕ್ಕಬಳ್ಳಾಪುರ.

ಮೇಲೆ ಪಾವತಿಸಬೇಕಾದ ತೆರಿಗೆಯನ್ನು ನಮೂನೆ-240ರಲ್ಲಿ[6] ₹ 3.55 ಕೋಟಿ ಎಂಬುದಾಗಿ ಲೆಕ್ಕ ಹಾಕಿದ್ದರು, ಅದರ ಪೈಕಿ ಕೇವಲ ₹ 1.46 ಕೋಟಿ ಮೊತ್ತವನ್ನು ಪಾವತಿಸಲಾಗಿದ್ದಿತು. ಇದರಿಂದಾಗಿ ₹ 2.09 ಕೋಟಿ ಮೊತ್ತದಷ್ಟು ತೆರಿಗೆಯನ್ನು ಕಡಿಮೆ ಪ್ರಮಾಣದಲ್ಲಿ ಪಾವತಿಸುವಲ್ಲಿ ಪರಿಣಮಿಸಿತು.

ಆದ್ದರಿಂದ, 96 ವರ್ತಕರು ಮಾಡಿದ್ದ ಮದ್ಯ ಮಾರಾಟದ ಮೇಲೆ ಕಡಿಮೆ ಪ್ರಮಾಣದಲ್ಲಿ ವಿಧಿಸಲಾಗಿದ್ದ ಒಟ್ಟಾರೆ ತೆರಿಗೆ ಮೊತ್ತವು ₹ 11.62 ಕೋಟಿ ಆಗಿದ್ದಿತು. ಮುಂದುವರೆದು, ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ರ ಪರಿಚ್ಛೇದ 72(2) ಮತ್ತು ಪರಿಚ್ಛೇದ 36ರ ಅಡಿಯಲ್ಲಿ ವಿಧಿಸಬೇಕಾದ ದಂಡ ಹಾಗೂ ಬಡ್ಡಿಯು ಅನುಕ್ರಮವಾಗಿ ₹ 1.16 ಕೋಟಿ ಹಾಗೂ ₹ 2.87 ಕೋಟಿ ಆಗಿದ್ದಿತು. ದಂಡ ಹಾಗೂ ಬಡ್ಡಿಯೂ ಸೇರಿದಂತೆ ಕಡಿಮೆ ಪ್ರಮಾಣದಲ್ಲಿ ವಿಧಿಸಲಾಗಿದ್ದ ತೆರಿಗೆಯು ₹ 15.65 ಕೋಟಿ ಆಗುತ್ತದೆ.

ನಗರ ಪ್ರದೇಶಗಳಲ್ಲಿರುವ ಬಾರುಗಳು ಮತ್ತು ರೆಸ್ಟೋರೆಂಟುಗಳು ಮಾಡಿದ ಮದ್ಯ ಮಾರಾಟದ ಮೇಲೆ 1 ಮಾರ್ಚ್ 2014ರಿಂದ ಜಾರಿಗೆ ಬರುವಂತೆ ತೆರಿಗೆಯನ್ನು ವಿಧಿಸಬೇಕಿದ್ದಿತಾದರೂ, ತೆರಿಗೆ ಸಂಗ್ರಹಣೆಗಾಗಿ ಇಲಾಖೆಯು ಯಾವುದೇ ಸಮಯೋಚಿತ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ.

ಲೆಕ್ಕಪರಿಶೋಧನೆಯು ಈ ಪ್ರಕರಣಗಳನ್ನು ವಾಣಿಜ್ಯ ತೆರಿಗೆ ಇಲಾಖೆಯ ಆಯುಕ್ತರವರಿಗೆ ಮತ್ತು ಸರ್ಕಾರಕ್ಕೆ ಏಪ್ರಿಲ್ ಮತ್ತು ಮೇ 2017ರಲ್ಲಿ ಕಳುಹಿಸಿಕೊಟ್ಟಿತು. ಮೂರು ವರ್ತಕರಿಂದ ₹ 11.94 ಲಕ್ಷ ಮೊತ್ತವನ್ನು ವಸೂಲಾತಿ ಮಾಡಲಾಗಿದೆ ಹಾಗೂ ಒಂಬತ್ತು ವರ್ತಕರಿಗೆ ಸಂಬಂಧಿಸಿದಂತೆ ಇಲಾಖೆಯು ನೋಟೀಸುಗಳನ್ನು ನೀಡಿದೆ ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2017). ಉಳಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ಉತ್ತರವನ್ನು ನಿರೀಕ್ಷಿಸಲಾಗುತ್ತಿದೆ (ನವಂಬರ್ 2017).

## 2.6 ಕರ್ನಾಟಕ ಮೌವತೆ ಅಧಿನಿಯಮದ ಪರಿಚ್ಛೇದ 72(1)ರ ಅಡಿಯಲ್ಲಿ ದಂಡವನ್ನು ವಿಧಿಸದಿದ್ದುದು

ಕರ್ನಾಟಕ ಮೌವತೆ ಅಧಿನಿಯಮ, 2003ರ ಪರಿಚ್ಛೇದ 35(1)ರ ಅನುಸಾರ, ಪ್ರತಿಯೋರ್ವ ನೋಂದಾಯಿತ ವರ್ತಕರು ಹಿಂದಿನ ತಿಂಗಳು ಅಥವಾ ಇತರೆ ಯಾವುದೇ ತೆರಿಗೆ ಅವಧಿಯು ಅಂತ್ಯಗೊಂಡ ದಿನಾಂಕದಿಂದ ಇಪ್ಪತ್ತು ದಿನಗಳ ಒಳಗೆ ಒಂದು ಸಲ್ಲಿಕೆಯನ್ನು ಸಲ್ಲಿಸತಕ್ಕದ್ದು ಹಾಗೂ ಅಂತಹ ಸಲ್ಲಿಕೆಯ ಪ್ರಕಾರ ಪಾವತಿಸಬೇಕಾದ ತೆರಿಗೆಯನ್ನು ಪಾವತಿಸತಕ್ಕದ್ದು.

ಅಧಿನಿಯಮದ ಅಡಿಯಲ್ಲಿ ಅಗತ್ಯವಿರುವಂತೆ ಒಂದು ಸಲ್ಲಿಕೆಯನ್ನು ಸಲ್ಲಿಸಲು ಅಥವಾ ಸಲ್ಲಿಸಲಾಗಿರುವ ಯಾವುದೇ ಸಲ್ಲಿಕೆಯಲ್ಲಿ ಬಾಕಿಯಿರುವ ತೆರಿಗೆಯನ್ನು ಪಾವತಿಸಲು ತಪ್ಪಿತಸ್ತರಾಗುವ ವರ್ತಕರು ಈ ಕೆಳಗಿನವುಗಳಿಗೆ ಸಮನಾದ ದಂಡದ ಜೊತೆಯಲ್ಲಿ ಬಾಕಿಯಿರುವ ತೆರಿಗೆ ಅಥವಾ ಬಡ್ಡಿಯನ್ನು ಪಾವತಿಸಲು ಬಾಧ್ಯರಾಗಿರುತ್ತಾರೆ ಎಂಬುದಾಗಿ ಕರ್ನಾಟಕ ಮೌವತೆ ಅಧಿನಿಯಮ, 2003ರ ಪರಿಚ್ಛೇದ 72(1) ತಿಳಿಸುತ್ತದೆ.

(ಎ) ತೆರಿಗೆ ಪಾವತಿಯಲ್ಲಿ ತಪ್ಪಿತಸ್ತಗೊಂಡಿರುವುದು 10 ದಿನಗಳನ್ನು ಮೀರಿರದಿದ್ದಲ್ಲಿ, ಬಾಕಿಯಿರುವ ತೆರಿಗೆ ಮೊತ್ತದ ಶೇಕಡಾ ಐದರಷ್ಟು ಅಥವಾ ₹ 50, ಇವುಗಳಲ್ಲಿ ಯಾವುದು ಅಧಿಕವೋ ಆ ಮೊತ್ತ, ಹಾಗೂ

(ಬಿ) ತೆರಿಗೆ ಪಾವತಿಯಲ್ಲಿ ತಪ್ಪಿತಸ್ತಗೊಂಡಿರುವುದು 10 ದಿನಗಳನ್ನು ಮೀರಿದ್ದಲ್ಲಿ, ಬಾಕಿಯಿರುವ ತೆರಿಗೆ ಮೊತ್ತದ ಶೇಕಡಾ ಹತ್ತರಷ್ಟು.

ಹದಿನೈದು[7] ಜಿಲ್ಲೆಗಳ 32 ಸ್ಥಳೀಯ ಮೌವತೆ ಕಚೇರಿಗಳು/ಮೌವತೆ ಉಪ-ಕಚೇರಿಗಳ ದಾಖಲೆಗಳನ್ನು ಡಿಸೆಂಬರ್ 2015 ಮತ್ತು ಡಿಸೆಂಬರ್ 2016ರ ಅವಧಿಯಲ್ಲಿ ಪರೀಕ್ಷಾ-ಪರಿಶೀಲನೆ ಮಾಡುವ ವೇಳೆಯಲ್ಲಿ 274 ಕರದಾತರುಗಳು 2012-13ರಿಂದ 2014-15 ಸಾಲುಗಳಿಗೆ ಸಲ್ಲಿಕೆಗಳನ್ನು ಸಲ್ಲಿಸಿದ್ದರು ಹಾಗೂ ₹ 100.21 ಕೋಟಿ ಮೊತ್ತದಷ್ಟು ತೆರಿಗೆಯನ್ನು ವಿಳಂಬವಾಗಿ ಅಂದರೆ ತೆರಿಗೆ ಅವಧಿಯು ಮುಕ್ತಾಯಗೊಂಡನಂತರ 20 ದಿನಗಳನ್ನು ಮೀರಿದಂತೆ ಪಾವತಿಸಿದ್ದರು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಅಧಿನಿಯಮದ ಪರಿಚ್ಛೇದ 72(1)ರ ಅಡಿಯಲ್ಲಿ ಈ ಎಲ್ಲಾ ಪ್ರಕರಣಗಳೂ ದಂಡವನ್ನು ಆಕರ್ಷಿಸುತ್ತಿದ್ದವಾದರೂ, ಕರದಾತರುಗಳು ದಂಡವನ್ನು ಪಾವತಿಸಿರಲಿಲ್ಲ ಅಥವಾ ಅದನ್ನು ವಿಧಿಸಲು ಸಂಬಂಧಿತ ಅಧಿಕಾರಿಗಳು ಯಾವುದೇ ಪ್ರಯತ್ನಗಳನ್ನು ಮಾಡಿರಲಿಲ್ಲ. ಇದು ₹ 6.81 ಕೋಟಿ ಮೊತ್ತದಷ್ಟು ದಂಡವನ್ನು ವಿಧಿಸದಿರುವಲ್ಲಿ ಪರಿಣಮಿಸಿತು.

[6] ಮೌವತೆ – 240 ಚಾರ್ಟರ್ಡ್ ಅಕೌಂಟೆಂಟ್‌ಗಳು ಅಥವಾ ಕರದಾತರ ಪರವಾಗಿ ತೆರಿಗೆ ಪಾವತಿ ವ್ಯವಹಾರಗಳನ್ನು ನೋಡಿಕೊಳ್ಳುವವರು ತಯಾರಿಸಿರುವ ವಾರ್ಷಿಕ ಲೆಕ್ಕಪರಿಶೋಧನೆ ಮಾಡಲಾಗಿರುವ ತ:ಖ್ತೆಗಳನ್ನು ಸಲ್ಲಿಸುವ ಸಲುವಾಗಿ ಉಪಯೋಗಿಸಲಾಗುವ ನಮೂನೆಯಾಗಿರುತ್ತದೆ. ಮೌವತೆ-240 ವರ್ತಕರ ತೆರಿಗೆ ಬಾಧ್ಯತೆ ಹಾಗೂ ಮಾಸಿಕ ಸಲ್ಲಿಕೆಗಳಲ್ಲಿ ಘೋಷಿಸಿಕೊಳ್ಳಲಾಗಿರುವ ಖರೀದಿಗಳ ಮೇಲಿನ ತೆರಿಗೆ ಜಮೆ/ಮರುಪಾವತಿಗಾಗಿ ಅವರ ಅರ್ಹತೆ ಹಾಗೂ ಅದಕ್ಕೆ ಅನುಗುಣವಾಗಿ ಲೆಕ್ಕಪರಿಶೋಧನೆಯಲ್ಲಿ ನಿರ್ಧಾರಣೆ ಮಾಡಲಾಗಿರುವ ಮೊತ್ತ, ಇವುಗಳನ್ನು ಹೋಲಿಕೆ ಮಾಡುವ ಒಂದು ತ:ಖ್ತೆಯಾಗಿರುತ್ತದೆ.

[7] ಬೆಂಗಳೂರು, ಬಳ್ಳಾರಿ, ಬೆಳಗಾವಿ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಹಾಸನ, ಕಲಬುರಗಿ, ಕೊಡಗು, ಮೈಸೂರು, ರಾಯಚೂರು, ಶಿವಮೊಗ್ಗ ಮತ್ತು ಯಾದಗಿರಿ.

ತೆರಿಗೆಯನ್ನು ಸಮಯೋಚಿತವಾಗಿ ಪಾವತಿಸಿರುವುದು, ತೆರಿಗೆಯನ್ನು ವಿಳಂಬವಾಗಿ ಪಾವತಿಸಿರುವುದಕ್ಕೆ ನೋಟೀಸುಗಳನ್ನು ನೀಡುವುದು, ಇತ್ಯಾದಿಗಳನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಸಲ್ಲಿಕೆಗಳನ್ನು ಪರಿಶೀಲಿಸುವಿಕೆ ಇತ್ಯಾದಿ ಮೂಲ ಪರೀಕ್ಷಣೆಗಳನ್ನು ಇಲಾಖೆಯು ಮಾಡಿರಲಿಲ್ಲ, ಇದರಿಂದಾಗಿ ವಿಳಂಬವಾಗಿ ಮಾಡಲಾಗಿರುವ ಪಾವತಿಗಳು ಗಮನಕ್ಕೆ ಬಾರದೇ ಹೋದವು ಹಾಗೂ ದಂಡ ವಿಧಿಸುವಿಕೆಯಿಂದ ತಪ್ಪಿಸಿಕೊಂಡವು ಎಂಬುದನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತವೆನಿಸುತ್ತದೆ.

ಲೆಕ್ಕಪರಿಶೋಧನೆಯು ಈ ಪ್ರಕರಣಗಳನ್ನು ವಾಣಿಜ್ಯ ತೆರಿಗೆ ಇಲಾಖೆಯ ಆಯುಕ್ತರವರಿಗೆ ಮತ್ತು ಸರ್ಕಾರಕ್ಕೆ ಫೆಬ್ರವರಿ ಮತ್ತು ಮಾರ್ಚ್ 2017ರ ನಡುವೆ ಕಳುಹಿಸಿಕೊಟ್ಟಿತು. 25 ವರ್ತಕರುಗಳಿಂದ ₹ 51.51 ಲಕ್ಷ ಮೊತ್ತವನ್ನು ವಸೂಲಾತಿ ಮಾಡಲಾಗಿದೆ, ದಂಡ ವಸೂಲಾತಿಗಾಗಿ 26 ಕರದಾತರಿಗೆ ನೋಟೀಸುಗಳನ್ನು ನೀಡಲಾಗಿದೆ ಹಾಗೂ ಆರು ವರ್ತಕರಿಗೆ ಸಂಬಂಧಿಸಿದಂತೆ ದಂಡವನ್ನು ವಿಧಿಸಿ ಆದೇಶಗಳನ್ನು ನೀಡಲಾಗಿದೆ ಎಂಬುದಾಗಿ ಸರ್ಕಾರವು ಉತ್ತರಿಸಿತು (ಜೂನ್ ಮತ್ತು ಆಗಸ್ಟ್ 2017).

ಮುಂದುವರೆದು, ಶೇಕಡಾ 10ರಷ್ಟು (₹ 4.30 ಲಕ್ಷ) ದಂಡವನ್ನು ಪಾವತಿಸುವುದರ ಮೂಲಕ 13 ಕರದಾತರುಗಳು ಕರಸಮಾಧಾನ ಯೋಜನೆಗೆ[8] ಅರ್ಜಿ ಸಲ್ಲಿಸಿರುವರು ಹಾಗೂ ಉಳಿಕೆ ಶೇಕಡಾ 90ರಷ್ಟು (₹ 38.69 ಲಕ್ಷ) ಮೊತ್ತವನ್ನು ಇಲಾಖೆಯು ಮನ್ನಾ ಮಾಡಿರುವುದು ಎಂಬುದಾಗಿ ಸರ್ಕಾರವು ತಿಳಿಸಿತು (ಸೆಪ್ಟಂಬರ್ 2017).

ಉಳಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ಉತ್ತರವನ್ನು ನಿರೀಕ್ಷಿಸಲಾಗುತ್ತಿದೆ (ನವಂಬರ್ 2017).

## 2.7 ಲೆಕ್ಕಪರಿಶೋಧನೆಗೆ ಒಳಪಟ್ಟ ಲೆಕ್ಕಪತ್ರಗಳಲ್ಲಿ ಘೋಷಿಸಲಾಗಿದ್ದ ವ್ಯತ್ಯಾಸದ ತೆರಿಗೆ ಬಾಧ್ಯತೆಯನ್ನು ಪಾವತಿಸದಿರುವುದು/ಕಡಿಮೆ ಪ್ರಮಾಣದಲ್ಲಿ ಪಾವತಿಸಿರುವುದು.

ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ 2003ರ ಪರಿಚ್ಛೇದ 31(4)ರ ಅನುಸಾರ, ಒಂದು ವರ್ಷದಲ್ಲಿನ ಒಟ್ಟಾರೆ ವಹಿವಾಟು ಒಂದು ನಿರ್ದಿಷ್ಟಪಡಿಸಲಾಗಿರುವ ಮೊತ್ತವನ್ನು[9] ಮೀರುವ ಪ್ರತಿಯೋರ್ವ ವರ್ತಕರೂ ತಮ್ಮ ಲೆಕ್ಕಪತ್ರಗಳನ್ನು ಓರ್ವ ಚಾರ್ಟರ್ಡ್ ಅಕೌಂಟೆಂಟ್ ಅಥವಾ ಕರದಾತರ ಪರವಾಗಿ ತೆರಿಗೆ ಪಾವತಿ ವ್ಯವಹಾರಗಳನ್ನು ನೋಡಿಕೊಳ್ಳುವವರಿಂದ (ಕಾಸ್ಟ್ ಅಕೌಂಟೆಂಟ್‌ಗಳು/ಲೆಕ್ಕಪರಿಶೋಧಕರು) ಲೆಕ್ಕಪರಿಶೋಧನೆ ಮಾಡಿಸತಕ್ಕದ್ದು ಹಾಗೂ ಲೆಕ್ಕಪರಿಶೋಧನೆಗೆ ಒಳಪಟ್ಟ ಲೆಕ್ಕಪತ್ರಗಳನ್ನು ಮೌವತೆ–240 ನಮೂನೆಯಲ್ಲಿ ಹಾಗೂ ಅಧಿನಿಯಮದ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಇನ್ನಿತರೆ ದಾಖಲೆಗಳನ್ನು ನಿರ್ದಿಷ್ಟ ಅಧಿಕಾರಿಯವರಿಗೆ ಸಲ್ಲಿಸತಕ್ಕದ್ದು.

ತೆರಿಗೆ ಸಲ್ಲಿಕೆಗಳಲ್ಲಿ ಘೋಷಿಸಿಕೊಳ್ಳಲಾಗಿರುವ ಓರ್ವ ವರ್ತಕರ ತೆರಿಗೆ ಬಾಧ್ಯತೆ ಹಾಗೂ ಅವರ ಖರೀದಿಗಳ ಮೇಲಿನ ತೆರಿಗೆ ಜಮೆ/ಮರುಪಾವತಿ ಇವೆರಡರ ನಡುವೆ ಒಂದು ತುಲನಾತ್ಮಕ ತ:ಖ್ತೆಯನ್ನು ಸಲ್ಲಿಸಲು ನಮೂನೆ ಮೌವತೆ–240 ಲೆಕ್ಕಪರಿಶೋಧಕರಿಗೆ ಅನುವು ಮಾಡಿಕೊಡುತ್ತದೆ. ಅವುಗಳ ನಡುವೆ ಯಾವುದಾದರೂ ವ್ಯತ್ಯಾಸಗಳಿದ್ದಲ್ಲಿ, ವ್ಯತ್ಯಾಸದ ತೆರಿಗೆ ಮೊತ್ತವು ಯಾವುದಾದರೂ ಇದ್ದಲ್ಲಿ ಅದನ್ನು ದಂಡ ಮತ್ತು ಬಡ್ಡಿಯ ಜೊತೆಯಲ್ಲಿ ಪಾವತಿಸುವಂತೆ ಅಥವಾ ತೆರಿಗೆಯನ್ನು ಅಧಿಕ ಪ್ರಮಾಣದಲ್ಲಿ ಪಾವತಿಸಿದ್ದಲ್ಲಿ ಅದನ್ನು ಮರುಪಾವತಿಗಾಗಿ ಕೋರುವಂತೆ ಲೆಕ್ಕಪರಿಶೋಧಕರು ವರ್ತಕರಿಗೆ ಸಲಹೆ ನೀಡತಕ್ಕದ್ದು.

ಎಂಟು[10] ಜಿಲ್ಲೆಗಳಲ್ಲಿ 13 ಸ್ಥಳೀಯ ಮೌವತೆ ಕಚೇರಿಗಳು ಮತ್ತು ಒಂದು ಮೌವತೆ ಉಪ–ಕಚೇರಿಯ ದಾಖಲೆಗಳನ್ನು ಡಿಸೆಂಬರ್ 2015 ಮತ್ತು ಮಾರ್ಚ್ 2017ರ ನಡುವೆ ಪರೀಕ್ಷಾ–ಪರಿಶೀಲನೆ ಮಾಡುವ ವೇಳೆಯಲ್ಲಿ 24 ವರ್ತಕರುಗಳು ನಮೂನೆ ಮೌವತೆ 240ರಲ್ಲಿನ ತಮ್ಮ ಲೆಕ್ಕಪರಿಶೋಧನೆಗೆ ಒಳಪಟ್ಟ ಲೆಕ್ಕಪತ್ರಗಳಲ್ಲಿ 2013–14ರಿಂದ 2015–16 ಸಾಲುಗಳಿಗೆ ಮಾಸಿಕ ಸಲ್ಲಿಕೆಗಳಲ್ಲಿ ಘೋಷಿಸಲಾಗಿದ್ದ ತೆರಿಗೆ ಬಾಧ್ಯತೆಯನ್ನು ಮೀರಿದಂತೆ ₹ 3.67 ಕೋಟಿ ಮೊತ್ತದಷ್ಟು ಹೆಚ್ಚುವರಿ ತೆರಿಗೆ ಬಾಧ್ಯತೆಯನ್ನು ಘೋಷಿಸಿಕೊಂಡಿದ್ದರು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಕರ್ನಾಟಕ ಮೌವತೆ ಅಧಿನಿಯಮ, 2003ರ ಪರಿಚ್ಛೇದಗಳು 72(2) ಮತ್ತು 36ರ ಅನುಸಾರ ನಮೂನೆ ಮೌವತೆ–240ರಲ್ಲಿ ಘೋಷಿಸಿಕೊಳ್ಳಲಾಗಿರುವ ಹೆಚ್ಚುವರಿ ತೆರಿಗೆ ಬಾಧ್ಯತೆಯ ಮೇಲೆ ದಂಡ ಮತ್ತು ಬಡ್ಡಿಯನ್ನೂ ಸಹ ವಿಧಿಸಬೇಕಿದ್ದಿತು. ಸಂಬಂಧಿತ ವರ್ತಕರುಗಳು, ಆದಾಗ್ಯೂ, ಲೆಕ್ಕಪರಿಶೋಧನೆಗೆ ಒಳಪಟ್ಟ ಲೆಕ್ಕಪತ್ರಗಳನ್ನು ಸಲ್ಲಿಸುವ ವೇಳೆಯಲ್ಲಿ ತಾವಾಗಿಯೇ ಬಾಕಿಗಳನ್ನು ಪಾವತಿಸಲಿಲ್ಲ ಅಥವಾ ಸಂಬಂಧಿತ ಸ್ಥಳೀಯ ಮೌವತೆ ಕಚೇರಿಗಳು

---

[8] ಸರ್ಕಾರವು ದಿನಾಂಕ 31.03.2017ರಂದು ಗೆಜೇಟ್ ಅಧಿಸೂಚನೆ ಸಂಖ್ಯೆ 323ರಲ್ಲಿ ಕರಸಮಾಧಾನ ಯೋಜನೆಯನ್ನು ಪ್ರಾರಂಭಿಸಿತು. ಈ ಯೋಜನೆಯ ಪ್ರಕಾರ ವರ್ತಕರು ಶೇಕಡಾ 10ರಷ್ಟು ದಂಡ ಮತ್ತು ಬಡ್ಡಿಯನ್ನು ದಿನಾಂಕ 31.05.2017ರ ಒಳಗೆ ಪಾವತಿ ಮಾಡಿದಲ್ಲಿ, ಸರ್ಕಾರವು ಉಳಿದ ಶೇಕಡಾ 90ರಷ್ಟು ದಂಡ ಮತ್ತು ಬಡ್ಡಿಯನ್ನು ಮನ್ನಾ ಮಾಡಲಾಗುತ್ತದೆ.

[9] 31 ಮಾರ್ಚ್ 2010ರವರೆಗೆ: ₹ 40ಲಕ್ಷ, 1 ಏಪ್ರಿಲ್ 2010ರಿಂದ 31ಮಾರ್ಚ್ 2011ರವರೆಗೆ ₹ 60 ಲಕ್ಷ ಹಾಗೂ ತದನಂತರದ ಅವಧಿಗೆ ₹ 100 ಲಕ್ಷ.

[10] ಬಳ್ಳಾರಿ, ಬೆಳಗಾವಿ, ಬೆಂಗಳೂರು, ಧಾರವಾಡ, ಕಲಬುರಗಿ, ಮೈಸೂರು, ರಾಯಚೂರು ಮತ್ತು ವಿಜಯಪುರ.

ಬಾಕಿಗಳನ್ನು ಪಾವತಿಸುವಂತೆ ತಗಾದೆಯನ್ನು ಸೃಷ್ಟಿಸಲಿಲ್ಲ. ಇದು ₹ 3.67 ಕೋಟಿ ಮೊತ್ತದಷ್ಟು ತೆರಿಗೆಯನ್ನು ಪಾವತಿಸದಿರುವಲ್ಲಿ/ಕಡಿಮೆ ಪ್ರಮಾಣದಲ್ಲಿ ಪಾವತಿಸುವಲ್ಲಿ ಪರಿಣಮಿಸಿತು. ಮುಂದುವರೆದು, ವಿಧಿಸಬೇಕಾಗಿದ್ದ ದಂಡ ಮತ್ತು ಬಡ್ಡಿಯ ಮೊತ್ತವು ಅನುಕ್ರಮವಾಗಿ ₹ 45 ಲಕ್ಷ ಮತ್ತು ₹ 1.14 ಕೋಟಿ ಆಗುತ್ತದೆ. ಪಾವತಿಸದೆಯೇ ಇದ್ದಂತಹ ಒಟ್ಟಾರೆ ತೆರಿಗೆ ಮೊತ್ತವು ₹ 5.26 ಕೋಟಿ ಆಗುತ್ತದೆ. ವರ್ತಕರು ನಮೂನೆ–240ರಲ್ಲಿ ಘೋಷಿಸಿಕೊಂಡಿರುವ ಯಾವುದಾದರೂ ಹೆಚ್ಚುವರಿ ತೆರಿಗೆ ಮೊತ್ತ ಮತ್ತು ಅದಕ್ಕೆ ಅನುಗುಣವಾಗಿ ಅವರು ತಮ್ಮ ಮಾಸಿಕ ಸಲ್ಲಿಕೆಗಳಲ್ಲಿ ಪಾವತಿಸಲಾಗಿರುವ ಮೊತ್ತವನ್ನು ಗುರುತಿಸುವ ಸಲುವಾಗಿ ಇಲಾಖೆಯು ಯಾವುದೇ ವ್ಯವಸ್ಥೆಯನ್ನು ಸ್ಥಾಪಿಸಿರಲಿಲ್ಲ. ಆದ್ದರಿಂದ, ಪಾವತಿಗಾಗಿ ಸಮಯೋಚಿತ ತಗಾದೆಗಳನ್ನು ಸೃಷ್ಟಿಸುವಲ್ಲಿನ ಇಲಾಖೆಯ ನಿಷ್ಕ್ರಿಯತೆಯು, ಪಾವತಿಸಬೇಕಾದ ಮೊತ್ತಗಳು ಎಂಬುದಾಗಿ ವರ್ತಕರುಗಳು ಸ್ವತ: ತಾವೇ ಘೋಷಿಸಿಕೊಂಡಿದ್ದ ಮೊತ್ತಗಳನ್ನು ಸರ್ಕಾರಕ್ಕೆ ವಸೂಲಾತಿಯಾಗಲು ಬಾಕಿಯಿರುವ ಮೊತ್ತಗಳು ಎಂಬುದಾಗಿ ತೋರಿಸುವಲ್ಲಿ ಪರಿಣಮಿಸಿದ್ದಿತು.

ಈ ಪ್ರಕರಣಗಳನ್ನು ಜನವರಿ ಮತ್ತು ಏಪ್ರಿಲ್ 2017ರಲ್ಲಿ ವಾಣಿಜ್ಯ ತೆರಿಗೆ ಇಲಾಖೆಯ ಆಯುಕ್ತರವರು ಮತ್ತು ಸರ್ಕಾರದ ಗಮನಕ್ಕೆ ತಂದನಂತರ, ಏಳು ಪ್ರಕರಣಗಳಲ್ಲಿ ₹ 19.27 ಲಕ್ಷ ಮೊತ್ತವನ್ನು ವಸೂಲಾತಿ ಮಾಡಲಾಗಿದೆ ಎಂಬುದಾಗಿ ಸರ್ಕಾರವು ಉತ್ತರಿಸಿತು (ಜೂನ್ ಮತ್ತು ಸೆಪ್ಟಂಬರ್ 2017). ಉಳಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ಉತ್ತರವನ್ನು ನಿರೀಕ್ಷಿಸಲಾಗುತ್ತಿದೆ (ನವಂಬರ್ 2017).

## 2.8 ಸಲ್ಲಿಕೆಗಳಲ್ಲಿ ಘೋಷಿಸಿಕೊಳ್ಳಲಾಗಿದ್ದ ತೆರಿಗೆ ಬಾಧ್ಯತೆಯ ವಸೂಲಾತಿಗಾಗಿ ವಾಣಿಜ್ಯ ತೆರಿಗೆ ಇಲಾಖೆಯ ಅನುಸರಣಾ ಕ್ರಮಗಳನ್ನು ತೆಗೆದುಕೊಳ್ಳದಿದ್ದುದು

ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ 2003ರ ಪರಿಚ್ಛೇದ 35(1)ರ ಅಡಿಯಲ್ಲಿ, ಪ್ರತಿಯೋರ್ವ ನೋಂದಾಯಿತ ವರ್ತಕರು ನಿರ್ದಿಷ್ಟ ನಮೂನೆಯಲ್ಲಿ ಒಂದು ಸಲ್ಲಿಕೆಯನ್ನು ಸಲ್ಲಿಸತಕ್ಕದ್ದು ಹಾಗೂ ಅಂತಹ ಸಲ್ಲಿಕೆಯಲ್ಲಿ ಬಾಕಿಯಿರುವ ತೆರಿಗೆಯನ್ನು ತೆರಿಗೆ ಅವಧಿಯ ಮುಕ್ತಾಯಗೊಂಡನಂತರ 20 ದಿನಗಳ ಒಳಗೆ (ಅಥವಾ ಸಂಯೋಜನಾ ತೆರಿಗೆ ಯೋಜನೆಯ ಅಡಿಯಲ್ಲಿ ನಿರ್ಧಾರಣೆ ಮಾಡಲಾದ ವರ್ತಕರಿಗೆ ಸಂಬಂಧಿಸಿದಂತೆ 15 ದಿನಗಳು) ಬಾಕಿಯಿರುವ ತೆರಿಗೆಯನ್ನು ಪಾವತಿಸತಕ್ಕದ್ದು.

ಆರು[11] ಜಿಲ್ಲೆಗಳಲ್ಲಿ 25 ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಕಚೇರಿಗಳಲ್ಲಿ ಫೆಬ್ರವರಿ 2016 ಮತ್ತು ಮಾರ್ಚ್ 2017ರ ನಡುವೆ ಮಾಡಲಾದ ಸಲ್ಲಿಕೆಗಳ ಪರೀಕ್ಷಾ–ಪರಿಶೀಲನೆಯು ಏಪ್ರಿಲ್ 2011 ಮತ್ತು ಮಾರ್ಚ್ 2016ರ ನಡುವಿನ ತೆರಿಗೆ ಅವಧಿಗಳಿಗೆ 178 ಕರದಾತರುಗಳು ಸಲ್ಲಿಸಿದ್ದ 399 ಸಲ್ಲಿಕೆಗಳಿಗೆ ಸಂಬಂಧಿಸಿದಂತೆ ₹ 3.55 ಕೋಟಿ ಮೊತ್ತದಷ್ಟು ತೆರಿಗೆ ಬಾಧ್ಯತೆಗಳನ್ನು ಪಾವತಿಸಿರಲಿಲ್ಲ ಎಂಬುದನ್ನು ತೋರಿಸಿಕೊಟ್ಟಿತು. ಅನ್ವಯಗೊಳ್ಳುವ ದಂಡ ಮತ್ತು ಬಡ್ಡಿಯು ಅನುಕ್ರಮವಾಗಿ ₹ 35.51 ಲಕ್ಷ ಮತ್ತು ₹ 1.22 ಕೋಟಿ ಆಗಿದ್ದಿತು. ವಸೂಲಾತಿ ಮಾಡಬೇಕಾಗಿದ್ದ ಒಟ್ಟಾರೆ ಮೊತ್ತವು ₹ 5.13 ಕೋಟಿ ಆಗಿದ್ದಿತು.

ಆನ್‌ಲೈನ್ ಸಲ್ಲಿಕೆಗಳಿಗಾಗಿನ 'ಇ–ವರದಿ[12]' ತಂತ್ರಾಂಶ ಅನ್ವಯ ವ್ಯವಸ್ಥೆಯು ಸಂಪೂರ್ಣ ಪ್ರಮಾಣದಲ್ಲಿ ತೆರಿಗೆ ಬಾಧ್ಯತೆಯನ್ನು ಪಾವತಿಸದಿರುವ ಎಲ್ಲಾ ಸಲ್ಲಿಕೆಗಳ ಪ್ರತಿಯಾಗಿ ಸ್ವೀಕೃತಿಪತ್ರಗಳನ್ನು ನೀಡಲಾಗಿರುವುದಿಲ್ಲ' ಎಂಬ ಸ್ಥಿತಿಗತಿಯನ್ನು ಸ್ಪಷ್ಟವಾಗಿ ಸೂಚಿಸುತ್ತದೆಯಾದರೂ, ಸಂಬಂಧಿತ ಅಧಿಕಾರಿಗಳು ಈ ಪ್ರಕರಣಗಳಲ್ಲಿ ಅನುಸರಣಾ ಕ್ರಮಗಳನ್ನು ತೆಗೆದುಕೊಳ್ಳುವಲ್ಲಿ ಹಾಗೂ ಸಮಯೋಚಿತ ವಸೂಲಾತಿಯನ್ನು ಖಚಿತಪಡಿಸಿಕೊಳ್ಳುವಲ್ಲಿ ವಿಫಲಗೊಂಡಿದ್ದರು.

ಈ ಪ್ರಕರಣಗಳನ್ನು ವಾಣಿಜ್ಯ ತೆರಿಗೆಗಳ ಇಲಾಖೆಯ ಆಯುಕ್ತರವರು ಮತ್ತು ಸರ್ಕಾರಕ್ಕೆ ಮಾರ್ಚ್ ಮತ್ತು ಏಪ್ರಿಲ್ 2017ರಲ್ಲಿ ಗಮನಕ್ಕೆ ತಂದನಂತರ, 11 ಪ್ರಕರಣಗಳಲ್ಲಿ ₹ 7.80 ಲಕ್ಷ ಮೊತ್ತವನ್ನು ವಸೂಲಾತಿ ಮಾಡಲಾಗಿದೆ ಹಾಗೂ 14 ಪ್ರಕರಣಗಳಲ್ಲಿ ನೋಟೀಸುಗಳನ್ನು ನೀಡಲಾಗಿದೆ ಎಂಬುದಾಗಿ ಸರ್ಕಾರವು ಉತ್ತರಿಸಿತು (ಜೂನ್ ಮತ್ತು ಆಗಸ್ಟ್ 2017). ಓರ್ವ ವರ್ತಕರಿಗೆ[13], ಸಂಬಂಧಿಸಿದಂತೆ, ತೆರಿಗೆಯನ್ನು ಇಲಾಖೆಗೆ ಪಾವತಿಸಲಾಗಿದೆ ಎಂಬುದಾಗಿ ಸರ್ಕಾರವು ಉತ್ತರಿಸಿತು. ತೆರಿಗೆಯನ್ನು ಪಾವತಿಸಿದ್ದಕ್ಕಾಗಿ ಇಲಾಖೆಯು ನೀಡಿದ ಹೇಳಿಕೆಯಂತೆ ಪಾವತಿ ವಿವರಗಳನ್ನು ವಿದ್ಯುನ್ಮಾನೀಯ ಸಲ್ಲಿಕೆ ವ್ಯವಸ್ಥೆಯಲ್ಲಿ (eFS) ಪತ್ತೆಯಾಗದಿದ್ದ ಕಾರಣ ಉತ್ತರವು ಒಪ್ಪುವಂತಿಲ್ಲ. ಉಳಿದ ವರ್ತಕರಿಗೆ ಸಂಬಂಧಿಸಿದಂತೆ ಉತ್ತರವನ್ನು ಇನ್ನೂ ನಿರೀಕ್ಷಿಸಲಾಗುತ್ತಿದೆ (ನವಂಬರ್ 2017).

[11] ಬೆಂಗಳೂರು, ಬಳ್ಳಾರಿ, ಬಿದರ್. ಕಲಬುರಗಿ, ಮೈಸೂರು ಮತ್ತು ರಾಯಚೂರು.

[12] 'ಇ–ವರದಿ' ತಂತ್ರಾಂಶವು ವರ್ತಕರಿಗೆ ತಮ್ಮ ಸಲ್ಲಿಕೆಗಳನ್ನು ಆನ್‌ಲೈನ್/ಇಲೆಕ್ಟ್ರಾನಿಕ್ಸ್ ಮೂಲಕ ಸಲ್ಲಿಸಲು ಅನುವು ಮಾಡಿಕೊಡುತ್ತದೆ.

[13] ಮೆ. ಹಿಮಾಲಯಾ ಸರ್ವಿಲಿಯನ್ಸ್ ಅಂಡ್ ಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್.

ಲೆಕ್ಕಪರಿಶೋಧನೆಯು 1,103 ಸಲ್ಲಿಕೆಗಳಲ್ಲಿ 491 ಕರದಾತರಿಗೆ ಸಂಬಂಧಿಸಿದಂತೆ ₹ 10.97 ಕೋಟಿ ಮೊತ್ತದಷ್ಟು ತೆರಿಗೆ ಬಾಧ್ಯತೆಯ ವಸೂಲಾತಿಗಾಗಿ ಯಾವುದೇ ಅನುಸರಣಾ ಕ್ರಮಗಳನ್ನು ತೆಗೆದುಕೊಳ್ಳದಿದ್ದುದರ ಬಗ್ಗೆ ಅದೇ ರೀತಿಯ ಲೋಪದೋಷಗಳನ್ನು ಹಿಂದಿನ ಮೂರು ಲೆಕ್ಕಪರಿಶೋಧನಾ ವರದಿಗಳಲ್ಲಿ[14]. ಸ್ಪಷ್ಟಪಡಿಸಿದ್ದಿತು. ಆದಾಗ್ಯೂ, ಅದನ್ನು ತಡೆಯುವ ಸಲುವಾಗಿ ಸೂಕ್ತ ಪ್ರತಿಬಂಧಕಗಳನ್ನು ರೂಪಿಸುವಲ್ಲಿ ಇಲಾಖೆಯು ವಿಫಲಗೊಂಡಿದ್ದಿತು.

## 2.9 ಬಡ್ಡಿಯನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು

ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ರ ಪರಿಚ್ಛೇದ 36(2)ರ ಅಡಿಯಲ್ಲಿ, ಸಲ್ಲಿಕೆಗಳಲ್ಲಿ ಘೋಷಿಸಲಾಗಿರುವ ತೆರಿಗೆ ಅಥವಾ ಹೆಚ್ಚುವರಿ ತೆರಿಗೆಯ ಯಾವುದೇ ಮೊತ್ತವನ್ನು ಪಾವತಿಸುವಲ್ಲಿ ಅಥವಾ ತೆರಿಗೆಯು ಪಾವತಿಗೆ ಬಾಕಿಯಾದನಂತರ ಮೂರು ತಿಂಗಳುಗಳಿಗೂ ಮೀರಿದಂತೆ ಪರಿಷ್ಕೃತ ಸಲ್ಲಿಕೆಯನ್ನು ಸಲ್ಲಿಸುವ ಪ್ರತಿಯೋರ್ವ ವರ್ತಕರು ಸರಳ ಬಡ್ಡಿಯನ್ನು ಪಾವತಿಸಲು ಬಾಧ್ಯರಾಗಿರುತ್ತಾರೆ. ಮೇಲೆ ತಿಳಿಸಲಾದ ಅಧಿನಿಯಮದ ಪರಿಚ್ಛೇದ 37(1)ರ ಪ್ರಕಾರ, ವಿಧಿಸಬೇಕಾಗಿದ್ದ ಬಡ್ಡಿಯ ದರವು ಅಧಿನಿಯಮದ ಅಡಿಯಲ್ಲಿ ಮೊತ್ತವು ಪಾವತಿಗಾಗಿ ಬಾಕಿಯಾಗುವ ದಿನಾಂಕದಿಂದ ಶೇಕಡಾ 1.25 (31 ಮಾರ್ಚ್ 2011ರವರೆಗೆ) ಹಾಗೂ ಶೇಕಡಾ 1.5 (1 ಏಪ್ರಿಲ್ 2011ರಿಂದ ಜಾರಿಗೆ ಬಂದಂತೆ) ಆಗಿದ್ದಿತು.

ಒಂಬತ್ತು[15] ಜಿಲ್ಲೆಗಳಲ್ಲಿನ 36 ಕಚೇರಿಗಳಲ್ಲಿ (22 ಸ್ಥಳೀಯ ಮೌವತೆ ಕಚೇರಿಗಳು/ಮೌವತೆ ಉಪ-ಕಚೇರಿಗಳು ಹಾಗೂ 14 ಲೆಕ್ಕಪರಿಶೋಧನಾ ಕಚೇರಿಗಳು) ಮೌವತೆ-240ರಲ್ಲಿ ಸಲ್ಲಿಸಲಾಗಿದ್ದ ವಾರ್ಷಿಕ ಲೆಕ್ಕಪರಿಶೋಧನೆಗೆ ಒಳಪಟ್ಟ ಲೆಕ್ಕಪತ್ರಗಳು, ಮೌವತೆ 100ರಲ್ಲಿನ ಸಲ್ಲಿಕೆಗಳು, ಹಾಗೂ ಪುನರ್-ಕರನಿರ್ಧಾರಣಾ ಆದೇಶಗಳನ್ನು ಫೆಬ್ರವರಿ 2016 ಮತ್ತು ಫೆಬ್ರವರಿ 2017ರ ನಡುವೆ ಪರೀಕ್ಷಾ-ಪರಿಶೀಲನೆ ಮಾಡುವ ವೇಳೆಯಲ್ಲಿ, 2006-2007 ಮತ್ತು 2014-15ರ ನಡುವಿನ ತೆರಿಗೆ ಅವಧಿಗೆ 81 ವರ್ತಕರುಗಳಿಂದ ₹ 70.50 ಕೋಟಿ ಮೊತ್ತದಷ್ಟು ತೆರಿಗೆ ಪಾವತಿಯಲ್ಲಿ ವಿಳಂಬವಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಬಾಕಿಯಿದ್ದ ತೆರಿಗೆಯು ಮೂಲ ಸಲ್ಲಿಕೆಯ ಪ್ರತಿಯಾಗಿದ್ದಿತು ಅಥವಾ ಪುನರ್-ಕರನಿರ್ಧಾರಣೆಗಳು/ಪರಿಷ್ಕೃತ ಸಲ್ಲಿಕೆಗಳು/ಮೌವತೆ-240ರಲ್ಲಿ ಸಲ್ಲಿಸಲಾಗಿದ್ದ ವಾರ್ಷಿಕ ಲೆಕ್ಕಪರಿಶೋಧನೆಗೆ ಒಳಪಟ್ಟ ಲೆಕ್ಕಪತ್ರಗಳ ಕಾರಣದಿಂದ ಸಂಭವಿಸಿದ್ದ ಹೆಚ್ಚುವರಿ ತೆರಿಗೆ ಬಾಧ್ಯತೆಗಳಿಗೆ ಸಂಬಂಧಿಸಿದ್ದಿತು. ಈ ಎಲ್ಲಾ ಪ್ರಕರಣಗಳಲ್ಲಿಯೂ ವಿಳಂಬವಾಗಿ ಪಾವತಿಸಲಾಗಿದ್ದ ತೆರಿಗೆಯು ಅಧಿನಿಯಮದ ಪರಿಚ್ಛೇದ 36(2)ರ ಅಡಿಯಲ್ಲಿ ಬಡ್ಡಿ ಪಾವತಿಯನ್ನು ಆಕರ್ಷಿಸುತ್ತಿದ್ದಿತಾದರೂ, ಅದನ್ನು ವಿಧಿಸಿರಲಿಲ್ಲ ಅಥವಾ ಕಡಿಮೆ ಪ್ರಮಾಣದಲ್ಲಿ ವಿಧಿಸಲಾಗಿದ್ದಿತು. ಏಪ್ರಿಲ್ 2006 ಮತ್ತು ಮಾರ್ಚ್ 2015ರ ನಡುವಿನ ತೆರಿಗೆ ಅವಧಿಗಳಿಗೆ ವಿಧಿಸದಿದ್ದ/ಕಡಿಮೆ ಪ್ರಮಾಣದಲ್ಲಿ ವಿಧಿಸಲಾಗಿದ್ದ ಒಟ್ಟಾರೆ ಬಡ್ಡಿಯು ₹ 5.08 ಕೋಟಿ ಆಗುತ್ತದೆ. ತೆರಿಗೆ ಪಾವತಿಯಲ್ಲಿನ ವಿಳಂಬಕ್ಕೆ ಬಡ್ಡಿ ಪಾವತಿಗಾಗಿ ವಾರ್ಷಿಕ ಲೆಕ್ಕಪರಿಶೋಧನೆಗೆ ಒಳಪಟ್ಟ ಲೆಕ್ಕಪತ್ರಗಳ ತಃಖ್ತೆಯಲ್ಲಿ (ಮೌವತೆ-240) ಹಾಗೂ ಮಾಸಿಕ ಸಲ್ಲಿಕೆಗಳಲ್ಲಿ (ಮೌವತೆ-100 ಮತ್ತು ಮೌವತೆ-120) ಅನುವು ಇರುವುದಾದರೂ, ಈ ಅನುವಿನ ಅನುಸರಣಾ ಕ್ರಮವನ್ನು ಇಲಾಖೆಯು ವಿಫಲಗೊಂಡಿದ್ದಿತು, ಇದು ಬಡ್ಡಿಯನ್ನು ವಿಧಿಸದಿರುವಲ್ಲಿ/ಕಡಿಮೆ ಪ್ರಮಾಣದಲ್ಲಿ ವಿಧಿಸುವಲ್ಲಿ ಪರಿಣಮಿಸಿತು. ಇ-ಸಲ್ಲಿಕೆ ತಂತ್ರಾಂಶ ಅನ್ವಯ ವ್ಯವಸ್ಥೆಯ (*eFS*) ಮೂಲಕ ಬಡ್ಡಿ ವಿಧಿಸುವಿಕೆಯನ್ನು ಸ್ವಯಂಚಾಲಿತಗೊಳಿಸುವಂತೆ ಲೆಕ್ಕಪರಿಶೋಧನೆಯು ಶಿಫಾರಸು ಮಾಡಿದ್ದಿತು[16]; ಆದಾಗ್ಯೂ, ಈ ಬಗ್ಗೆ ಇಲಾಖೆಯು ಅನುಸರಣಾ ಕ್ರಮವನ್ನು ತೆಗೆದುಕೊಂಡಿರಲಿಲ್ಲ, ಇದು ಬಡ್ಡಿಯನ್ನು ವಿಧಿಸದೆಯೇ ವಿಳಂಬದಿಂದ ಕೂಡಿದ ಪಾವತಿಗಳು ಪದೇಪದೇ ಸಂಭವಿಸುವಲ್ಲಿ ಪರಿಣಮಿಸಿತು.

ಈ ಪ್ರಕರಣಗಳನ್ನು ಫೆಬ್ರವರಿ ಮತ್ತು ಏಪ್ರಿಲ್ 2017ರಲ್ಲಿ ವಾಣಿಜ್ಯ ತೆರಿಗೆ ಇಲಾಖೆಯ ಆಯುಕ್ತರವರು ಮತ್ತು ಸರ್ಕಾರದ ಗಮನಕ್ಕೆ ತಂದನಂತರ, ಒಂಬತ್ತು ಪ್ರಕರಣಗಳಲ್ಲಿ ₹50.15 ಲಕ್ಷ ಮೊತ್ತದಷ್ಟು ಬಡ್ಡಿಯನ್ನು ವಸೂಲಾತಿ ಮಾಡಲಾಗಿದೆ, ಐದು ಪ್ರಕರಣಗಳಲ್ಲಿ ನೋಟೀಸುಗಳನ್ನು ನೀಡಲಾಗಿದೆ, ಒಂದು ಪ್ರಕರಣದಲ್ಲಿ ಬಡ್ಡಿಯನ್ನು ವಿಧಿಸಿ ಆದೇಶಗಳನ್ನು ಜಾರಿಗೊಳಿಯಿತು ಹಾಗೂ ಒಂದು ಪ್ರಕರಣದಲ್ಲಿ ಪುನರ್-ಕರನಿರ್ಧಾರಣೆ ಮಾಡುವುದಕ್ಕಾಗಿ ಲೆಕ್ಕಪರಿಶೋಧನಾ ಕಚೇರಿಗೆ ಕಳುಹಿಸಿಕೊಡಲಾಗಿದೆ ಎಂಬುದಾಗಿ ಸರ್ಕಾರವು ತಿಳಿಸಿತು (ಜೂನ್ ಮತ್ತು ಆಗಸ್ಟ್ 2017)

[14] 31 ಮಾರ್ಚ್ 2014ಕ್ಕೆ (2014ರ ವರದಿ ಸಂಖ್ಯೆ 7), 31 ಮಾರ್ಚ್ 2015ಕ್ಕೆ (2015ರ ವರದಿ ಸಂಖ್ಯೆ 3) ಹಾಗೂ 31 ಮಾರ್ಚ್ 2016ಕ್ಕೆ (2016ರ ವರದಿ ಸಂಖ್ಯೆ 5) ಅಂತ್ಯಗೊಂಡ ಸಾಲುಗಳ ಲೆಕ್ಕಪರಿಶೋಧನಾ ವರದಿಗಳ ಅನುಕ್ರಮವಾಗಿ ಕಂಡಿಕೆ ಸಂಖ್ಯೆಗಳು 2.7, 2.9 ಹಾಗೂ 2.5.

[15] ಬೆಂಗಳೂರು, ಬಳ್ಳಾರಿ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ದಾವಣಗೆರೆ, ಕಲಬುರಗಿ, ಮೈಸೂರು, ರಾಯಚೂರು ಮತ್ತು ಶಿವಮೊಗ್ಗ.

[16] 2014ರ ವರದಿ ಸಂಖ್ಯೆ 1ರ ಕಂಡಿಕೆ 2.8.18ರ ಅಡಿಯಲ್ಲಿನ ಶಿಫಾರಸು ಸಂಖ್ಯೆ 11.

ಮುಂದುವರೆದು, ಇಬ್ಬರು ವರ್ತಕರು (81 ವರ್ತಕರ ಪೈಕಿ) ಶೇಕಡಾ 10ರಷ್ಟು ಬಡ್ಡಿಯನ್ನು (₹ 0.30 ಲಕ್ಷ) ಪಾವತಿಸುವ ಮೂಲಕ ಕರ ಸಮಾಧಾನ ಯೋಜನೆಗೆ ಅರ್ಜಿಯನ್ನು ಸಲ್ಲಿಸಿದರು ಹಾಗೂ ಇಲಾಖೆಯು ಶೇಕಡಾ 90ರಷ್ಟು (₹ 2.72 ಲಕ್ಷ) ಬಡ್ಡಿ ಪಾವತಿಯನ್ನು ಮನ್ನಾ ಮಾಡಿರುವುದು ಎಂಬುದಾಗಿ ಸರ್ಕಾರವು ತಿಳಿಸಿತು (ಸೆಪ್ಟಂಬರ್ 2017). ಉಳಿದ ವರ್ತಕರಿಗೆ ಸಂಬಂಧಿಸಿದಂತೆ ಉತ್ತರವನ್ನು ಇನ್ನೂ ನಿರೀಕ್ಷಿಸಲಾಗುತ್ತಿದೆ (ನವಂಬರ್ 2017).

# ಅಧ್ಯಾಯ III

# ರಾಜ್ಯ ಅಬಕಾರಿ

# ಅಧ್ಯಾಯ III
# ರಾಜ್ಯ ಅಬಕಾರಿ

## 3.1 ತೆರಿಗೆ ನಿರ್ವಹಣೆ

ರಾಜ್ಯ ಸರ್ಕಾರವು ಒಂದು ಅಧಿಸೂಚನೆಯ ಮೂಲಕ ಅಬಕಾರಿ ಸುಂಕವನ್ನು ವಿಧಿಸಬಹುದಾದ ವಸ್ತು/ಪದಾರ್ಥ ಎಂಬುದಾಗಿ ಘೋಷಿಸಬಹುದಾದ ಯಾವುದೇ ಮದ್ಯ, ಮಾದಕ ಪದಾರ್ಥಗಳು/ವಸ್ತುಗಳು, ಅಫೀಮು ಅಥವಾ ಇತರೆ ಸಂವೇದನಾಹಾರಿ/ನಿದ್ರಾಜನಕ ಹಾಗೂ ಸಂವೇದನಾಹಾರಿಯಲ್ಲದ/ನಿದ್ರಾಜನಕವಲ್ಲದ ವಸ್ತುಗಳು/ ಪದಾರ್ಥಗಳ ಮೇಲೆ ರಾಜ್ಯ ಅಬಕಾರಿ ಸುಂಕವನ್ನು ವಿಧಿಸಲಾಗುವುದು. ಕರ್ನಾಟಕ ಅಬಕಾರಿ ಸುಂಕ ಅಧಿನಿಯಮ, 1965 ಮತ್ತು ಅದರ ಅಡಿಯಲ್ಲಿ ರೂಪಿಸಲಾಗಿರುವ ನಿಯಮಗಳು ಮದ್ಯ ಮತ್ತು ಮಾದಕ ವಸ್ತುಗಳ ಉತ್ಪಾದನೆ, ತಯಾರಿಕೆ, ಹೊಂದಿರುವಿಕೆ, ಆಮದು, ರಫ್ತು, ಸಾಗಾಣಿಕೆ, ಖರೀದಿ ಮತ್ತು ಮಾರಾಟಗಳು ಹಾಗೂ ಅವುಗಳ ಮೇಲೆ ವಿಧಿಸಬೇಕಾದ ಅಬಕಾರಿ ಸುಂಕಗಳಿಗೆ ಸಂಬಂಧಿತ ನಿಯಮಗಳನ್ನು ನಿಯಂತ್ರಿಸುತ್ತವೆ. ರಾಜ್ಯ ಅಬಕಾರಿ ಇಲಾಖೆಯು ಹಣಕಾಸು ಇಲಾಖೆಯ ಆಡಳಿತಾತ್ಮಕ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುತ್ತಿದೆ ಹಾಗೂ ಅಬಕಾರಿಯ ಜಂಟಿ ಆಯುಕ್ತರುಗಳ ಸಹಾಯದಿಂದ ಕಾರ್ಯನಿರ್ವಹಿಸುವ ಅಬಕಾರಿ ಆಯುಕ್ತರವರ ನೇತೃತ್ವದಲ್ಲಿದೆ. ಅಬಕಾರಿ ಸುಂಕವು ಜಿಲ್ಲಾ ಮಟ್ಟದಲ್ಲಿ ಅಬಕಾರಿಯ ಉಪ–ಆಯುಕ್ತರುಗಳು ಹಾಗೂ ಬಟ್ಟಿಗೃಹ/ಡಿಸ್ಟಿಲರಿಗಳು ಮತ್ತು ವಲಯ ಕಚೇರಿಗಳ ಮಟ್ಟದಲ್ಲಿ ಅಬಕಾರಿಯ ಸೂಪರಿಂಟೆಂಡೆಂಟುಗಳು, ಅಬಕಾರಿಯ ಉಪ–ಸೂಪರಿಂಟೆಂಡೆಂಟುಗಳು, ಅಬಕಾರಿಯ ತನಿಖಾಧಿಕಾರಿಗಳಿಂದ ಹಾಗೂ ಡಿಸ್ಟಿಲರಿಗಳಲ್ಲಿ ಮತ್ತು ವಲಯ ಕಚೇರಿಗಳಲ್ಲಿ ಮತ್ತಿತರ ಅಧೀನ ಅಧಿಕಾರಿಗಳಿಂದ ನಿರ್ವಹಿಸಲ್ಪಡುತ್ತದೆ.

## 3.2 ಆಂತರಿಕ ಲೆಕ್ಕಪರಿಶೋಧನೆ

ಆಂತರಿಕ ಲೆಕ್ಕಪರಿಶೋಧನಾ ವಿಭಾಗವು 1990ರಿಂದಲೂ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಇಲಾಖೆಯು ಒದಗಿಸಿದ ಮಾಹಿತಿಯಂತೆ, 2016–17ರಲ್ಲಿ ಲೆಕ್ಕಪರಿಶೋಧನೆ ಮಾಡಲು ಬಾಕಿಯಿದ್ದ 109 ಕಚೇರಿಗಳ ಪೈಕಿ ಕೇವಲ ಐದು (ಶೇಕಡಾ 4.59) ಕಚೇರಿಗಳನ್ನು ಮಾತ್ರ ಲೆಕ್ಕಪರಿಶೋಧನೆ ಮಾಡಲಾಗಿತ್ತು. ಲೆಕ್ಕಪರಿಶೋಧನೆಯು ಕಚೇರಿಗಳನ್ನು ವ್ಯಾಪಿಸುವಲ್ಲಿನ ಕೊರತೆಯು ಈ ವಿಭಾಗದಲ್ಲಿನ ಸಿಬ್ಬಂದಿಯ ಕೊರತೆಯ ಕಾರಣ ಆಗಿದ್ದಿತು. ಇಲಾಖೆಯು ಒದಗಿಸಿದ ಮಾಹಿತಿಯಂತೆ, ಒಳಗೊಂಡಿರುವ ತೆರಿಗೆ ಬಾಧ್ಯತೆಯೊಂದಿಗೆ ಮಾಡಲಾದ ಲೆಕ್ಕಪರಿಶೋಧನಾ ಆಕ್ಷೇಪಣೆಗಳು, ಪ್ರಸಕ್ತ ಸಾಲಿನಲ್ಲಿ ಇತ್ಯರ್ಥಗೊಂಡವುಗಳು ಹಾಗೂ ಬಾಕಿ ಇರುವ ಲೆಕ್ಕಪರಿಶೋಧನಾ ಆಕ್ಷೇಪಣೆಗಳ ವರ್ಷವಾರು ವಿವರಗಳನ್ನು **ಕೋಷ್ಟಕ 3.1**ರಲ್ಲಿ ನೀಡಲಾಗಿದೆ:

**ಕೋಷ್ಟಕ 3.1**

**ಆಂತರಿಕ ಲೆಕ್ಕಪರಿಶೋಧನಾ ವಿಭಾಗವು ಮಾಡಿರುವ ಆಕ್ಷೇಪಣೆಗಳ ವರ್ಷವಾರು ವಿವರಗಳು**

**(₹ ಲಕ್ಷದಲ್ಲಿ)**

| ವರ್ಷ | ಮಾಡಲಾಗಿರುವ ಲೆಕ್ಕಪರಿಶೋಧನಾ ಆಕ್ಷೇಪಣೆಗಳು | | ಇತ್ಯರ್ಥಗೊಳಿಸಲಾದ ಲೆಕ್ಕಪರಿಶೋಧನಾ ಆಕ್ಷೇಪಣೆಗಳು | | ಬಾಕಿಯಿರುವ ಲೆಕ್ಕಪರಿಶೋಧನಾ ಆಕ್ಷೇಪಣೆಗಳು | |
|---|---|---|---|---|---|---|
| | ಪ್ರಕರಣಗಳ ಸಂಖ್ಯೆ | ಮೊತ್ತ | ಪ್ರಕರಣಗಳ ಸಂಖ್ಯೆ | ಮೊತ್ತ | ಪ್ರಕರಣಗಳ ಸಂಖ್ಯೆ | ಮೊತ್ತ |
| 2012-13 ರವರೆಗೆ | 536 | 1,701.01 | 43 | 44.15 | 493 | 1,656.86 |
| 2013-14 | 00 | 0.00 | 00 | 0.00 | 00 | 0.00 |
| 2014-15 | 06 | 2.87 | 02 | 0.30 | 04 | 2.57 |
| 2015-16 | 00 | 0.00 | 00 | 0.00 | 00 | 0.00 |
| 2016-17 | 00 | 0.00 | 00 | 0.00 | 00 | 0.00 |
| **ಒಟ್ಟು** | **542** | **1,703.88** | **45** | **44.45** | **497** | **1,659.43** |

ಮೇಲಿನ ಕೋಷ್ಟಕದಿಂದ ಕಾಣಬಹುದಾದಂತೆ, 2012–13ರ ನಂತರ ಇಲಾಖೆಯಲ್ಲಿನ ಆಂತರಿಕ ಲೆಕ್ಕಪರಿಶೋಧನಾ ವಿಭಾಗದ ಕಾರ್ಯಚಟುವಟಿಕೆಗಳು ಬಹಳಷ್ಟು ಮಟ್ಟಿಗೆ ಇಳಿಮುಖಗೊಂಡಿರುವುದು ಹಾಗೂ ಹಿಂದಿನ ಎರಡು ಸಾಲುಗಳಲ್ಲಿ ವಾಸ್ತವಿಕವಾಗಿ ಶೂನ್ಯಕ್ಕೆ ತಲುಪಿದೆ. ಇಲಾಖೆಯು ಆಂತರಿಕ ಲೆಕ್ಕಪರಿಶೋಧನೆಗೆ ಅರ್ಹ ಪ್ರಾಮುಖ್ಯತೆಯನ್ನು ನೀಡುತ್ತಿಲ್ಲ ಎಂಬುದನ್ನು ಇದು ಸೂಚಿಸುತ್ತದೆ.

ಅನ್ವಯಗೊಳ್ಳುವ ನಿಯಮಗಳು, ನಿಯಂತ್ರಣಗಳು ಮತ್ತು ಅನುಮೋದಿತ ಕಾರ್ಯವಿಧಾನಗಳ ಜೊತೆಯಲ್ಲಿ ಇಲಾಖೆಯ ಅನುಸರಣಾ ಕ್ರಮಗಳನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಆಂತರಿಕ ಲೆಕ್ಕಪರಿಶೋಧನೆಯು ಒಂದು ಪ್ರಮುಖ ವ್ಯವಸ್ಥೆಯಾಗಿರುವುದರಿಂದ, ಆಂತರಿಕ ಲೆಕ್ಕಪರಿಶೋಧನಾ ವಿಭಾಗವನ್ನು ಬಲಪಡಿಸುವ ಸಲುವಾಗಿ ಅರ್ಹ ಪ್ರಾಮುಖ್ಯತೆಯನ್ನು ನೀಡಬೇಕೆಂಬುದಾಗಿ ಈ ಮೂಲಕ ಶಿಫಾರಸು ಮಾಡಲಾಗುತ್ತಿದೆ.

## 3.3 ಲೆಕ್ಕಪರಿಶೋಧನೆಯ ಫಲಿತಾಂಶಗಳು

ರಾಜ್ಯ ಅಬಕಾರಿ ಇಲಾಖೆಯ 30 ಕಚೇರಿಗಳ ದಾಖಲೆಗಳನ್ನು 2016–17 ಸಾಲಿನಲ್ಲಿ ಪರೀಕ್ಷಾ–ಪರಿಶೀಲನೆ ಮಾಡಲಾಗಿ, 30 ಕಂಡಿಕೆಗಳನ್ನು ಒಳಗೊಂಡಂತೆ ₹ 139.64 ಕೋಟಿ ಮೊತ್ತದಷ್ಟು ಪರವಾನಿಗೆ ಶುಲ್ಕವನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು, ವರ್ಗಾವಣೆ ಶುಲ್ಕವನ್ನು ವಿಧಿಸದಿದ್ದುದು, ಕಡಿಮೆ ಪ್ರಮಾಣದಲ್ಲಿ ಸಾಗಣೆ ಮಾಡಲಾದ ಭಾರತೀಯ ಮದ್ಯದ (ಐಎಂಎಲ್) ಮೇಲೆ ದಂಡವನ್ನು ವಿಧಿಸದಿದ್ದು ಹಾಗೂ ಇನ್ನಿತರೆ ನಿಯಮಬಾಹಿರತೆಗಳನ್ನು ಎಂಬುದನ್ನು ತೋರಿಸಿಕೊಟ್ಟಿತು. ವಿವರಗಳನ್ನು **ಕೋಷ್ಟಕ 3.2**ರಲ್ಲಿ ನೀಡಲಾಗಿದೆ.

**ಕೋಷ್ಟಕ 3.2**
**ಲೆಕ್ಕಪರಿಶೋಧನೆಯ ಫಲಿತಾಂಶಗಳು**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ಪ್ರವರ್ಗ | ಕಂಡಿಕೆಗಳ ಸಂಖ್ಯೆ | ಮೊತ್ತ |
|---|---|---|---|
| 1. | **“ಕರ್ನಾಟಕ ರಾಜ್ಯದಲ್ಲಿ ಆಲ್ಕಹಾಲಿನ ಉತ್ಪನ್ನಗಳ ತಯಾರಿಕೆ, ಹೊಂದಿರುವಿಕೆ, ಸಾಗಾಣಿಕೆ, ವಿತರಣೆ ಮತ್ತು ಮಾರಾಟಗಳು, ಇವುಗಳ ಮೇಲಿನ ನಿಬಂಧನೆ ಮತ್ತು ನಿಯಂತ್ರಣಗಳು” ಈ ವಿಷಯದ ಮೇಲಿನ ಒಂದು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ** | 1 | 132.57 |
| 2. | ಅಧಿಕ ಪ್ರಮಾಣದಲ್ಲಿ ಮಾಡಲಾದ ವ್ಯರ್ಥಗಳು/ನಷ್ಟ/ಕಡಿಮೆ ಪ್ರಮಾಣದಲ್ಲಿ ಮಾಡಲಾದ ಸಾಗಣೆಗಾಗಿ ದಂಡವನ್ನು ವಿಧಿಸದಿದ್ದುದು | 5 | 2.18 |
| 3. | ಮದ್ಯಸಾರದ (ಸ್ಪಿರಿಟ್) ನಿರ್ದಿಷ್ಟ ಪ್ರಮಾಣವನ್ನು ಉತ್ಪತ್ತಿ ಮಾಡುವಲ್ಲಿನ ವಿಫಲತೆಗಾಗಿ ದಂಡವನ್ನು ವಿಧಿಸದಿದ್ದುದು | 5 | 2.15 |
| 4. | ಹೆಚ್ಚುವರಿ ಪರವಾನಿಗೆ ಶುಲ್ಕ, ವರ್ಗಾವಣೆ ಶುಲ್ಕವೂ ಸೇರಿದಂತೆ ಪರವಾನಿಗೆ ಶುಲ್ಕವನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು | 7 | 0.98 |
| 5. | ಅಬಕಾರಿ ಸುಂಕ, ಹೆಚ್ಚುವರಿ ಅಬಕಾರಿ ಸುಂಕವನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು | 3 | 0.37 |
| 6. | ಇತರೆ ನಿಯಮಬಾಹಿರತೆಗಳು | 9 | 1.39 |
| | **ಒಟ್ಟು** | **30** | **139.64** |

ಈ ಹಿಂದಿನ ಸಾಲುಗಳಲ್ಲಿ ಸ್ಪಷ್ಟಪಡಿಸಲಾಗಿದ್ದ 43 ಕಂಡಿಕೆಗಳಲ್ಲಿ ಒಳಗೊಂಡಿದ್ದ ₹ 3.53 ಕೋಟಿ ಮೊತ್ತವನ್ನು ಇಲಾಖೆಯು ಪ್ರಸಕ್ತ 2016–17 ಸಾಲಿನಲ್ಲಿ ವಸೂಲಾತಿ ಮಾಡಿತು.

₹ 132.57 ಕೋಟಿ ಮೊತ್ತವು ಒಳಗೊಂಡಂತೆ **“**ಕರ್ನಾಟಕ ರಾಜ್ಯದಲ್ಲಿ ಆಲ್ಕಹಾಲಿನ ಉತ್ಪನ್ನಗಳ ತಯಾರಿಕೆ, ಹೊಂದಿರುವಿಕೆ, ಸಾಗಾಣಿಕೆ, ವಿತರಣೆ ಮತ್ತು ಮಾರಾಟಗಳು, ಇವುಗಳ ಮೇಲಿನ ನಿಬಂಧನೆ ಮತ್ತು ನಿಯಂತ್ರಣಗಳು**”** ಈ ವಿಷಯದ ಮೇಲಿನ ಒಂದು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದ ಅಂಶಗಳನ್ನು ಈ ಕೆಳಗಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

## 3.4 "ಕರ್ನಾಟಕ ರಾಜ್ಯದಲ್ಲಿ ಆಲ್ಕಹಾಲಿನ ಉತ್ಪನ್ನಗಳ ತಯಾರಿಕೆ, ಹೊಂದಿರುವಿಕೆ, ಸಾಗಾಣಿಕೆ, ವಿತರಣೆ ಮತ್ತು ಮಾರಾಟಗಳು, ಇವುಗಳ ಮೇಲಿನ ನಿಬಂಧನೆ ಮತ್ತು ನಿಯಂತ್ರಣಗಳು" ಈ ವಿಷಯದ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ

### ಮುಖ್ಯಾಂಶಗಳು

ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪತ್ತಿಯ ಬಗ್ಗೆ ಪ್ರಮಾಣಕಗಳನ್ನು ಪರಿಷ್ಕರಿಸುವಲ್ಲಿನ ವಿಳಂಬವು ಏಪ್ರಿಲ್ 2012 ಮತ್ತು ಸೆಪ್ಟೆಂಬರ್ 2015ರ ಅವಧಿಯಲ್ಲಿ 12 ಬಟ್ಟಿಗೃಹಗಳಿಂದ (ಡಿಸ್ಟಿಲರಿಗಳು) ಸರ್ಕಾರಕ್ಕೆ ₹ 64.84 ಕೋಟಿ ಕನಿಷ್ಠ ಸಂಭಾವ್ಯ ನಷ್ಟ ಉಂಟಾಗುವಲ್ಲಿ ಪರಿಣಮಿಸಿತು.

(ಕಂಡಿಕೆ ಸಂಖ್ಯೆ 3.4.8)

ಇಲಾಖೆಯು ನಿರ್ದಿಷ್ಟಪಡಿಸಿದ್ದ ತಾಂತ್ರಿಕ ಮುನ್ನಡೆಗಳು ಹಾಗೂ ದಕ್ಷತೆಗಳ ಮೇಲೆ ಪ್ರಭಾವವನ್ನು ಬೀರಲಿಲ್ಲ, ಇದರಿಂದಾಗಿ ಹೆಚ್ಚುವರಿ ಉತ್ಪತ್ತಿಯನ್ನು ಇಲಾಖೆಯಿಂದ ನಿರ್ದಿಷ್ಟಪಡಿಸಲ್ಪಟ್ಟ ಪ್ರಮಾಣಕಗಳು ಹುದುಗುಕಾರಕ ಸ್ಥಾವರಗಳಿಗಾಗಿ ವಿನ್ಯಾಸಗೊಳಿಸಲ್ಪಟ್ಟಿದ್ದ ಮಾಡುವುದಕ್ಕಾಗಿ ತಮ್ಮ ಅನುಕೂಲಕ್ಕೆ ತಕ್ಕಂತೆ ಕೆಲಸ ಮಾಡಲು ಬಟ್ಟಿಕಾರರಿಗೆ ಸಾಕಷ್ಟು ಅಧಿಕ ಉತ್ಪತ್ತಿಯನ್ನು ತಂದುಕೊಟ್ಟಿತು. 2.19 ಕೋಟಿಯಿಂದ 4.23 ಕೋಟಿ ಬೃಹತ್ ಲೀಟರುಗಳಷ್ಟು ಸಾಕಷ್ಟು ಅಧಿಕ ಉತ್ಪತ್ತಿಯ ಶುದ್ಧೀಕರಿಸಲ್ಪಟ್ಟ ಮದ್ಯಸಾರವನ್ನು ಕುಡಿಯಲು ಯೋಗ್ಯವಾದಂತಹ ಮದ್ಯಸಾರವನ್ನಾಗಿ ಪರಿವರ್ತಿಸಿದಲ್ಲಿ, ಅದರಿಂದ ಬರುವ ಕನಿಷ್ಠ ವರಮಾನವು ಅನುಕ್ರಮವಾಗಿ ₹ 633.32 ಕೋಟಿ ಹಾಗೂ ₹ 1,222.62 ಕೋಟಿ ಆಗುತ್ತದೆ ಎಂಬುದನ್ನು ಲೆಕ್ಕಪರಿಶೋಧನೆಯ ವಿಶ್ಲೇಷಣೆಯು ತೋರಿಸಿಕೊಟ್ಟಿತು.

(ಕಂಡಿಕೆಗಳು 3.4.9.1 ಮತ್ತು 3.4.9.2)

ಬಟ್ಟಿಗೃಹದ ಅಧಿಕಾರಿಗಳ ದಕ್ಷತೆಯಿಂದ ಕೂಡಿರದ ಕಾರ್ಯನಿರ್ವಹಣೆಯು ನಿಯಂತ್ರಣ ಲೋಪದೋಷಗಳು ಸಂಭವಿಸುವಲ್ಲಿ ಪರಿಣಮಿಸಿತು ಹಾಗೂ ಇದು ಈ ಕೆಳಗಿನವುಗಳ ಕಡೆಗೆ ದಾರಿ ಮಾಡಿಕೊಟ್ಟಿತು:

- ರಾಜ್ಯದಲ್ಲಿನ ಮೂರು ಬಟ್ಟಿಗೃಹಗಳು ಮೇ 2012 ಮತ್ತು ಏಪ್ರಿಲ್ 2014ರ ನಡುವೆ ಖರೀದಿಸಿದ್ದ 19,555 ಮೆಟ್ರಿಕ್ ಟನ್ನುಗಳಷ್ಟು ಕಾಕಂಬಿಯನ್ನು (ಮೊಲಾಸಿಸ್) ಲೆಕ್ಕಯಿಡದಿದ್ದುದು ₹ 124.97 ಕೋಟಿ ಮೊತ್ತದಷ್ಟು ಸಂಭಾವ್ಯ ವರಮಾನ ನಷ್ಟ ಸಂಭವಿಸುವಲ್ಲಿ ಪರಿಣಮಿಸಿದ್ದಿತು/ವರಮಾನದ ಮೇಲೆ ಪ್ರಭಾವವನ್ನು ಬೀರಿದ್ದಿತು.;

- ಶೇಕಡಾ 96.72ರಿಂದ ಶೇಕಡಾ 99.33ರ ಅಂತರದಲ್ಲಿ ಕಾಕಂಬಿಯ ಮಾದರಿಗಳ ರಸಾಯನಿಕ ವಿಶ್ಲೇಷಣೆ ಮಾಡುವಲ್ಲಿನ ಕೊರತೆಯು ವಾಸ್ತವಿಕ ಉತ್ಪಾದನೆ/ಮಾರಾಟವನ್ನು ಅಂದಾಜು ಮಾಡುವಲ್ಲಿ ಇಲಾಖೆಯನ್ನು ನಿರ್ಬಂಧಿಸಿತು; ಮತ್ತು

- ನಾಲ್ಕು ಬಟ್ಟಿಗೃಹಗಳು ಏಪ್ರಿಲ್ 2012ರಿಂದ ಮಾರ್ಚ್ 2017ರ ಅವಧಿಗೆ ಕೋರಿದ ಅಧಿಕ ಪ್ರಮಾಣದ ಸಂಗ್ರಹಣಾ ನಷ್ಟವು 1,119.241 ಮೆಟ್ರಿಕ್ ಟನ್ನುಗಳಾಗಿದ್ದಿತು, ಅದರ ಮೇಲೆ ₹ 7.60 ಕೋಟಿ ಮೊತ್ತದಷ್ಟು ದಂಡವನ್ನು ವಿಧಿಸಲಿಲ್ಲ.

(ಕಂಡಿಕೆ 3.4.10)

ಅಬಕಾರಿ ಅಂಟು ಲೇಬಲ್ಲುಗಳಿಗೆ ಸಂಬಂಧಿತ ದತ್ತಸಂಚಯವನ್ನು ಸಗಟು ಮಾರಾಟ ಮದ್ಯ ಸಾಗಣೆ ಸಂಸ್ಥೆಯಾಗಿರುವ ಮೆ. ಕರ್ನಾಟಕ ರಾಜ್ಯ ಪಾನೀಯಗಳ ನಿಗಮ ನಿಯಮಿತದ (ಕೆಎಸ್‌ಬಿಸಿಎಲ್) ದತ್ತಸಂಚಯದೊಂದಿಗೆ ಅಂತರ–ಸಂಪರ್ಕವನ್ನು ಕಲ್ಪಿಸಿರಲಿಲ್ಲ, ಇದು ಅನಧಿಕೃತ ಲೇಬಲ್ಲುಗಳೊಂದಿಗೆ ಕರ್ನಾಟಕ ರಾಜ್ಯ ಪಾನೀಯಗಳ ನಿಗಮ ನಿಯಮಿತವು ಮದ್ಯವನ್ನು ಬಿಡುಗಡೆಗೊಳಿಸುವಲ್ಲಿ ಪರಿಣಮಿಸಿದ್ದಿತು.

(ಕಂಡಿಕೆ 3.4.11)

ಪರವಾನಿಗೆ ಷರತ್ತುಗಳ ಉಲ್ಲಂಘನೆಗಳು ಹಾಗೂ ಪರವಾನಿಗೆ ಇಲ್ಲದವರಿಂದ ಕುಡಿಯಲು ಯೋಗ್ಯವಾದ ಮದ್ಯ ಮಾರಾಟವು ಲೆಕ್ಕಪರಿಶೋಧನೆಯ ಅವಧಿಯಲ್ಲಿ ಕೊನೆಯಿಲ್ಲದಂತೆ ಮುಂದುವರೆದುಕೊಂಡು ಹೋಗಿದ್ದಿತು ಹಾಗೂ ಇಲಾಖೆಯ ಜಾರಿ ಕ್ರಮಗಳು ಅಂತಹ ನಿಯಮಬಾಹಿರ ಚಟುವಟಿಕೆಗಳನ್ನು ನಿಯಂತ್ರಿಸಲು ಸಮರ್ಪಕ ನಿರೋಧಕಗಳಾಗಿರಲಿಲ್ಲ.

(ಕಂಡಿಕೆ 3.4.12)

## 3.4.1 ಪೀಠಿಕೆ

ಭಾರತೀಯ ಸಂವಿಧಾನವು ಅದರ ಅಡಿಯಲ್ಲಿನ ಕಲಮು 246ರ ಪಟ್ಟಿ IIರ ಕ್ರಮ ಸಂಖ್ಯೆ 51ರ ಮೂಲಕ ಮನುಷ್ಯನ ಬಳಕೆಗಾಗಿನ ಆಲ್ಕಾಹಾಲಿನ ಮದ್ಯಗಳು ಮತ್ತು ಸಂವೇದನಾಹಾರಿ/ನಿದ್ರಾಜನಕಗಳ ಮೇಲೆ ಸುಂಕವನ್ನು ವಿಧಿಸುವ ಅಧಿಕಾರವನ್ನು ರಾಜ್ಯಗಳಿಗೆ ನೀಡಿದೆ. ರಾಜ್ಯ ಅಬಕಾರಿ ಆಡಳಿತದ ವ್ಯಾಪ್ತಿಯು ಮದ್ಯಸಾರ, ಭಾರತದಲ್ಲಿ ತಯಾರಾದಂತಹ ಮದ್ಯಪಾನಗಳು, ಬಿಯರ್, ವೈದ್ಯಕೀಯ ಮತ್ತು ಪ್ರಸಾಧನ ತಯಾರಿಕೆಗಳು, ಇತ್ಯಾದಿ ಸರಕುಸಾಮಗ್ರಿಗಳನ್ನು ವ್ಯಾಪಿಸುತ್ತದೆ. ಇಲಾಖೆಯ ವ್ಯಾಪ್ತಿಯನ್ನು ಕಚ್ಚಾ ಸಾಮಗ್ರಿಗಳ ನಿಯಂತ್ರಿತ ಖರೀದಿ, ಈ ಕಚ್ಚಾ ಸಾಮಗ್ರಿಗಳನ್ನು ಬಳಸಿಕೊಂಡು ವಿವಿಧ ಸಾಮಗ್ರಿಗಳನ್ನು ತಯಾರಿಸುವುದು, ಅವುಗಳ ಸಂಗ್ರಹಣೆ ಹಾಗೂ ವಿತರಣೆಯ ಮೂಲಕ ಸಾರ್ವಜನಿಕರ ಆರೋಗ್ಯವನ್ನು ಖಚಿತಪಡಿಸಿಕೊಳ್ಳುವುದು ಎಂಬುದಾಗಿ ಸಂಕ್ಷಿಪ್ತವಾಗಿ ತಿಳಿಸಬಹುದು. ಕರ್ನಾಟಕ ರಾಜ್ಯದಲ್ಲಿ ರಾಜ್ಯ ಅಬಕಾರಿಯು ವಾಣಿಜ್ಯ ತೆರಿಗೆಗಳ ಇಲಾಖೆಯ ನಂತರ ಒಂದು ಪ್ರಮುಖ ವರಮಾನದ ಮೂಲವಾಗಿರುತ್ತದೆ ಹಾಗೂ ಕರ್ನಾಟಕ ರಾಜ್ಯ ಅಬಕಾರಿ ಅಧಿನಿಯಮ ಮತ್ತು ನಿಯಮಗಳ ಅನುವುಗಳಿಂದ ನಿಯಂತ್ರಿಸಲ್ಪಡುತ್ತದೆ.

### 3.4.1.1 ಇಲಾಖೆಯ ದೂರದೃಷ್ಟಿ ಹಾಗೂ ಗುರಿ

ಕರ್ನಾಟಕ ರಾಜ್ಯದಲ್ಲಿ ಆಲ್ಕಹಾಲಿನ ಉತ್ಪನ್ನಗಳು ಮತ್ತಿತರೆ ಸಂವೇದನಾಹಾರಿ/ನಿದ್ರಾಜನಕ ಉತ್ಪನ್ನಗಳ ತಯಾರಿಕೆ, ಹೊಂದಿರುವಿಕೆ, ಸಾಗಾಣಿಕೆ, ವಿತರಣೆ ಮತ್ತು ಮಾರಾಟದ ನಿಯಂತ್ರಣಕ್ಕಾಗಿ ಇಲಾಖೆಯು ಈ ಕೆಳಗಿನ ದೂರದೃಷ್ಟಿ ಹಾಗೂ ಗುರಿಯನ್ನು ಹೊಂದಿರುತ್ತದೆ.

**ದೂರದೃಷ್ಟಿ:** ಕ್ಷೇಮಕರವಲ್ಲದ/ಆರೋಗ್ಯಕರವಲ್ಲದ ಮದ್ಯಪಾನದ ಬಳಕೆಯನ್ನು ತಡೆಯುವ ವೇಳೆಯಲ್ಲಿಯೇ ರಾಜಸ್ವ/ವರಮಾನ ಗಳಿಕೆಯನ್ನು ಅತ್ಯುತ್ತಮಗೊಳಿಸುವುದು ಹಾಗೂ ಆರೋಗ್ಯಕರ ಪರಿಸ್ಥಿತಿಗಳಲ್ಲಿ ಅನೌಪಚಾರಿಕ ಬಳಕೆಯನ್ನು ಖಚಿತಪಡಿಸಿಕೊಳ್ಳುವುದು.

**ಗುರಿ:** ಮದ್ಯಸಾರ, ಮದ್ಯಸಾರೀಯ ತಯಾರಿಕೆಗಳು, ಕುಡಿಯಲು ಯೋಗ್ಯವಾದ ಆರೋಗ್ಯಕರ ಮದ್ಯಪಾನ ಮತ್ತಿತರೆ ಮಾದಕ ಪಾನೀಯಗಳ ತಯಾರಿಕೆ, ಸಾಗಾಣಿಕೆ, ಹೊಂದಿರುವಿಕೆ, ಮಾರಾಟ ಹಾಗೂ ವ್ಯಾಪಾರವ್ಯವಹಾರಗಳಲ್ಲಿನ ಮತ್ತಿತರೆ ಚಟುವಟಿಕೆಗಳನ್ನು ನಿಯಂತ್ರಿಸುವ ಮೂಲಕ ರಾಜ್ಯ ಅಬಕಾರಿ ಕಾರ್ಯನೀತಿಗಳು ಮತ್ತು ಕಾರ್ಯವಿಧಾನಗಳನ್ನು ಕಾರ್ಯಗತಗೊಳಿಸುವುದು.

ಅಬಕಾರಿ ಸುಂಕ, ಹೆಚ್ಚುವರಿ ಅಬಕಾರಿ ಸುಂಕ, ವಿವಿಧ ಪರವಾನಿಗೆಗಳನ್ನು ನೀಡುವುದಕ್ಕಾಗಿನ ಶುಲ್ಕಗಳು, ಬಡ್ಡಿ, ದಂಡಗಳು, ಇತ್ಯಾದಿಗಳನ್ನು ವಿಧಿಸುವಿಕೆಯನ್ನು ಒಳಗೊಂಡಂತೆ ಕಾರ್ಯನೀತಿಗಳು ಮತ್ತು ಕಾರ್ಯವಿಧಾನಗಳನ್ನು ಕರ್ನಾಟಕ ಅಬಕಾರಿ ಅಧಿನಿಯಮ, 1965 ಹಾಗೂ ಅದರ ಅಡಿಯಲ್ಲಿ ರೂಪಿಸಲಾಗಿರುವ ನಿಯಮಗಳು ನಿಯಂತ್ರಿಸುತ್ತವೆ.

### 3.4.1.2 ಕರ್ನಾಟಕ ಅಬಕಾರಿ ಅಧಿನಿಯಮದ ಒಂದು ವಿಸ್ತೃತ ಚೌಕಟ್ಟು

ಕರ್ನಾಟಕ ಅಬಕಾರಿ ಅಧಿನಿಯಮ ಹಾಗೂ ಅದರ ಅಡಿಯಲ್ಲಿ ರೂಪಿಸಲಾಗಿರುವ ನಿಯಮಗಳು ಡಿಸ್ಟಿಲರಿಗಳು, ಬ್ರೀವರಿಗಳು ಹಾಗೂ ವೈನರಿಗಳಲ್ಲಿ ಆಲ್ಕಹಾಲಿನ ಉತ್ಪನ್ನಗಳ ತಯಾರಿಕೆ ಹಾಗೂ ಅಲ್ಲದೆಯೇ ಅವುಗಳನ್ನು ಹೊಂದಿರುವಿಕೆ, ಸಾಗಾಣಿಕೆ, ವಿತರಣೆ ಹಾಗೂ ಆಲ್ಕಹಾಲ್ ಮತ್ತು ಅದರ ಉತ್ಪನ್ನಗಳ ಮಾರಾಟ ಮುಂತಾದ ವಿವಿಧ ಕಾರ್ಯಚಟುವಟಿಕೆಗಳಿಗೆ ಪರವಾನಿಗೆಗಳನ್ನು ನೀಡುವುದಕ್ಕಾಗಿ ಸರ್ಕಾರ/ಇಲಾಖೆಗೆ ಅಧಿಕಾರವನ್ನು ನೀಡಿರುತ್ತವೆ.

ಡಿಸ್ಟಿಲರಿಗಳು, ಬ್ರ್ಯೂವರಿಗಳು ಮತ್ತು ವೈನರಿಗಳಲ್ಲಿ ತೊಡಗಿಸಲಾಗಿರುವ ತನ್ನ ಅಧಿಕಾರಿಗಳು ಮತ್ತು ಸಿಬ್ಬಂದಿಯ ಮೂಲಕ ತಯಾರಿಕಾ ಕಾರ್ಯಚಟುವಟಿಕೆಗಳನ್ನು ಸಂಪೂರ್ಣ ಮೇಲ್ವಿಚಾರಣೆ ಮಾಡುವುದಕ್ಕಾಗಿಯೂ ಕೂಡ ಅಧಿನಿಯಮ ಹಾಗೂ ನಿಯಮಗಳು ಅನುವು ಮಾಡಿರುತ್ತವೆ. ವಿವಿಧ ಹಂತಗಳಲ್ಲಿನ ಒಳಹರಿವು ಮತ್ತು ಹೊರಹರಿವಿನ ನಡುವಿನ ಅನುಪಾತಗಳು, ಬಾಷ್ಪೀಕರಣ/ಆವಿಯಾಗುವಿಕೆಯಿಂದ ಸಂಭವಿಸಿದ ನಷ್ಟ, ಪರಿಪಕ್ವಗೊಳ್ಳುವಿಕೆ, ಸಂಗ್ರಹಣೆ, ಸಮ್ಮಿಶ್ರಣ, ಸಾಗಾಣಿಕೆ, ಇತ್ಯಾದಿ ಉತ್ಪಾದನಾ ಪ್ರಮಾಣಕಗಳು ನಿರ್ದಿಷ್ಟಪಡಿಸಲ್ಪಟ್ಟಿವೆ. ಸಾಗಾಣಿಕೆ, ವಿತರಣೆ ಮತ್ತು ಮಾರಾಟದ ಮೇಲಿನ ನಿಯಂತ್ರಣವನ್ನು ಪರವಾನಿಗೆಗಳು ಮತ್ತು ಅಬಕಾರಿ ಪರಿಶೀಲನಾ ಪ್ರಮಾಣಪತ್ರಗಳ ಮೂಲಕ ಚಲಾಯಿಸಲಾಗುವುದು.

ಮಾರ್ಚ್ 2017ರಲ್ಲಿದ್ದಂತೆ, 25 ಪ್ರಾಥಮಿಕ[1] ಡಿಸ್ಟಿಲರಿಗಳು, 26 ಮಾಧ್ಯಮಿಕ[2] ಡಿಸ್ಟಿಲರಿಗಳು ಹಾಗೂ ಏಳು ಸಂಯೋಜಿತ[3] ಡಿಸ್ಟಿಲರಿಗಳು ಇದ್ದವು. ಇವುಗಳಲ್ಲದೆಯೇ, ಕರ್ನಾಟಕ ರಾಜ್ಯದಲ್ಲಿ ಆರು ಬ್ರ್ಯೂವರಿಗಳು ಮತ್ತು 22 ವೈನರಿಗಳು (ಹಣ್ಣು ಹಾಗೂ ಪುಷ್ಟಿಗೊಳಿಸಲ್ಪಟ್ಟ ವೈನರಿಗಳು ಸೇರಿದಂತೆ) ಇದ್ದವು.

ಮುಂದುವರೆದು, ಕರ್ನಾಟಕ ಸರ್ಕಾರವು ರಾಜ್ಯದಲ್ಲಿನ ಮದ್ಯ ಮಾರಾಟವನ್ನು ಸುಗಮಗೊಳಿಸುವ ಉದ್ದೇಶದಿಂದ 2003ರಲ್ಲಿ ಮೆ. ಕರ್ನಾಟಕ ರಾಜ್ಯ ಪಾನೀಯಗಳ ನಿಗಮ ನಿಯಮಿತವನ್ನು (ಕೆಎಸ್‌ಬಿಸಿಎಲ್) ಸ್ಥಾಪಿಸಿತು. ಡಿಸ್ಟಿಲರಿಗಳು, ಬ್ರ್ಯೂವರಿಗಳು ಮತ್ತು ವೈನರಿಗಳು ತಮ್ಮ ಉತ್ಪನ್ನಗಳನ್ನು ಮೆ. ಕರ್ನಾಟಕ ರಾಜ್ಯ ಪಾನೀಯಗಳ ನಿಗಮ ನಿಯಮಿತದ (ಕೆಎಸ್‌ಬಿಸಿಎಲ್) ಮೂಲಕ ಮಾರಾಟ ಮಾಡುವ ಅಗತ್ಯತೆಯಿರುತ್ತದೆ. ನಾಗರಿಕರಿಗೆ ಅತ್ಯುತ್ತಮ ಗುಣಮಟ್ಟದ ಮದ್ಯಪಾನವನ್ನು ಒದಗಿಸುವುದನ್ನು ಮೇಲ್ವಿಚಾರಣೆ ಮಾಡುವ ಸಲುವಾಗಿ, ಸರ್ಕಾರವು ಬಾಟಲಿಗಳ ಮೇಲೆ ಅಬಕಾರಿ ಅಂಟುಚೀಟಿಯನ್ನು ಅಂಟಿಸುವುದನ್ನು ನಿರ್ದಿಷ್ಟಪಡಿಸಿತು ಹಾಗೂ ಮೆ. ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ (ಎಂ.ಸಿ.ಎ.ಎಲ್), ಇವರಿಗೆ ಅಬಕಾರಿ ಅಂಟುಚೀಟಿಯನ್ನು ಮುದ್ರಿಸುವ ಕಾಮಗಾರಿಯನ್ನು ವಹಿಸಲಾಗಿದ್ದಿತು.

ಕುಡಿಯಲು ಯೋಗ್ಯವಾದಂತಹ ಎಲ್ಲಾ ರೀತಿಯ ಮದ್ಯಗಳ ಮೇಲೆ ಪಾವತಿಸಬೇಕಾದ ಅಬಕಾರಿ ಸುಂಕ ಮತ್ತು ಹೆಚ್ಚುವರಿ ಅಬಕಾರಿ ಸುಂಕವನ್ನು ತಯಾರಕರು ಮೆ.ಕರ್ನಾಟಕ ರಾಜ್ಯ ಪಾನೀಯಗಳ ನಿಗಮ ನಿಯಮಿತಕ್ಕೆ (ಕೆಎಸ್‌ಬಿಸಿಎಲ್) ಸಾಗಾಣಿಕೆ ಮಾಡುವ ಮೊದಲು ಪಾವತಿಸತಕ್ಕದ್ದು.

ಅಲ್ಲದೆಯೇ ಅಧಿನಿಯಮಗಳು ಹಾಗೂ ಅವುಗಳ ಅಡಿಯಲ್ಲಿ ರೂಪಿಸಲಾಗಿರುವ ನಿಯಮಗಳ ಉಲ್ಲಂಘನೆಗಾಗಿ ಕಟ್ಟುನಿಟ್ಟಿನ ದಂಡನೀಯ ಅನುವುಗಳನ್ನು ನಿರ್ದಿಷ್ಟಪಡಿಸಲಾಗಿದೆ.

1 ಪ್ರಾಥಮಿಕ ಡಿಸ್ಟಿಲರಿಗಳೆಂದರೆ ಕಾಕಂಬಿ, ಯಾವುದೇ ದಾನ್ಯಗಳು, ಮರಗೆಣಸು, ಗೆಣಸು, ಬೀಟ್‌ರೂಟ್, ಏಕದಳ ಧಾನ್ಯಗಳು, ಕಬ್ಬಿನ ಹಾಲು, ಗೋಡಂಬಿ, ಅನಾನಸ್ಸು, ಸೇಬು, ದ್ರಾಕ್ಷಿ, ಇತ್ಯಾದಿಗಳಿಂದ ಮದ್ಯಸಾರವನ್ನು ಬಟ್ಟಿ ಇಳಿಸುವ ಡಿಸ್ಟಿಲರಿಗಳು

2 ಮಾಧ್ಯಮಿಕ ಡಿಸ್ಟಿಲರಿಗಳೆಂದರೆ ಕಾಕಂಬಿ, ಯಾವುದೇ ದಾನ್ಯಗಳು, ಮರಗೆಣಸು, ಗೆಣಸು, ಬೀಟ್‌ರೂಟ್, ಏಕದಳ ಧಾನ್ಯಗಳು, ಕಬ್ಬಿನ ಹಾಲು, ಗೋಡಂಬಿ, ಅನಾನಸ್ಸು, ಸೇಬು, ದ್ರಾಕ್ಷಿ, ಇತ್ಯಾದಿಗಳಿಂದ ಭಟ್ಟಿ ಇಳಿಸಿದ ಮದ್ಯಸಾರವನ್ನು ಭಾರತೀಯ ಮದ್ಯದ ತಯಾರಿಕೆಗೆ ಬಳಸುವ ಡಿಸ್ಟಿಲರಿಗಳು.

3 ಸಂಯೋಜಿತ ಡಿಸ್ಟಿಲರಿಗಳೆಂದರೆ ಭಟ್ಟಿ ಇಳಿಸಿ ಮದ್ಯಸಾರವನ್ನು ಪಡೆದು ಅದೇ ಮದ್ಯಸಾರವನ್ನು ಭಾರತೀಯ ಮದ್ಯ ತಯಾರಿಕೆಗೆ ಬಳಸುವ ಡಿಸ್ಟಿಲರಿಗಳು.

## 3.4.2 ಸಾಂಸ್ಥಿಕ ರಚನೆ

ರಾಜ್ಯ ಅಬಕಾರಿ ಇಲಾಖೆಯು ಹಣಕಾಸು ಇಲಾಖೆಯ ಆಡಳಿತಾತ್ಮಕ ನಿಯಂತ್ರಣದಲ್ಲಿದೆ. ರಾಜ್ಯ ಅಬಕಾರಿ ಇಲಾಖೆಯು ಅಬಕಾರಿ ಆಯುಕ್ತರವರ ನೇತೃತ್ವದಲ್ಲಿದೆ. ರಾಜ್ಯ ಅಬಕಾರಿ ಇಲಾಖೆಯ ಸಾಂಸ್ಥಿಕ ರಚನೆಯನ್ನು ಈ ಕೆಳಗೆ ನೀಡಲಾಗಿದೆ:




## 3.4.3 ಲೆಕ್ಕಪರಿಶೋಧನೆಯ ಉದ್ದೇಶಗಳು

ಈ ಕೆಳಗಿನವುಗಳನ್ನು ಖಚಿತಪಡಿಸಿಕೊಳ್ಳುವುದು ಕಾರ್ಯನಿರ್ವಹಣೆಯ ಉದ್ದೇಶಗಳಾಗಿದ್ದವು:

- ಕುಡಿಯಲು ಯೋಗ್ಯವಾದಂತಹ ಮದ್ಯದ ತಯಾರಿಕೆ ಹಾಗೂ ಅಬಕಾರಿ ಸುಂಕಗಳು ಮತ್ತು ಶುಲ್ಕಗಳ ಮೇಲಿನ ನಿಯಂತ್ರಣಗಳನ್ನು ಅತ್ಯುತ್ತಮವಾಗಿ ಚಲಾಯಿಸಲಾಗಿದ್ದಿತೆ?
- ಕರ್ನಾಟಕ ಅಬಕಾರಿ ಅಧಿನಿಯಮ, ಅಥವಾ ಅದರ ಅಡಿಯಲ್ಲಿ ರೂಪಿಸಲಾಗಿರುವ ನಿಯಮಗಳ ಅಡಿಯಲ್ಲಿ ಅಪರಾಧ ಪ್ರಕರಣಗಳನ್ನು ತಡೆಯುವ ಸಲುವಾಗಿ ಹಾಗೂ ಪತ್ತೆಹಚ್ಚುವ ಸಲುವಾಗಿ ಮೇಲ್ವಿಚಾರಣೆ ಮತ್ತು ನಿಯಂತ್ರಣ ವ್ಯವಸ್ಥೆಗಳು ಪರಿಣಾಮಕಾರಿತ್ವದಿಂದ ಕೂಡಿದ್ದವೆ?

## 3.4.4 ಲೆಕ್ಕಪರಿಶೋಧನೆಯ ವ್ಯಾಪ್ತಿ

ಲೆಕ್ಕಪರಿಶೋಧನೆಯು ಏಪ್ರಿಲ್ 2012ರಿಂದ ಮಾರ್ಚ್ 2017ರ ಅವಧಿಯನ್ನು ವ್ಯಾಪಿಸಿತು. ಮೆ. ಕರ್ನಾಟಕ ರಾಜ್ಯ ಪಾನೀಯಗಳ ನಿಗಮ ನಿಯಮಿತ (ಕೆಎಸ್‌ಬಿಸಿಎಲ್) ಮೆ. ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ (ಎಂ.ಸಿ.ಎ.ಎಲ್), ಇವುಗಳ ದತ್ತಸಂಚಯಗಳನ್ನು[4] ಪಡೆದುಕೊಳ್ಳಲಾಯಿತು ಹಾಗೂ

[4] ಡಿಸ್ಟಿಲರಿಗಳಿಂದ ಸ್ವೀಕರಿಸಲಾದ ಮದ್ಯ ರವಾನೆಗಳು ಹಾಗೂ ಚಿಲ್ಲರೆ ಪರವಾನಿಗೆದಾರರುಗಳಿಗೆ ಅವುಗಳ ಹಂಚಿಕೆ/ವಿತರಣೆಗೆ ಸಂಬಂಧಿತ ರಾಜ್ಯ ಪಾನೀಯಗಳ ನಿಗಮ ನಿಯಮಿತದ ದತ್ತಸಂಚಯಗಳನ್ನು ಹಾಗೂ ಅಧಿಕೃತ ಹಾಗೂ ಸುಂಕ ಪಾವತಿ ಮಾಡಿರುವ ಮದ್ಯವನ್ನು ಮಾತ್ರ ಮಾರುಕಟ್ಟೆಗೆ ಬಿಡುಗಡೆ ಮಾಡಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಅದೇ ಅವಧಿಯಲ್ಲಿ ಅಬಕಾರಿ ಅಂಟುಚೀಟಿಗಳನ್ನು ನೀಡಲು ಅಧಿಕೃತ ಅನುಮತಿಯನ್ನು ಪಡೆದಿದ್ದ ಮೆ. ಮೆ. ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ನ ದತ್ತಸಂಚಯಗಳನ್ನು ವಿಶ್ಲೇಷಣೆ ಮಾಡಲಾಯಿತು.

ಅವುಗಳನ್ನು ವಿಶ್ಲೇಷಣೆ ಮಾಡಲಾಯಿತು. ಅಬಕಾರಿ ಆಯುಕ್ತರವರ ಕಚೇರಿ ಹಾಗೂ ಒಂಬತ್ತು[5] ಜಿಲ್ಲೆಗಳಲ್ಲಿನ (ರಾಜ್ಯದಲ್ಲಿನ 33 ಕಚೇರಿಗಳ ಪೈಕಿ 11) ಅಬಕಾರಿ ಇಲಾಖೆಯ ಉಪ–ಆಯುಕ್ತರುಗಳ ಮೂರನೇ ಒಂದು ಭಾಗದ ಕಚೇರಿಗಳಲ್ಲಿ ನಿರ್ವಹಿಸಿದ್ದ ದಾಖಲೆಗಳನ್ನು ಪರೀಕ್ಷಾ–ಪರಿಶೀಲನೆ ಮಾಡಲಾಯಿತು. ಅದೇ ಅವಧಿಗೆ ಸಂಬಂಧಿಸಿದ ಮಾಹಿತಿಯನ್ನು ಎಲ್ಲಾ ಪ್ರಾಥಮಿಕ ಡಿಸ್ಟಿಲರಿಗಳಿಂದ ಪಡೆದುಕೊಳ್ಳಲಾಯಿತು ಹಾಗೂ ವಿಶ್ಲೇಷಿಸಲಾಯಿತು. ಮೂರನೇ ಒಂದು ಭಾಗದಷ್ಟು ಮಾಧ್ಯಮಿಕ ಡಿಸ್ಟಿಲರಿಗಳಲ್ಲಿ (ರಾಜ್ಯದಲ್ಲಿನ 31 ಡಿಸ್ಟಿಲರಿಗಳ ಪೈಕಿ 10) ನಿರ್ವಹಿಸಲಾಗಿದ್ದ ದಾಖಲೆಗಳನ್ನೂ ಸಹ ಪರೀಕ್ಷಾ–ಪರಿಶೀಲನೆ ಮಾಡಲಾಯಿತು. ಹೊರಹರಿವು/ಉತ್ಪಾದನೆಯ ಮೇಲಿನ ಲೆಕ್ಕಪರಿಶೋಧನಾ ವಿಶ್ಲೇಷಣೆಯು ಕಾಕಂಬಿಯನ್ನು ಶುದ್ಧೀಕರಿಸಲ್ಪಟ್ಟ ಮದ್ಯಸಾರಕ್ಕೆ ಪರಿವರ್ತಿಸಿದ್ದರ ಮೇಲಷ್ಟೇ ಆಧಾರಿತವಾಗಿದ್ದಿತು. ಅಲ್ಲದೆಯೇ, ಕಾಕಂಬಿಯ ಪರಿವರ್ತನೆಯ ಪ್ರಮಿತಿ/ಪರಿಮಾಣಗಳನ್ನು ಖಚಿತಪಡಿಸಿಕೊಳ್ಳಬಹುದಾದಲ್ಲಿ ಕಾಳುಗಳು, ದ್ರಾಕ್ಷಿ, ಸಿಹಿಗೆಣಸು, ಇತ್ಯಾದಿ ಕಚ್ಚಾಸಾಮಗ್ರಿಗಳ ಪರಿವರ್ತನೆಯ ಪ್ರಮಿತಿ/ಪರಿಮಾಣಗಳನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.

## 3.4.5 ಲೆಕ್ಕಪರಿಶೋಧನೆಯ ವಿಧಾನ

ಕಾಕಂಬಿಯ ಸರಬರಾಜಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿನ 60 ಸಕ್ಕರೆ ಕಾರ್ಖಾನೆಗಳ ಪೈಕಿ 30ರಿಂದ ಮಾಹಿತಿಯನ್ನು ಪಡೆದುಕೊಳ್ಳಲಾಯಿತು ಹಾಗೂ ಪ್ರಾಥಮಿಕ ಡಿಸ್ಟಿಲರಿಗಳ ಅದಕ್ಕೆ ಅನುಗುಣವಾದ ಮಾಹಿತಿಯ ಜೊತೆ ಅಡ್ಡ–ಪರಿಶೀಲನೆ ಮಾಡಲಾಯಿತು. ಅಲ್ಲದೆಯೇ, ಮದ್ಯಸಾರದ ಉತ್ಪಾದನೆಗಾಗಿ ನೀಡಲಾದ ಕಚ್ಚಾಸಾಮಗ್ರಿಗಳು, ವಿವಿಧ ಬಗೆಯ ಹಾಗೂ ಸಾಮರ್ಥ್ಯಗಳ ಮದ್ಯಸಾರದ ವಾಸ್ತವಿಕ ಉತ್ಪಾದನೆ, ಅಧಿನಿಯಮದ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಪ್ರಮಾಣಕಗಳಿಗೆ ಬದ್ಧವಾಗಿರುವುದು, ಈ ಅಂಶಗಳ ಬಗ್ಗೆ ಈ ಮಾಹಿತಿಯನ್ನು ಪರೀಕ್ಷಿಸಲಾಯಿತು. ಪ್ರಾಥಮಿಕ ಡಿಸ್ಟಿಲರಿಗಳಿಂದ ಕುಡಿಯಲು ಯೋಗ್ಯವಾದ ಮದ್ಯವನ್ನು ತಯಾರಿಸುವಂತಹ ಮಾಧ್ಯಮಿಕ ಡಿಸ್ಟಿಲರಿಗಳಿಗೆ ಮಾಡಲಾದ ಮದ್ಯಸಾರದ ಸರಬರಾಜನ್ನು ಆಯ್ದ ಜಿಲ್ಲೆಗಳಲ್ಲಿ ಅಡ್ಡ–ಪರಿಶೀಲನೆ ಮಾಡಲಾಯಿತು.

ಡಿಸ್ಟಿಲರಿಗಳಲ್ಲಿ ನಿರ್ವಹಿಸಲಾಗಿದ್ದ ದಾಖಲೆಗಳನ್ನು ಮೆ. ಕರ್ನಾಟಕ ರಾಜ್ಯ ಪಾನೀಯಗಳ ನಿಗಮ ನಿಯಮಿತದ (ಕೆಎಸ್‌ಬಿಸಿಎಲ್) ದಾಖಲೆಗಳ ಜೊತೆಯಲ್ಲಿ ಹಾಗೂ ಮದ್ಯ ಬಾಟಲಿಗಳನ್ನು/ಪ್ಯಾಕುಗಳನ್ನು ಒಂದು ಊರ್ಜಿತ ಅಬಕಾರಿ ಅಂಟುಚೀಟಿಯೊಂದಿಗೆ (Excise Adhesive Labels) ಮಾತ್ರ ಮಾರುಕಟ್ಟೆಗೆ ಬಿಡಲಾಗಿದ್ದಿತು ಎಂಬುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಅಬಕಾರಿ ಅಂಟುಚೀಟಿಗೆ ಸಂಬಂಧಿಸಿದಂತೆ ಮೆ. ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ನ (ಎಂಸಿಎಎಲ್) ದಾಖಲೆಗಳನ್ನು ಡಿಸ್ಟಿಲರಿಗಳ ದಾಖಲೆಗಳ ಜೊತೆ ಅಡ್ಡ–ಪರಿಶೀಲನೆ ಮಾಡಲಾಯಿತು. ಲೆಕ್ಕಪರಿಶೋಧನೆಯ ವೇಳೆಯಲ್ಲಿ ಗಮನಿಸಲಾದಂತಹ ಪ್ರಮುಖ ನಿಯಂತ್ರಣ ಲೋಪದೋಷಗಳು ಮತ್ತಿತರೆ ಅಂಶಗಳನ್ನು ಮುಂದಿನ ಕಂಡಿಕೆಗಳಲ್ಲಿ ಹೊರತರಲಾಗಿದೆ.

## 3.4.6 ಕೃತಜ್ಞತೆಗಳು

ಒಂದು ಪ್ರವೇಶ ಮಟ್ಟದ ಸಭೆಯನ್ನು ಕರ್ನಾಟಕ ಸರ್ಕಾರದ ಹಣಕಾಸು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು, ಹಾಗೂ ಅಬಕಾರಿ ಇಲಾಖೆಯ ಆಯುಕ್ತರವರ ಜೊತೆಯಲ್ಲಿ ನಡೆಸಲಾಯಿತು (ಏಪ್ರಿಲ್ 2017), ಆ ಸಭೆಯಲ್ಲಿ ಲೆಕ್ಕಪರಿಶೋಧನೆಯ ಉದ್ದೇಶಗಳು, ವ್ಯಾಪ್ತಿ ಹಾಗೂ ವಿಧಾನಗಳನ್ನು ಇಲಾಖೆಗೆ ವಿವರಿಸಲಾಯಿತು. ಮೆ. ಕರ್ನಾಟಕ ರಾಜ್ಯ ಪಾನೀಯಗಳ ನಿಗಮ ನಿಯಮಿತದ ಸ್ಥಾಪನೆ ಹಾಗೂ ಅಬಕಾರಿ ಅಂಟುಚೀಟಿಯನ್ನು ಪ್ರಾರಂಭಿಸಿದ್ದು, ಉತ್ಪಾದನಾ ಪ್ರಮಾಣಕಗಳನ್ನು ಪರಿಶೀಲಿಸುವುದು, ರಾಜ್ಯದಲ್ಲಿ ಕಳ್ಳಬಟ್ಟಿ/ಕಾನೂನುಬಾಹಿರ ಮದ್ಯ ಮಾರಾಟದ ತಡೆ ಹಾಗೂ ಸುರಕ್ಷಿತ ಕುಡಿಯಲು ಯೋಗ್ಯವಾದಂತಹ ಮದ್ಯ ಮಾರಾಟವನ್ನು ಖಚಿತಪಡಿಸಿಕೊಳ್ಳುವ ಉದ್ದೇಶದಿಂದ ಕೇಂದ್ರ ಆಹಾರ ತಂತ್ರಜ್ಞಾನ ಸಂಸ್ಥೆ, ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ), ಇತ್ಯಾದಿ ಸಂಸ್ಥೆಗಳ ತಜ್ಞರುಗಳನ್ನು ಒಳಗೊಂಡಂತಹ ತಾಂತ್ರಿಕ ಸಮಿತಿಯನ್ನು ರಚಿಸಿದ್ದು, ಇತ್ಯಾದಿಗಳ ಬಗ್ಗೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ಪ್ರವೇಶ ಮಟ್ಟದ ಸಭೆಯಲ್ಲಿ ವಿವರಿಸಿದರು. ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳು ಹಾಗೂ ಶಿಫಾರಸ್ಸುಗಳನ್ನು ಅಕ್ಟೋಬರ್ 2017ರಲ್ಲಿ ನಡೆದ ನಿರ್ಗಮನ ಮಟ್ಟದ ಸಭೆಯಲ್ಲಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ಮತ್ತು ಅಬಕಾರಿ ಆಯುಕ್ತರವರ ಜೊತೆಯಲ್ಲಿ ಚರ್ಚಿಸಲಾಯಿತು.

ಈ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ನಡೆಸುವ ಸಲುವಾಗಿ ಅಗತ್ಯ ದಾಖಲೆಗಳನ್ನು ಮತ್ತು ಮಾಹಿತಿಯನ್ನು ಒದಗಿಸುವಲ್ಲಿ ಸಹಕಾರವನ್ನು ನೀಡಿದ ರಾಜ್ಯ ಅಬಕಾರಿ ಇಲಾಖೆಗೆ ಲೆಕ್ಕಪರಿಶೋಧನೆಯು ಈ ಮೂಲಕ ಕೃತಜ್ಞತೆಯನ್ನು ಸಲ್ಲಿಸುತ್ತಿದೆ.

---

5 ಬೆಂಗಳೂರು, ದಕ್ಷಿಣ ಕನ್ನಡ, ಧಾರವಾಡ, ಗದಗ, ಕಲಬುರಗಿ, ಕೋಲಾರ, ಮಂಡ್ಯ, ಮೈಸೂರು ಮತ್ತು ಯಾದಗಿರಿ.

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ರಸಾಯನಿಕ ತಾಂತ್ರಿಕ ಇಲಾಖೆಯ ಸಲಹೆಯನ್ನು ಪಡೆದುಕೊಳ್ಳಲು ವ್ಯವಸ್ಥೆಯನ್ನು ಮಾಡಿದ ವೈಜ್ಞಾನಿಕ ಮತ್ತು ಕೈಗಾರಿಕಾ ಸಲಹೆಗಾಗಿನ ಕೇಂದ್ರವು ನೀಡಿದ ಸಹಕಾರವನ್ನು ಲೆಕ್ಕಪರಿಶೋಧನೆಯು ಸ್ಮರಿಸುತ್ತಿದೆ.

## 3.4.7 ಲೆಕ್ಕಪರಿಶೋಧನೆಯ ಮಾನದಂಡಗಳು

ಈ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯಲ್ಲಿ ಬಳಸಲಾದ ಲೆಕ್ಕಪರಿಶೋಧನಾ ಮಾನದಂಡಗಳಿಗೆ ಈ ಕೆಳಗಿನವುಗಳು ಮೂಲಗಳಾಗಿರುತ್ತವೆ:

1. ಕರ್ನಾಟಕ ಅಬಕಾರಿ ಅಧಿನಿಯಮ, 1965;
2. ಕರ್ನಾಟಕ ಅಬಕಾರಿ (ಡಿಸ್ಟಿಲರಿ ಮತ್ತು ಉಗ್ರಾಣ) ನಿಯಮಗಳು, 1967;
3. ಕರ್ನಾಟಕ ಅಬಕಾರಿ (ಅಬಕಾರಿ ಸುಂಕ ಮತ್ತು ಶುಲ್ಕಗಳು) ನಿಯಮಗಳು, 1968
4. ಕರ್ನಾಟಕ ಅಬಕಾರಿ ಪರವಾನಿಗೆಗಳು (ಸಾಮಾನ್ಯ ಷರತ್ತುಗಳು) ನಿಯಮಗಳು, 1967;
5. ಕರ್ನಾಟಕ ಅಬಕಾರಿ (ಮದ್ಯಸಾರ, ಬಿಯರ್, ವೈನು ಅಥವಾ ಮದ್ಯಗಳ ಉತ್ಪಾದನೆ, ತಯಾರಿಕೆ ಮತ್ತು ವ್ಯರ್ಥಗಳ ನಿಯಂತ್ರಣ) ನಿಯಮಗಳು, 1998;
6. ಕರ್ನಾಟಕ ಅಬಕಾರಿ (ಭಾರತೀಯ ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968;
7. ಅಬಕಾರಿ (ಮಾದಕ ವಸ್ತುಗಳ/ದ್ರವ್ಯಗಳನ್ನು ಹೊಂದಿರುವಿಕೆ, ಸಾಗಾಣಿಕೆ, ಆಮದು ಮತ್ತು ರಫ್ತು) ನಿಯಮಗಳು, 1967; ಮತ್ತು
8. ಸರ್ಕಾರ ಹಾಗೂ ಅಬಕಾರಿ ಆಯುಕ್ತರವರು ನೀಡಿರುವ ಅಧಿಸೂಚನೆಗಳು ಮತ್ತು ಸುತ್ತೋಲೆಗಳು.

## ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳು

ಸಕ್ಕರೆ ತಯಾರಿಕೆ ಪ್ರಕ್ರಿಯೆಯು ವಿಸ್ತೃತವಾಗಿ ಕಬ್ಬಿನಿಂದ ಹಾಲನ್ನು ಹೊರತೆಗೆಯುವಿಕೆ, ಕಬ್ಬಿನ ಹಾಲಿನ ('Mother Syrup' ಎಂಬುದಾಗಿ ಕರೆಯಲ್ಪಡುವ) ನಿರ್ಮಲೀಕರಣ (clarification) ಹಾಗೂ ಸಾಂದ್ರೀಕರಣವನ್ನು (concentration) ಒಳಗೊಂಡಿರುತ್ತದೆ. ಸಕ್ಕರೆಯನ್ನು ಕಬ್ಬಿನ 'Mother Syrup' ಸ್ಫಟಿಕೀಕರಣ (crystallisation) ಪ್ರಕ್ರಿಯೆಗಳ ಮೂಲಕ ಹೊರತೆಗೆಯಲಾಗುತ್ತದೆ. ಸಕ್ಕರೆಯನ್ನು ಹೊರತೆಗೆದನಂತರ, ಕಬ್ಬಿನ 'Mother Syrup' ಉಳಿಕೆ ಅಂಶವನ್ನು 'ಕಾಕಂಬಿ' ಎಂಬುದಾಗಿ ಕರೆಯಲಾಗುತ್ತದೆ. ಪ್ರಾಥಮಿಕ ಡಿಸ್ಟಿಲರಿಗಳು ಈ ಕಬ್ಬಿನ ಕಾಕಂಬಿಯನ್ನು ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪಾದನೆಗೆ ಒಂದು ಕಚ್ಚಾ ಸಮಗ್ರಿಯನ್ನಾಗಿ ಬಳಸಿಕೊಳ್ಳುವವು. ಪ್ರಾಥಮಿಕ ಡಿಸ್ಟಿಲರಿಗಳಲ್ಲಿನ ತಯಾರಿಕಾ ಪ್ರಕ್ರಿಯೆಯು ಕಾಕಂಬಿಯ ಸಾರಗುಂದಿಸುವಿಕೆ/ಬಣ್ಣಗುಂದಿಸುವಿಕೆಯನ್ನು ಹಾಗೂ ಅದರ ಹುದುಗುಗಾರಿಕೆಯನ್ನು ಒಳಗೊಂಡಿರುತ್ತದೆ (ಸಾರ/ಬಣ್ಣಗುಂದಿತ ಕಾಕಂಬಿಯನ್ನು ತಿಳಿನೀರು/ದ್ರವ ಎಂಬುದಾಗಿ ಕರೆಯಲ್ಪಡುವುದು). ಹುದುಗುಗಾರಿಕೆಯು (Fermentation) ವರ್ಣರಹಿತ/ಅವಿಶೀಲ (ethyl) ಮದ್ಯ ಹಾಗೂ ಇಂಗಾಲದ ಆಮ್ಲವಾಗಿ ವಿಭಜಿತಗೊಳ್ಳುವ ಕಾಕಂಬಿಯಲ್ಲಿ ಇರಬಹುದಾದ ಸಕ್ಕರೆಯನ್ನು ಒಟ್ಟಾರೆಯಾಗಿ ಇಳಿಮುಖಗೊಳಿಸಬಹುದಾದ ವಾಸ್ತವಿಕ ಪ್ರಕ್ರಿಯೆಯಾಗಿರುತ್ತದೆ. ಹುದುಗುಗಾರಿಕೆಯ ನಂತರ, ಆಲ್ಕಹಾಲನ್ನು ಭಟ್ಟಿ ಇಳಿಸುವಿಕೆಯ ಪ್ರಕ್ರಿಯೆಯ ಮೂಲಕ ತಿಳಿನೀರು/ದ್ರವದಲ್ಲಿರಬಹುದಾದ ಉಳಿಕೆ ಅಂಶಗಳಿಂದ ಪ್ರತ್ಯೇಕಿಸಲಾಗುವುದು.

## 3.4.8 ಪ್ರಮಾಣಗಳಲ್ಲಿನ ಅಸಂಗತತೆಗಳು ಹಾಗೂ ವಿಳಂಬದಿಂದ ಕೂಡಿದ್ದ ಪ್ರಮಾಣಕಗಳ ಪರಿಷ್ಕರಣೆ

ಯಾವುದೇ ಉತ್ಪನ್ನದ ತಯಾರಿಕೆಗಾಗಿ ಕೈಗಾರಿಕೆಯು ಬಳಸಿದ ಕಚ್ಚಾ ಸಾಮಗ್ರಿಗಳ ಪ್ರಮಾಣಾನುಗುಣವಾಗಿ ನಿರ್ದಿಷ್ಟಪಡಿಸಲಾದ ಪ್ರಮಾಣಕಗಳು ತಯಾರಕರುಗಳು ತಮ್ಮ ಉತ್ಪಾದನೆಗಳನ್ನು ಕಡಿಮೆ ಪ್ರಮಾಣದಲ್ಲಿ ತೋರಿಸಬಹುದಾದ ಸಂಭಾವ್ಯತೆಯ ಪ್ರತಿಯಾಗಿ ರಾಜ್ಯದ ಹಿತಾಸಕ್ತಿಯನ್ನು ಸಂರಕ್ಷಿಸುವುದಕ್ಕಾಗಿನ ಒಂದು ನಿಯಂತ್ರಕ ಕ್ರಮವಾಗಿರುತ್ತದೆ. ಈ ನಿಯಂತ್ರಣವು ಪರಿಣಾಮಕಾರಿತ್ವದಿಂದ ಕೂಡಿರುವ ಸಲುವಾಗಿ, ಆ ರೀತಿ ನಿರ್ದಿಷ್ಟಪಡಿಸಲಾದ ಪ್ರಮಾಣಕಗಳು ಡಿಸ್ಟಿಲರಿಗಳಲ್ಲಿನ ಸ್ಥಾವರಗಳಿಗೆ ಬಳಸಿಕೊಳ್ಳಲಾದ ಕಚ್ಚಾ ಸಾಮಗ್ರಿಗಳ ಘಟಕ ಒಂದಕ್ಕೆ ರೂಪಿಸಲ್ಪಟ್ಟಿರುವ ಉತ್ಪಾದನಾ ದಕ್ಷತೆಗಳಿಗೆ ಸಮೀಪದಲ್ಲಿರತಕ್ಕದ್ದು. ಆಲ್ಕೋಹಾಲು ಸಾಮಾಜಿಕವಾಗಿ ಹಾಗೂ ಅಲ್ಲದೆಯೇ ಆರ್ಥಿಕವಾಗಿ ಒಂದು ಅತ್ಯಂತ ನಿರ್ಣಾಯಕವಾದ/ಗುರುತರವಾದ/ವಿಮರ್ಶಾತ್ಮಕ ಹಾಗೂ ಅತೀ ಸೂಕ್ಷ್ಮತೆಯಿಂದ ಕೂಡಿದ ಉತ್ಪನ್ನವಾಗಿರುವುದರಿಂದ, ರಾಜ್ಯವು ಚಲಾಯಿಸುತ್ತಿರುವ ನಿಯಂತ್ರಣಗಳು ಕಠಿಣ ಹಾಗೂ ವಾಸ್ತವಿಕವಾಗಿ ವ್ಯಾವಹಾರಿಕವಾಗಿರುವುದನ್ನು ನಿರೀಕ್ಷಿಸಲಾಗುತ್ತದೆ ಹಾಗೂ ತಾಂತ್ರಿಕತೆಯ

ಮೇಲ್ದರ್ಜೆಗೇರಿಸುವಿಕೆಗಳು ಹಾಗೂ ಒಳಗೊಂಡಿರುವ ಪ್ರಕ್ರಿಯೆಗಳ ದಕ್ಷತೆಯಲ್ಲಿನ ತತ್ಪರಿಣಾಮವಾದ ಬದಲಾವಣೆಗಳ ಜೊತೆಗೆ ಸಮಾನವಾಗಿರುವ ರೀತಿಯಲ್ಲಿ ವ್ಯವಸ್ಥಿತವಾಗಿ ಪರಿಷ್ಕರಿಸತಕ್ಕದ್ದು.

ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪತ್ತಿಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸುವಲ್ಲಿ ಇಲಾಖೆಯು ಚಲಾಯಿಸಿದ ನಿಯಂತ್ರಣಗಳನ್ನು ಲೆಕ್ಕಪರಿಶೋಧನೆಯು ಅಧ್ಯಯನ ಮಾಡಿತು.

ಸರ್ಕಾರವು ಕರ್ನಾಟಕ ಅಬಕಾರಿ (ಉತ್ಪನ್ನ, ಉತ್ಪಾದನೆ/ತಯಾರಿಕೆ ಹಾಗೂ ಮದ್ಯಸಾರಗಳು, ಬಿಯರ್, ವೈನು ಅಥವಾ ಮದ್ಯಗಳ ನಿಯಂತ್ರಣ) ನಿಯಮಗಳು, 1998ರ ಮೂಲಕ ವಿವಿಧ ಮದ್ಯಗಳ ಉತ್ಪತ್ತಿ, ಉತ್ಪಾದನೆ/ತಯಾರಿಕೆ ಹಾಗೂ ವ್ಯರ್ಥಗಳನ್ನು ನಿರ್ಧಾರಣೆ ಮಾಡುವ ಸಲುವಾಗಿ ನಿಯಮಗಳನ್ನು ರೂಪಿಸಿದೆ, ಈ ನಿಯಮಗಳು 4 ಆಗಸ್ಟ್ 1998ರಿಂದ ಜಾರಿಗೆ ಬಂದಿರುತ್ತವೆ. ಮೇಲೆ ತಿಳಿಸಲಾದ ನಿಯಮಗಳ ಅಡಿಯಲ್ಲಿ, ಕಾಕಂಬಿಯ ವರ್ಗೀಕರಣವನ್ನು ಭಾರತೀಯ ಮಾನಕ ಬ್ಯೂರೋದ (ಐಎಸ್ಐ) ನಿರ್ದಿಷ್ಟ ನಿರೂಪಣೆಗಳನ್ನು (ಐಎಸ್–1162) ಅಳವಡಿಸಿಕೊಳ್ಳಲಾಗಿದೆ. ಒಟ್ಟಾರೆ ಶೇಕಡಾ 50ರಷ್ಟು ಹಾಗೂ ಅದಕ್ಕೂ ಅಧಿಕ ಪ್ರಮಾಣದ ಸಕ್ಕರೆಯ ಪ್ರಮಾಣವನ್ನು ತಗ್ಗಿಸಬಲ್ಲ ಸಕ್ಕರೆಯನ್ನು ಹೊಂದಿರುವ ಕಾಕಂಬಿಯನ್ನು Iನೇ ದರ್ಜೆಯ ಕಾಕಂಬಿ ಎಂಬುದಾಗಿ ಐಎಸ್–1162[6] ನಿರ್ದಿಷ್ಟಪಡಿಸಿದೆ. ಒಟ್ಟಾರೆ ಶೇಕಡಾ 44ರಷ್ಟು ಹಾಗೂ ಅದಕ್ಕೂ ಅಧಿಕ ಪ್ರಮಾಣದ, ಆದರೆ ಶೇಕಡ 50ಕ್ಕಿಂತ ಕಡಿಮೆ ಸಕ್ಕರೆ ಪ್ರಮಾಣವನ್ನು ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯನ್ನು ಹೊಂದಿರುವ ಕಾಕಂಬಿಯನ್ನು IIನೇ ದರ್ಜೆಯ ಕಾಕಂಬಿ ಎಂಬುದಾಗಿಯೂ, ಒಟ್ಟಾರೆ ಶೇಕಡಾ 40ರಿಂದ ಶೇಕಡಾ 43.9ರವರೆಗೆ ಒಟ್ಟಾರೆ ತಗ್ಗಿಸಬಲ್ಲ ಸಾಮರ್ಥ್ಯವನ್ನು ಹೊಂದಿರುವ ಕಾಕಂಬಿಯನ್ನು IIIನೇ ದರ್ಜೆಯ ಕಾಕಂಬಿ ಎಂಬುದಾಗಿಯೂ ವರ್ಗೀಕರಿಸಲಾಗಿದೆ.

ಲೆಕ್ಕಪರಿಶೋಧನೆಯು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ 2004–2005 ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ[7] ಪ್ರಮಾಣಕಗಳ ಪರಿಷ್ಕರಣೆಯ ಅಗತ್ಯತೆಯನ್ನು ಸ್ಪಷ್ಟಪಡಿಸಿದ್ದಿತು. ಸರ್ಕಾರವು ಪ್ರಮಾಣಕಗಳ ಪರಿಷ್ಕರಣೆಗಾಗಿ ನಾಲ್ಕು ಸದಸ್ಯರುಗಳ ಒಂತು ತಾಂತ್ರಿಕ ಸಮಿತಿಯನ್ನು 22 ಡಿಸೆಂಬರ್ 2005ರಲ್ಲಿ ರಚಿಸಿದ್ದಿತು. ಈ ಸಮಿತಿಯು, ತನ್ನ 5 ಅಕ್ಟೋಬರ್ 2007 ದಿನಾಂಕದ ವರದಿಯಲ್ಲಿ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪನ್ನವು ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯನ್ನು ಹೊಂದಿರುವುದರ ಮೇಲೆ ಹಾಗೂ ತಯಾರಿಕಾ ಪ್ರಕ್ರಿಯೆಯ ಮಾದರಿಯ (ತಂಡ[8] ಅಥವಾ ಅವಿರತ[9]) ಮೇಲೆ ಅವಲಂಬಿತವಾಗಿರುತ್ತದೆ ಎಂಬುದನ್ನು ಗಮನಿಸಿದ್ದಿತು. ಸಮಿತಿಯು ಈ ಕೆಳಗಿನ **ಕೋಷ್ಟಕ 3.3**ರಲ್ಲಿ ತಿಳಿಸಿರುವಂತೆ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪನ್ನಕ್ಕೆ ಪ್ರಮಾಣಕಗಳನ್ನು ಪರಿಷ್ಕರಿಸುವಂತೆ ಶಿಫಾರಸ್ಸು ಮಾಡಿದ್ದಿತು:

**ಕೋಷ್ಟಕ 3.3**

**ಪ್ರಥಮ[10] ತಾಂತ್ರಿಕ ಸಮಿತಿಯು ನಿರ್ದಿಷ್ಟಪಡಿಸಿದ್ದ ಕಾಕಂಬಿಯ ಮೆಟ್ರಿಕ್ ಟನ್ನು ಒಂದರ ಉತ್ಪನ್ನ**

| ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆ (ಶೇಕಡಾವಾರು) | ತಂಡ ಪ್ರಕ್ರಿಯೆಗಾಗಿ ಬೃಹತ್ ಲೀಟರುಗಳಲ್ಲಿ ಪ್ರಸ್ತಾಪಿಸಲಾಗಿದ್ದ ತಿದ್ದುಪಡಿಗಳು | ಅವಿರತ ಪ್ರಕ್ರಿಯೆಗಾಗಿ ಬೃಹತ್ ಲೀಟರುಗಳಲ್ಲಿ ಪ್ರಸ್ತಾಪಿಸಲಾಗಿದ್ದ ತಿದ್ದುಪಡಿಗಳು |
|---|---|---|
| **ದರ್ಜೆ 'I' ಕಾಕಂಬಿ (ಈ ಮೊದಲು ಇದ್ದಂತಹ ಕನಿಷ್ಠ ಅಗತ್ಯತೆ – 220 ಬೃಹತ್‌ಲೀಟರುಗಳು)** | | |
| (i) > 52 | 255 | >270 |
| (ii) 51 – 51.9 | 250 | 265 |
| (iii) 50 – 50.9 | 245 | 260 |
| **ದರ್ಜೆ 'II' ಕಾಕಂಬಿ (ಈ ಮೊದಲು ಇದ್ದಂತಹ ಕನಿಷ್ಠ ಅಗತ್ಯತೆ – 200 ಬೃಹತ್‌ಲೀಟರುಗಳು)** | | |
| (i) 49 – 49.9 | 240 | 255 |
| (ii) 48 – 48.9 | 235 | 250 |
| (iii) 47 – 47.9 | 230 | 245 |
| (iv) 46 – 46.9 | 225 | 240 |
| **ದರ್ಜೆ 'III' ಕಾಕಂಬಿ (ಈ ಮೊದಲು ಇದ್ದಂತಹ ಕನಿಷ್ಠ ಅಗತ್ಯತೆ – 180 ಬೃಹತ್‌ಲೀಟರುಗಳು)** | | |
| (i) 45 – 45.9 | 220 | 235 |
| (ii) 44 – 44.9 | 215 | 230 |

---

6 ಐಎಸ್ 1162 – ಭಾರತೀಯ ಮಾನಕ ಬ್ಯೂರೋ ಕಬ್ಬಿನ ಕಾಕಂಬಿಗೆ ಮಾಡಿರುವ ನಿರ್ದಿಷ್ಟ ನಿರೂಪಣೆ.

7 "ಡಿಸ್ಟಿಲರಿಗಳ ಕಾರ್ಯವೈಖರಿ" ಈ ವಿಷಯದ ಮೇಲೆ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಕಂಡಿಕೆ ಸಂಖ್ಯೆ 3.2.7.

8 ತಂಡ ಸಂಸ್ಕರಣೆಯಲ್ಲಿ, ಹುದುಗುಗೊಳಿಸುವಿಕೆಯನ್ನು/ಕಿಣ್ವೀಕರಿಸುವುದನ್ನು ಕಾಕಂಬಿಯ ಪ್ರತ್ಯೇಕ ತಂಡಗಳಲ್ಲಿ ಮಾಡಲಾಗುವುದು. ಉತ್ಪತ್ತಿಯು ಮೂಡಿಬಂದನಂತರ ಸಂಸ್ಕರಣೆಯು ಸ್ಥಗಿತಗೊಳ್ಳುವುದು.

9 ತಂಡ ಸಂಸ್ಕರಣೆಯ ರೀತಿಯದಾಗಿರದೆಯೇ, ಅವಿರತ ಸಂಸ್ಕರಣೆಯಲ್ಲಿ, ಹುದುಗುಗೊಳಿಸುವಿಕೆ/ಕಿಣ್ವೀಕರಿಸುವಿಕೆ ಸಂಸ್ಕರಣೆಯನ್ನು ನಡುವೆ ಎಂದಿಗೂ ಸ್ಥಗಿತಗೊಳಿಸುವುದಿಲ್ಲ ಹಾಗೂ ಅದು ದೀರ್ಘಾವಧಿಯವರೆಗೆ ನಡೆದುಕೊಂಡು ಹೋಗುತ್ತದೆ. ಸಂಸ್ಕರಣೆಯನ್ನು ಉತ್ಪತ್ತಿಯ ಸಂಗ್ರಹಣೆಗಾಗಿ ನಿಲ್ಲಿಸಲಾಗುವುದಿಲ್ಲ, ಆದರೆ ಅದನ್ನು ಅವಿರತವಾಗಿ ಹೊರತೆಗೆಯಲಾಗುವುದು.

10 ಸರ್ಕಾರವು 22 ಡಿಸೆಂಬರ್ 2005ರಂದು ರಚಿಸಿದ ಸಮಿತಿಯನ್ನು ಈ ವರದಿಯ ಉದ್ದೇಶಕ್ಕಾಗಿ ಮೊದಲ ತಾಂತ್ರಿಕ ಸಮಿತಿ ಎಂಬುದಾಗಿ ಉಲ್ಲೇಖಿಸಲಾಗಿದೆ. ಸರ್ಕಾರವು ತದನಂತರದ ಹಂತದಲ್ಲಿ ಮತ್ತೊಂದು ಸಮಿತಿಯನ್ನು ರಚಿಸಿತು.

| ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆ (ಶೇಕಡಾವಾರು) | ತಂಡ ಪ್ರಕ್ರಿಯೆಗಾಗಿ ಬೃಹತ್ ಲೀಟರುಗಳಲ್ಲಿ ಪ್ರಸ್ತಾಪಿಸಲಾಗಿದ್ದ ತಿದ್ದುಪಡಿಗಳು | ಅವಿರತ ಪ್ರಕ್ರಿಯೆಗಾಗಿ ಬೃಹತ್ ಲೀಟರುಗಳಲ್ಲಿ ಪ್ರಸ್ತಾಪಿಸಲಾಗಿದ್ದ ತಿದ್ದುಪಡಿಗಳು |
|---|---|---|
| (iii) 43 – 43.9 | 210 | 225 |
| (iv) 42 – 42.9 | 205 | 220 |
| (v) 41 – 41.9 | 200 | 215 |
| (vi) 40 – 40.9 | 195 | 210 |

ಪ್ರತಿಯೊಂದು ದರ್ಜೆಗಳಲ್ಲಿನ ಅಂತರವು ಬಹಳ ವಿಸ್ತೃತವಾಗಿರುವುದು ಎಂಬುದಾಗಿ ಸಮಿತಿಯು ತಿಳಿಸಿದ್ದಿತು ಹಾಗೂ ಪ್ರತಿಯೊಂದು ದರ್ಜೆಯ ಅಡಿಯಲ್ಲಿಯೂ ಒಂದು ನಿರ್ದಿಷ್ಟ ಏರಿಕೆ/ಬಡತಿಯನ್ನು ಹೊಂದುವಂತೆ ಶಿಫಾರಸ್ಸು ಮಾಡಿದ್ದಿತು. ಒಂದು ನಿರ್ದಿಷ್ಟ ಏರಿಕೆ/ಬಡತಿಯ ಮೂಲಕ ರೂಪಿಸಲಾಗಿರುವ ಕಾಕಂಬಿಯ ಎಲ್ಲಾ ಮೂರು ದರ್ಜೆಗಳಿಗಾಗಿ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪತ್ತಿಯನ್ನು (ಒಂದೇ ದರ್ಜೆಯ ಒಳಗೂ ಸಹ) ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಅಡಕದೊಂದಿಗೆ ಒಂದು ತಂಡ ಅಥವಾ ಅವಿರತ ಪ್ರಕ್ರಿಯೆಗಳನ್ನು ಅವಲಂಭಿಸಿದಂತೆ 195ರಿಂದ 270 ಬೃಹತ್ ಲೀಟರುಗಳಷ್ಟು ಮದ್ಯಸಾರವನ್ನು ಉತ್ಪತ್ತಿ ಮಾಡಬಹುದು ಎಂಬುದನ್ನು ಮೇಲಿನ ಕೋಷ್ಟಕವು ತೋರಿಸುತ್ತದೆ. ಅವಿರತ ಪ್ರಕ್ರಿಯೆಗಾಗಿ ಉತ್ತಮ ಉತ್ಪತ್ತಿಯು ತಂಡ ಪ್ರಕ್ರಿಯೆಗಿಂತ ಈ ಪ್ರಕ್ರಿಯೆಯ ದಕ್ಷತೆಯು ಕಾರಣದಿಂದ ಆಗಿರುತ್ತದೆ.

ಈ ಪ್ರಮಾಣಕಗಳನ್ನು ಸರ್ಕಾರವು ಕಾರ್ಯಗತಗೊಳಿಸಿರಲಿಲ್ಲ. ಬದಲಾಗಿ, ಕಾಕಂಬಿಯಿಂದ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ತಯಾರಿಕೆಯ/ಉತ್ಪಾದನೆಯ ಉತ್ಪತ್ತಿಯ ಪ್ರಮಾಣಕಗಳ ಪರಿಷ್ಕರಣೆಗಾಗಿ ಏಪ್ರಿಲ್ 2011ರಲ್ಲಿ ಮತ್ತೊಂದು ಸ್ಥಾಯಿ ತಾಂತ್ರಿಕ ಸಮಿತಿಯನ್ನು ರಚಿಸಿತು. ಉತ್ಪತ್ತಿಯ ಪ್ರಮಾಣಕಗಳ ಪರಿಷ್ಕರಣೆಗಾಗಿ ಸ್ಥಾಯಿ ತಾಂತ್ರಿಕ ಸಮಿತಿಯ ಶಿಫಾರಸ್ಸುಗಳನ್ನು ಸ್ವೀಕರಿಸಲಾಯಿತು (ನವಂಬರ್ 2014) ಹಾಗೂ 06 ಅಕ್ಟೋಬರ್ 2015ರಿಂದ ಜಾರಿಗೊಳಿಸಲಾಯಿತು. ಪರಿಷ್ಕೃತ ಪ್ರಮಾಣಕಗಳನ್ನು **ಕೋಷ್ಟಕ 3.4**ರಲ್ಲಿ ವಿವರಿಸಲಾಗಿದೆ:

**ಕೋಷ್ಟಕ 3.4**

**ಎರಡನೆಯ ತಾಂತ್ರಿಕ ಸಮಿತಿಯು ನಿರ್ದಿಷ್ಟಪಡಿಸಿದ ಕಾಕಂಬಿಯ ಮೆಟ್ರಿಕ್ ಟನ್ನು ಒಂದಕ್ಕೆ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪತ್ತಿ**

| ಭಾರತೀಯ ಮಾನಕ ಬ್ಯೂರೋದ ನಿರ್ದಿಷ್ಟನಿರೂಪಣೆಗಳ ಐಎಸ್ 1162ರ ಪ್ರಕಾರ ಕಾಕಂಬಿ | ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆ (ಶೇಕಡಾವಾರು) | ಸೆಪ್ಟಂಬರ್ 2015ರವರೆಗಿನ ಪ್ರಮಾಣಕ (ಶುದ್ಧೀಕರಿಸಲ್ಪಟ್ಟ ಮದ್ಯಸಾರ ಬೃಹತ್ ಲೀಟರುಗಳಲ್ಲಿ ಕನಿಷ್ಠ ಉತ್ಪಾದನೆ/ತಯಾರಿಕೆ) | ಅಕ್ಟೋಬರ್ 2015ರಿಂದ ಪರಿಷ್ಕೃತ ಪ್ರಮಾಣಕಗಳು ( ಬೃಹತ್ ಲೀಟರುಗಳಲ್ಲಿ ಕನಿಷ್ಠ ಉತ್ಪಾದನೆ) |
|---|---|---|---|
| ದರ್ಜೆ I | 50 ಕ್ಕೂ ಅಧಿಕ | 220 | 240 |
| ದರ್ಜೆ II | 44 ರಿಂದ 49.9 | 200 | 220 |
| ದರ್ಜೆ III | 40 ರಿಂದ 43.9 | 180 | 200 |

ಪರಿಷ್ಕೃತ ಪ್ರಮಾಣಕಗಳ ಲೆಕ್ಕಪರಿಶೋಧನಾ ವಿಶ್ಲೇಷಣೆಯು ಈ ಕೆಳಗಿನ ಅಂಶಗಳನ್ನು ತೋರಿಸಿಕೊಟ್ಟಿತು:

- 2005ರಲ್ಲಿ ಪ್ರಥಮ ಸಮಿತಿಯ ರಚನೆಗೂ ಮೊದಲು 270 ಬೃಹತ್ ಲೀಟರುಗಳವರೆಗೂ ಡಿಸ್ಟಿಲರಿಗಳು ಉತ್ಪಾದನೆಯನ್ನು ವರದಿ ಮಾಡಿದ್ದವಾದರೂ, ಪ್ರಮಾಣಕಗಳ ಪರಿಷ್ಕರಣೆಯನ್ನು ಅಕ್ಟೋಬರ್ 2015ರಲ್ಲಿಯಷ್ಟೇ ಕಾರ್ಯಗತಗೊಳಿಸಲಾಗಿದ್ದಿತು.

- ಪ್ರಥಮ ತಾಂತ್ರಿಕ ಸಮಿತಿಯು ಅಕ್ಟೋಬರ್ 2007ರಲ್ಲಿ ಶಿಫಾರಸ್ಸು ಮಾಡಿದನಂತರ ಪ್ರಮಾಣಕಗಳನ್ನು ಪರಿಷ್ಕರಿಸುವಲ್ಲಿ ಎಂಟು ವರ್ಷಗಳ ವಿಳಂಬವಾಗಿದ್ದಿತು. ಅಲ್ಲದೆಯೇ, ಪರಿಷ್ಕೃತ ಪ್ರಮಾಣಕಗಳು ಪ್ರಥಮ ತಾಂತ್ರಿಕ ಸಮಿತಿಯು ಪ್ರಸ್ತಾಪಿಸಿದ್ದ ಪ್ರಮಾಣಕಗಳಿಗೂ ಕೆಳಮಟ್ಟದಲ್ಲಿದ್ದವು. ಮೆಟ್ರಿಕ್ ಟನ್ನು ಒಂದಕ್ಕೆ 240 ಬೃಹತ್ ಲೀಟರುಗಳ ಪರಿಷ್ಕೃತ ಕನಿಷ್ಠ ಉತ್ಪತ್ತಿಗೆ ಪ್ರತಿಯಾಗಿ 22.42 ಲಕ್ಷ ಬೃಹತ್ ಲೀಟರುಗಳಷ್ಟು ಶುದ್ಧೀಕರಿಸಲ್ಪಟ್ಟ ಮದ್ಯಸಾರವನ್ನು ಕಡಿಮೆ ಪ್ರಮಾಣದಲ್ಲಿ ಉತ್ಪಾದನೆಯಾಗಿದ್ದುದನ್ನು 12 ಡಿಸ್ಟಿಲರಿಗಳಲ್ಲಿನ ಏಪ್ರಿಲ್ 2012 ಮತ್ತು ಸೆಪ್ಟಂಬರ್ 2015ರ ನಡುವೆ ಅವಧಿಯಲ್ಲಿನ ಉತ್ಪಾದನಾ/ತಯಾರಿಕಾ ಮಾಹಿತಿಯು ತೋರಿಸಿಕೊಟ್ಟಿತು. ನಿರ್ಣಯವನ್ನು ತೆಗೆದುಕೊಳ್ಳುವಲ್ಲಿನ ವಿಳಂಬದ ಕಾರಣ ಸರ್ಕಾರಕ್ಕೆ ಆದಂತಹ ಸಂಭಾವ್ಯ ವರಮಾನ ನಷ್ಟವು ₹ 64.84 ಕೋಟಿ[11] ಆಗಿದ್ದಿತು. ವಿವರಗಳನ್ನು ***ಅನುಬಂಧ I***ರಲ್ಲಿ ನೀಡಲಾಗಿದೆ.

- ಕಾಕಂಬಿಯ ಒಂದೇ ದರ್ಜೆಯ ಒಳಗೆ ಇರುವಂತಹ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಆಧಾರದ ಮೇರೆಗೆ ಉತ್ಪತ್ತಿಯ ಒಂದು ನಿರ್ದಿಷ್ಟ ಏರಿಕೆ/ಬಡತಿಯ ಪ್ರಮಾಣಕಗಳ ಪ್ರಸ್ತಾವನೆಯನ್ನು ಪ್ರಥಮ

[11] ಪ್ರಮಾಣಕಗಳನ್ನು ಪರಿಷ್ಕರಿಸಲು ಮೊದಲ ಸಮಿತಿಯು ಮಾಡಿದ್ದ ಶಿಫಾರಸುಗಳನ್ನು ಕಾರ್ಯಗತಗೊಳಿಸಲು ಸಂಭವಿಸಿದ್ದ ಎಂಟು ವರ್ಷಗಳ ವಿಳಂಬಕ್ಕೆ ಪ್ರತಿಯಾಗಿ ಕೇವಲ ಮೂರೂವರೆ ವರ್ಷಗಳ ಮಾಹಿತಿಯನ್ನು ವಿಶ್ಲೇಷಿಸಲಾಯಿತಾದ್ದರಿಂದ 12 ಡಿಸ್ಟಿಲರಿಗಳಿಗೆ ಲೆಕ್ಕಹಾಕಲಾದ ವರಮಾನದ ಮೇಲಿನ ಪ್ರಭಾವವು ಕೇವಲ ಒಂದು ಸೂಚಕವಾಗಿರುತ್ತದೆ.

ತಾಂತ್ರಿಕ ಸಮಿತಿಯು ಮಾಡಿದ್ದಿತು. ಈ ಅಂಶವನ್ನು ಎರಡನೆಯ ಸಮಿತಿಯ ವರದಿಯಲ್ಲಿ ಚರ್ಚಿಸಿರಲೂ ಇಲ್ಲ. ಮತ್ತು

- ಪ್ರಥಮ ತಾಂತ್ರಿಕ ಸಮಿತಿಯು ಶುದ್ಧೀಕರಿಸಲ್ಪಟ್ಟ ಮದ್ಯಸಾರ ಉತ್ಪಾದನೆಯ/ತಯಾರಿಕೆಯ ಅವಿರತ ಪ್ರಕ್ರಿಯೆಗಾಗಿ ಅಧಿಕ ಮಟ್ಟದ ಪ್ರಮಾಣಕಗಳನ್ನು ಶಿಫಾರಸ್ಸು ಮಾಡಿದ್ದಿತು. ಎರಡನೆಯ ತಾಂತ್ರಿಕ ಸಮಿತಿಯು ಉತ್ಪತ್ತಿಯನ್ನು ನಿಗದಿಗೊಳಿಸುವ ಸಲುವಾಗಿ ಈ ಅಂಶವನ್ನು ಪರಿಗಣಿಸಿರಲಿಲ್ಲ. ತಮ್ಮ ಸ್ಥಾವರಗಳ ತಾಂತ್ರಿಕ ಮಾಹಿತಿಯನ್ನು ಒದಗಿಸಿದ 18 ಡಿಸ್ಟಿಲರಿಗಳ ಪೈಕಿ ಒಂಬತ್ತು [12] ಡಿಸ್ಟಿಲರಿಗಳು ಅವಿರತ ಸಂಸ್ಕರಣಾ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡಿರುವುದಾಗಿ ತಿಳಿಸಿದ್ದವು, ಆದ್ದರಿಂದ ಉತ್ಪತ್ತಿಯನ್ನು ಅಂದಾಜು ಮಾಡುವಲ್ಲಿ ಅದು ಕೂಡ ಒಂದು ಪ್ರಮುಖ ಅಂಶವಾಗುತ್ತದೆ.

ಹಿಂದಿನ ಸಮಿತಿಯ ಶಿಫಾರಸ್ಸುಗಳನ್ನು ಯಾವ ಕಾರಣಗಳಿಂದ ತಿರಸ್ಕರಿಸಲ್ಪಟ್ಟಿದ್ದವು ಎಂಬುದು ದಾಖಲೆಗಳಲ್ಲಿ ಕಂಡುಬರಲಿಲ್ಲ. ಇವುಗಳು ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪಾದನೆಯ ಮೇಲೆ ಗಮನಾರ್ಹವಾಗಿ ಪ್ರಭಾವ ಬೀರುವುದರಿಂದ ಸಂಸ್ಕರಣೆಯ ಸ್ವರೂಪ (ತಂಡ ಅಥವಾ ಅವಿರತ), ಒಂದೇ ದರ್ಜೆಯ ಒಳಗೆ ಉತ್ಪಾದನೆಯ ನಿರ್ದಿಷ್ಟ ಏರಿಕೆ/ಇಳಿಕೆ, ಇತ್ಯಾದಿ ಪರಿಮಿತಿಗಳನ್ನು ಪ್ರಮಾಣಕಗಳ ಒಳಗೇ ಅಪವರ್ತನಗೊಳಿಸಬೇಕಿದ್ದಿತು.

## 3.4.9 ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪಾದನೆಗಾಗಿ ಪ್ರಮಾಣಕಗಳನ್ನು ನಿಗದಿಗೊಳಿಸಿದ್ದು – ಒಂದು ವಿಶ್ಲೇಷಣೆ

ಕರ್ನಾಟಕ ಅಬಕಾರಿ ಅಧಿನಿಯಮ ಹಾಗೂ ಅದರ ಅಡಿಯಲ್ಲಿ ರೂಪಿಸಲಾಗಿರುವ ನಿಯಮಗಳ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಪ್ರಮಾಣಕಗಳ ಮೂಲಕ ಇಲಾಖೆಯು ಚಲಾಯಿಸಿದ ನಿಯಂತ್ರಣಗಳ ಸಮರ್ಪಕತೆಯನ್ನು ಖಚಿತಪಡಿಸಿಕೊಳ್ಳುವ ದೃಷ್ಟಿಯಿಂದ, ಏಪ್ರಿಲ್ 2012ರಿಂದ ಮಾರ್ಚ್ 2017ರ ನಡುವಿನ ಐದು-ವರ್ಷಗಳ ಅವಧಿಯಲ್ಲಿ ರಾಜ್ಯದಲ್ಲಿನ ಡಿಸ್ಟಿಲರಿಗಳ ವಾಸ್ತವಿಕ ಕಾರ್ಯನಿರ್ವಹಣೆಯ ಪ್ರತಿಯಾಗಿ ವಿಶ್ಲೇಷಣೆಯನ್ನು ಮಾಡಲಾಯಿತು. ಈ ನಿಟ್ಟಿನಲ್ಲಿ ಗಮನಿಸಲಾದ ಅಂಶಗಳನ್ನು ಮುಂದಿನ ಉಪ-ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

### 3.4.9.1 ಉತ್ಪಾದನೆಗಾಗಿ ನಿಗದಿಗೊಳಿಸಲಾಗಿದ್ದ ಪ್ರಮಾಣಕಗಳಲ್ಲಿ ಗಮನಿಸಲಾದ ಲೋಪದೋಷಗಳು

ಲೆಕ್ಕಪರಿಶೋಧನೆಯು ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪತ್ತಿಯನ್ನು ಕಾಕಂಬಿಯಲ್ಲಿನ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಪರಿಮಾಣಕ್ಕೆ ಪ್ರತಿಯಾಗಿ ಲೆಕ್ಕಹಾಕಿತು ಹಾಗೂ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದಕ್ಕೆ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಕಡ್ಡಾಯವಾಗಿ ಬರಬೇಕಾದ ಉತ್ಪತ್ತಿಯನ್ನು ಲೆಕ್ಕಹಾಕಿತು. ವಿವರಗಳನ್ನು **ಕೋಷ್ಟಕ 3.5**ರಲ್ಲಿ ತೋರಿಸಲಾಗಿದೆ:

**ಕೋಷ್ಟಕ 3.5**

**ಅಳವಡಿಸಿಕೊಳ್ಳಲಾಗಿರುವ ಪ್ರಮಾಣಕಗಳ ಪ್ರಕಾರ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದಕ್ಕೆ ಶುದ್ಧೀಕರಿಸಲ್ಪಟ್ಟ ಸಕ್ಕರೆಯ ಉತ್ಪತ್ತಿ**

| ಕಾಕಂಬಿಯಲ್ಲಿನ ಶೇಕಡಾವಾರು ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆ | ಕಾಕಂಬಿಯ ದರ್ಜೆ | ಪ್ರಕ್ರಿಯೆಯಲ್ಲಿ ಅನ್ವಯಗೊಳಿಸಿರುವ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಪರಿಮಾಣ (ಕಾಕಂಬಿಯ ಮೆಟ್ರಿಕ್ ಟನ್ ಒಂದಕ್ಕೆ ಕಿಲೋಗ್ರಾಂನಲ್ಲಿ) | ನಿರೀಕ್ಷಿತ ಶುದ್ಧೀಕರಿಸಲ್ಪಟ್ಟ ಮದ್ಯಸಾರ – ಬೃಹತ್ ಲೀಟರುಗಳಲ್ಲಿ – ನಿರ್ದಿಷ್ಟಪಡಿಸಲಾಗಿರುವ ಪ್ರಮಾಣಕಗಳ ಪ್ರಕಾರ | ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದಕ್ಕೆ ಶುದ್ಧೀಕರಿಸಲ್ಪಟ್ಟ ಮದ್ಯಸಾರ ಮಿಲಿ ಲೀಟರುಗಳಲ್ಲಿ |
|---|---|---|---|---|
| 40 | ದರ್ಜೆ III | 400[13] | 200 | 500 |
| 41 | | 410 | 200 | 488 |
| 42 | | 420 | 200 | 476 |
| 43 | | 430 | 200 | 465 |
| 44 | ದರ್ಜೆ II | 440 | 220 | 500 |
| 45 | | 450 | 220 | 489 |

[12] ಮೆ. ಗೋಧಾವರಿ ಬಯೋರಿಫೈನರೀಸ್ ಲಿಮಿಟೆಡ್, ಬಾಗಲಕೋಟೆ, ಮೆ. ಶ್ರೀ ದೂದ್‌ಗಂಗಾ ಕೃಷ್ಣಾ, ಬೆಳಗಾವಿ, ಮೆ. ಶ್ರೀ ರೇಣುಕಾ ಶುಗರ್ಸ್ ಲಿಮಿಟೆಡ್, ಬೆಳಗಾವಿ, ಮೆ. ಸತೀಶ್ ಶುಗರ್ಸ್ ಲಿಮಿಟೆಡ್, ಬೆಳಗಾವಿ, ಮೆ. ಶ್ರೀ ರೇಣುಕಾ ಶುಗರ್ಸ್ ಲಿಮಿಟೆಡ್, ಕಲಬುರಗಿ, ಮೆ. ಎನ್‌ಎಸ್‌ಎಲ್ ಶುಗರ್ಸ್ ಲಿಮಿಟೆಡ್ (ಡಿಸ್ಟಿಲರಿ ವಿಭಾಗ), ಮಂಡ್ಯ, ಮೆ. ಚಾಮುಂಡಿ ಡಿಸ್ಟಿಲರೀಸ್ ಪ್ರೈವೇಟ್ ಲಿಮಿಟೆಡ್, ಮೈಸೂರು, ನಂದಿ ಸಹಕಾರ ಸಕ್ಕರೆ ಕಾರ್ಖಾನೆ ನಿಯಮಿತ, ವಿಜಯಪುರ ಮತ್ತು ಮೆ ಕೋರ್ ಗ್ರೀನ್ ಶುಗರ್ಸ್ ಅಂಡ್ ಫ್ಯೂಯಲ್ಸ್ ಪ್ರೈವೇಟ್ ಲಿಮಿಟೆಡ್, ಯಾದಗಿರಿ.

[13] 40ರಷ್ಟು ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಾಕಂಬಿ ಎಂದರೆ 1 ಮೆಟ್ರಿಕ್ ಟನ್ನು ಕಾಕಂಬಿಯು 400 ಕಿಲೋಗ್ರಾಂನಷ್ಟು ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯನ್ನು ಹೊಂದಿರುತ್ತದೆ ಹಾಗೂ ಅದೇ ರೀತಿಯಲ್ಲಿ ಕೋಷ್ಟಕದಲ್ಲಿ ನೀಡಲಾಗಿರುವ ಶ್ರೇಣಿಗಳಿಗೆ ಸಂಬಂಧಿಸಿದಂತೆ ಆಗಿರುತ್ತದೆ.

| ಕಾಕಂಬಿಯಲ್ಲಿನ ಶೇಕಡಾವಾರು ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆ | ಕಾಕಂಬಿಯ ದರ್ಜೆ | ಪ್ರಕ್ರಿಯೆಯಲ್ಲಿ ಅನ್ವಯಗೊಳಿಸಿರುವ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಪರಿಮಾಣ (ಕಾಕಂಬಿಯ ಮೆಟ್ರಿಕ್ ಟನ್ ಒಂದಕ್ಕೆ ಕಿಲೋಗ್ರಾಂನಲ್ಲಿ) | ನಿರೀಕ್ಷಿತ ಶುದ್ಧೀಕರಿಸಲ್ಪಟ್ಟ ಮದ್ಯಸಾರ – ಬೃಹತ್ ಲೀಟರುಗಳಲ್ಲಿ – ನಿರ್ದಿಷ್ಟಪಡಿಸಲಾಗಿರುವ ಪ್ರಮಾಣಕಗಳ ಪ್ರಕಾರ | ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದಕ್ಕೆ ಶುದ್ಧೀಕರಿಸಲ್ಪಟ್ಟ ಮದ್ಯಸಾರ ಮಿಲಿ ಲೀಟರುಗಳಲ್ಲಿ |
|---|---|---|---|---|
| 46 | | 460 | 220 | 478 |
| 47 | | 470 | 220 | 468 |
| 48 | | 480 | 220 | 458 |
| 49 | | 490 | 220 | 449 |
| 50 | ದರ್ಜೆ I | 500 | 240 | 480 |
| 51 | | 510 | 240 | 471 |
| 52 | | 520 | 240 | 462 |
| 53 | | 530 | 240 | 453 |
| 54 | | 540 | 240 | 444 |
| 55 | | 550 | 240 | 436 |

ಮೇಲಿನ ಕೋಷ್ಟಕದಿಂದ, ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪಾದನೆ/ತಯಾರಿಕೆಯ ಪರಿಷ್ಕೃತ ಪ್ರಮಾಣಕಗಳಲ್ಲಿ ಲೆಕ್ಕಪರಿಶೋಧನೆಯು ಈ ಕೆಳಗಿನ ಲೋಪದೋಷಗಳನ್ನು ಗಮನಿಸಿತು:

- ನಿರ್ದಿಷ್ಟ ಪ್ರಮಾಣಕಗಳ ಪ್ರಕಾರ, ಒಂದು ನಿರ್ದಿಷ್ಟ ದರ್ಜೆಯ ಕಾಕಂಬಿಯಲ್ಲಿ, ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಪ್ರಮಾಣದ ಒಂದು ಹೆಚ್ಚಳದೊಂದಿಗೆ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದರ ಉತ್ಪತ್ತಿಯು ಇಳಿಮುಖ ಪ್ರವೃತ್ತಿಯಲ್ಲಿದ್ದಿತು.

- ದರ್ಜೆ Iರ ಕಾಕಂಬಿಗೆ ನಿಗದಿಗೊಳಿಸಲಾಗಿರುವ ಕನಿಷ್ಠ ಉತ್ಪತ್ತಿಯು, ಅದನ್ನು ಅತ್ಯದ್ಭುತ ಎಂಬುದಾಗಿ ಪರಿಗಣಿಸಿದ್ದರೂ ಸಹ, ಅದು ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದರ ಉತ್ಪತ್ತಿಯನ್ನು ಪರಿಗಣಿಸಿದಲ್ಲಿ ಅತ್ಯಂತ ಕಡಿಮೆ ಪ್ರಮಾಣದ್ದಾಗಿದ್ದಿತು.

- ಶೇಕಡಾ 55ರಷ್ಟರ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯೊಂದಿಗಿನ ದರ್ಜೆ-I ಕಾಕಂಬಿಯನ್ನು ಬಳಸುವವರು ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದಕ್ಕೆ ಕೇವಲ 436 ಮಿಲಿಲೀಟರಿನೊಂದಿಗೆ ನಿರ್ದಿಷ್ಟ ಪ್ರಮಾಣಕವನ್ನು ಸಾಧಿಸಲು ಸಾಧ್ಯವಾದಲ್ಲಿ ಶೇಕಡಾ 40ರ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆ ಅಡಕದೊಂದಿಗೆ ದರ್ಜೆ–IIIರ ಕಾಕಂಬಿಯನ್ನು ಬಳಸುವವರು ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದಕ್ಕೆ 500 ಮಿಲಿಲೀಟರುಗಳಷ್ಟು ಶುದ್ಧೀಕರಿಸಲ್ಪಟ್ಟ ಮದ್ಯಸಾರವನ್ನು ಉತ್ಪಾದಿಸುವ ಅಗತ್ಯತೆಯನ್ನು ಹೊಂದಿದ್ದರು. ಈ ರೀತಿಯಾಗಿ, ಪ್ರಮಾಣಕಗಳ ಪ್ರಕಾರ, ಕಳಪೆ ದರ್ಜೆಯ ಕಾಕಂಬಿಯು ಒಂದು ಅತ್ಯುತ್ತಮ ದರ್ಜೆಯ ಕಾಕಂಬಿಗೆ ಹೋಲಿಸಿದಂತೆ ಶೇಕಡಾ 14.68ರಷ್ಟು ಒಂದು ಹೆಚ್ಚುವರಿ ಉತ್ಪತ್ತಿಯನ್ನು ನೀಡುವುದನ್ನು ನಿರೀಕ್ಷಿಸಲಾಗಿದ್ದಿತು.

  ಕಾಕಂಬಿಯಲ್ಲಿನ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಆಧಾರದ ಮೇರೆಗೆ ಒಂದು ನಿರ್ದಿಷ್ಟ ಏರಿಕೆ/ಬಡತಿಯ ಅಗತ್ಯತೆಯನ್ನು ಈ ಕೋಷ್ಟಕವು ತೋರಿಸುತ್ತದೆ. ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಪ್ರಮಾಣವು ಹೆಚ್ಚಳಗೊಂಡಂತೆಲ್ಲಾ, ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪತ್ತಿಯೂ ಕೂಡ ಪ್ರಮಾಣಾನುಗುಣವಾಗಿ ಹೆಚ್ಚಳಗೊಳ್ಳತಕ್ಕದ್ದು, ಇದರ ಬದಲಾಗಿ ಮೇಲಿನ ಕೋಷ್ಟಕದಲ್ಲಿ ತೋರಿಸಿರುವ ಪ್ರಮಾಣಕಗಳ ಅನುಸಾರ ಇಳಿಮುಖಗೊಳ್ಳುತ್ತದೆ. ಆದ್ದರಿಂದ, ನಿರ್ದಿಷ್ಟಪಡಿಸಲಾಗಿರುವ ಪ್ರಮಾಣಕಗಳು ಹೆಚ್ಚುವರಿ ಉತ್ಪತ್ತಿಯನ್ನು ಮಾಡಲು ಡಿಸ್ಟಿಲರಿಗಳಿಗೆ ತಮ್ಮ ಅನುಕೂಲಕ್ಕೆ ತಕ್ಕಂತೆ ಕೆಲಸ ಮಾಡಲು ಸಮರ್ಪಕ ಲಾಭವನ್ನು/ಅನುಕೂಲತೆಯನ್ನು ಒದಗಿಸುತ್ತದೆ. ಕಾಕಂಬಿಯಲ್ಲಿ ಇರುವ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಪರಿಮಾಣಕ್ಕೆ ಹೋಲಿಸಿದಂತೆ ಕಡಿಮೆ ಪ್ರಮಾಣದ ಶುದ್ಧೀಕರಿಸಲ್ಪಟ್ಟ ಮದ್ಯಸಾರವನ್ನು ಉತ್ಪತ್ತಿ ಮಾಡಲು ಅತ್ಯುತ್ತಮ ದರ್ಜೆಯ ಕಾಕಂಬಿಯ ಅಗತ್ಯತೆಯಿರುತ್ತದೆ ಎಂಬ ವಾಸ್ತವಾಂಶವು ಆಲ್ಕಾಹಾಲ್ ಮತ್ತು ಅದರ ಉತ್ಪನ್ನಗಳ ಪ್ರಾರಂಭಿಕ ಹಂತದಲ್ಲಿಯೇ ನಿಯಂತ್ರಿಸುವಲ್ಲಿ ಇಲಾಖೆಯ ಲೋಪದೋಷಗಳನ್ನು ತೋರಿಸುತ್ತದೆ. ಈ ರೀತಿಯಾಗಿ, ಪ್ರಮಾಣಕಗಳ ನಿಗದಿಗಾಗಿನ ಆಧಾರವು ಇಲಾಖೆಯ ಆಡಳಿತಾತ್ಮಕ ನಿಯಂತ್ರಣದ ಜೊತೆ ರಾಜಿ ಮಾಡಿಕೊಂಡಿದ್ದಿತು.

ಇದನ್ನು ಜುಲೈ 2017ರಲ್ಲಿ ಸ್ಪಷ್ಟಪಡಿಸಿದನಂತರ, ಆಲ್ಕೋಹಾಲಿನ ಉತ್ಪತ್ತಿಯ ದರವು ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯಯನ್ನು ಮಾತ್ರವಲ್ಲದೆಯೇ ಬಾಷ್ಪಶೀಲ/ಆವಿಯಾಗುವ ಆಮ್ಲೀಯತೆ, ಬೂದಿ ಇರುವಿಕೆ, ದೀರ್ಘಾವಧಿ ಸಂಗ್ರಹಣೆ, ಕರಿಕು ಸಕ್ಕರೆಯು ಇರುವುದು, ಲ್ಯಾಕ್ಟಿಕ್ ಆಮ್ಲೀಯತೆ, ಸೂಕ್ಷ್ಮಜೀವಿಗಳಿಂದ ಕಲುಷಿತಗೊಂಡಿರುವಿಕೆ, ಹುದುಗುಕಾರಿಯಾಗಲು ಸಾಧ್ಯವಿಲ್ಲದ ಸಕ್ಕರೆಯ ಪ್ರಮಾಣ, ಇತ್ಯಾದಿ ಇತರೆ ಪ್ರಮಿತಿಗಳ ಮೇಲೂ ಅವಲಂಭಿತವಾಗಿರುತ್ತದೆ ಎಂಬುದಾಗಿ ಸರ್ಕಾರ ಮತ್ತು ಇಲಾಖೆಯು ಅಕ್ಟೋಬರ್ 2017ರಲ್ಲಿ ತಿಳಿಸಿದವು.

ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪಾದನೆಯ ಮೇಲೆ ಕಾಕಂಬಿಯ ವಿವಿಧ ಅಡಕಗಳ ಪರಿಣಾಮಗಳು ಎಲ್ಲಾ ದರ್ಜೆಗಳ ಕಾಕಂಬಿಗಳಿಗೂ ಸಮನಾಗಿ ಅನ್ವಯಗೊಳ್ಳುವುದರಿಂದ ಉತ್ತರವು ವಿವೇಚನಾಯುಕ್ತವಾಗಿರಲಿಲ್ಲ. ದರ್ಜೆ

III ಕಾಕಂಬಿಯಲ್ಲಿ, ಶುದ್ಧೀಕರಿಸಲ್ಪಟ್ಟ ಮದ್ಯಸಾರವನ್ನು ಉತ್ಪಾದಿಸುವ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಅಡಕವು, ಕೇವಲ ಶೇಕಡಾ 40ರಿಂದ 44ರವರೆಗೆ ಇರುತ್ತದೆ ಹಾಗೂ ಇಲಾಖೆಯು ಪಟ್ಟಿ ಮಾಡಿರುವ ಇತರೆ ಅಂಶ/ಘಟಕಗಳು ಶೇಕಡಾ 56ರಿಂದ 60ರಷ್ಟಿರುತ್ತವೆ. ದರ್ಜೆ I ಕಾಕಂಬಿಯಲ್ಲಿ ಒಟ್ಟಾರೆ ತಗ್ಗಿಸಬಹುದಾದ ಸಕ್ಕರೆಯ ಅಡಕವು ಶೇಕಡಾ 50ರಷ್ಟು ಅಥವಾ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಇರುತ್ತದೆಯಾದಲ್ಲಿ ಇತರೆ ಅಂಶ/ಘಟಕಗಳು ಶೇಕಡಾ 50ರಷ್ಟು ಅಥವಾ ಇನ್ನೂ ಕಡಿಮೆ ಪ್ರಮಾಣದಲ್ಲಿ ಇರುತ್ತವೆ. ಆದ್ದರಿಂದ, ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಅಡಕವು ಹೆಚ್ಚಳಗೊಂಡಂತೆಲ್ಲಾ ಇತರೆ ಅಂಶ/ಘಟಕಗಳ ಪ್ರಮಾಣವು ಇಳಿಮುಖಗೊಳ್ಳುತ್ತಾ ಹೋಗುತ್ತದೆ ಹಾಗೂ ತತ್ಪರಿಣಾಮವಾಗಿ ಉತ್ಪತ್ತಿಯ ಮೇಲೆ ಇತರೆ ಅಂಶ/ಘಟಕಗಳ ಪ್ರಭಾವವು ಇಳಿಮುಖಗೊಳ್ಳುತ್ತದೆ. ಆದ್ದರಿಂದ, ಇತರೆ ಅಂಶ/ಘಟಕಗಳು ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪತ್ತಿಯ ಮೇಲೆ ಪ್ರಭಾವವನ್ನು ಬೀರುವುದು ಎಂಬುದಾಗಿ ಇಲಾಖೆಯ ವಾದವು ತರ್ಕಬದ್ಧವಾಗಿರುವುದಿಲ್ಲ.

### 3.4.9.2 ಪ್ರಮಾಣಕಗಳು, ಉತ್ತಮ ಉತ್ಪತ್ತಿ ಹಾಗೂ ಡಿಸ್ಟಿಲರಿಗಳು ವರದಿ ಮಾಡಿರುವಂತೆ ತಯಾರಿಕೆ/ಉತ್ಪಾದನೆ ಇವುಗಳ ನಡುವಿನ ಹೋಲಿಕೆ

#### ಎ. ಡಿಸ್ಟಿಲರಿಗಳ ಒಳಗಿನ ಉತ್ಪತ್ತಿಗೆ ಸಂಬಂಧಿತ ವಿಷಯಗಳು/ಅಂಶಗಳು

ಈ ಮೇಲಿನ ಕಂಡಿಕೆ 3.4.9.1ರಲ್ಲಿ ವಿವರಿಸಿರುವಂತೆ, ಅಧಿನಿಯಮದ ಅಡಿಯಲ್ಲಿ ನಿರ್ದಿಷ್ಟಪಡಿಸಿರುವ ಪ್ರಮಾಣಕದ ಪ್ರಕಾರವೇ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಮ ಒಂದರ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪತ್ತಿಯು 436 ಮಿಲಿಲೀಟರಿನಿಂದ 500 ಮಿಲಿಲೀಟರುಗಳವರೆಗೆ ಆಗಿರುವಂತೆ ಹಾಗೂ ಡಿಸ್ಟಿಲರಿಗಳು ಪ್ರಮಾಣಕಗಳಲ್ಲಿ ಅನುವು ಮಾಡಿರುವಂತಹ ಸಾಕಷ್ಟು ಪ್ರಮಾಣದ ಅಧಿಕ ಉತ್ಪತ್ತಿಯಿಂದಾಗಿ ಡಿಸ್ಟಿಲರಿಗಳು ಹೆಚ್ಚುವರಿ ಉತ್ಪತ್ತಿಯನ್ನು ಮಾಡಿಕೊಳ್ಳಬಹುದಾದ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ನಿಗದಿಪಡಿಸಲಾಗಿದ್ದ ಪ್ರಮಾಣಕಗಳು ವಾಸ್ತವಿಕತೆಯಿಂದ ಕೂಡಿದ್ದವೇ ಎಂಬುದನ್ನು ಖಚಿತಪಡಿಸಿಕೊಳ್ಳುವ ಉದ್ದೇಶದಿಂದ, ಡಿಸ್ಟಿಲರಿಗಳು ಸಾಧಿಸಿದ್ದ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪಾದನಾ ಮಟ್ಟಗಳನ್ನು ಲೆಕ್ಕಪರಿಶೋಧನೆಯು ನಿರ್ದಿಷ್ಟಪಡಿಸಲಾಗಿದ್ದ ಪ್ರಮಾಣಕಗಳ ಪ್ರಕಾರ ಉತ್ಪಾದನಾ ಮಟ್ಟಗಳ ಜೊತೆ ಹೋಲಿಕೆ ಮಾಡಿತು. ವಿವಿಧ ಡಿಸ್ಟಿಲರಿಗಳಲ್ಲಿ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಕಡಿಮೆ ಪ್ರಮಾಣದ ಉತ್ಪಾದನೆಯನ್ನು ವರದಿ ಮಾಡುವ ಸಾಧ್ಯತೆಯನ್ನು ನಿರ್ಧಾರಣೆ ಮಾಡುವ ಸಲುವಾಗಿ ಲೆಕ್ಕಪರಿಶೋಧನೆಯು ಒಂದು ಡಿಸ್ಟಿಲರಿಯು ಸಾಧಿಸಿರುವ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಅತ್ಯಧಿಕ ಮಟ್ಟದ ಉತ್ಪಾದನೆಯ ದರಗಳನ್ನು ಅದೇ ಡಿಸ್ಟಿಲರಿಯಲ್ಲಿ ಪದೇಪದೇ ವರದಿಯಾಗಿರುವ ಅತ್ಯಧಿಕ ಕಡಿಮೆ ಪ್ರಮಾಣದ ಉತ್ಪಾದನಾ ಮಟ್ಟದ ಜೊತೆಯಲ್ಲಿಯೂ ಸಹ ಲೆಕ್ಕಪರಿಶೋಧನೆಯು ಹೋಲಿಕೆ ಮಾಡಿತು.

ಈ ಉದ್ದೇಶಕ್ಕಾಗಿ, ಈ ನಿಟ್ಟಿನಲ್ಲಿ ಇಲಾಖೆಯಿಂದ ಅಧಿಕೃತ ಅನುಮತಿಯನ್ನು ಪಡೆದಿರುವ ಸರ್ಕಾರಿ ರಸಾಯನ ಶಾಸ್ತ್ರಜ್ಞರ ಕಾಕಂಬಿಗೆ ಸಂಬಂಧಿತ ವರದಿಗಳನ್ನು ಎಂಟು[14] ಪ್ರಾಥಮಿಕ ಡಿಸ್ಟಿಲರಿಗಳಿಂದ ಸಂಗ್ರಹಿಸಲಾಯಿತು. ಡಿಸ್ಟಿಲರಿಗಳಿಂದ ಅಂತಹ ರಸಾಯನಿಕವಾಗಿ ವಿಶ್ಲೇಷಿಸಲಾದ ಕಾಕಂಬಿಯ[15] ಮೆಟ್ರಿಕ್ ಟನ್ನು ಒಂದರ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ವಾಸ್ತವಿಕ ಉತ್ಪತ್ತಿಯನ್ನು ಪಡೆದುಕೊಳ್ಳಲಾಯಿತು ಹಾಗೂ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆ ಅಂಶಗಳ ಜೊತೆ ಅಂಕಣಪಟ್ಟಿ ಮಾಡಲಾಯಿತು ಹಾಗೂ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದರ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪತ್ತಿಯನ್ನು ಲೆಕ್ಕಹಾಕಲಾಯಿತು. ಈ ವಿಶ್ಲೇಷಣೆಯಲ್ಲಿ ಬಳಸಿಕೊಳ್ಳಲಾದ ಮಾಹಿತಿಯು ಏಪ್ರಿಲ್ 2012ರಿಂದ ಮಾರ್ಚ್ 2017ರ ನಡುವಿನ ಅವಧಿಯಲ್ಲಿ ರಾಜ್ಯದಲ್ಲಿನ ಎಲ್ಲಾ ಪ್ರಾಥಮಿಕ ಡಿಸ್ಟಿಲರಿಗಳು ಬಳಸಿಕೊಂಡ 79.65 ಲಕ್ಷ ಮೆಟ್ರಿಕ್ ಟನ್ನುಗಳಷ್ಟು ಕಾಕಂಬಿಯ ಶೇಕಡಾ 15.25ರಷ್ಟು ಆಗಿರುತ್ತದೆ. ವಿಶ್ಲೇಷಣೆಯು ಈ ಕೆಳಗಿನ ಪ್ರವೃತ್ತಿಗಳನ್ನು ತೋರಿಸಿತು:

- ➢ ಡಿಸ್ಟಿಲರಿಗಳು ಸಾಮಾನ್ಯವಾಗಿ ನಿಯಮಗಳ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿದ್ದ ಪ್ರಮಾಣಕಗಳನ್ನು ಸಾಧಿಸುತ್ತಿದ್ದವು;
- ➢ ಕಾಕಂಬಿಯಲ್ಲಿನ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದರ ಉತ್ಪತ್ತಿಯು ಅದೇ ಅವಧಿಯಲ್ಲಿನ ಶುದ್ಧೀಕರಿಸಲ್ಪಟ್ಟ ಮದ್ಯಸಾರಕ್ಕೆ ಹೋಲಿಸಿದಲ್ಲಿ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ

[14] ಮೆ. ಬನ್ನಾರಿ ಅಮ್ಮನ್ ಶುಗರ್ಸ್ ಲಿಮಿಟೆಡ್ (ಡಿಸ್ಟಿಲರಿ ವಿಭಾಗ), ಮೆ. ಶ್ರೀ ಚಾಮುಂಡೇಶ್ವರಿ ಶುಗರ್ಸ್ ಲಿಮಿಟೆಡ್ ಡಿಸ್ಟಿಲರಿ, ಮೆ. ಕೋರ್ ಗ್ರೀನ್ ಶುಗರ್ಸ್ ಅಂಡ್ ಫ್ಯೂಯಲ್ಸ್ ಪ್ರೈವೇಟ್ ಲಿಮಿಟೆಡ್, ಮೆ. ಜೆ.ಪಿ ಡಿಸ್ಟಿಲರೀಸ್, ಮೆ. ಎನ್‌ಎಸ್‌ಎಲ್ ಶುಗರ್ಸ್ ಲಿಮಿಟೆಡ್ (ಡಿಸ್ಟಿಲರಿ ವಿಭಾಗ), ಮೆ. ರೇಣುಕಾ ಶುಗರ್ಸ್, ಹವಲ್ಗ, ಮೆ. ಶ್ರೀ ಲಕ್ಷ್ಮೀ ನರಸಿಂಹ ಡಿಸ್ಟಿಲರೀಸ್ ಪ್ರೈವೇಟ್ ಲಿಮಿಟೆಡ್ ಮತ್ತು ಮೆ. ವಿಜಯನಗರ ಶುಗರ್ಸ್ ಲಿಮಿಟೆಡ್(ಡಿಸ್ಟಿಲರಿ ವಿಭಾಗ, ಯಾದಗಿರಿ.

[15] ರಸಾಯನಿಕ ವಿಶ್ಲೇಷಣಾ ವರದಿಗಳು ಲಭ್ಯವಿರುವ ಹಾಗೂ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಶೇಕಡಾವರನ್ನು ಅರಿತಿರುವ ಪ್ರಕರಣಗಳಲ್ಲಿ ಮಾತ್ರ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಪ್ರಮಾಣಾನುಗುಣವಾದ ಉತ್ಪತ್ತಿಯ ಪ್ರವೃತ್ತಿಯನ್ನು ವಿಶ್ಲೇಷಣೆ ಮಾಡುವ ಸಲುವಾಗಿ ಸಂಗ್ರಹಿಸಲಾಯಿತು.

ಕಿಲೋಗ್ರಾಂ ಒಂದಕ್ಕೆ 434 ಮಿಲಿಲೀಟರುಗಳಿಂದ 599 ಮಿಲಿಲೀಟರುಗಳವರೆಗಿನ ಗಮನಾರ್ಹ ವ್ಯತ್ಯಾಸಗಳಿದ್ದವು; ಹಾಗೂ

- ಕೆಲವು ತಿಂಗಳುಗಳಲ್ಲಿ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದರ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಅತ್ಯುನ್ನತ ಮಟ್ಟದ ಉತ್ಪತ್ತಿಯನ್ನು ಸಾಧಿಸಿದ್ದ ಡಿಸ್ಟಿಲರಿಗಳು ತದನಂತರಲ್ಲಿ ಅದೇ ಮಟ್ಟವನ್ನು ತಲಪುವಲ್ಲಿ ವಿಫಲಗೊಂಡಿದ್ದವು.

ಈ ಎಂಟು ಪರೀಕ್ಷಾ-ಪರಿಶೀಲನೆ ಮಾಡಲಾದ ಡಿಸ್ಟಿಲರಿಗಳಲ್ಲಿ ಏಪ್ರಿಲ್ 2012ರಿಂದ ಮಾರ್ಚ್ 2017ರ ನಡುವಿನ ಅವಧಿಯಲ್ಲಿ ಕಡಿಮೆ ಪ್ರಮಾಣದಲ್ಲಿ ಉತ್ಪತ್ತಿಯಾಗಿದ್ದ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪಾದನೆ/ತಯಾರಿಕೆಯನ್ನು ಅವುಗಳದ್ದೇ ಆದಂತಹ ಹಿಂದಿನ ಅತ್ಯುನ್ನತ ಮಟ್ಟದ ಉತ್ಪತ್ತಿಯ ದರಗಳಿಗೆ[16] ಸಂಬಂಧಿಸಿದಂತೆ/ಹೋಲಿಸಿದಂತೆ ತದನಂತರದ ತಿಂಗಳುಗಳಲ್ಲಿ ಲೆಕ್ಕಪರಿಶೋಧನೆಯು ಲೆಕ್ಕಹಾಕಿತು. ವಿವರಗಳನ್ನು **ಕೋಷ್ಟಕ 3.6**ರಲ್ಲಿ ನೀಡಲಾಗಿದೆ.

**ಕೋಷ್ಟಕ 3.6**

**ಸಾಧಿಸಲಾಗಿದ್ದ ಹಿಂದಿನ ಉತ್ತಮ ದರಗಳಿಗೆ ಹೋಲಿಸಿದಂತೆ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಕಡಿಮೆ ಪ್ರಮಾಣದಲ್ಲಿ ಆದಂತಹ ಉತ್ಪಾದನೆ**

| ಕ್ರಮ ಸಂಖ್ಯೆ | ಡಿಸ್ಟಿಲರಿಯ ಹೆಸರು | (i)ಅತ್ಯುನ್ನತ ಉತ್ಪತ್ತಿ ದರ(ಗಳು) – ಕಾಕಂಬಿಯಲ್ಲಿನ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದಕ್ಕೆ ಶುದ್ಧೀಕರಿಸಲ್ಪಟ್ಟ ಮದ್ಯಸಾರ – ಮಿಲೀಲೀಟರುಗಳಲ್ಲಿ (ನಿರ್ದಿಷ್ಟ ತಿಂಗಳು(ಗಳಲ್ಲಿ)ನ ಉತ್ಪಾದನೆಯಲ್ಲಿ)<br>(ii) ಬಟ್ಟಿ ತೆಗೆಯಲಾದ ಕಾಕಂಬಿಯ ಪರಿಮಾಣ | (i) ಅತ್ಯುನ್ನತ ಉತ್ಪತ್ತಿ ದರಕ್ಕಿಂತಲೂ (ಕಾಕಂಬಿಯಲ್ಲಿನ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದಕ್ಕೆ ಶುದ್ಧೀಕರಿಸಲ್ಪಟ್ಟ ಮದ್ಯಸಾರ)<br>(ii) ಬಟ್ಟಿ ಇಳಿಸಲಾದ ಕಾಕಂಬಿಯ ಪರಿಮಾಣ | ಅತ್ಯುನ್ನತ ಉತ್ಪತ್ತಿಗೆ ಹೋಲಿಸಿದಲ್ಲಿ ಕಡಿಮೆ ಪ್ರಮಾಣದಲ್ಲಿ ಉತ್ಪತ್ತಿ ಮಾಡಲಾದ ಶುದ್ಧೀಕರಿಸಲ್ಪಟ್ಟ ಮದ್ಯಸಾರ (ಬೃಹತ್ ಲೀಟರುಗಳಲ್ಲಿ) |
|---|---|---|---|---|
| 1. | ಮೆ. ಶ್ರೀ ಚಾಮುಂಡೇಶ್ವರಿ ಷುಗರ್ಸ್ ಲಿಮಿಟೆಡ್, ಡಿಸ್ಟಿಲರಿ, ಭಾರತೀನಗರ, ಮದ್ದೂರು, ಮಂಡ್ಯ ಜಿಲ್ಲೆ | (i) ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದಕ್ಕೆ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪತ್ತಿ 569 ಮಿಲೀಲೀಟರು (ಜುಲೈ 2012)<br>(ii) ಬಟ್ಟಿ ಇಳಿಸಲಾದ ಕಾಕಂಬಿ 5,171 ಮೆಟ್ರಿಕ್ ಟನ್ನುಗಳು | (i) ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದಕ್ಕೆ ಶುದ್ಧೀಕರಿಸಲ್ಪಟ್ಟ ಮದ್ಯಸಾರ 469 ಮಿಲೀಲೀಟರಿನಿಂದ 538 ಮಿಲೀಲೀಟರುಗಳು<br>(ii) ತದನಂತರದ ಆಗಸ್ಟ್ 2012 ಮತ್ತು ಡಿಸೆಂಬರ್ 2016ರ ನಡುವಿನ 33 ತಿಂಗಳುಗಳಲ್ಲಿ 1,73,274 ಮೆಟ್ರಿಕ್ ಟನ್ನುಗಳು | 62,14,403 |
| 2. | ಮೆ. ರೇಣುಕಾ ಷುಗರ್ಸ್, ಹವಲ್ಗ, ಕಲಬುರಗಿ ಜಿಲ್ಲೆ | (i) ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದಕ್ಕೆ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪತ್ತಿ 567 ಮಿಲೀಲೀಟರು (ಮೇ 2012)<br>(ii) ಬಟ್ಟಿ ಇಳಿಸಲಾದ ಕಾಕಂಬಿ 12,957 ಮೆಟ್ರಿಕ್ ಟನ್ನುಗಳು | (i) ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದಕ್ಕೆ ಶುದ್ಧೀಕರಿಸಲ್ಪಟ್ಟ ಮದ್ಯಸಾರ 495 ಮಿಲೀಲೀಟರಿನಿಂದ 554 ಮಿಲೀಲೀಟರುಗಳು<br>(ii) ತದನಂತರದ ನವಂಬರ್ 2012 ಮತ್ತು ಜೂನ್ 2014ರ ನಡುವಿನ 11 ತಿಂಗಳುಗಳಲ್ಲಿ 1,30,339 ಮೆಟ್ರಿಕ್ ಟನ್ನುಗಳು, ತದನಂತರದ ತಿಂಗಳುಗಳಿಗೆ ಮಾಹಿತಿಯು ಲಭ್ಯವಿರುವುದಿಲ್ಲ. | 25,00,877 |
| 3. | ಮೆ. ಕೋರ್ ಗ್ರೀನ್ ಷುಗರ್ ಅಂಡ್ ಫ್ಯೂಯಲ್ಸ್ ಪ್ರೈವೇಟ್ ಲಿಮಿಟೆಡ್, ಶಹಾಪುರ, ಯಾದಗಿರಿ ಜಿಲ್ಲೆ | (i) ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದಕ್ಕೆ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪತ್ತಿ 599 ಮಿಲೀಲೀಟರು (ಡಿಸೆಂಬರ್ 2012)<br>(ii) ಬಟ್ಟಿ ಇಳಿಸಲಾದ ಕಾಕಂಬಿ | (i) ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದಕ್ಕೆ ಶುದ್ಧೀಕರಿಸಲ್ಪಟ್ಟ ಮದ್ಯಸಾರ 447 ಮಿಲೀಲೀಟರಿನಿಂದ 555 ಮಿಲೀಲೀಟರುಗಳು<br>(ii)ತದನಂತರದ ಫೆಬ್ರವರಿ 2013 | 25,92,537 |

[16] ಒಂದು ಡಿಸ್ಟಿಲರಿಯು ಯಾವುದೇ ಒಂದು ತಿಂಗಳಿನಲ್ಲಿ ಸಾಧಿಸಿದ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಕಿಲೋಗ್ರಾಂ ಒಂದರ ಅತ್ಯಧಿಕ ಉತ್ಪಾದನೆಯನ್ನು, ತದನಂತರದ ತಿಂಗಳುಗಳಿಗೆ ಆ ಡಿಸ್ಟಿಲರಿಯು ಉತ್ಪತ್ತಿಯ ದರದಲ್ಲಿ ಹೆಚ್ಚಳವನ್ನು ಗಮನಿಸುವವರೆಗೂ ಪ್ರಮಾಣಕವಾಗಿ ಬಳಸಲಾಗುವುದು. ಉದಾಹರಣೆಗೆ ಮೇಲಿನ ಕ್ರಮ ಸಂಖ್ಯೆ 4ರಲ್ಲಿ, ಒಟ್ಟರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದಕ್ಕೆ 495 ಮಿಲೀಲೀಟರು ಪ್ರಾರಂಭಿಕ ಪ್ರಮಾಣಕ ಉತ್ಪತ್ತಿಯ ದರವಾಗಿದ್ದಿತು, ತದನಂತರ ಅದು ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದಕ್ಕೆ 517 ಮಿಲೀಲೀಟರು ಆಯಿತು. ಈ ಹಿಂದಿನ ಉತ್ತಮ ಉತ್ಪತ್ತಿ ದರಗಳ ಪ್ರತಿಯಾಗಿ ಇತರೆ ಎಲ್ಲಾ ಕಡಿಮೆ ಮಟ್ಟಗಳನ್ನು ಕಡಿಮೆ ಪ್ರಮಾಣದಲ್ಲಿ ಮಾಡಲಾದ ಉತ್ಪಾದನೆಗಳು ಎಂಬುದಾಗಿ ಲೆಕ್ಕಹಾಕಲಾಯಿತು.

| ಕ್ರಮ ಸಂಖ್ಯೆ | ಡಿಸ್ಟಿಲರಿಯ ಹೆಸರು | (i)ಅತ್ಯುನ್ನತ ಉತ್ಪತ್ತಿ ದರ(ಗಳು) – ಕಾಕಂಬಿಯಲ್ಲಿನ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದಕ್ಕೆ ಶುದ್ಧೀಕರಿಸಲ್ಪಟ್ಟ ಮದ್ಯಸಾರ – ಮಿಲೀಲೀಟರುಗಳಲ್ಲಿ (ನಿರ್ದಿಷ್ಟ ತಿಂಗಳು(ಗಳಲ್ಲಿ)ನ ಉತ್ಪಾದನೆಯಲ್ಲಿ) (ii) ಬಟ್ಟಿ ತೆಗೆಯಲಾದ ಕಾಕಂಬಿಯ ಪರಿಮಾಣ | (i) ಅತ್ಯುನ್ನತ ಉತ್ಪತ್ತಿ ದರಕ್ಕಿಂತಲೂ (ಕಾಕಂಬಿಯಲ್ಲಿನ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದಕ್ಕೆ ಶುದ್ಧೀಕರಿಸಲ್ಪಟ್ಟ ಮದ್ಯಸಾರ) (ii) ಬಟ್ಟಿ ಇಳಿಸಲಾದ ಕಾಕಂಬಿಯ ಪರಿಮಾಣ | ಅತ್ಯುನ್ನತ ಉತ್ಪತ್ತಿಗೆ ಹೋಲಿಸಿದಲ್ಲಿ ಕಡಿಮೆ ಪ್ರಮಾಣದಲ್ಲಿ ಉತ್ಪತ್ತಿ ಮಾಡಲಾದ ಶುದ್ಧೀಕರಿಸಲ್ಪಟ್ಟ ಮದ್ಯಸಾರ (ಬೃಹತ್ ಲೀಟರುಗಳಲ್ಲಿ) |
|---|---|---|---|---|
| | | 4,220 ಮೆಟ್ರಿಕ್ ಟನ್ನುಗಳು | ಮತ್ತು ಅಕ್ಟೋಬರ್ 2015ರ ನಡುವಿನ 13 ತಿಂಗಳುಗಳಲ್ಲಿ 48,674 ಮೆಟ್ರಿಕ್ ಟನ್ನುಗಳು, ತದನಂತರದ ತಿಂಗಳುಗಳಿಗೆ ಮಾಹಿತಿಯು ಲಭ್ಯವಿರುವುದಿಲ್ಲ. | |
| 4. | ಮೆ. ಎನ್‌ಎಸ್‌ಎಲ್ ಷುಗರ್ಸ್ ಲಿಮಿಟೆಡ್ (ಡಿಸ್ಟಿಲರಿ ವಿಭಾಗ), ಕೊಪ್ಪ, ಮಂಡ್ಯ ಜಿಲ್ಲೆ | (i) ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದಕ್ಕೆ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪತ್ತಿ 495ರಿಂದ 517 ಮಿಲೀಲೀಟರು (ಆಗಸ್ಟ್ 2012 ಮತ್ತು ಅಕ್ಟೋಬರ್ 2013) (ii) ಬಟ್ಟಿ ಇಳಿಸಲಾದ ಕಾಕಂಬಿ ಅನುಕ್ರಮವಾಗಿ 3,728 ಮೆಟ್ರಿಕ್ ಟನ್ನುಗಳು ಮತ್ತು 2,649 ಮೆಟ್ರಿಕ್ ಟನ್ನುಗಳು | (i) ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದಕ್ಕೆ ಶುದ್ಧೀಕರಿಸಲ್ಪಟ್ಟ ಮದ್ಯಸಾರ 458 ಮಿಲೀಲೀಟರಿನಿಂದ 516 ಮಿಲೀಲೀಟರುಗಳು (ii) ಮೆಟ್ರಿಕ್ ಟನ್ನುಗಳಷ್ಟು ಕಾಕಂಬಿ (ಮಾಹಿತಿಯು ಏಪ್ರಿಲ್ 2012 ಮತ್ತು ಜನವರಿ 2017ರ ನಡುವಿನ ಅವಧಿಗೆ ಕೇವಲ 26 ತಿಂಗಳುಗಳಿಗೆ ಲಭ್ಯವಿರುವುದು). ₹ 67,597 ಮೆಟ್ರಿಕ್ ಟನ್ನುಗಳ | 7,86,400 |
| 5. | ಮೆ. ಶ್ರೀ ಲಕ್ಷ್ಮೀ ನರಸಿಂಹ ಪ್ರೈವೇಟ್ ಲಿಮಿಟೆಡ್ ಡಿಸ್ಟಿಲರೀಸ್, ಮದ್ದೂರು, ಮಂಡ್ಯ ಜಿಲ್ಲೆ | (i) ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದಕ್ಕೆ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪತ್ತಿ 474ರಿಂದ 500 ಮಿಲೀ ಲೀಟರು (ಏಪ್ರಿಲ್ 2012, ಜನವರಿ 2013 ಮತ್ತು ಜನವರಿ 2016) (ii) ಬಟ್ಟಿ ಇಳಿಸಲಾದ ಕಾಕಂಬಿ ಅನುಕ್ರಮವಾಗಿ 1,774 ಮೆಟ್ರಿಕ್ ಟನ್ನುಗಳು, 2,511 ಮೆಟ್ರಿಕ್ ಟನ್ನುಗಳು ಮತ್ತು 2,515 ಮೆಟ್ರಿಕ್ ಟನ್ನುಗಳು | (i) ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದಕ್ಕೆ ಶುದ್ಧೀಕರಿಸಲ್ಪಟ್ಟ ಮದ್ಯಸಾರ 458 ಮಿಲೀಲೀಟರಿನಿಂದ 516 ಮಿಲೀಲೀಟರುಗಳು (ii) 27,011/– ಮೆಟ್ರಿಕ್ ಟನ್ನುಗಳಷ್ಟು ಕಾಕಂಬಿ (ಮಾಹಿತಿಯು ಏಪ್ರಿಲ್ 2012 ಮತ್ತು ಜುಲೈ 2016ರ ನಡುವಿನ ಅವಧಿಗೆ ಕೇವಲ 11 ತಿಂಗಳುಗಳಿಗೆ ಲಭ್ಯವಿರುವುದು). | 2,48,438 |
| 6 | ಮೆ. ಬನ್ನಾರಿ ಅಮ್ಮನ್ ಷುಗರ್ಸ್ ಲಿಮಿಟೆಡ್ (ಡಿಸ್ಟಿಲರಿ), ನಂಜನಗೂಡು, ಮೈಸೂರು ಜಿಲ್ಲೆ | (i) ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದಕ್ಕೆ 502 ಮಿಲೀ ಲೀಟರಿನಿಂದ 523 ಮಿಲೀ ಲೀಟರಿನವರೆಗೆ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪತ್ತಿ (ಏಪ್ರಿಲ್ (5,292 ಮೆಟ್ರಿಕ್ ಟನ್ನುಗಳು), ಆಗಸ್ಟ್ (6,816 ಮೆಟ್ರಿಕ್ ಟನ್ನುಗಳು) ಮತ್ತು ನವಂಬರ್ (6,533 ಮೆಟ್ರಿಕ್ ಟನ್ನುಗಳು) 2012, ಮಾರ್ಚ್ (6,828 ಮೆಟ್ರಿಕ್ ಟನ್ನುಗಳು) ಜುಲೈ (5,349 ಮೆಟ್ರಿಕ್ ಟನ್ನುಗಳು), ಆಗಸ್ಟ್ (4,783 ಮೆಟ್ರಿಕ್ ಟನ್ನುಗಳು), ಮತ್ತು ನವಂಬರ್ (6,305 ಮೆಟ್ರಿಕ್ ಟನ್ನುಗಳು) ಜೂನ್, (4,199 ಮೆಟ್ರಿಕ್ ಟನ್ನುಗಳು) 2015 ಮತ್ತು ಡಿಸೆಂಬರ್ (5,188 ಮೆಟ್ರಿಕ್ ಟನ್ನುಗಳು) 2016) (ii) ಬಟ್ಟಿ ಇಳಿಸಲಾದ ಕಾಕಂಬಿ 51,293 ಮೆಟ್ರಿಕ್ ಟನ್ನುಗಳು | (i) ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದಕ್ಕೆ ಶುದ್ಧೀಕರಿಸಲ್ಪಟ್ಟ ಮದ್ಯಸಾರ 485 ಮಿಲೀಲೀಟರಿನಿಂದ 500 ಮಿಲೀಲೀಟರುಗಳು (ii) 2,18,774 ಮೆಟ್ರಿಕ್ ಟನ್ನುಗಳಷ್ಟು ಕಾಕಂಬಿ (ಏಪ್ರಿಲ್ 2012 ಮತ್ತು ಮಾರ್ಚ್ 2016ರ ನಡುವಿನ 60 ತಿಂಗಳುಗಳ ಪೈಕಿ ಮಾಹಿತಿಯು 54 ತಿಂಗಳುಗಳಿಗೆ ಲಭ್ಯವಿರುವುದು). | 6,62,133 |

| ಕ್ರಮ ಸಂಖ್ಯೆ | ಡಿಸ್ಟಿಲರಿಯ ಹೆಸರು | (i)ಅತ್ಯುನ್ನತ ಉತ್ಪತ್ತಿ ದರ(ಗಳು) – ಕಾಕಂಬಿಯಲ್ಲಿನ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದಕ್ಕೆ ಶುದ್ಧೀಕರಿಸಲ್ಪಟ್ಟ ಮದ್ಯಸಾರ – ಮಿಲೀಲೀಟರುಗಳಲ್ಲಿ (ನಿರ್ದಿಷ್ಟ ತಿಂಗಳು(ಗಳಲ್ಲಿ)ನ ಉತ್ಪಾದನೆಯಲ್ಲಿ) (ii) ಬಟ್ಟಿ ತೆಗೆಯಲಾದ ಕಾಕಂಬಿಯ ಪರಿಮಾಣ | (i) ಅತ್ಯುನ್ನತ ಉತ್ಪತ್ತಿ ದರಕ್ಕಿಂತಲೂ (ಕಾಕಂಬಿಯಲ್ಲಿನ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದಕ್ಕೆ ಶುದ್ಧೀಕರಿಸಲ್ಪಟ್ಟ ಮದ್ಯಸಾರ) (ii) ಬಟ್ಟಿ ಇಳಿಸಲಾದ ಕಾಕಂಬಿಯ ಪರಿಮಾಣ | ಅತ್ಯುನ್ನತ ಉತ್ಪತ್ತಿಗೆ ಹೋಲಿಸಿದಲ್ಲಿ ಕಡಿಮೆ ಪ್ರಮಾಣದಲ್ಲಿ ಉತ್ಪತ್ತಿ ಮಾಡಲಾದ ಶುದ್ಧೀಕರಿಸಲ್ಪಟ್ಟ ಮದ್ಯಸಾರ (ಬೃಹತ್ ಲೀಟರುಗಳಲ್ಲಿ) |
|---|---|---|---|---|
| | | | | |
| 7. | ಮೆ. ವಿಜಯನಗರ ಷುಗರ್ಸ್ ಪ್ರೈವೇಟ್ ಲಿಮಿಟೆಡ್ (ಡಿಸ್ಟಿಲರಿ), ಯಾದಗಿರಿ ಜಿಲ್ಲೆ | (i) ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದಕ್ಕೆ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪತ್ತಿ 536 ಮಿಲೀಲೀಟರಿನಿಂದ 549 ಮಿಲೀಲೀಟರು (ಮಾರ್ಚ್ 2014 (10,615 ಮೆಟ್ರಿಕ್ ಟನ್ನುಗಳು) ಹಾಗೂ ನವಂಬರ್ (10,556 ಮೆಟ್ರಿಕ್ ಟನ್ನುಗಳು)2015)<br>(ii) ಬಟ್ಟಿ ಇಳಿಸಲಾದ ಕಾಕಂಬಿ 21,171 ಮೆಟ್ರಿಕ್ ಟನ್ನುಗಳು | (i) ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದಕ್ಕೆ ಶುದ್ಧೀಕರಿಸಲ್ಪಟ್ಟ ಮದ್ಯಸಾರ 441 ಮಿಲೀ ಲೀಟರಿನಿಂದ 530 ಮಿಲೀಲೀಟರುಗಳು<br>(ii) 2,17,888 ಮೆಟ್ರಿಕ್ ಟನ್ನುಗಳಷ್ಟು ಕಾಕಂಬಿ (ಮಾರ್ಚ್ 2014 ಮತ್ತು ಏಪ್ರಿಲ್ 2016ರ ನಡುವಿನ 23 ತಿಂಗಳುಗಳಿಗೆ ಮಾಹಿತಿಯು ಲಭ್ಯವಿರುವುದು). | 55,85,251 |
| 8. | ಮೆ. ಜೆ.ಪಿ. ಡಿಸ್ಟಿಲರೀಸ್ ಪ್ರೈವೇಟ್ ಲಿಮಿಟೆಡ್, ಕುಣಿಗಲ್ಲು, ತುಮಕೂರು ಜಿಲ್ಲೆ | (i) ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದಕ್ಕೆ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪತ್ತಿ 555 ಮಿಲೀ ಲೀಟರು (ಜೂನ್ ಮತ್ತು ಆಗಸ್ಟ್ 2012<br>(ii) 695 ಮೆಟ್ರಿಕ್ ಟನ್ನುಗಳಷ್ಟು ಕಾಕಂಬಿ | (i) ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದಕ್ಕೆ 434ರಿಂದ 540 ಮಿಲೀ ಲೀಟರಿನವರೆಗೆ ಶುದ್ಧೀಕರಿಸಲ್ಪಟ್ಟ ಮದ್ಯಸಾರ<br>(ii) 1,17,221 ಮೆಟ್ರಿಕ್ ಟನ್ನುಗಳಷ್ಟು ಕಾಕಂಬಿ (ಏಪ್ರಿಲ್ 2012 ಮತ್ತು ಡಿಸೆಂಬರ್ 2016ರ ನಡುವಿನ 43 ತಿಂಗಳುಗಳಿಗೆ ಮಾಹಿತಿಯು ಲಭ್ಯವಿರುವುದು. | 32,61,871 |
| | ಒಟ್ಟು | **(i) ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದಕ್ಕೆ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪತ್ತಿ 474 ಮಿಲೀಲೀಟರಿನಿಂದ 599 ಮಿಲೀಲೀಟರು**<br>**(ii) 1,08,684 ಮೆಟ್ರಿಕ್ ಟನ್ನುಗಳಷ್ಟು ಕಾಕಂಬಿ** | **(i) ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದಕ್ಕೆ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪತ್ತಿ 434 ಮಿಲೀ ಲೀಟರಿನಿಂದ 554 ಮಿಲೀ ಲೀಟರು**<br>**(ii) 10,00,778 ಮೆಟ್ರಿಕ್ ಟನ್ನುಗಳಷ್ಟು ಕಾಕಂಬಿ** | **2,18,51,910** |

ಮೇಲಿನ ಕೋಷ್ಟಕದಲ್ಲಿ ತೋರಿಸಿರುವಂತೆ, ಡಿಸ್ಟಿಲರಿಗಳ ಅತ್ಯುನ್ನತ ಮಟ್ಟದ ಉತ್ಪಾದನಾ ಮಟ್ಟಗಳಿಗೆ ಹೋಲಿಸಿದಂತೆ ಕಡಿಮೆ ಮಟ್ಟದ ಉತ್ಪಾದನೆಯು 2.19 ಕೋಟಿ ಬೃಹತ್ ಲೀಟರುಗಳು. ವಿವರಗಳನ್ನು ***ಅನುಬಂಧ II (ಎ)ಯಿಂದ II (ಎಚ್)ಗಳಲ್ಲಿ*** ನೀಡಲಾಗಿದೆ. ಈ ಮೊದಲು ತಿಳಿಸಿರುವಂತೆ, ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದರ ಉತ್ಪತ್ತಿಯು ಏಪ್ರಿಲ್ 2012ರಿಂದ ಮಾರ್ಚ್ 2017ರ ನಡುವಿನ ಅವಧಿಯಲ್ಲಿ ರಾಜ್ಯದಲ್ಲಿ ಬಟ್ಟಿ ಇಳಿಸಲಾದ ಒಟ್ಟಾರೆ ಕಾಕಂಬಿಯ ಶೇಕಡಾ 15.25ರಷ್ಟು ಮಾದರಿಯ ಒಳಗೇ 2.19 ಕೋಟಿ ಬೃಹತ್ ಲೀಟರುಗಳಷ್ಟು ಗಮನಾರ್ಹ ಪ್ರಮಾಣದಲ್ಲಿ ವ್ಯತ್ಯಾಸವಿದ್ದಿತು ಎಂಬುದನ್ನು ಇದು ತೋರಿಸುತ್ತದೆ. ಅಬಕಾರಿ ಇಲಾಖೆಯ ಯಾವುದೇ ನಿಯಂತ್ರಣವೂ ಇರದಿದ್ದುದು ಈ ಹೆಚ್ಚುವರಿ ಉತ್ಪಾದನೆಯ ಮೇಲೆ. ಏಕೆಂದರೆ ಅಂತಹ ಉತ್ಪಾದನೆಗಳು/ತಯಾರಿಕೆಗಳು ಅತ್ಯುತ್ತಮ ಮಟ್ಟದ ಉತ್ಪತ್ತಿ ದರಗಳಿಗಿಂತ ಕಡಿಮೆ ಪ್ರಮಾಣದಲ್ಲಿದ್ದರೂ ಕೂಡ ಅವುಗಳು ನಿಯಮಗಳಲ್ಲಿ ನಿರ್ದಿಷ್ಟಪಡಿಸಲಾಗಿದ್ದ ಪ್ರಮಾಣಕಗಳ ಒಳಗೇ ಇದ್ದವು.

ಇದನ್ನು ಸ್ಪಷ್ಟಪಡಿಸಿದನಂತರ, ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯು ಕಿಣ್ವನ ಸಾಧ್ಯವಿರುವ/ಹುದುಗುಕಾರಿಯಾಗಿರುವ (FS) ಹಾಗೂ ಅಲ್ಲದೆಯೇ ಕಿಣ್ವನ ಸಾಧ್ಯವಿರದ/ಹುದುಗುಕಾರಿಯಾಗಿರದ (UFS) ಸಕ್ಕರೆಯನ್ನು ಒಳಗೊಂಡಿರುತ್ತದೆ ಎಂಬುದಾಗಿ ಸರ್ಕಾರ/ಇಲಾಖೆಯು ತಿಳಿಸಿತು. ತಂತ್ರಜ್ಞಾನದಲ್ಲಿ ಆಗಿರುವ ಅಭಿವೃದ್ಧಿಗಳು ಹಾಗೂ ಸಕ್ಕರೆ ಕಾರ್ಖಾನೆಗಳಲ್ಲಿನ ಉತ್ತಮ ಸಂಸ್ಕರಣೆಯ ಕಾರಣ, ಕಾಕಂಬಿಯಲ್ಲಿನ ಕಿಣ್ವನ ಸಾಧ್ಯವಿರುವ/ಹುದುಗುಕಾರಿಯಾಗಿರುವ ಸಕ್ಕರೆಯ ಅಂಶವು ಹೆಚ್ಚು ಕಡಿಮೆ ಒಂದೇ ಮಟ್ಟದ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆ ಮೌಲ್ಯ ಹಾಗೂ ಕಿಣ್ವನ ಸಾಧ್ಯವಿರುವ/ಹುದುಗುಕಾರಿಯಾಗಿರುವ ಹಾಗೂ ಅಲ್ಲದೆಯೇ ಕಿಣ್ವನ

ಸಾಧ್ಯವಿರದ/ಹುದುಗುಕಾರಿಯಾಗಿರದ ಸಕ್ಕರೆಯ ಮಟ್ಟವು ಹೆಚ್ಚಳಗೊಳ್ಳುವುದರೊಂದಿಗೆ ಕಾಕಂಬಿಯಲ್ಲಿನ ಕಿಣ್ವನ ಸಾಧ್ಯವಿರುವ/ಹುದುಗುಕಾರಿಯಾಗಿರುವ ಸಕ್ಕರೆಯ ಮಟ್ಟವು ಇಳಿಮುಖಗೊಂಡಿರುವುದು.

ಉತ್ತರವು ಈ ಕೆಳಗಿನ ಕಾರಣಗಳಿಂದ ಸಮರ್ಥನೀಯವಾಗಿರುವುದಿಲ್ಲ:

- ಇಲಾಖೆಯ ಹೇಳಿಕೆಯು ಒಂದು ಸಾಮಾನ್ಯ ಸ್ವರೂಪದಲ್ಲಿರುತ್ತದೆ ಹಾಗೂ ಕಿಣ್ವನ ಸಾಧ್ಯವಿರುವ/ಹುದುಗುಕಾರಿಯಾಗಿರುವ ಸಕ್ಕರೆ ಹಾಗೂ ಕಿಣ್ವನ ಸಾಧ್ಯವಿರದ/ಹುದುಗುಕಾರಿಯಾಗಿರದ ಸಕ್ಕರೆಯ ಪರಿಮಾಣಗಳನ್ನು ತೋರಿಸಿದಂತೆ ರಸಾಯನ ವಿಶ್ಲೇಷಣಾ ಮಾಹಿತಿಯ ಬೆಂಬಲವನ್ನು ಹೊಂದಿರುವುದಿಲ್ಲ. ಲೆಕ್ಕಪರಿಶೋಧನೆಯು ಪರಿಶೀಲಿಸಿದಂತೆ, ಇಲಾಖೆಯು ಯಾವುದೇ ಪ್ರಕರಣಗಳಲ್ಲಿಯೂ ಕಿಣ್ವನ ಸಾಧ್ಯವಿರುವ/ಹುದುಗುಕಾರಿಯಾಗಿರುವ ಸಕ್ಕರೆ ಹಾಗೂ ಕಿಣ್ವನ ಸಾಧ್ಯವಿರದ/ಹುದುಗುಕಾರಿಯಾಗಿರದ ಸಕ್ಕರೆಯ ಮಟ್ಟಗಳನ್ನು ಅಳೆದಿರುವುದಿಲ್ಲ.

- ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯಲ್ಲಿನ ಕಿಣ್ವನ ಸಾಧ್ಯವಿರುವ/ಹುದುಗುಕಾರಿಯಾಗಿರುವ ಸಕ್ಕರೆಯ ಪ್ರಮಾಣವು ಸಾಮಾನ್ಯವಾಗಿ ಶೇಕಡಾ ನಾಲ್ಕರಿಂದ ಶೇಕಡಾ ಆರರ ದರದಲ್ಲಿ ಅಥವಾ ಶೇಕಡಾ ಐದರ ಸರಾಸರಿಯಲ್ಲಿ[17] ನಿರೀಕ್ಷಿಸಲಾಗುವುದು ಹಾಗೂ ಅದನ್ನು ಅದಾಗಲೇ ನಿರೀಕ್ಷಿತ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪತ್ತಿಯನ್ನು ಲೆಕ್ಕಹಾಕುವಲ್ಲಿ ಪರಿಗಣಿಸಲಾಗಿದೆ.

- ಕಿಣ್ವನ ಸಾಧ್ಯವಿರದ/ಹುದುಗುಕಾರಿಯಾಗಿರದ ಸಕ್ಕರೆಯನ್ನು ಕಿಣ್ವನ ಸಾಧ್ಯವಿರುವ/ಹುದುಗುಕಾರಿಯಾಗಿರುವ ಸಕ್ಕರೆಯನ್ನಾಗಿ ಪರಿವರ್ತಿಸುವ ಕಿಣ್ವಕ ಪ್ರತಿಕ್ರಿಯೆಯ ಮೂಲಕ ಕಾಕಂಬಿಯಿಂದ ಎತನಾಲಿನ ಉತ್ಪನ್ನವನ್ನು ವೃದ್ಧಿಗೊಳಿಸುವ ಸಲುವಾಗಿ ಹುದುಗುಕಾರಿ/ಕಿಣ್ವನ ಸಂಸ್ಕರಣೆಯನ್ನು ಕೈಗೊಳ್ಳುವ ಕೈಗಾರಿಕೆಗಳಲ್ಲಿ ತಂತ್ರಜ್ಞಾನದ ಅಭಿವೃದ್ಧಿಗಳಾಗಿರುತ್ತವೆ.

## ಬಿ) ರಾಜ್ಯದಲ್ಲಿನ ಡಿಸ್ಟಿಲರಿಗಳಲ್ಲಿನ ಉತ್ಪಾದನೆಗೆ ಸಂಬಂಧಿತ ಅಂಶಗಳು

ಕಿಣ್ವನ/ಹುದುಗುಕಾರಿಯು ಸಂಪೂರ್ಣವಾಗಿ ಮುಚ್ಚಲ್ಪಟ್ಟಿರುವ ಪೀಪಾಯಿಗಳಲ್ಲಿ ಮಾಡಲಾಗುವ ಸಂಸ್ಕರಣೆಯಾಗಿರುತ್ತದೆ. ಮೇಲಿನ **ಕೋಷ್ಟಕ 3.6**ರಲ್ಲಿ ತಿಳಿಸಲಾಗಿರುವ ಎಂಟು ಡಿಸ್ಟಿಲರಿಗಳಿನ ಐದು ಅತ್ಯುತ್ತಮ ಕಾರ್ಯನಿರ್ವಹಣೆಯ ವಿವರಗಳನ್ನು ಈ ಕೆಳಗಿನ **ಕೋಷ್ಟಕ 3.7**ರಲ್ಲಿ ಅಂಕಣಪಟ್ಟಿಯ ರೂಪದಲ್ಲಿ ತಿಳಿಸಲಾಗಿದೆ.

**ಕೋಷ್ಟಕ 3.7**

**ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪಾದನೆಯಲ್ಲಿ ಡಿಸ್ಟಿಲರಿಗಳು ಸಾಧಿಸಿದ ಅತ್ಯುತ್ತಮ ಕಾರ್ಯನಿರ್ವಹಣೆ[18]**

| ಕ್ರಮ ಸಂಖ್ಯೆ | ಡಿಸ್ಟಿಲರಿಯ ಹೆಸರು | ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದರ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪತ್ತಿ ಬೃಹತ್ ಲೀಟರುಗಳಲ್ಲಿ | ಅತ್ಯುತ್ತಮ ಕಾರ್ಯನಿರ್ವಹಣೆಯನ್ನು ಸಾಧಿಸಿದ ತಿಂಗಳು ಮತ್ತು ವರ್ಷ |
|---|---|---|---|
| 1. | ಮೆ. ಕೋರ್ ಗ್ರೀನ್ ಷುಗರ್ ಅಂಡ್ ಫ್ಯೂಯಲ್ ಪ್ರೈವೇಟ್ ಲಿಮಿಟೆಡ್ | 0.599162 | ಜನವರಿ 2013 |
| 2. | ಮೆ. ಚಾಮುಂಡೇಶ್ವರಿ ಷುಗರ್ಸ್ ಲಿಮಿಟೆಡ್ ಡಿಸ್ಟಿಲರಿ | 0.568507 | ಜುಲೈ 2012 |
| 3. | ಮೆ. ರೇಣುಕ ಷುಗರ್ಸ್, ಹವಲ್ಗ | 0.566583 | ಮೇ 2012 |
| 4. | ಮೆ. ರೇಣುಕಾ ಷುಗರ್ಸ್, ಹವಲ್ಗ | 0.556570 | ಡಿಸೆಂಬರ್ 2012 |
| 5. | ಮೆ. ಕೋರ್ ಗ್ರೀನ್ ಷುಗರ್ ಅಂಡ್ ಫ್ಯೂಯಲ್ ಪ್ರೈವೇಟ್ ಲಿಮಿಟೆಡ್ | 0.555884 | ಫೆಬ್ರವರಿ 2013 |
| **ಸರಾಸರಿ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಸರಾಸರಿ ಉತ್ಪತ್ತಿ** | | **0.569341** | |

ಅತ್ಯಧಿಕ ಉತ್ಪತ್ತಿಯನ್ನು ಜನವರಿ 2013ರಲ್ಲಿ ಸಾಧಿಸಲಾಗಿದ್ದಿತು ಎಂಬುದನ್ನು ಮೇಲಿನ ಕೋಷ್ಟಕದಿಂದ ಕಾಣಬಹುದು. ಸಾಂಪ್ರದಾಯಿಕತೆಯೊಂದಿಗಿದ್ದು, ಮೇ 2012ರಿಂದ ಫೆಬ್ರವರಿ 2013ರ ಅವಧಿಯಲ್ಲಿ ಸಾಧಿಸಲಾಗಿದ್ದ ಮೇಲೆ ತಿಳಿಸಲಾದ ಐದು ಅತ್ಯುನ್ನತ ಮಟ್ಟಗಳ ಸರಾಸರಿಯನ್ನು ವಿಶ್ಲೇಷಣೆಗಾಗಿ ಮಾನದಂಡವಾಗಿ ಪರಿಗಣಿಸಲಾಯಿತು, ಆ ಸರಾಸರಿಯು ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದಕ್ಕೆ 569 ಮಿಲೀಲೀಟರಿನಷ್ಟು ಆಗುತ್ತದೆ. ಈ ಡಿಸ್ಟಿಲರಿಗಳು ಸಾಧಿಸಿದ ಅತ್ಯುತ್ತಮ ಮಟ್ಟವು ಅಧಿನಿಯಮದ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ 500 ಮಿಲೀ ಲೀಟರುಗಳ ಗರಿಷ್ಠ ಉತ್ಪತ್ತಿಗಿಂತ (ಅಂದರೆ **ಕೋಷ್ಟಕ 3.5**ರಲ್ಲಿನ ಮೊದಲನೆಯ ಸಾಲು) ಶೇಕಡಾ 13.80ರಷ್ಟು ಅಧಿಕವಾಗಿದ್ದಿತು ಎಂಬುದಾಗಿ ಇದು ಅರ್ಥೈಸುತ್ತದೆ.

---

[17] ಮೂಲ: ರಾಷ್ಟ್ರೀಯ ಸಕ್ಕರೆ ಸಂಸ್ಥೆ, ಖಾನಪುರ.

[18] ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋ ಗ್ರಾಂ ಒಂದಕ್ಕೆ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಅಗ್ರ ಶ್ರೇಣಿಯಲ್ಲಿರುವ ಮೊದಲ ಐದು ಉತ್ತಮ ಉತ್ಪತ್ತಿಗಳು.

ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದಕ್ಕೆ 569 ಮಿಲೀ ಲೀಟರನ್ನು ಒಂದು ಪ್ರಮಾಣಕವಾಗಿ ಅಳವಡಿಸಿಕೊಂಡು, ಶುದ್ಧೀಕರಿಸಲ್ಪಟ್ಟ ಮದ್ಯಸಾರದ ನಿರೀಕ್ಷಿತ ಉತ್ಪಾದನೆ ಹಾಗೂ ಅದಕ್ಕೆ ಪ್ರಮಾಣಾನುಗುಣವಾಗಿ ಮಾಡಲಾದ ಸಾಧನೆಯನ್ನು ರಸಾಯನಿಕ ವಿಶ್ಲೇಷಣಾ ವರದಿಗಳು (ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಪರಿಮಾಣವನ್ನು ನಿರ್ಧಾರಣೆ ಮಾಡಿದಂತೆ) ಲಭ್ಯವಿದ್ದ ತಿಂಗಳುಗಳಿಗೆ ಮಾತ್ರ ಲೆಕ್ಕಹಾಕಲಾಗಿದೆ. ಅಂತಹ ಒಂದು ವಿಶ್ಲೇಷಣೆಯು, ಡಿಸ್ಟಿಲರಿಗಳು ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದಕ್ಕೆ 569 ಮಿಲೀಲೀಟರುಗಳ ಪ್ರಮಾಣಕದ ಅಳವಡಿಕೆಯೊಂದಿಗೆ ಹೋಲಿಸಿದಲ್ಲಿ ಡಿಸ್ಟಿಲರಿಗಳು 4.23 ಕೋಟಿ ಬೃಹತ್ ಲೀಟರುಗಳಷ್ಟು ಮದ್ಯಸಾರವನ್ನು ಕಡಿಮೆ ಪ್ರಮಾಣದಲ್ಲಿ ಉತ್ಪಾದಿಸಿದ್ದವು ಎಂಬುದನ್ನು ತೋರಿಸಿಕೊಟ್ಟಿತು (ಈ ಡಿಸ್ಟಿಲರಿಗಳು ವಾಸ್ತವಿಕವಾಗಿ ಉತ್ಪಾದಿಸಿದ 31.48 ಕೋಟಿ ಬೃಹತ್ ಲೀಟರುಗಳಿಗೆ ಪ್ರತಿಯಾಗಿ), ಅವುಗಳ ವಿವರಗಳನ್ನು **ಅನುಬಂಧ *III* (ಎ) ಯಿಂದ *III* (ಎಚ್)**ಗಳಲ್ಲಿ ನೀಡಲಾಗಿದೆ.

ಆಲ್ಕೊಹಾಲಿನ ವಾಸ್ತವಿಕ ಸಂಸ್ಕರಣೆಯು ಕಿಣ್ವೀಸುವಿಕೆ/ಹುದುಗಿಸುವಿಕೆಯಾಗಿರುತ್ತದೆ. ಕಿಣ್ವೀಸುವಿಕೆ/ಹುದುಗಿಸುವಿಕೆಯ ಸಂಸ್ಕರಣೆಗೆ ಒಳಪಟ್ಟ ಸಕ್ಕರೆಯಲ್ಲಿ ಇರುವ ಆಲ್ಕೋಹಾಲನ್ನು ಪಡೆಯುವಲ್ಲಿ ಇರುವಂತಹ ಗಮನಾರ್ಹವಾದಂತಹ ವ್ಯತ್ಯಯಗಳು ಡಿಸ್ಟಿಲರಿಗಳಲ್ಲಿನ ಉತ್ಪಾದನೆ ಮತ್ತು ಒಟ್ಟಾರೆ ಮೇಲ್ವಿಚಾರಣೆಯ ನಿಯಂತ್ರಣದಲ್ಲಿ ಒಂದು ದೊಡ್ಡ ಚಿಂತಿಸಬೇಕಾದ ವಿಷಯವಾಗಿರುತ್ತದೆ. ಡಿಸ್ಟಿಲರಿಗಳು ಘೋಷಿಸಿಕೊಂಡಿದ್ದ 31.48 ಕೋಟಿ ಬೃಹತ್ ಲೀಟರುಗಳಷ್ಟು ಶುದ್ಧೀಕರಿಸಲ್ಪಟ್ಟ ಮದ್ಯಸಾರದ ವಾಸ್ತವಿಕ ಉತ್ಪಾದನೆಗೆ ಮೀರಿದಂತೆ 2.19 ಕೋಟಿಯಿಂದ (ಶೇಕಡಾ 6.96 – ಕಂಡಿಕೆ 3.4.9.2 (ಎ)) 4.23 ಕೋಟಿ ಬೃಹತ್ ಲೀಟರುಗಳಷ್ಟು (ಶೇಕಡಾ 13.44 – ಕಂಡಿಕೆ 3.4.9.2 (ಬಿ)) ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಹೆಚ್ಚುವರಿ ಉತ್ಪಾದನೆ ಇರುವುದನ್ನು ಶೇಕಡಾ 15.25 ಮಾಹಿತಿಯು ತೋರಿಸಿಕೊಟ್ಟಿತು. ಕಡಿಮೆ ಪ್ರಮಾಣದಲ್ಲಿ ಉತ್ಪಾದಿಸಲಾದ ಶುದ್ಧೀಕರಿಸಲ್ಪಟ್ಟ ಮದ್ಯಸಾರದಿಂದ ನಿರೀಕ್ಷಿಸಬಹುದಾಗಿದ್ದ ಕುಡಿಯಲು ಯೋಗ್ಯವಾದ ಮದ್ಯದ ಪ್ರಮಾಣವು 4.46 ಕೋಟಿ[19] ಬೃಹತ್ ಲೀಟರುಗಳು ಮತ್ತು 8.61 ಕೋಟಿ[20] ಬೃಹತ್ ಲೀಟರುಗಳ ಅಂತರದಲ್ಲಿದ್ದಿತು. ಅದರಿಂದ ನಿರೀಕ್ಷಿಸಬಹುದಾಗಿದ್ದ ಕನಿಷ್ಠ ವರಮಾನವು ₹ 633.32 ಕೋಟಿ[21] ಮತ್ತು ₹ 1,222.62 ಕೋಟಿ[22]. ಅಂತರದಲ್ಲಿದ್ದಿತು.

ಅಲ್ಲದೆಯೇ, ಇಲಾಖೆಯು ಕಿಣ್ವೀಸುವಿಕೆ/ಹುದುಗಿಸುವಿಕೆ ಮತ್ತು ಬಟ್ಟಿ ಇಳಿಸುವಿಕೆ ಸಂಸ್ಕರಣೆಗಳಲ್ಲಿ ತಂತ್ರಜ್ಞಾನದ ಅಭಿವೃದ್ಧಿಗಳನ್ನು ಅದರಲ್ಲೂ ವಿಶೇಷವಾಗಿ ಆಲ್ಕೋಹಾಲಿನ ಹೆಚ್ಚುವರಿ ಉತ್ಪತ್ತಿಯನ್ನು ಪಡೆಯುವ ಸಲುವಾಗಿ ಕಿಣ್ವ/ಎಂಜೈಮುಗಳನ್ನು ಬಳಸಿಕೊಂಡು ಕಿಣ್ವನ ಸಾಧ್ಯವಿರದ/ಹುದುಗುಕಾರಿಯಾಗಿರದ ಸಕ್ಕರೆಯನ್ನು ಕಿಣ್ವನ ಸಾಧ್ಯವಿರುವ/ಹುದುಗುಕಾರಿಯಾಗಿರುವ ಸಕ್ಕರೆಯನ್ನಾಗಿ ಪರಿವರ್ತಿಸುವ ಕಿಣ್ವಕ ಪ್ರತಿಕ್ರಿಯೆಯ ಹುದುಗಿಸುವಿಕೆ/ಕಿಣ್ವನಗೊಳಿಸುವಿಕೆಯನ್ನು ಪರಿಗಣಿಸಿರಲಿಲ್ಲ.

ಆದ್ದರಿಂದ, ಹೆಚ್ಚಿನ ಪರಿಣಾಮಕಾರಿತ್ವದಿಂದ ಕೂಡಿರುವ ಸಲುವಾಗಿ ನಿರ್ದಿಷ್ಟಪಡಿಸಲಾಗಿದ್ದ ಪ್ರಮಾಣಕಗಳನ್ನು ಚಲಾಯಿಸುವ ಮೂಲಕ ಹಾಗೂ ಡಿಸ್ಟಿಲರಿಗಳಲ್ಲಿನ ಉತ್ಪಾದನೆಯ ಮೇಲೆ ಮೇಲ್ವಿಚಾರಣೆಯನ್ನು ಇಲಾಖೆಯು ಪುನರ್–ವಿಮರ್ಶಿಸುವ ಅಗತ್ಯತೆ ಇರುತ್ತದೆ ಎಂಬುದಾಗಿ ಲೆಕ್ಕಪರಿಶೋಧನೆಯು ತೀರ್ಮಾನಕ್ಕೆ ಬರುತ್ತಿದೆ.

ಇದನ್ನು ಜುಲೈ 2017ರಲ್ಲಿ ಸ್ಪಷ್ಟಪಡಿಸಿದನಂತರ, ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪತ್ತಿಯ ದರವು ಕೇವಲ ಕಿಣ್ವನ ಸಾಧ್ಯವಿರುವ/ಹುದುಗುಕಾರಿಯಾಗಿರುವುದರ ಮೇಲೆ ಹಾಗೂ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಮೇಲೆ ಮಾತ್ರವಲ್ಲದೆ ಕಾಕಂಬಿಯ ಇತರೆ ಅಂಶಗಳ ಮೇಲೆಯೂ ಕೂಡ ಅವಲಂಭಿತವಾಗಿರುತ್ತದೆ ಎಂಬುದಾಗಿ ಸರ್ಕಾರ ಮತ್ತು ಇಲಾಖೆಯು ತಿಳಿಸಿದವು (ಅಕ್ಟೋಬರ್ 2017).

---

[19] 2.19 ಕೋಟಿ ಬೃಹತ್ ಲೀಟರುಗಳಷ್ಟು ಶುದ್ಧೀಕರಿಸಲ್ಪಟ್ಟ ಮದ್ಯಸಾರ X 166 (ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪತ್ತಿಯ ಸಾಮರ್ಥ್ಯ ÷ 75 (ಕುಡಿಯಲು ಯೋಗ್ಯವಾದ ಮದ್ಯಕ್ಕೆ ನಿರ್ದಿಷ್ಟಪಡಿಸಲಾಗಿರುವ ಉತ್ಪತ್ತಿಯ ಸಾಮರ್ಥ್ಯ ಇದು 4.85 ಕೋಟಿ ಬೃಹತ್ ಲೀಟರುಗಳಷ್ಟು ಕುಡಿಯಲು ಯೋಗ್ಯವಾದ ಮದ್ಯದ ನಿರೀಕ್ಷಿತ ಉತ್ಪತ್ತಿಯನ್ನು ನೀಡುತ್ತದೆ. ಮಿಶ್ರಣ ಪ್ರಕ್ರಿಯೆ ಹಾಗೂ ಬಾಟಲಿಗಳಿಗೆ ತುಂಬುವ ಪ್ರಕ್ರಿಯೆಗಳ ಸಮಯದಲ್ಲಿ ವ್ಯರ್ಥಗಳಿಗಾಗಿ ಅಬಕಾರಿ ಅಧಿನಿಯಮ/ನಿಯಮಗಳ ಅಡಿಯಲ್ಲಿ ಶೇಕಡಾ 8ರ ವ್ಯರ್ಥಕ್ಕೆ ಅನುವು ಮಾಡಿದನಂತರ, ಕುಡಿಯಲು ಯೋಗ್ಯವಾದ ಮದ್ಯದ ನಿವ್ವಳ ಪರಿಮಾಣವು 4.46 ಕೋಟಿ ಬೃಹತ್ ಲೀಟರುಗಳಷ್ಟಾಗುತ್ತದೆ.

[20] 4.23 ಕೋಟಿ ಬೃಹತ್ ಲೀಟರುಗಳಷ್ಟು ಶುದ್ಧೀಕರಿಸಲ್ಪಟ್ಟ ಮದ್ಯಸಾರ X 166 (ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪತ್ತಿಯ ಸಾಮರ್ಥ್ಯ) ÷ 75 (ಕುಡಿಯಲು ಯೋಗ್ಯವಾದ ಮದ್ಯಕ್ಕೆ ನಿರ್ದಿಷ್ಟಪಡಿಸಲಾಗಿರುವ ಉತ್ಪತ್ತಿಯ ಸಾಮರ್ಥ್ಯ) ಇದು 9.36 ಕೋಟಿ ಬೃಹತ್ ಲೀಟರುಗಳಷ್ಟು ಕುಡಿಯಲು ಯೋಗ್ಯವಾದ ಮದ್ಯದ ನಿರೀಕ್ಷಿತ ಉತ್ಪತ್ತಿಯನ್ನು ನೀಡುತ್ತದೆ. ಮಿಶ್ರಣ ಪ್ರಕ್ರಿಯೆ ಹಾಗೂ ಬಾಟಲಿಗಳಿಗೆ ತುಂಬುವ ಪ್ರಕ್ರಿಯೆಗಳ ಸಮಯದಲ್ಲಿ ವ್ಯರ್ಥಗಳಿಗಾಗಿ ಅಬಕಾರಿ ಅಧಿನಿಯಮ/ನಿಯಮಗಳ ಅಡಿಯಲ್ಲಿ ಶೇಕಡಾ 8ರ ವ್ಯರ್ಥಕ್ಕೆ ಅನುವು ಮಾಡಿದನಂತರ, ಕುಡಿಯಲು ಯೋಗ್ಯವಾದ ಮದ್ಯದ ನಿವ್ವಳ ಪರಿಮಾಣವು 8.61 ಕೋಟಿ ಬೃಹತ್ ಲೀಟರುಗಳಷ್ಟಾಗುತ್ತದೆ.

[21] 4.46 ಕೋಟಿ ಬೃಹತ್ ಲೀಟರುಗಳಷ್ಟು ಕುಡಿಯಲು ಯೋಗ್ಯವಾದ ಮದ್ಯಕ್ಕೆ ಬೃಹತ್ ಲೀಟರು ಒಂದಕ್ಕೆ ₹ 142ರ ಅತ್ಯಂತ ಕಡಿಮೆ ದರದಲ್ಲಿ ಅಬಕಾರಿ ಸುಂಕ ಮತ್ತು ಹೆಚ್ಚುವರಿ ಅಬಕಾರಿ ಸುಂಕ.

[22] 8.61 ಕೋಟಿ ಬೃಹತ್ ಲೀಟರುಗಳಷ್ಟು ಕುಡಿಯಲು ಯೋಗ್ಯವಾದ ಮದ್ಯಕ್ಕೆ ಬೃಹತ್ ಲೀಟರು ಒಂದಕ್ಕೆ ₹ 142ರ ಅತ್ಯಂತ ಕಡಿಮೆ ದರದಲ್ಲಿ ಅಬಕಾರಿ ಸುಂಕ ಮತ್ತು ಹೆಚ್ಚುವರಿ ಅಬಕಾರಿ ಸುಂಕ.

ಕಿಣ್ವಿಸುವಿಕೆ/ಹುದುಗಿಸುವಿಕೆ ಮತ್ತು ಬಟ್ಟಿ ಇಳಿಸುವಿಕೆ ಸಂಸ್ಕರಣೆಗಳ ಸ್ಥಾವರಗಳನ್ನು ವಿನ್ಯಾಸಗೊಳಿಸುವಲ್ಲಿ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪಾದನೆಯ ಮೇಲೆ ಪ್ರಭಾವವನ್ನು ಬೀರಬಹುದಾದ ಎಲ್ಲಾ ಅಂಶಗಳನ್ನೂ ಪರಿಗಣನೆಗೆ ತೆಗೆದುಕೊಂಡಿರುವುದರಿಂದ ಉತ್ತರವು ನ್ಯಾಯಸಮ್ಮತವಾಗಿ ಕಂಡುಬರಲಿಲ್ಲ. ಮುಂದುವರೆದು, ಉತ್ಪತ್ತಿಯನ್ನು ಲೆಕ್ಕಹಾಕುವ ಸಲುವಾಗಿ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪತ್ತಿಯನ್ನು ಉತ್ತಮಗೊಳಿಸುವ ಸಲುವಾಗಿ ಕಿಣ್ವನ ಸಾಧ್ಯವಿರದ/ಹುದುಗುಕಾರಿಯಾಗಿರದ ಸಕ್ಕರೆಯನ್ನು ಕಿಣ್ವನ ಸಾಧ್ಯವಿರುವ/ ಹುದುಗುಕಾರಿಯಾಗಿರುವ ಸಕ್ಕರೆಯನ್ನಾಗಿ ಪರಿವರ್ತಿಸುವಲ್ಲಿ ತಂತ್ರಜ್ಞಾನದ ಮುನ್ನಡೆಗಳನ್ನು ಗಣನೆಗೆ ತೆಗೆದುಕೊಂಡಿರಲಿಲ್ಲ.

## ಬಿ) ಸ್ಥಾವರಗಳ ರೂಪಿಸಲ್ಪಟ್ಟಿರುವ ದಕ್ಷತೆಗಳಿಗೆ ಸಂಬಂಧಿಸಿದಂತೆ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪಾದನೆಯ ವಿಶ್ಲೇಷಣೆ

ಡಿಸ್ಟಿಲರಿಗಳಲ್ಲಿ ಸ್ಥಾಪಿಸಲಾಗಿರುವ ಕಿಣ್ವಿಸುವಿಕೆ/ಹುದುಗಿಸುವಿಕೆ ಮತ್ತು ಬಟ್ಟಿ ಇಳಿಸುವಿಕೆ ಸಂಸ್ಕರಣೆಗಳ ಸ್ಥಾವರಗಳನ್ನು ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪತ್ತಿಯಲ್ಲಿ ಒಂದು ನಿರ್ದಿಷ್ಟ ದಕ್ಷತೆಯನ್ನು[23] ಹೊಂದಿರುವ ರೀತಿಯಲ್ಲಿ ವಿನ್ಯಾಸಗೊಳಿಸಲಾಗಿರುತ್ತದೆ. ಈ ನಿಟ್ಟಿನಲ್ಲಿ, ಲೆಕ್ಕಪರಿಶೋಧನೆಯು ಎಂಟು ಡಿಸ್ಟಿಲರಿಗಳಿಂದ ವಿನ್ಯಾಸ/ರೂಪುರೇಖೆ ದಕ್ಷತೆಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿತು ಹಾಗೂ ವೈಯಕ್ತಿಕ ಸ್ಥಾವರಗಳ ವಿನ್ಯಾಸಗೊಳಿಸಲ್ಪಟ್ಟಿರುವ ದಕ್ಷತೆಯಿಂದ ಕಾರ್ಯಾಚರಣೆಯ ದಕ್ಷತೆಯಲ್ಲಿನ ಮಾರ್ಗಾಂತರಣಗಳನ್ನು ವಿಶ್ಲೇಷಿಸಿತು. ವಿವರಗಳನ್ನು **ಕೋಷ್ಟಕ 3.8**ರಲ್ಲಿ ನೀಡಲಾಗಿದೆ.

**ಕೋಷ್ಟಕ 3.8**

**ಡಿಸ್ಟಿಲರಿಗಳಲ್ಲಿ ಹುದುಗಿಸುವಿಕೆ/ಕಿಣ್ವಿಸುವಿಕೆ ಮತ್ತು ಭಟ್ಟಿ ಇಳಿಸುವಿಕೆ ಸ್ಥಾವರಗಳ ದಕ್ಷತೆಗಳು**

**(ದಕ್ಷತೆಯ ಅಂಕಿಸಂಖ್ಯೆಗಳು ಶೇಕಡಾವಾರಿನಂತೆ)**

| ಕ್ರಮ ಸಂಖ್ಯೆ | ಡಿಸ್ಟಿಲರಿಯ ಹೆಸರು | ಸ್ಥಾಪನೆಯ ಅವಧಿ | ಸ್ಥಾವರದ ನಿರ್ದಿಷ್ಟ ನಿರೂಪಣೆಗಳ ಪ್ರಕಾರ ಕಿಣ್ವಿಸುವಿಕೆ/ಹುದುಗುಕಾರಿಯ ಧಕ್ಷತೆ | ಸ್ಥಾವರದ ನಿರ್ದಿಷ್ಟ ನಿರೂಪಣೆಗಳ ಪ್ರಕಾರ ಡಿಸ್ಟಿಲರಿಯ ದಕ್ಷತೆ | ಸ್ಥಾವರದ ಒಟ್ಟಾರೆ ದಕ್ಷತೆ (ಅಂಕಣ 4 ÷ 100) X ಅಂಕಣ 5 | ವರದಿ ಮಾಡಲಾಗಿರುವ ಉತ್ಪಾದನೆಯ ಆಧಾರದ ಮೇರೆಗೆ ಲೆಕ್ಕ ಹಾಕಲಾದಂತೆ ಅನುಗುಣವಾದ ದಕ್ಷತೆ (ಕನಿಷ್ಠ ಮಟ್ಟದಿಂದ ಅತ್ಯಧಿಕ ಮಟ್ಟದವರೆಗೆ/ಸರಾಸರಿ |
|---|---|---|---|---|---|---|
| (1) | (2) | (3) | (4) | (5) | (6) | (7) |
| 1. | ಮೆ. ಶ್ರೀ ಚಾಮುಂಡೇಶ್ವರಿ ಷುಗರ್ಸ್ ಲಿಮಿಟೆಡ್ ಡಿಸ್ಟಿಲರಿ, ಭಾರತಿನಗರ, ಮದ್ದೂರು, ಮಂಡ್ಯ | ಮಾರ್ಚ್ 2003 | 88 | 98.5 | 86.68 | 72.13 ರಿಂದ 87.29<br>76.88 |
| 2. | ಮೆ. ರೇಣುಕಾ ಷುಗರ್ಸ್ ಲಿಮಿಟೆಡ್, ಹವಲ್ಗ, ಕಲಬುರಗಿ | 2009 | 90 | 98.0 | 88.20 | 76.02 ರಿಂದ 86.99<br>81.68 |
| 3. | ಮೆ. ಕೋರ್ ಗ್ರೀನ್ ಷುಗರ್ಸ್ ಅಂಡ್ ಫ್ಯೂಯಲ್ಸ್ ಪ್ರೈವೇಟ್ ಲಿಮಿಟೆಡ್, ಯಾದಗಿರಿ | 2009 | 90 | 98.5 | 88.65 | 68.64 ರಿಂದ 91.99<br>76.29 |
| 4. | ಮೆ. ಎನ್ಎಸ್ಎಲ್ ಷುಗರ್ಸ್ ಲಿಮಿಟೆಡ್, ಕೊಪ್ಪ, ಮದ್ದೂರು, ಮಂಡ್ಯ | ನವಂಬರ್ 2007 | 90 | 98.5 | 88.65 | 70.43 ರಿಂದ 79.40<br>76.58 |
| 5. | ಮೆ. ಶ್ರೀ ಲಕ್ಷ್ಮಿ ನರಸಿಂಹ ಡಿಸ್ಟಿಲರೀಸ್ ಪ್ರೈವೇಟ್ ಲಿಮಿಟೆಡ್, ಧಾರವಾಡ | ನವಂಬರ್ 1996 | 87 | 98.0 | 85.26 | 69.18 ರಿಂದ 76.87<br>73.19 |
| 6. | ಮೆ. ಜೆ.ಪಿ. ಡಿಸ್ಟಿಲರೀಸ್ ಲಿಮಿಟೆಡ್, ಕುಣಿಗಲ್ಲು | 2000-01 | 89 | 98.0 | 87.22 | 66.73 ರಿಂದ 85.24<br>76.31 |
| 7. | ಮೆ. ಬನ್ನಾರಿ ಅಮ್ಮನ್ ಷುಗರ್ಸ್ ಲಿಮಿಟೆಡ್, ಮೈಸೂರು | ಮಾರ್ಚ್ 2005 | 91 | 99.0 | 90.09 | 74.54 ರಿಂದ 80.34<br>78.44 |
| 8. | ಮೆ. ವಿಜಯನಗರ ಷುಗರ್ಸ್ ಪ್ರೈವೇಟ್ ಲಿಮಿಟೆಡ್, ಯಾದಗಿರಿ | ಜುಲೈ 2011 | 90 | 99.0 | 89.10 | 65.12 ರಿಂದ 84.36<br>75.81 |

ಮೇಲಿನ ಕೋಷ್ಟಕದಿಂದ ಕಾಣಬಹುದಾದಂತೆ, ತತ್ಪರಿಣಾಮವಾಗಿ ವರದಿ ಮಾಡಲ್ಪಟ್ಟಿದ್ದ ಉತ್ಪಾದನೆಗಳ ಆಧಾರದ ಮೇರೆಗಿನ ಸ್ಥಾವರಗಳ ಅನುಗುಣವಾದಂತಹ ದಕ್ಷತೆಗಳು ಶೇಕಡಾ 65.12 ಹಾಗೂ 91.99ರ ನಡುವಿನಲ್ಲಿರುತ್ತವೆ.

[23] ಡಿಸ್ಟಿಲರಿಯ ದಕ್ಷತೆಯು ನೀಡಲಾಗಿರುವ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯನ್ನು ಹುದುಗಿಸಿದಾಗ/ಕಿಣ್ವೀಕರಿಸಿದಾಗ ಸಾಧಿಸಬಹುದಾದ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಶೇಕಡಾವಾರು ಉತ್ಪತ್ತಿಯಾಗಿರುತ್ತದೆ.

ವಿವಿಧ ಸ್ಥಾವರಗಳ ದಕ್ಷತೆಗಳು ಬಹಳಷ್ಟು ತಿಂಗಳುಗಳಲ್ಲಿ ನಿರ್ದಿಷ್ಟ ನಿರೂಪಣೆಗಳ ಪ್ರಕಾರ ಇದು ಅತ್ಯಂತ ಕೆಳಮಟ್ಟದಲ್ಲಿದ್ದಿತು. ಕಿಣ್ವಿಸುವಿಕೆ/ಹುದುಗುಗಾರಿಕೆ ಹಾಗೂ ಬಟ್ಟಿ ಇಳಿಸುವಿಕೆಯನ್ನು ಸಂಪೂರ್ಣ ಮುಚ್ಚಿದ್ದ ಪೀಪಾಯಿಗಳಲ್ಲಿ ಸಂಸ್ಕರಿಸಲಾಗುವುದರಿಂದ ಇದು ಅಸ್ವಾಭಾವಿಕವಾಗಿದ್ದಿತು.

**ಶಿಫಾರಸ್ಸು 1: ಸರ್ಕಾರವು ಈ ಕೆಳಗಿನವುಗಳನ್ನು ಗಣನೆಗೆ ತೆಗೆದುಕೊಂಡು ಪ್ರಮಾಣಕಗಳನ್ನು ಪರಿಷ್ಕರಿಸುವುದನ್ನು ಪರಿಗಣಿಸಬೇಕು.**

**(i) ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಕಿಲೋಗ್ರಾಂ ಒಂದರ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪತ್ತಿ; ಮತ್ತು**

**(ii) ಡಿಸ್ಟಿಲರಿಗಳಲ್ಲಿ ಕಿಣ್ವಿಸುವಿಕೆ/ಹುದುಗುಗಾರಿಕೆ ಹಾಗೂ ಬಟ್ಟಿ ಇಳಿಸುವಿಕೆಯ ವಿನ್ಯಾಸಗೊಳಿಸಲ್ಪಟ್ಟಿರುವ ದಕ್ಷತೆಗಳು.**

ನಿರ್ಗಮನ ಮಟ್ಟದ ಸಭೆಯಲ್ಲಿ (ಅಕ್ಟೋಬರ್ 2017) ಇಲಾಖೆಯು ತಂತ್ರಜ್ಞಾನಗಳು ಅಭಿವೃದ್ಧಿಗೊಂಡಿರುವುದನ್ನು ಗಮನಿಸುವ ಹಾಗೂ ಪ್ರಮಾಣಕಗಳನ್ನು ಪ್ರತೀ ಎರಡು ವರ್ಷಗಳಿಗೆ ಒಂದು ಸಲ ಪರಿಷ್ಕರಿಸುವ ಅಗತ್ಯತೆಯಿರುತ್ತದೆ ಎಂಬುದನ್ನು ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ಒಪ್ಪಿಕೊಂಡರು.

### 3.4.9.3 ಸಕ್ಕರೆ ಕಾರ್ಖಾನೆಗಳು ಸರಬರಾಜು ಮಾಡುವ ಕಾಕಂಬಿಯಲ್ಲಿ ಇದ್ದಂತಹ ಅಧಿಕ[24] ಪ್ರಮಾಣದ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಮೇಲಿನ ನಿಯಂತ್ರಣ ಹಾಗೂ ಹತೋಟಿಯ ಅನುಪಸ್ಥಿತಿ

ಹುದುಗಿಸುವಿಕೆ/ಕಿಣ್ವಿಸುವಿಕೆ ಪ್ರಕ್ರಿಯೆಯಲ್ಲಿ ಹುದುಗಿನ ಪುಡಿಯನ್ನು (ಈಸ್ಟ್) ಸೇರಿಸುವ ಮೂಲಕ ಕಾಕಂಬಿಯಲ್ಲಿನ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಅಡಕವನ್ನು ಮಾತ್ರ ಎತನಾಲ್ ಆಲ್ಕೋಹಾಲಾಗಿ ಹುದುಗಿಸಲಾಗುವುದರಿಂದ/ಕಿಣ್ವಿಸಲಾಗುವುದರಿಂದ ಬಟ್ಟಿ ಇಳಿಸಲಾದ ಕಾಕಂಬಿಯಲ್ಲಿನ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಅಡಕವು ಪ್ರಮುಖವಾಗಿರುತ್ತದೆ. ಆದ್ದರಿಂದ, ಈ ಹಿಂದಿನ ಕಂಡಿಕೆಗಳಲ್ಲಿ ಈಗಾಗಲೇ ಚರ್ಚಿಸಿರುವಂತೆ, ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಅಧಿಕ ಪ್ರಮಾಣದ ಅಡಕವನ್ನು ಸಾಮಾನ್ಯವಾಗಿ ಅಧಿಕ ಮಟ್ಟದ/ಪ್ರಮಾಣದ ಆಲ್ಕೋಹಾಲಿನ ಉತ್ಪತ್ತಿಗಾಗಿ ಪರಿವರ್ತಿಸತಕ್ಕದ್ದು. ಸಕ್ಕರೆ ಕಾರ್ಖಾನೆಗಳು ಕಬ್ಬಿನ 'Mother Syrup'ನಿಂದ ಅದರ ಅತ್ಯುತ್ತಮ ಮಟ್ಟದಲ್ಲಿ ಸಕ್ಕರೆಯನ್ನು ಹೊರತೆಗೆಯದಿದ್ದ ಪಕ್ಷದಲ್ಲಿ, ಅದು ಅರೆಯಲಾದ ಕಬ್ಬಿನ ಮೆಟ್ರಿಕ್ ಟನ್ನು ಒಂದಕ್ಕೆ ಅಧಿಕ ಪ್ರಮಾಣದ ಕಾಕಂಬಿಯ ಉತ್ಪತ್ತಿಯನ್ನು ನೀಡುತ್ತದೆ ಹಾಗೂ ಅದು ಸಾಮಾನ್ಯ ಕಾಕಂಬಿಗಿಂತ ಅಧಿಕ ಶೇಕಡಾವಾರು ಪ್ರಮಾಣದಲ್ಲಿ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಪ್ರಮಾಣವನ್ನು ಹೊಂದಿರುತ್ತದೆ ಎಂಬುದಾತಿಯೂ ನಿರೀಕ್ಷಿಸಲಾಗುತ್ತದೆ. ಸಾಮಾನ್ಯವಾಗಿ, ಅರೆಯಲಾದ ಕಬ್ಬಿನ ಶೇಕಡಾ 3.5 ಹಾಗೂ 4.5ರ ದರದಲ್ಲಿ ಅಂದರೆ ಅರೆಯಲಾದ ಕಬ್ಬಿನ ಮೆಟ್ರಿಕ್ ಟನ್ನು ಒಂದಕ್ಕೆ 35ರಿಂದ 45 ಕಿಲೋಗ್ರಾಂಗಳಷ್ಟು ಕಾಕಂಬಿಯನ್ನು ನಿರೀಕ್ಷಿಸಲಾಗುತ್ತದೆ ಈ ಮಾದರಿಯ ಕಾಕಂಬಿಗಳು ಶೇಕಡಾ 40 ಮತ್ತು 55ರ ಒಟ್ಟಾರೆ ತಗ್ಗಿಸಲಬಲ್ಲ ಸಕ್ಕರೆಯ ಪ್ರಮಾಣವನ್ನು ಹೊಂದಿರುವುದನ್ನು ನಿರೀಕ್ಷಿಸಲಾಗುತ್ತದೆ.

ಡಿಸ್ಟಿಲರಿಗಳಿಗೆ ಸರಬರಾಜು ಮಾಡಲಾದ ಕಾಕಂಬಿಯಲ್ಲಿ ಅಧಿಕ ಪ್ರಮಾಣದ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಪ್ರಮಾಣವು ಅಡಕವಾಗಿರುವ ಸಾಧ್ಯತೆಯನ್ನು ಪರಿಶೀಲಿಸುವ ಉದ್ದೇಶದಿಂದ, ಲೆಕ್ಕಪರಿಶೋಧನೆಯು ಏಪ್ರಿಲ್ 2012ರಿಂದ ಮಾರ್ಚ್ 2017ರ ನಡುವಿನ ಐದು ಸಾಲುಗಳಲ್ಲಿ ರಾಜ್ಯದಲ್ಲಿನ 60 ಸಕ್ಕರೆ ಕಾರ್ಖಾನೆಗಳ ಪೈಕಿ 16ಕ್ಕೆ (ಶೇಕಡಾ 25) ಸಂಬಂಧಿಸಿದಂತೆ ಅರೆಯಲಾದ ಕಬ್ಬಿನ ಪರಿಮಾಣ, ಉತ್ಪತ್ತಿಯಾದ ಹಾಗೂ/ ವಿತರಿಸಲಾದ/ನೀಡಲಾದ ಕಾಕಂಬಿಯ ಗುಣಮಟ್ಟ, ಇವೇ ಮುಂತಾದ ವಿವಿಧ ಮಾಸಿಕವಾರು ವಿವರಗಳನ್ನು ಸಂಗ್ರಹಿಸಿತು. ಈ ಮಾಹಿತಿಯ ವಿಶ್ಲೇಷಣೆಯು ಈ ಕೆಳಗಿನ ಅಂಶಗಳನ್ನು ತೋರಿಸಿಕೊಟ್ಟಿತು:

- ಈ 16 ಸಕ್ಕರೆ ಕಾರ್ಖಾನೆಗಳು ಕಳೆದ ಐದು ವರ್ಷಗಳಲ್ಲಿ ಅರೆಯಲಾದಂತಹ 3.28ಕೋಟಿ ಮೆಟ್ರಿಕ್ ಟನ್ನುಗಳಷ್ಟು ಕಬ್ಬಿನಿಂದ ಉತ್ಪಾದಿಸಿದ್ದ ಕಾಕಂಬಿಯ ಒಟ್ಟಾರೆ ಪರಿಮಾಣವು 15.31 ಲಕ್ಷ ಮೆಟ್ರಿಕ್ ಟನ್ನುಗಳಾಗಿದ್ದವು;

- ಇವುಗಳ ಪೈಕಿ, ಪಡೆದುಕೊಳ್ಳಲಾದ 13 ಲಕ್ಷ ಮೆಟ್ರಿಕ್ ಟನ್ನುಗಳಷ್ಟು (ಶೇಕಡಾ 84.91) ಕಾಕಂಬಿಯನ್ನು ಅರೆಯಲಾದ ಒಟ್ಟಾರೆ ಕಬ್ಬಿನ ಶೇಕಡಾ 3.5ರಿಂದ ಶೇಕಡಾ 4.5ರ ನಿರೀಕ್ಷಿತ ಅಂತರದಲ್ಲಿದ್ದಿತು;

- 13 ಸಕ್ಕರೆ ಕಾರ್ಖಾನೆಗಳಿಂದ ಪಡೆದುಕೊಳ್ಳಲಾದ ಉಳಿದ 2.31 ಮೆಟ್ರಿಕ್ ಟನ್ನುಗಳಷ್ಟು (ಶೇಕಡಾ 15.09) ಕಾಕಂಬಿಯಲ್ಲಿ, ಕಬ್ಬಿನ ಮೆಟ್ರಿಕ್ ಟನ್ನು ಒಂದಕ್ಕೆ ಪಡೆದುಕೊಳ್ಳಲಾದ ಕಾಕಂಬಿಯು ಶೇಕಡಾ 5.5ರಿಂದ 13.47ರ ನಡುವೆ ಇದ್ದಿತಾದ್ದರಿಂದ ಈ ಕಾಕಂಬಿಯಲ್ಲಿ ಅಧಿಕ ಪ್ರಮಾಣದಲ್ಲಿ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯು ಕಂಡುಬಂದಿದ್ದಿತು. ಸಕ್ಕರೆ ಕಾರ್ಖಾನೆಗಳಲ್ಲಿ ಅಧಿಕ ಪ್ರಮಾಣದಲ್ಲಿ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಅಡಕದ ಜೊತೆಯಲ್ಲಿ ಕಾಕಂಬಿಯು ಇರುವುದನ್ನು ಹಾಗೂ ಇದು ನಿಸ್ಸಂಶಯವಾಗಿ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಅಧಿಕ ಪ್ರಮಾಣದಲ್ಲಿ ಉತ್ಪತ್ತಿಯನ್ನು ತರುತ್ತಿದ್ದಿತು ಎಂಬುದನ್ನು ಇದು ಸೂಚಿಸುತ್ತಿದ್ದಿತು.

[24] ಶೇಕಡಾ 55ಕ್ಕಿಂತಲೂ ಅಧಿಕ ಪ್ರಮಾಣದ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಪ್ರಮಾಣವನ್ನು ಹೊಂದಿರುವ ಕಾಕಂಬಿ.

- ಈ 2.31 ಲಕ್ಷ ಮೆಟ್ರಿಕ್ ಟನ್ನುಗಳಷ್ಟು ಕಾಕಂಬಿಯ ಪೈಕಿ, 15.293 ಮೆಟ್ರಿಕ್ ಟನ್ನುಗಳನ್ನು ರಫ್ತು ಮಾಡಲಾಗಿದ್ದಿತು ಅಥವಾ ರಾಜ್ಯದಲ್ಲಿನ ಪ್ರಾಣಿಗಳ ಆಹಾರ ತಯಾರಕರಿಗೆ ಸರಬರಾಜು ಮಾಡಲಾಗಿದ್ದಿತು ಹಾಗೂ ಉಳಿದ 2.16 ಲಕ್ಷ ಮೆಟ್ರಿಕ್ ಟನ್ನುಗಳ (ಶೇಕಡಾ 93.50), 1.26 ಲಕ್ಷ ಮೆಟ್ರಿಕ್ ಟನ್ನುಗಳನ್ನು (ಶೇಕಡಾ 58.53) ಸಂಬಂಧಿತ ಸಕ್ಕರೆ ಕಾರ್ಖಾನೆಗಳ ಮಾಲೀಕತ್ವದಲ್ಲಿರುವ ಐದು[25] ಡಿಸ್ಟಿಲರಿಗಳು ಬಳಸಿಕೊಂಡಿದ್ದವು ಎಂಬುದನ್ನು ಈ ಸಕ್ಕರೆ ಕರ್ಖಾನೆಗಳು ಒದಗಿಸಿದ ಅಂತಹ ಅಧಿಕ ಪ್ರಮಾಣದ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಸರಬರಾಜಿಗೆ ಸಂಬಂಧಿತ ತ:ಖ್ತೆಗಳು ತೋರಿಸಿದವು. ಉಳಿದ 0.90 ಲಕ್ಷ ಮೆಟ್ರಿಕ್ ಟನ್ನನು ರಾಜ್ಯದಲ್ಲಿನ ಪ್ರಾಥಮಿಕ ಡಿಸ್ಟಿಲರಿಗಳಿಗೆ ಸರಬರಾಜು ಮಾಡಲಾಗಿದ್ದಿತು.

ಈ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಪ್ರತಿಯೊಂದು ಬಾರಿಯೂ ಹೊರತೆಗೆಯಲಾದಂತಹ ಕಾಕಂಬಿಯ ರಸಾಯನಿಕ ವಿಶ್ಲೇಷಣೆಯನ್ನು ನಡೆಸುವ ಕಡ್ಡಾಯ ಅಗತ್ಯತೆಯ ಜೊತೆಗೆ ಅನುಸರಣಾ ಕ್ರಮವನ್ನು ತೆಗೆದುಕೊಳ್ಳುವುದು ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ. ರಸಾಯನಿಕ ಪರೀಕ್ಷಣೆಗಳನ್ನು ನಿಯತವಾಗಿ ನಡೆಸದಿರುವ ಕಾರಣದಿಂದ, ಕಾಕಂಬಿಯಲ್ಲಿನ ಅಧಿಕ ಪ್ರಮಾಣದ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಅಧಿಕ ಪ್ರಮಾಣದ ಶೇಕಡಾವಾರು ಗಮನಕ್ಕೆ ಬಾರದೇ ಹೋಗುತ್ತದೆ ಹಾಗೂ ಇದು ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಅಧಿಕ ಪ್ರಮಾಣದ ಉತ್ಪತ್ತಿಯನ್ನು ಬಚ್ಚಿಡುತ್ತದೆ/ಗುಟ್ಟಾಗಿ ಇಡುವಲ್ಲಿಗೆ ದಾರಿ ಮಾಡಿಕೊಡುತ್ತದೆ. ರಾಜ್ಯದಲ್ಲಿ ಮದ್ಯಸಾರ ಮತ್ತು ಅದರ ಇತರೆ ಉತ್ಪತ್ತಿಗಳ ಉತ್ಪಾದನೆ/ತಯಾರಿಕೆಯ ಮೇಲೆ ನಿಯಂತ್ರಣವನ್ನು ಚಲಾಯಿಸುವಲ್ಲಿ ಸರ್ಕಾರ/ಇಲಾಖೆಯಿಂದ ನಿಯಮಗಳ ಕೊರತೆಯನ್ನು ಇದು ತೋರಿಸುತ್ತದೆ.

ಇದನ್ನು ಸ್ಪಷ್ಟಪಡಿಸಿದನಂತರ, 2011–12ರಿಂದ 2013–14ರ ಮೂರು ವರ್ಷಗಳಿಗೆ ಅರೆಯಲಾದ ಕಬ್ಬು, ಉತ್ಪಾದಿಸಲಾದ ಸಕ್ಕರೆ ಹಾಗೂ ಪಡೆಯಲಾದ ಶೇಕಡಾವಾರು ಸಕ್ಕರೆಯ ಮಾಹಿತಿಯನ್ನು ಸಂಬಂಧಿತ ಪ್ರಾಧಿಕಾರದಿಂದ ಪಡೆದುಕೊಳ್ಳಲಾಗಿದ್ದಿತು ಎಂಬುದಾಗಿ ಸರ್ಕಾರ ಹಾಗೂ ಇಲಾಖೆಯು ತಿಳಿಸಿದವು. ಮುಂದುವರೆದು, ಡಿಸ್ಟಿಲರಿಗಳಿಗೆ ಸಂಬಂಧಿತ ರಸಾಯನಿಕ ವಿಶ್ಲೇಷಣೆ ವರದಿಗಳ ಬಗ್ಗೆ ಮಾಹಿತಿಯನ್ನು ಅಬಕಾರಿ ಇಲಾಖೆಯ ಕೇಂದ್ರ ರಸಾಯನಿಕ ಪ್ರಯೋಗಾಲಯದಿಂದ ಪಡೆದುಕೊಳ್ಳಲಾಯಿತು. ಈ ಎಲ್ಲಾ ಪ್ರಕರಣಗಳಲ್ಲಿಯೂ ಕಾಕಂಬಿಯಲ್ಲಿನ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯು ಬಹುಪಾಲು ಶೇಕಡಾ 50ರ ಮೇಲಿದ್ದವು ಹಾಗೂ "I" ದರ್ಜೆಯ ಕಾಕಂಬಿ ಎಂಬುದಾಗಿ ವರ್ಗೀಕರಿಸಲಾಗಿದ್ದಿತು ಎಂಬುದನ್ನು ಈ ವರದಿಗಳು ಸುಸ್ಪಷ್ಟವಾಗಿ ಸೂಚಿಸುತ್ತವೆ.

ರಾಜ್ಯದಲ್ಲಿನ ಸಕ್ಕರೆ ಕಾರ್ಖಾನೆಗಳು ಉತ್ಪಾದಿಸಿದ್ದ ಕಾಕಂಬಿಯು ಶೇಕಡಾ 50ರಷ್ಟು ಅಥವಾ ಅದಕ್ಕೂ ಅಧಿಕ ಪ್ರಮಾಣದಲ್ಲಿ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯೊಂದಿಗೆ "I" ದರ್ಜೆಯದಾಗಿದ್ದಿತು ಎಂಬುದು ಉತ್ತರದಿಂದ ಸುಸ್ಪಷ್ಟಗೊಳ್ಳುತ್ತದೆ. ಈ ಸನ್ನಿವೇಶದಲ್ಲಿ ಡಿಸ್ಟಿಲರಿಗಳು ಅಧಿಕ ಪ್ರಮಾಣದ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಅಡಕದೊಂದಿಗಿನ ಕಾಕಂಬಿಯನ್ನು ಸ್ವೀಕರಿಸಿರುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ರಾಷ್ಟ್ರೀಯ ಸಕ್ಕರೆ ಸಂಸ್ಥೆ, ಖಾನಪುರ, ಇದರ ಪ್ರಕಾರ ಬಹಳ ಸಾಂದ್ರವಾದ ಕಾಕಂಬಿಯಲ್ಲಿ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯ ಪ್ರಮಾಣವು ಶೇಕಡಾ 50ರಿಂದ 89ರವರೆಗೆ ಇರುತ್ತದೆ ಹಾಗೂ ಅದು ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಅಧಿಕ ಪ್ರಮಾಣದ ಉತ್ಪತ್ತಿಯನ್ನು ನೀಡುತ್ತದೆ. ಆದಾಗ್ಯೂ, ಈ ಅಂಶವು ನಿಯಂತ್ರಣಕ್ಕೆ ಒಳಪಡದೆಯೇ ಉಳಿದುಕೊಂಡಿದ್ದು ಎಲ್ಲಾ "I" ದರ್ಜೆಯ ಕಾಕಂಬಿಯನ್ನು ಮೆಟ್ರಿಕ್ ಟನ್ನು ಒಂದಕ್ಕೆ ಕೇವಲ 240 ಬೃಹತ್ ಲೀಟರುಗಳ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಒಂದು ಸಾಮಾನ್ಯ ಉತ್ಪಾದನಾ ಪ್ರಮಾಣಕದ ಆಧಾರದ ಮೇರೆಗೆ ನೀಡಲಾಗುತ್ತಿದೆ. ಕಡೆಯ ಪಕ್ಷ ಎಲ್ಲಾ ಡಿಸ್ಟಿಲರಿಗಳಲ್ಲಿನ ಕಾಕಂಬಿ ಸ್ವೀಕೃತಿಗಳ ಒಂದು ಮಾದರಿ ರಸಾಯನಿಕ ವಿಶ್ಲೇಷಣೆಯು, ಬಹಳ ಸಾಂದ್ರವಾದ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯೊಂದಿಗಿನ ಕಾಕಂಬಿಯ ಅಂತಹ ಹರಿವನ್ನು ತೋರಿಸಿಕೊಡುವುದು.

## 3.4.10 ಡಿಸ್ಟಿಲರಿ ಅಧಿಕಾರಿಗಳ ಲೋಪದೋಷಗಳಿಂದ ಕೂಡಿದ ಕಾರ್ಯನಿರ್ವಹಣೆಯ ಕಾರಣ ನಿಯಂತ್ರಣದಲ್ಲಿನ ಲೋಪದೋಷಗಳು ಹಾಗೂ ವರಮಾನದ ನಷ್ಟ

ಕರ್ನಾಟಕ ಅಬಕಾರಿ (ಡಿಸ್ಟಿಲರಿ ಮತ್ತು ಉಗ್ರಾಣ) ನಿಯಮಗಳು, 1967ರನಿಯಮ 20ರ ಪ್ರಕಾರ, ಒಂದು ಡಿಸ್ಟಿಲರಿಯು ಅಬಕಾರಿ ಇಲಾಖೆಯ ಉಪ–ಆಯುಕ್ತರವರಿಗೆ ಅಧೀನ ಅಧಿಕಾರಿಯಾಗಿರುವಂತಹ ಡಿಸ್ಟಿಲರಿ ಅಧಿಕಾರಿಯವರ ನೇರ ಮೇಲ್ವಿಚಾರಣೆಯ ಅಡಿಯಲ್ಲಿ ಕಾರ್ಯನಿರ್ವಹಿಸತಕ್ಕದ್ದು. ಕರ್ನಾಟಕ ಅಬಕಾರಿ ಅಧಿನಿಯಮ ಹಾಗೂ ನಿಯಮಗಳ ಅನುವುಗಳನ್ನು ಅನುಸರಿಸುವುದನ್ನು ಅಬಕಾರಿ ಇಲಾಖೆಯ ಉಪ–ಆಯುಕ್ತರವರು ಕಾಲಾನುಕಾಲಕ್ಕೆ ನೀಡುವ ನಿರ್ದೇಶನದ ಪ್ರಕಾರ ಡಿಸ್ಟಿಲರಿ ಅಧಿಕಾರಿಯವರು ಸ್ವತ: ಅಥವಾ ಅವರ ಅಧೀನ ಅಧಿಕಾರಿ/ಸಿಬ್ಬಂದಿಯ ಮೂಲಕ ಮೇಲ್ವಿಚಾರಣೆ ಮಾಡುತ್ತಾರೆ. ಡಿಸ್ಟಿಲರಿಗಳು ಸ್ವೀಕರಿಸುವ ಕಾಕಂಬಿ ಅಥವಾ ಇತರೆ ಕಚ್ಚಾ ಸಾಮಗ್ರಿಗಳು ಅಬಕಾರಿ ಇಲಾಖೆಯ ಆಯುಕ್ತರವರು ಮಾಡಿರುವ ಹಂಚಿಕೆಯ

[25] ಮೆ. ಕೋರ್ ಗ್ರೀನ್ ಶುಗರ್ಸ್ ಅಂಡ್ ಫ್ಯೂಯಲ್ಸ್ (ಪ್ರೈ) ಲಿಮಿಟೆಡ್, ಮೆ. ರೇಣುಕಾ ಶುಗರ್ಸ್ ಲಿಮಿಟೆಡ್, ಅಥಣಿ, ಮೆ. ರೇಣುಕಾ ಶುಗರ್ಸ್ ಲಿಮಿಟೆಡ್, ಮನೋಳಿ, ಮೆ. ರೇಣುಕಾ ಶುಗರ್ಸ್ ಲಿಮಿಟೆಡ್, ನಿಪ್ಪಾಣಿ ಹಾಗೂ ಮೆ. ಉಗರ್ ಶುಗರ್ಸ್ ಲಿಮಿಟೆಡ್, ನಿಪ್ಪಾಣಿ.

ಅನುಸಾರವೇ ಆಗಿರುತ್ತದೆ ಎಂಬುದನ್ನು ಖಚಿತಪಡಿಸಿಕೊಳ್ಳುವಲ್ಲಿ ಡಿಸ್ಟಿಲರಿ ಅಧಿಕಾರಿಯವರು ಜವಾಬ್ದಾರಿಯುತರಾಗಿರುತ್ತಾರೆ. ಅದೇ ಡಿಸ್ಟಿಲರಿಯಲ್ಲಿ ಅಥವಾ ಇತರರಿಂದ ಕುಡಿಯಲು ಯೋಗ್ಯವಾದ ಮದ್ಯದ ತಯಾರಿಕೆಗಾಗಿ ಅಥವಾ ಕುಡಿಯುವ ಉದ್ದೇಶಕ್ಕಲ್ಲದೆ ಇತರ ಉದ್ದೇಶಗಳಿಗಾಗಿ ಮುಂಚಿತವಾಗಿಯೇ ಹಂಚಿಕೆ ಮಾಡುವುದರೊಂದಿಗೆ ಹಾಗೂ ಸಾಗಾಣಿಕೆಗಾಗಿ ನೀಡಲಾದ ಅಗತ್ಯ ಪರವಾನಿಗೆಗಳೊಂದಿಗೆ ಮದ್ಯಸಾರದ ನೀಡಿಕೆಯನ್ನೂ ಸಹ ಡಿಸ್ಟಿಲರಿ ಅಧಿಕಾರಿಯವರು ಖಚಿತಪಡಿಸಿಕೊಳ್ಳುತ್ತಾರೆ.

ನಿರ್ದಿಷ್ಟ ನಿಯಂತ್ರಣಗಳನ್ನು ಜಾರಿಗೊಳಿಸುವಲ್ಲಿ ಹಾಗೂ ಅದರಿಂದಾಗಿ ತನ್ನ ಗುರಿಯನ್ನು ಸಾಧಿಸಿಕೊಳ್ಳುವಲ್ಲಿ ಇಲಾಖೆಗೆ ಸಹಾಯ ಮಾಡುವಲ್ಲಿ ನಿಯಂತ್ರಣಗಳ ಪರಿಣಾಮಕಾರಿತ್ವವನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಡಿಸ್ಟಿಲರಿ ಅಧಿಕಾರಿಗಳ ಕಾರ್ಯನಿರ್ವಹಣೆಯನ್ನು ಲೆಕ್ಕಪರಿಶೋಧನೆಯು ಮೌಲ್ಯಮಾಪನ ಮಾಡಿತು. ರೂಪಿಸಲಾಗಿದ್ದ ನಿಯಂತ್ರಣಗಳು ಹಾಗೂ ಅಲ್ಲದೆಯೇ ವ್ಯವಸ್ಥೆ ಮಾಡಲಾಗಿದ್ದ ನಿಯಂತ್ರಣಗಳನ್ನು ಕಾರ್ಯಗತಗೊಳಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವಲ್ಲಿ ಬಹಳಷ್ಟು ಅಂತರಗಳಿದ್ದವು ಎಂಬುದನ್ನು ಮೌಲ್ಯಮಾಪನವು ತೋರಿಸಿಕೊಟ್ಟಿತು. ಡಿಸ್ಟಿಲರಿ ಅಧಿಕಾರಿಗಳಿಗೆ ಸಂಬಂಧಿಸಿದಂತೆ ಪ್ರತಿಯೊಂದು ನಿಯಂತ್ರಣದ ಅಡಿಯಲ್ಲಿಯೂ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ನಿರ್ದಿಷ್ಟ ನಿಯಂತ್ರಣವಾರು ಅಂಶಗಳನ್ನು ಹಾಗೂ ಲೋಪದೋಷಗಳನ್ನು ಈ ಕೆಳಗೆ ನೀಡಲಾಗಿದೆ:

### 3.4.10.1 ಪ್ರಾಥಮಿಕ ಡಿಸ್ಟಿಲರಿಗಳು ಖರೀದಿಸಿದ್ದ ಕಾಕಂಬಿಗೆ ಲೆಕ್ಕ ಇಡದಿದ್ದುದು

ಡಿಸ್ಟಿಲರಿಯನ್ನು ನಡೆಸುವವರು ಅಬಕಾರಿ ಇಲಾಖೆಯ ಆಯುಕ್ತರವರಿಂದ ಕಾಲಾನುಕಾಲಕ್ಕೆ ಅಗತ್ಯವಿರುವ ನಮೂನೆಯಲ್ಲಿ ಲೆಕ್ಕಪತ್ರಗಳನ್ನು ನಿಯತವಾಗಿ ನಿರ್ವಹಿಸತಕ್ಕದ್ದು ಹಾಗೂ ಅಂತಹ ಲೆಕ್ಕಪತ್ರಗಳು ಡಿಸ್ಟಿಲರಿ ಅಧಿಕಾರಿಯವರು ಎಲ್ಲಾ ಸಮಯಗಳಲ್ಲಿಯೂ ಪರೀಕ್ಷಣೆ ಮಾಡಲು ಮುಕ್ತವಾಗಿರತಕ್ಕದ್ದು ಎಂಬುದಾಗಿ ಕರ್ನಾಟಕ ಅಬಕಾರಿ (ಡಿಸ್ಟಿಲರಿ ಮತ್ತು ಉಗ್ರಾಣ) ನಿಯಮಗಳು, 1967ರ ನಿಯಮ 24 (1) ನಿರ್ದಿಷ್ಟಪಡಿಸಿದೆ.

ಪ್ರಾಥಮಿಕ ಡಿಸ್ಟಿಲರಿಗಳು ತಮ್ಮ ಎಲ್ಲಾ ಕಚ್ಚಾ ಸಾಮಗ್ರಿಗಳ ಖರೀದಿಯನ್ನು ಲೆಕ್ಕಕ್ಕೆ ತೆಗೆದುಕೊಂಡಿವೆ ಎಂಬುದನ್ನು ಖಚಿತಪಡಿಸಿಕೊಳ್ಳುವ ದೃಷ್ಟಿಯಿಂದ, ರಾಜ್ಯದಲ್ಲಿನ 60 ಸಕ್ಕರೆ ಕಾರ್ಖಾನೆಗಳ ಪೈಕಿ 30 ಸಕ್ಕರೆ ಕಾರ್ಖಾನೆಗಳಿಂದ ಇನ್ವಾಯ್ಸುವಾರು ಕಾಕಂಬಿಯ ಸರಬರಾಜಿನ ವಿವರಗಳನ್ನು ಪಡೆದುಕೊಳ್ಳಲಾಯಿತು ಹಾಗೂ ಪ್ರಾಥಮಿಕ ಡಿಸ್ಟಿಲರಿಗಳ ಖರೀದಿ ಲೆಕ್ಕಗಳ ಜೊತೆ ಅಡ್ಡ–ಪರಿಶೀಲನೆ ಮಾಡಲಾಯಿತು.

ಮೂರು[26] ಡಿಸ್ಟಿಲರಿಗಳು 10 ಸಕ್ಕರೆ ಕಾರ್ಖಾನೆಗಳಿಂದ ಮೇ 2012 ಮತ್ತು ಏಪ್ರಿಲ್ 2014ರ ನಡುವೆ ಖರೀದಿಸಿದ್ದ 19,555 ಮೆಟ್ರಿಕ್ ಟನ್ನುಗಳಷ್ಟು ಕಾಕಂಬಿಯನ್ನು ಡಿಸ್ಟಿಲರಿಗಳು ಲೆಕ್ಕದಲ್ಲಿಟ್ಟಿರಲಿಲ್ಲ ಎಂಬುದನ್ನು ಅಡ್ಡ–ಪರಿಶೀಲನೆಯು ತೋರಿಸಿಕೊಟ್ಟಿತು. ಕರ್ನಾಟಕ ಅಬಕಾರಿ ಅಧಿನಿಯಮದ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಪ್ರಮಾಣಕಗಳ ಅನುಸಾರ 19,555 ಮೆಟ್ರಿಕ್ ಟನ್ನುಗಳಷ್ಟು ಕಾಕಂಬಿಯಿಂದ ನಿರೀಕ್ಷಿತ ಶುದ್ಧೀಕರಿಸಲ್ಪಟ್ಟ ಮದ್ಯಸಾರವು 43.22 ಲಕ್ಷ ಬೃಹತ್ ಲೀಟರುಗಳಾಗಿದ್ದಿತು ಹಾಗೂ ಅದರಿಂದ ಒಂದು ಕನಿಷ್ಠ 88.01 ಲಕ್ಷ ಬೃಹತ್ ಲೀಟರುಗಳಷ್ಟು ಕುಡಿಯಬಹುದಾದ ಮದ್ಯವನ್ನು ಉತ್ಪಾದನೆ ಮಾಡಬಹುದಿದ್ದಿತು. ಅದರಿಂದಾದ ಕನಿಷ್ಠ ವರಮಾನದ ಪ್ರಭಾವವು ₹ 124.97 ಕೋಟಿ[27] ಆಗುತ್ತದೆ.

ಲೆಕ್ಕಪತ್ರಗಳನ್ನು ಎಲ್ಲಾ ಸಮಯಗಳಲ್ಲಿಯೂ ಪರೀಕ್ಷಿಸಲು ಡಿಸ್ಟಿಲರಿ ಅಧಿಕಾರಿಗಳಿಗೆ ಅಧಿಕಾರವನ್ನು ನೀಡಲಾಗಿದ್ದಿತಾದರೂ ಖರೀದಿಗಳನ್ನು ಆ ರೀತಿ ಕಡಿಮೆ ಪ್ರಮಾಣದಲ್ಲಿ ಲೆಕ್ಕಕ್ಕೆ ತೆಗೆದುಕೊಂಡಿರುವುದನ್ನು ಪತ್ತೆಹಚ್ಚಿರಲಿಲ್ಲ. ಸಕ್ಕರೆ ಕಾರ್ಖಾನೆಗಳಿಂದ ಕಾಕಂಬಿಯ ರವಾನೆ ಹಾಗೂ ಡಿಸ್ಟಿಲರಿಗಳಿಗೆ ಅವುಗಳ ಸ್ವೀಕೃತಿಯವರೆಗೆ ಅಡ್ಡ–ಪರಿಶೀಲನೆ ಮಾಡುವ ಸಲುವಾಗಿ ಇಲಾಖೆಯಲ್ಲಿ ಒಂದು ವ್ಯವಸ್ಥೆಯ ಕೊರತೆಯು ಡಿಸ್ಟಿಲರಿಗಳಲ್ಲಿ ಕಾಕಂಬಿಯ ಖರೀದಿಯನ್ನು ಕಡಿಮೆ ಪ್ರಮಾಣದಲ್ಲಿ ಲೆಕ್ಕ ಇಡುವುದು ಗಮನಕ್ಕೆ ಬಾರದೇ ಹೋಗುತ್ತದೆ ಹಾಗೂ ಅಲ್ಲದೆಯೇ ಅಬಕಾರಿ ಸುಂಕವನ್ನು ಪಾವತಿಸದ ಮದ್ಯವು ಮಾರುಕಟ್ಟೆಯಲ್ಲಿ ಲಭ್ಯಗೊಳ್ಳುವ ಸಾಧ್ಯತೆಯಿರುತ್ತದೆ.

ಇದನ್ನು ಜೂನ್ 2017ರಲ್ಲಿ ಇಲಾಖೆಯ ಗಮನಕ್ಕೆ ತರಲಾಯಿತು ಹಾಗೂ ಸೆಪ್ಟಂಬರ್ 2017ರಲ್ಲಿ ಸರ್ಕಾರಕ್ಕೆ ವರದಿ ನೀಡಲಾಯಿತು; ಅವುಗಳಿಂದ ಉತ್ತರವನ್ನು ಇನ್ನೂ ಸ್ವೀಕರಿಸಿಲ್ಲ (ನವಂಬರ್ 2017).

---

[26] ಮೆ. ಚಾಮುಂಡಿ ಡಿಸ್ಟಿಲರೀಸ್ ಲಿಮಿಟೆಡ್, ಮೆ. ಜೆ.ಪಿ. ಡಿಸ್ಟಿಲರೀಸ್ ಲಿಮಿಟೆಡ್ ಮತ್ತು ಮೆ. ವಿಜಯನಗರ ಶುಗರ್ಸ್ ಲಿಮಿಟೆಡ್ (ಡಿಸ್ಟಿಲರಿ ವಿಭಾಗ).

[27] ಕುಡಿಯಲು ಯೋಗ್ಯವಾದ ಮದ್ಯ 88.01 ಲಕ್ಷ ಬೃಹತ್ ಲೀಟರು X ಬೃಹತ್ ಲೀಟರು ಒಂದಕ್ಕೆ ₹ 142 (ಅದು ರಾಜ್ಯದಲ್ಲಿ ಅತೀ ಅಗ್ಗದ ದರದ ಮದ್ಯಕ್ಕೆ ಅನ್ವಯಗೊಳ್ಳುವ ಬೃಹತ್ ಲೀಟರು ಒಂದಕ್ಕೆ ಅಬಕಾರಿ ಸುಂಕ ₹ 45 ಹಾಗೂ ಹೆಚ್ಚುವರಿ ಅಬಕಾರಿ ಸುಂಕ ₹ 97ನ್ನು ಒಳಗೊಂಡಿರುತ್ತದೆ).

### 3.4.10.2 ರಸಾಯನಿಕ ವಿಶ್ಲೇಷಣೆಗಾಗಿ ಮಾದರಿಗಳನ್ನು ಪಡೆದುಕೊಳ್ಳುವಲ್ಲಿನ ಲೋಪದೋಷ

ಡಿಸ್ಟಿಲರಿ ಅಧಿಕಾರಿಯವರು ಕಾಕಂಬಿಯಿಂದ ಮದ್ಯಸಾರವನ್ನು (wash) ತಯಾರಿಸುವ ಸಮಯದಲ್ಲಿ ಕಾಕಂಬಿಯ ಮೂರು ಮಾದರಿಗಳನ್ನು ಪಡೆದುಕೊಳ್ಳತಕ್ಕದ್ದು ಹಾಗೂ ಅಂತಹ ಮಾದರಿಗಳನ್ನು ಅವರು ಸೀಲು ಮಾಡಿಡತಕ್ಕದ್ದು ಎಂಬುದಾಗಿ ಕರ್ನಾಟಕ ಅಬಕಾರಿ (ಮದ್ಯಸಾರ, ಬಿಯರ್, ವೈನ್ ಅಥವಾ ಮದ್ಯದ ಉತ್ಪತ್ತಿ, ತಯಾರಿಕೆ ಹಾಗೂ ವ್ಯರ್ಥವಾಗುವಿಕೆಯ ನಿಯಂತ್ರಣ) ನಿಯಮಗಳು, 1998ರ ನಿಯಮ 5 ನಿರ್ದಿಷ್ಟಪಡಿಸಿದೆ. ಒಂದು ಮಾದರಿಯನ್ನು ಸರ್ಕಾರಿ ರಸಾಯನಿಕ ಪ್ರಯೋಗಾಲಯಕ್ಕೆ ಕಳುಹಿಸಿಕೊಡತಕ್ಕದ್ದು, ಎರಡನೆಯದನ್ನು ಡಿಸ್ಟಿಲರಿಯಲ್ಲಿರುವ ರಸಾಯನಿಕ ಪ್ರಯೋಗಾಲಯದಲ್ಲಿ ವಿಶ್ಲೇಷಣೆಗಾಗಿ ಡಿಸ್ಟಿಲರಿಗೆ ನೀಡುವುದು ಹಾಗೂ ಮೂರನೆಯದನ್ನು ಸ್ವತ: ಡಿಸ್ಟಿಲರಿ ಅಧಿಕಾರಿಯವರೇ ಇಟ್ಟುಕೊಳ್ಳುವುದು. ಸರ್ಕಾರಿ ರಸಾಯನಿಕ ಪ್ರಯೋಗಾಲಯದಿಂದ ವರದಿಯು ಬಂದನಂತರ, ಡಿಸ್ಟಿಲರಿ ಅಧಿಕಾರಿಯವರು ಡಿಸ್ಟಿಲರಿಯು ಸಂಸ್ಕರಿಸಿದ ಕಾಕಂಬಿಯಿಂದ ಉತ್ಪತ್ತಿ ಮಾಡಬಹುದಾಗಿದ್ದ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಪರಿಮಾಣವನ್ನು ಲೆಕ್ಕಹಾಕತಕ್ಕದ್ದು.

ರಸಾಯನಿಕ ವಿಶ್ಲೇಷಣಾ ವರದಿಯು ಕಚ್ಚಾ ಸಾಮಗ್ರಿಗಳ ವರ್ಗೀಕರಣಕ್ಕೆ ಹಾಗೂ ನಿಯಮಗಳ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಪ್ರಮಾಣಕಗಳ ಪ್ರಕಾರ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ನಿರೀಕ್ಷಿತ ಉತ್ಪತ್ತಿಯನ್ನು ಗಮನಿಸುವುದಕ್ಕೆ ಮಾತ್ರವಲ್ಲದೆಯೇ ಕರ್ನಾಟಕ ಅಬಕಾರಿ ಅಧಿನಿಯಮ ಮತ್ತು ನಿಯಮಗಳು ಈ ಹಿಂದೆ ನಿರ್ದಿಷ್ಟಪಡಿಸಿರುವ ಪ್ರಮಾಣಕಗಳ ಪರಿಷ್ಕರಣೆಯೂ ಸೇರಿದಂತೆ ತಾಂತ್ರಿಕ ಮತ್ತು ಆಡಳಿತಾತ್ಮಕ ವಿಶ್ಲೇಷಣೆಗಾಗಿಯೂ ಪ್ರಮುಖವಾಗಿರುತ್ತದೆ.

ರಾಜ್ಯದಲ್ಲಿ ಏಪ್ರಿಲ್ 2012ರಿಂದ ಮಾರ್ಚ್ 2017ರ ಅವಧಿಯಲ್ಲಿ ಎಲ್ಲಾ 33 ಪ್ರಾಥಮಿಕ ಡಿಸ್ಟಿಲರಿಗಳ ಡಿಸ್ಟಿಲರಿ ಅಧಿಕಾರಿಗಳು ಪಡೆದುಕೊಂಡಿದ್ದ ಕಾಕಂಬಿಯ ಮಾದರಿಗಳಿಗೆ ಸಂಬಂಧಿಸಿದಂತೆ ಸಂಸ್ಕರಿಸಲಾದ ತಂಡಗಳ ಸಂಖ್ಯೆ ಹಾಗೂ ಪಡೆದುಕೊಂಡಿದ್ದ ಮಾದರಿಗಳ ಸಂಖ್ಯೆಯ ಬಗ್ಗೆ ಮಾಹಿತಿಯನ್ನು ಒದಗಿಸುವಂತೆ ಕೋರಲಾಯಿತು. ಈ ನಿಟ್ಟಿನಲ್ಲಿ ಮಾಹಿತಿಯನ್ನು ಕೇವಲ 24 ಡಿಸ್ಟಿಲರಿಗಳಿಂದ[28] ಮಾತ್ರ ಸ್ವೀಕರಿಸಲಾಯಿತು. ಮಾಹಿತಿಯನ್ನು ಒದಗಿಸಿದ 24 ಡಿಸ್ಟಿಲರಿಗಳ ಪೈಕಿ, ಕೇವಲ ಮೂರು ಡಿಸ್ಟಿಲರಿಗಳು ಸಂಸ್ಕರಿಸಲಾದ ತಂಡಗಳ ವಾಸ್ತವಿಕ ಸಂಖ್ಯೆಯನ್ನು ಒದಗಿಸಿದವು ಹಾಗೂ ಉಳಿದ ಡಿಸ್ಟಿಲರಿ ಅಧಿಕಾರಿಗಳು ಪಡೆದುಕೊಳ್ಳಲಾದ ಮಾದರಿಗಳ[29] ವಾಸ್ತವಿಕ ಸಂಖ್ಯೆಯನ್ನು ಒದಗಿಸಲಿಲ್ಲ, ಆದರೆ ರಸಾಯನಿಕ ವಿಶ್ಲೇಷಣೆಗಾಗಿ ಪಡೆದುಕೊಳ್ಳಲಾದ ಮಾದರಿಗಳ ತಂಡಗಳ ಸಂಖ್ಯೆಯನ್ನು ಒದಗಿಸಿದರು. ವಿವರಗಳನ್ನು **ಕೋಷ್ಟಕ 3.9**ರಲ್ಲಿ ನೀಡಲಾಗಿದೆ.

**ಕೋಷ್ಟಕ 3.9**
**ಕಾಕಂಬಿಯ ತಂಡಗಳ ರಸಾಯನಿಕ ವಿಶ್ಲೇಷನೆಯಲ್ಲಿನ ಕೊರತೆ**

| ಡಿಸ್ಟಿಲರಿಗಳ ಸಂಖ್ಯೆ | ಸಂಸ್ಕರಿಸಲಾದ ಕಾಕಂಬಿಯ ಪರಿಮಾಣ | ಬಟ್ಟಿ ಇಳಿಸುವಿಕೆಗಾಗಿನ ಪಡೆದುಕೊಂಡ ತಂಡಗಳ ಒಟ್ಟು ಸಂಖ್ಯೆ | ರಸಾಯನಿಕ ವಿಶ್ಲೇಷಣೆಯನ್ನು ಮಾಡಲಾದ ತಂಡಗಳ ಸಂಖ್ಯೆ | ಕೊರತೆ ಶೇಕಡಾ ವಾರಿನಲ್ಲಿ |
|---|---|---|---|---|
| 03 (ಬಟ್ಟಿ ಇಳಿಸುವಿಕೆಗಾಗಿನ ಪಡೆದುಕೊಂಡ ತಂಡಗಳ ಒಟ್ಟು ಸಂಖ್ಯೆಯನ್ನು ಒದಗಿಸಿದ ಡಿಸ್ಟಿಲರಿಗಳು) | 3.10 ಲಕ್ಷ ಮೆಟ್ರಿಕ್ ಟನ್ನುಗಳು | 4,599 | 31 | 99.33 |
| 21 (ಬಟ್ಟಿ ಇಳಿಸುವಿಕೆಗಾಗಿನ ಪಡೆದುಕೊಂಡ ತಂಡಗಳ ಒಟ್ಟು ಸಂಖ್ಯೆಯನ್ನು ಒದಗಿಸದಿದ್ದ ಡಿಸ್ಟಿಲರಿಗಳು) | 52.31 ಲಕ್ಷ ಮೆಟ್ರಿಕ್ ಟನ್ನುಗಳು | 80,477[30] | 2,640 | 96.72 |

ಸಂಗ್ರಹಿಸಿದ ಮಾಹಿತಿಯ ವಿಶ್ಲೇಷಣೆಯಿಂದ ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು. ರಸಾಯನಿಕ ವಿಶ್ಲೇಷಣೆಗಾಗಿ ಪಡೆದುಕೊಂಡಿದ್ದ ಮಾದರಿಯು ಅವುಗಳ ರಸಾಯನಿಕ ವಿಶ್ಲೇಷಣೆ ಮಾಡುವುದಿರಲಿ, ಅವುಗಳು ಗಣನೆಗೆ ಬಾರದಷ್ಟು ವಿಪರೀತ ನಿಕೃಷ್ಟಮಟ್ಟದಲ್ಲಿದ್ದವು. ಇದು ಕಾಕಂಬಿಯ (ಶೇಕಡಾವಾರು ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆ) ರಸಾಯನಿಕ ಸಂಯೋಜನೆಯ ಬಗ್ಗೆ ಮಾಹಿತಿಯಿಂದ

[28] ಎರಡು ಡಿಸ್ಟಿಲರಿಗಳು ಕಾಕಂಬಿಯನ್ನು ಖರೀದಿಸಿರಲಿಲ್ಲ.

[29] ಈ ಡಿಸ್ಟಿಲರಿಗಳು ಹುದುಗಿಸುವಿಕೆ/ಕಿಣ್ವಿಸುವಿಕೆಯ ಅವಿರತ ಪ್ರಕ್ರಿಯೆಯನ್ನು ಸ್ಥಾಪಿಸಿದರೂ ಕೂಡ, ಸಂಬಂಧಿತ ಪರಿಮಿತಿಗಳ ಯಥಾರ್ಥತೆಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಅವಿರತ ಪ್ರಕ್ರಿಯೆಯು ಹೆಚ್ಚಿನ ಸಂಖ್ಯೆಯ ಪದೇಪದೇ ಪರೀಕ್ಷೆಗಳ ಅಗತ್ಯತೆಯನ್ನು ಹೊಂದಿರುತ್ತದೆ.

[30] ಪ್ರಸಕ್ತ ಅವಧಿಯಲ್ಲಿ ಪಡೆದುಕೊಳ್ಳಲಾದ ತಂಡಗಳ ಸಂಖ್ಯೆಯನ್ನು ಈ ಡಿಸ್ಟಿಲರಿಗಳು ಒದಗಿಸಲಿಲ್ಲವಾದ್ದರಿಂದ, ಲೆಕ್ಕಪರಿಶೋಧನೆಯು ತಂಡ ಒಂದಕ್ಕೆ ಬಳಸಲಾದ ಕಾಕಂಬಿಯು 65 ಮೆಟ್ರಿಕ್ ಟನ್ನುಗಳು ಎಂಬುದಾಗಿ ಪರಿಗಣಿಸಿ ಅಂದರೆ 52.31 ಲಕ್ಷ ಮೆಟ್ರಿಕ್ ಟನ್ನುಗಳು/ತಂಡ ಒಂದಕ್ಕೆ 65 ಮೆಟ್ರಿಕ್ ಟನ್ನುಗಳು = 80,477 (3.10 ಲಕ್ಷ ಮೆಟ್ರಿಕ್ ಟನ್ನುಗಳಷ್ಟು ಕಾಕಂಬಿ ÷ 3 ಡಿಸ್ಟಿಲರಿಗಳು ಸಂಸ್ಕರಿಸಿದ ತಂಡಗಳು 4,599 = 80,477) ಎಂಬುದಾಗಿ ಊಹಿಸಿತು.

ಇಲಾಖೆಯನ್ನು ವಂಚಿಸಿತು. ಅಲ್ಲದೆಯೇ, ಈಗಾಗಲೇ ಸ್ಪಷ್ಟಪಡಿಸಿರುವಂತೆ, ಅಧಿಕ ದರ್ಜೆಯ ಕಾಕಂಬಿಯು ಡಿಸ್ಟಿಲರಿಗಳ ಒಳಕ್ಕೆ ಹರಿದಿರುವ ಸಂಭಾವ್ಯತೆಯಿದ್ದು, ಕಾಕಂಬಿಯ ರಸಾಯನಿಕ ವಿಶ್ಲೇಷಣಾ ವರದಿಯು ರಾಜ್ಯದಲ್ಲಿನ ಮಾದಕ ಮದ್ಯಗಳನ್ನು ನಿಯಂತ್ರಿಸುವಲ್ಲಿ ಪ್ರಮುಖ ಮಾಹಿತಿಯಾಗಿರುತ್ತದೆ (ಕಂಡಿಕೆ 3.4.9.3ರಲ್ಲಿ ವಿವರಿಸಿರುವಂತೆ). ಅಲ್ಲದೆಯೇ, ಡಿಸ್ಟಿಲರಿ ಅಧಿಕಾರಿಗಳ ಮೇಲಿನ ಮೇಲ್ವಿಚಾರಣಾ ನಿಯಂತ್ರಣಗಳನ್ನು ಹೊಂದಿರುವ ಅಧಿಕಾರ ವ್ಯಾಪ್ತಿಯ ಅಬಕಾರಿ ಇಲಾಖೆಯ ಉಪ–ಆಯುಕ್ತರುಗಳು ಕೂಡ ಡಿಸ್ಟಿಲರಿ ಅಧಿಕಾರಿಗಳಿಂದ ಕಡ್ಡಾಯ ಅನುವುಗಳನ್ನು ಅನುಸರಿಸುವಲ್ಲಿನ ವಿಫಲತೆಯನ್ನು ಗಮನಕ್ಕೆ ತೆಗೆದುಕೊಳ್ಳುವಲ್ಲಿ ಹಾಗೂ ಸೂಕ್ತ ಅನುಸರಣಾ ಕ್ರಮಗಳನ್ನು ತೆಗೆದುಕೊಳ್ಳುವಲ್ಲಿ ವಿಫಲರಾಗಿದ್ದರು.

ತಯಾರಿಕಾ ಪ್ರಕ್ರಿಯೆಯ ಪ್ರಾರಂಭಿಕ ಹಂತದಲ್ಲಿ ನಿರ್ಧಾರಕ ಅಂಶವಾಗಿರುವ ಕಾಕಂಬಿಯ ರಸಾಯನಿಕ ವಿಶ್ಲೇಷಣೆಗೆ ಇಲಾಖೆಯು ಅರ್ಹ ಪ್ರಾಮುಖ್ಯತೆಯನ್ನು ನೀಡಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಸ್ಪಷ್ಟಪಡಿಸುತ್ತಿದೆ. ಕಾಕಂಬಿಯ ಸಾಮರ್ಥ್ಯವನ್ನು ಕಡ್ಡಾಯವಾಗಿ ಪರಿಶೀಲಿಸುವ ಜವಾಬ್ದಾರಿಯನ್ನು ಹೊಂದಿದ್ದರಾದರೂ ಡಿಸ್ಟಿಲರಿ ಅಧಿಕಾರಿಗಳು, ಅದನ್ನು ಸಮರ್ಪಕ ಪ್ರಮಾಣದಲ್ಲಿ ಮಾಡಿರಲಿಲ್ಲ. ಮಾದರಿಗಳನ್ನು ಸಮರ್ಪಕವಾಗಿ ಹಾಗೂ ಪ್ರಮಾಣಕಗಳ ಪ್ರಕಾರ ಪರಿಶೀಲಿಸುವಲ್ಲಿನ ವಿಫಲತೆಯು, ಬಳಸಲಾದ ಕಾಕಂಬಿಯ ಸಾಮರ್ಥ್ಯತೆಯನ್ನು ಇಲಾಖೆಯು ಅರಿತಿರಲಿಲ್ಲವಾದ್ದರಿಂದ ಮಾರುಕಟ್ಟೆಗೆ ಸುಂಕವನ್ನು ಪಾವತಿಸದ ಮದ್ಯವು ಹರಿಯುವ ಸಂಭಾವ್ಯತೆಯನ್ನು ನಿಯಂತ್ರಿಸುವಲ್ಲಿ ಒಂದು ವಿಸ್ತೃತ ಪ್ರಭಾವವನ್ನು ಹೊಂದಿರುತ್ತದೆ.

ಇಲಾಖೆಯಲ್ಲಿ ಅಗತ್ಯ ವಿದ್ಯಾರ್ಹತೆಯನ್ನು ಹೊಂದಿರುವ ವ್ಯಕ್ತಿಗಳ ಕೊರತೆ ಹಾಗೂ ಅಸಮರ್ಪಕ ಸಂಖ್ಯೆಯಲ್ಲಿರುವ ಸಿಬ್ಬಂದಿಯು ಲೋಪದೋಷಗಳಿಗೆ ಕಾರಣ ಎಂಬುದಾಗಿ ಇಲಾಖೆಯು ನಿರ್ಗಮನ ಸಭೆಯಲ್ಲಿ ತಿಳಿಸಿತು.

### 3.4.10.3 ಡಿಸ್ಟಿಲರಿಗಳು ಅಧಿಕ ಪ್ರಮಾಣದಲ್ಲಿ ಕೋರಿದ್ದ ಸಂಗ್ರಹಣಾ ನಷ್ಟದ ಬಗ್ಗೆ ವರದಿಯನ್ನು ಸಲ್ಲಿಸದಿದ್ದುದು

ಕರ್ನಾಟಕ ಅಬಕಾರಿ (ಉತ್ಪತ್ತಿ, ತಯಾರಿಕೆ, ಇತ್ಯಾದಿಗಳ ನಿಯಂತ್ರಣ) ನಿಯಮಗಳು, 1998ರ ನಿಯಮ 8ರ ಅಡಿಯಲ್ಲಿ ಡಿಸ್ಟಿಲರಿಗಳಲ್ಲಿ ದಾಸ್ತಾನು ಇಡಲಾಗಿರುವ ಕಾಕಂಬಿಯ ಶೇಕಡಾ ಒಂದರ ಗರಿಷ್ಠ ಮಿತಿಯನ್ನು ನಿರ್ದಿಷ್ಟಪಡಿಸಿರುವುದು. ಡಿಸ್ಟಿಲರಿ ಅಧಿಕಾರಿಯವರ ವರದಿಯನ್ನು ಪರಿಶೀಲಿಸಿದ ಮೇಲೆ ಹಾಗೂ ಅವರಿಗೆ ಸೂಕ್ತವಾಗಿದೆ ಎಂಬುದಾಗಿ ಭಾವಿಸುವ ರೀತಿಯಲ್ಲಿ ತನಿಖೆಯನ್ನು ಮಾಡಿದನಂತರ ಅಬಕಾರಿ ಆಯುಕ್ತರವರು ಮದ್ಯಸಾರದ ಸಂಸ್ಕರಣೆಯಲ್ಲಿ ಅಥವಾ ಉತ್ಪಾದನೆಯಲ್ಲಿ ಷೆಡ್ಯೂಲು–ಬಿ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ವ್ಯರ್ಥಗಳ ಗರಿಷ್ಠ ಮಿತಿಯನ್ನು ಮೀರಲು ಗುತ್ತಿಗೆದಾರರಿಗೆ ಯಾವುದೇ ಸಮರ್ಥನೀಯ ಕಾರಣಗಳು ಇರುವುದಿಲ್ಲ ಎಂಬ ಅಭಿಪ್ರಾಯಕ್ಕೆ ಬಂದಲ್ಲಿ ಕರ್ನಾಟಕ ಅಬಕಾರಿ (ಅಬಕಾರಿ ಸುಂಕಗಳು ಮತ್ತು ಶುಲ್ಕಗಳು) ನಿಯಮಗಳು, 1968ರ ಅಡಿಯಲ್ಲಿ ಬಿಯರ್, ವೈನ್ ಅಥವಾ ಇತರೆ ಮದ್ಯಗಳ ಮೇಲೆ ವಿಧಿಸಬೇಕಾದ ಅಬಕಾರಿ ಸುಂಕದ ದರದಲ್ಲಿ, ಆ ರೀತಿ ವರದಿಯಾಗಿರುವ ಅಧಿಕ ಪ್ರಮಾಣದ ವ್ಯರ್ಥಗಳ ಮೇಲೆ ದಂಡವನ್ನು ವಿಧಿಸತಕ್ಕದ್ದು ಎಂಬುದಾಗಿಯೂ ಮೇಲೆ ತಿಳಿಸಲಾದ ನಿಯಮಗಳು ಅನುವು ಮಾಡಿರುತ್ತವೆ.

ಏಪ್ರಿಲ್ 2012ರಿಂದ ಮಾರ್ಚ್ 2017ರವರೆಗಿನ ಅವಧಿಯಲ್ಲಿ ರಾಜ್ಯದಲ್ಲಿನ ಎಲ್ಲಾ ಪ್ರಾಥಮಿಕ ಡಿಸ್ಟಿಲರಿಗಳ ಕಾಕಂಬಿ ದಾಸ್ತಾನು ಲೆಕ್ಕ ತ:ಖ್ತೆಗಳ ಒಂದು ಪರಿಶೀಲನೆಯು ನಾಲ್ಕು ಡಿಸ್ಟಿಲರಿಗಳು 1,380.092 ಮೆಟ್ರಿಕ್ ಟನ್ನುಗಳಷ್ಟು ಕಾಕಂಬಿಯ ದಾಸ್ತಾನು ನಷ್ಟವನ್ನು ಕೋರಿದ್ದವು ಎಂಬುದನ್ನು ತೋರಿಸಿಕೊಟ್ಟಿತು. ಈ ಪ್ರಕರಣಗಳಲ್ಲಿ ಶೇಕಡಾ ಒಂದರ ದರದಲ್ಲಿ ಅನುಮತಿ ನೀಡಬಹುದಾದ ನಷ್ಟವು ಕೇವಲ 260.851 ಮೆಟ್ರಿಕ್ ಟನ್ನುಗಳಾಗಿದ್ದವು. ಈ ರೀತಿಯಾಗಿ ಈ ಪ್ರಕರಣಗಳಲ್ಲಿ ಡಿಸ್ಟಿಲರಿಗಳಿಂದ ಕೋರಲಾಗಿದ್ದ ಅಧಿಕ ಪ್ರಮಾಣದ ಸಂಗ್ರಹಣಾ ನಷ್ಟವು 1,119.241 ಮೆಟ್ರಿಕ್ ಟನ್ನುಗಳಾಗಿದ್ದವು ಹಾಗೂ ಅದರ ಮೇಲೆ ₹ 7.60 ಕೋಟಿ ಮೊತ್ತದಷ್ಟು ದಂಡವನ್ನು ವಿಧಿಸಿರಲಿಲ್ಲ. ಅಲ್ಲದೆಯೇ, ಡಿಸ್ಟಿಲರಿ ಅಧಿಕಾರಿಗಳು ಅಗತ್ಯ ಕ್ರಮವನ್ನು ತೆಗೆದುಕೊಳ್ಳುವ ಸಲುವಾಗಿ ಈ ಪ್ರಕರಣಗಳನ್ನು ಅಬಕಾರಿ ಆಯುಕ್ತರವರಿಗೆ ವರದಿ ಸಲ್ಲಿಸಿರಲಿಲ್ಲ. ಡಿಸ್ಟಿಲರಿ ಅಧಿಕಾರಿಗಳು ಆ ರೀತಿ ಕ್ರಮವನ್ನು ಕೈಗೊಳ್ಳದಿದ್ದುದು ಸರ್ಕಾರಕ್ಕೆ ವರಮಾನದ ಸೋರಿಕೆಯಾಗುವುದನ್ನು ತಡೆಯುವ ಸಲುವಾಗಿ ವ್ಯವಸ್ಥೆಯ ಒಳಕ್ಕೆ ಅಳವಡಿಸಲಾಗಿರುವ ನಿಯಂತ್ರಣವು ವಿಫಲಗೊಳ್ಳುವಲ್ಲಿಗೆ ದಾರಿ ಮಾಡಿಕೊಡುತ್ತದೆ.

ಇಲಾಖೆಯಲ್ಲಿ ಅಗತ್ಯ ವಿದ್ಯಾರ್ಹತೆಯನ್ನು ಹೊಂದಿರುವ ವ್ಯಕ್ತಿಗಳ ಕೊರತೆ ಹಾಗೂ ಅಸಮರ್ಪಕ ಸಂಖ್ಯೆಯಲ್ಲಿರುವ ಸಿಬ್ಬಂದಿಯು ಲೋಪದೋಷಗಳಿಗೆ ಕಾರಣ ಎಂಬುದಾಗಿ ಇಲಾಖೆಯು ನಿರ್ಗಮನ ಸಭೆಯಲ್ಲಿ ತಿಳಿಸಿತು.

### 3.4.10.4 ಡಿಸ್ಟಿಲರಿ ಅಧಿಕಾರಿಗಳಿಗೆ ಸಂಬಂಧಿಸಿದಂತೆ ಗಮನಿಸಲಾದ ಇತರೆ ಲೋಪದೋಷಗಳು

ಡಿಸ್ಟಿಲರಿ ಅಧಿಕಾರಿಗಳಿಗೆ ಸಂಬಂಧಿಸಿದಂತೆ ಮೇಲೆ ತಿಳಿಸಿದಂತೆ ಗಮನಿಸಲಾದ ಲೋಪದೋಷಗಳು/ಪ್ರಮಾದಗಳಲ್ಲದೆಯೇ, ಡಿಸ್ಟಿಲರಿಗಳಲ್ಲಿ ಡಿಸ್ಟಿಲರಿ ಅಧಿಕಾರಿಗಳಿಗೆ ಸಂಬಂಧಿಸಿದಂತೆ ಸ್ಥಳೀಯ ಲೆಕ್ಕಪರಿಶೋಧನೆಯ ವೇಳೆಯಲ್ಲಿ ಅನೇಕ ಲೋಪದೊಷಗಳನ್ನು ಗಮನಿಸಲಾಗಿದ್ದಿತು.

ಏಪ್ರಿಲ್ 2012ರಿಂದ ಮಾರ್ಚ್ 2017ರ ನಡುವೆ, 35 ಡಿಸ್ಟಿಲರಿಗಳನ್ನು ಹಣಕಾಸು ವ್ಯವಹಾರಗಳ ಲೆಕ್ಕಪರಿಶೋದನೆಗೆ ಒಳಪಡಿಸಲಾಗಿದ್ದಿತು, ಅಂತಹ ಲೆಕ್ಕಪರಿಶೋಧನೆಗಳಲ್ಲಿ ಉತ್ಪಾದನೆಯನ್ನು ಕಡಿಮೆ ಪ್ರಮಾಣದಲ್ಲಿ ವರದಿ ಮಾಡಿದ್ದುದು, ಮದ್ಯಸಾರದ ತಯಾರಿಕೆಯ ವೇಳೆಯಲ್ಲಿ, ಸಂಗ್ರಹಣೆ ಮತ್ತು ಬಾಟಲಿಗಳಿಗೆ ತುಂಬುವ ವೇಳೆಯಲ್ಲಿ ನಷ್ಟಗಳನ್ನು ಅಧಿಕ ಪ್ರಮಾಣದಲ್ಲಿ ಕೋರಿದ್ದುದು, ಭಾರತೀಯ ಮದ್ಯ ಹಾಗೂ ಬಿಯರ್ ಮೇಲೆ ಅಬಕಾರಿ ಸುಂಕ ಮತ್ತು ಹೆಚ್ಚುವರಿ ಅಬಕಾರಿ ಸುಂಕದ ಬಾಧ್ಯತೆಗಳನ್ನು ಕಡಿಮೆ ಪ್ರಮಾಣದಲ್ಲಿ ತಿಳಿಸಿದ್ದುದು, ಡಿಸ್ಟಿಲರಿಗಳಿಗೆ ಪರವಾನಿಗೆಗಳ ನೀಡಿಕೆ ಮತ್ತು ನವೀಕರಣಕ್ಕೆ ಸಂಬಂಧಿತ ಅಂಶಗಳು, ಇತ್ಯಾದಿಗಳ ಬಗ್ಗೆ 31 ಲೆಕ್ಕಪರಿಶೋಧನಾ ಆಕ್ಷೇಪಣೆಗಳನ್ನು ನೀಡಲಾಗಿದ್ದಿತು, ಇವುಗಳ ಬಗ್ಗೆ ಕ್ರಮಗಳನ್ನು ತೆಗೆದುಕೊಳ್ಳುವಲ್ಲಿ ಡಿಸ್ಟಿಲರಿ ಅಧಿಕಾರಿಗಳು ವಿಫಲರಾಗಿದ್ದರು. ಈ ಬಗ್ಗೆ ಲೆಕ್ಕಪರಿಶೋಧನೆಯು ಸ್ಪಷ್ಟಪಡಿಸಿದ್ದಾಗ್ಯೂ ಪರಿಸ್ಥಿತಿಯು ಹಾಗೆಯೇ ಮುಂದುವರೆದುಕೊಂಡು ಹೋಗಿರುತ್ತದೆ.

ಲೆಕ್ಕಪರಿಶೋಧನೆಯು ಕಂಡಿಕೆಗಳು 3.4.10.1ರಿಂದ 3.4.10.4ರಲ್ಲಿ ಸ್ಪಷ್ಟಪಡಿಸಲಾಗಿರುವ ಅಂಶಗಳು ಆಲ್ಕೋಹಾಲಿನ ಉತ್ಪಾದನೆಯನ್ನು ಕಟ್ಟುನಿಟ್ಟಿನ ನಿಯಂತ್ರಣದಲ್ಲಿಡುವ ಸಲುವಾಗಿ ವ್ಯವಸ್ಥೆಯಲ್ಲಿ ಚಿಂತಿಸಲಾಗಿರುವ ನಿಯಂತ್ರಣಗಳನ್ನು ಕಾರ್ಯಗತಗೊಳಿಸುವಲ್ಲಿ ಡಿಸ್ಟಿಲರಿ ಅಧಿಕಾರಿಗಳ ಉದಾಸೀನತೆಯನ್ನು ಸಾಬೀತುಪಡಿಸುತ್ತದೆ. ಮುಂದುವರೆದು, ನಿಯಮಗಳಲ್ಲಿ ಕಡ್ಡಾಯಗೊಳಿಸಿರುವಂತೆ ಅಬಕಾರಿ ಇಲಾಖೆಯ ಉಪ–ಆಯುಕ್ತರುಗಳಿಂದ ಮದ್ಯಸಾರದ ದಾಸ್ತಾನಿನ ಲೆಕ್ಕಪತ್ರಗಳ ಪರಿಶೀಲನೆಯು ಕಂಡಿಕೆಗಳಲ್ಲಿ ಸ್ಪಷ್ಟಪಡಿಸಲಾಗಿರುವ ಯಾವುದೇ ಅಂಶಗಳ ಬಗ್ಗೆ ಏನನ್ನೂ ಹೇಳುವುದಿಲ್ಲ. ಆದ್ದರಿಂದ, ಡಿಸ್ಟಿಲರಿಗಳ ಮೇಲೆ ಶೇಕಡಾ 100ರಷ್ಟು ಮೇಲ್ವಿಚಾರಣೆಯನ್ನು ಖಚಿತಪಡಿಸಿಕೊಳ್ಳುವ ದೃಷ್ಟಿಯಿಂದ ಡಿಸ್ಟಿಲರಿಗಳಲ್ಲಿ ಡಿಸ್ಟಿಲರಿ ಅಧಿಕಾರಿಗಳನ್ನು ನಿಯುಕ್ತಿಗೊಳಿಸುವ ಹಿಂದಿದ್ದ ಉದ್ದೇಶಗಳೊಂದಿಗೆ ರಾಜಿ ಮಾಡಿಕೊಳ್ಳಲಾಗಿದ್ದಿತು ಹಾಗೂ ಡಿಸ್ಟಿಲರಿ ಅಧಿಕಾರಿಗಳು ಮತ್ತು ಅಬಕಾರಿ ಇಲಾಖೆಯ ಉಪ–ಆಯುಕ್ತರುಗಳ ಮೇಲ್ವಿಚಾರಣಾ ನಿಯಂತ್ರಣಗಳನ್ನು ಸೂಕ್ತವಾದಂತಹ ನಿಯಂತ್ರಣಗಳನ್ನು ಸಮರ್ಪಕವಾಗಿ ಚಲಾಯಿಸುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಇಲಾಖೆಯು ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳುವ ಅಗತ್ಯತೆಯಿರುತ್ತದೆ ಎಂಬುದಾಗಿ ಲೆಕ್ಕಪರಿಶೋಧನೆಯು ಸ್ಪಷ್ಟಪಡಿಸುತ್ತದೆ.

ಇದನ್ನು ಸ್ಪಷ್ಟಪಡಿಸಲಾಗಿ, ಇಲಾಖೆಯಲ್ಲಿ ಅಗತ್ಯ ವಿದ್ಯಾರ್ಹತೆಯನ್ನು ಹೊಂದಿರುವ ವ್ಯಕ್ತಿಗಳ ಕೊರತೆ ಹಾಗೂ ಅಸಮರ್ಪಕ ಸಂಖ್ಯೆಯಲ್ಲಿರುವ ಸಿಬ್ಬಂದಿಯು ಲೋಪದೋಷಗಳಿಗೆ ಕಾರಣ ಎಂಬುದಾಗಿ ಇಲಾಖೆಯು ನಿರ್ಗಮನ ಸಭೆಯಲ್ಲಿ ತಿಳಿಸಿತು.

## 3.4.11 ತಯಾರಿಸಲಾದ ಮತ್ತು ಮಾರಾಟ ಮಾಡಲಾದ ಕುಡಿಯಲು ಯೋಗ್ಯವಾದ ಮದ್ಯದ[31] ಮೇಲೆ ರೂಪಿಸಲಾಗಿರುವ ನಿಯಂತ್ರಣಗಳಲ್ಲಿನ ಲೋಪದೋಷಗಳು

ಕುಡಿಯಲು ಯೋಗ್ಯವಾದ ಮದ್ಯವನ್ನು ಡಿಸ್ಟಿಲರಿಗಳಲ್ಲಿ ಶುದ್ಧೀಕರಿಸಲ್ಪಟ್ಟ ಮದ್ಯಸಾರ ಮತ್ತು ಆಮ್ಲೀಯ ಅಥವಾ ಪ್ರತ್ಯಾಮ್ಲೀಯವಲ್ಲದ (ನ್ಯೂಟ್ರಲ್) ಮದ್ಯಸಾರದಲ್ಲಿನ[32] ಆಲ್ಕೋಹಾಲಿನ ಶಕ್ತಿಯನ್ನು ಕರ್ನಾಟಕ ಅಬಕಾರಿ ಅಧಿನಿಯಮ ಮತ್ತು ಅವುಗಳ ಅಡಿಯಲ್ಲಿನ ನಿಯಮಗಳ ಅಡಿಯಲ್ಲಿ ನಿರ್ದಿಷ್ಟಪಡಿಸಿರುವ ಮಟ್ಟಕ್ಕೆ ಇಳಿಮುಖಗೊಳಿಸುವ ಮೂಲಕ ತಯಾರಿಸಲಾಗುವುದು. ಕುಡಿಯಲು ಯೋಗ್ಯವಾದ ಮದ್ಯ ತಯಾರಿಕೆಯ ಪ್ರಕ್ರಿಯೆಯಲ್ಲಿ ಸೂಕ್ತ ಪ್ರಮಾಣದ ನಷ್ಟ/ವ್ಯರ್ಥಗಳಿಗಾಗಿಯೂ ನಿಯಮಗಳು ಅನುವು ಮಾಡಿರುತ್ತವೆ.

ತಯಾರಿಕಾ ಪ್ರಕ್ರಿಯೆಯು ಪೂರ್ಣಗೊಂಡನಂತರ, ಉತ್ಪಾದಿಸಲಾದ ಕುಡಿಯಲು ಯೋಗ್ಯವಾದ ಮದ್ಯವನ್ನು ಬಾಟಲಿಗಳಲ್ಲಿ ತುಂಬಿಸಲಾಗುವುದು ಅಥವಾ ಕಂಟೈನರುಗಳಲ್ಲಿ ಪ್ಯಾಕು ಮಾಡಲಾಗುವುದು ಹಾಗೂ ಮೆ. ಕರ್ನಾಟಕ ರಾಜ್ಯ ಪಾನೀಯಗಳ ನಿಗಮ ನಿಯಮಿತದ (ಕೆಎಸ್‌ಬಿಸಿಎಲ್) ಮೂಲಕ ಚಿಲ್ಲರೆ ಮಾರಾಟಗಾರರಿಗೆ ಸರಬರಾಜು ಮಾಡಲಾಗುವುದು. ಮದ್ಯವನ್ನು ಮೆ. ಕರ್ನಾಟಕ ರಾಜ್ಯ ಪಾನೀಯಗಳ ನಿಗಮ ನಿಯಮಿತದ (ಕೆಎಸ್‌ಬಿಸಿಎಲ್) ಮೂಲಕ ಹರಿಯಬಿಡುವುದೇ ಸ್ವತ: ಸುಂಕವನ್ನು ಪಾವತಿಸಿರದ ಅಥವಾ ಅನಧಿಕೃತ ಮದ್ಯವನ್ನು ಮಾರುಕಟ್ಟೆಗೆ ಸರಬರಾಜು ಮಾಡುವುದನ್ನು ತಡೆಯುವಲ್ಲಿ ಒಂದು ಅತ್ಯಂತ ಪ್ರಮುಖ ನಿಯಂತ್ರಣ ವ್ಯವಸ್ಥೆಯಾಗಿ ಪಾತ್ರವಹಿಸುತ್ತದೆ. ಅನ್ವಯಗೊಳ್ಳುವ ಅಬಕಾರಿ ಸುಂಕ ಮತ್ತು ಹೆಚ್ಚುವರಿ ಅಬಕಾರಿ ಸುಂಕವನ್ನು ಮೆ. ಕರ್ನಾಟಕ ರಾಜ್ಯ ಪಾನೀಯಗಳ ನಿಗಮ ನಿಯಮಿತಕ್ಕೆ (ಕೆಎಸ್‌ಬಿಸಿಎಲ್) ಮದ್ಯವನ್ನು ರವಾನಿಸುವ ಮೊದಲು ಡಿಸ್ಟಿಲರಿಗಳು ಪಾವತಿಸುತ್ತವೆ.

---

[31] ಕುಡಿಯಲು ಯೋಗ್ಯವಾದ ಮದ್ಯ ಎಂದರೆ ಶೇಕಡಾ 42.7ರಷ್ಟು (ಪರಿಮಾಣ/ಪರಿಮಾಣ) ಆಲ್ಕೋಹಾಲನ್ನು ಹೊಂದಿರುವ ಭಾರತೀಯ ಮದ್ಯ.

[32] ಶುದ್ಧೀಕರಿಸಲ್ಪಟ್ಟ ಮದ್ಯಸಾರವು 166–ಡಿಗ್ರಿ ಸಾಮರ್ಥ್ಯದ ಮದ್ಯಸಾರವಾಗಿರುತ್ತದೆ, ಅದು ಶೇಕಡಾ 94.72ರಷ್ಟು ಎಥನಿಲ್ ಆಲ್ಕೋಹಾಲನ್ನು ಒಳಗೊಂಡಿರುತ್ತದೆ ಹಾಗೂ ಉಳಿದ ಭಾಗವು ನೀರು. ಮುಂದುವರೆದು, ಇದರಿಂದ ಶುದ್ಧೀಕರಿಸಲ್ಪಟ್ಟು, ಅಂದರೆ ಅಲ್ಕೋಹಾಲಿನ ಪರಿಮಾಣದಲ್ಲಿನ ಹೆಚ್ಚಳ ಹಾಗೂ ನೀರಿನಲ್ಲಿನ ಇಳಿಕೆಯನ್ನು ತಟಸ್ಥ ಮದ್ಯಸಾರ (ನ್ಯೂಟ್ರಲ್ ಸ್ಪಿರಿಟ್) ಎಂಬುದಾಗಿ ಕರೆಯಲಾಗುವುದು. ಸಾಮಾನ್ಯವಾಗಿ ತಟಸ್ಥ ಮದ್ಯಸಾರದ ಸಾಮರ್ಥ್ಯವು 168–ಡಿಗ್ರಿ ಆಲ್ಕಹಾಲು ಸಾರತೆಯ (proof) ಅಥವಾ ಅದಕ್ಕೂ ಹೆಚ್ಚಿನ ಪ್ರಮಾಣದ್ದಾಗಿರುತ್ತದೆ. ಆದರೆ ಈ ಪದವನ್ನು ಅಧಿನಿಯಮದ ಅಡಿಯಲ್ಲಿ ವಿವರಿಸಿರುವುದಿಲ್ಲ.

ಉತ್ಪಾದಿಸಲಾದ ಕುಡಿಯಲು ಯೋಗ್ಯವಾದ ಮದ್ಯವನ್ನು ಬಾಟಲಿಗೆ ತುಂಬಿಸುವ/ಕಂಟೈನರುಗಳಲ್ಲಿ ಪ್ಯಾಕು ಮಾಡುವುದರಿಂದ ಪ್ರಾರಂಭಗೊಂಡು ಕೊನೆಯ ಹಂತದ ಬಳಕೆದಾರರಿಗೆ ಮಾರಾಟ ಮಾಡುವ ತನಕ ಕಾರ್ಯಾಚರಣೆಯಲ್ಲಿರುವ ಮತ್ತೊಂದು ಪ್ರಮುಖ ನಿಯಂತ್ರಣದ ವ್ಯವಸ್ಥೆ ಎಂದರೆ ಅಬಕಾರಿ ಅಂಟುಚೀಟಿಗಳು. ಅಬಕಾರಿ ಅಂಟುಚೀಟಿಗಳನ್ನು ಪ್ರತಿಯೊಂದು ಸೀಲು ಮಾಡಲಾಗಿರುವ ಬಾಟಲಿಗಳು/ಭಾರತೀಯ ಮದ್ಯದ/ವೈನಿನ ಪ್ಯಾಕೇಟುಗಳ ಮೇಲೆ ಅಂಟಿಸತಕ್ಕದ್ದು ಎಂಬುದನ್ನು ಕರ್ನಾಟಕ ಅಬಕಾರಿ (ಮದ್ಯವನ್ನು ಬಾಟಲಿಗಳಿಗೆ ತುಂಬಿಸುವುದು) ನಿಯಮಗಳು, 1967ರ ನಿಯಮ 14 (4–ಎ) ನಿರ್ದಿಷ್ಟಪಡಿಸಿರುತ್ತದೆ.

ಅಬಕಾರಿ ಅಂಟುಚೀಟಿಗಳನ್ನು ಸರ್ಕಾರದ ಒಂದು ಅಧಿಸೂಚಿತ ಸಂಸ್ಥೆಯಾಗಿರುವ ಮೆ.ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ನ ಮೂಲಕ ಡಿಸ್ಟಿಲರಿಗಳಿಗೆ ನೀಡಲಾಗುವುದು. ಕರ್ನಾಟಕ ಅಬಕಾರಿ ಸುಂಕ ಲೇಬಲ್ಲುಗಳು ಅನೇಕ ಭದ್ರತಾ ವೈಶಿಷ್ಟ್ಯತೆಗಳನ್ನು, ಅವೆಂದರೆ, ಮುದ್ರಿತ ಲೇಬಲ್ಲಿನ ಮೇಲೆ ರಾಜ್ಯದ ಹಾಲೋಗ್ರ್ಯಾಮ್, ಎರಡು ಮಿಮಿತಿಯ ಬಾರು ಕೋಡು, ವಿಶಿಷ್ಟ ಕ್ರಮ ಸಂಖ್ಯೆ, ಅಗೋಚರ ಮುದ್ರಣ (*intaglio* printing)[33] ಹೆಣಿಗೆ ಅಲಂಕಾರ ವಿನ್ಯಾಸ (*guilloche*)[34] ಉತ್ಕೀರ್ಣಚಿತ್ರ ಮುದ್ರಣ ಹಾಗೂ ಲೇಬಲನ್ನು ನೀಡುವ ಅಧಿಕಾರಿಯ ಸಹಿ, ತಿಂಗಳಿನ ಸಂಕೇತ, ತಿಂಗಳು/ವರ್ಷ ಮಿಲೀ ಲೀಟರಿನಲ್ಲಿ ಪರಿಮಾಣದ ಜೊತೆಯಲ್ಲಿ ಬಾಬಿನ ಸಂಕೇತ, ಇತ್ಯಾದಿಗಳನ್ನು ಒಳಗೊಂಡಿರುತ್ತದೆ.

ಮೇಲೆ ತಿಳಿಸಲಾದ ನಿಯಂತ್ರಣ ವ್ಯವಸ್ಥೆಯ ಪರಿಣಾಮಕಾರಿತ್ವವನ್ನು ಖಚಿತಪಡಿಸಿಕೊಳ್ಳುವ ದೃಷ್ಟಿಯಿಂದ, ಲೆಕ್ಕಪರಿಶೋಧನೆಯು ಆಯ್ದ ಅಬಕಾರಿ ವಿಭಾಗೀಯ ಕಚೇರಿಗಳು ಮತ್ತು ವಲಯ ಕಚೇರಿಗಳು, ಕರ್ನಾಟಕ ರಾಜ್ಯ ಪಾನೀಯಗಳ ನಿಗಮ ನಿಯಮಿತ ಹಾಗೂ ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ನ ದತ್ತಸಂಚಯವನ್ನು ಹಾಗೂ ಇನ್ನಿತರೆ ದಾಖಲೆಗಳನ್ನು ಪರೀಕ್ಷಾ–ಪರಿಶೀಲನೆ ಮಾಡಿತು. ಲೆಕ್ಕಪರಿಶೋಧನೆಯು ಈ ಕೆಳಗಿನ ಲೋಪದೋಷಗಳನ್ನು ಗಮನಿಸಿತು.

### 3.4.11.1 ಕರ್ನಾಟಕ ರಾಜ್ಯ ಪಾನೀಯಗಳ ನಿಗಮ ನಿಯಮಿತದ ಮೂಲಕ ಹರಿದ ಊರ್ಜಿತವಲ್ಲದ ಅಬಕಾರಿ ಅಂಟುಚೀಟಿಯೊಂದಿಗಿನ ಮದ್ಯದ ಬಾಟಲಿಗಳು

ಕರ್ನಾಟಕ ರಾಜ್ಯ ಪಾನೀಯಗಳ ನಿಗಮ ನಿಯಮಿತವು ರಾಜ್ಯದಲ್ಲಿನ ಮದ್ಯ ಹಾಗೂ ಮದ್ಯ ಸಂಬಂಧಿ ಉತ್ಪತ್ತಿಗಳ ಮಾರಾಟದ ಹರಿವನ್ನು ಸುವ್ಯವಸ್ಥೆಗೊಳಿಸುವ ಸಲುವಾಗಿ ಹಾಗೂ ರಾಜ್ಯದಲ್ಲಿನ ಈ ಹಿಂದಿನ ಎಲ್ಲಾ ಸಗಟು ಮಾರಾಟ ಪರವಾನಿಗೆದಾರರರುಗಳನ್ನು ಬದಲಾಯಿಸುವ ಉದ್ದೇಶದಿಂದ ಜೂನ್ 2003ರಲ್ಲಿ ರಚಿಸಲಾದ ಒಂದು ಕಂಪನಿಯಾಗಿರುತ್ತದೆ. ಆದಾಗ್ಯೂ, ಕರ್ನಾಟಕ ರಾಜ್ಯ ಪಾನೀಯಗಳ ನಿಗಮ ನಿಯಮಿತವು ರಾಜ್ಯದಲ್ಲಿ ಅಬಕಾರಿ ಅಧಿನಿಯಮ/ನಿಯಮಗಳನ್ನು ಜಾರಿಗೊಳಿಸುವ ಅಥವಾ ಯಾವುದೇ ಕಾನೂನೂಬಾಹಿರ/ಕಳ್ಳಬಟ್ಟಿ ಮದ್ಯದ ಹರಿವನ್ನು ತಡೆಯುವ/ಪ್ರತಿಬಂಧಿಸುವ ಅಧಿಕಾರವನ್ನು ಹೊಂದಿರುವುದಿಲ್ಲ. ಅದು ಡಿಸ್ಟಿಲರಿಗಳು ಸರಬರಾಜು ಮಾಡುವ ಯಾವುದೇ ರೀತಿಯ ಮದ್ಯಸಾರ ಅಥವಾ ಕುಡಿಯಲು ಯೋಗ್ಯವಾದ ಮದ್ಯವನ್ನು ಪಡೆದುಕೊಳ್ಳಲು ಹಾಗೂ ಅದನ್ನು ಪರವಾನಿಗೆಯನ್ನು ಹೊಂದಿರುವ/ಅಧಿಕೃತ ಖರೀದಿದಾರರುಗಳಿಗೆ, ಅವರುಗಳು ಅದಕ್ಕಾಗಿ ಕೋರಿಕೆಯನ್ನು ಸಲ್ಲಿಸಿದಾಗಲೆಲ್ಲಾ ಸರಬರಾಜು ಮಾಡಬಹುದು.

ಕರ್ನಾಟಕ ರಾಜ್ಯ ಪಾನೀಯಗಳ ನಿಗಮ ನಿಯಮಿತಕ್ಕೆ ಭಾರತೀಯ ಮದ್ಯವನ್ನು ಸರಬರಾಜು ಮಾಡುವ ಡಿಸ್ಟಿಲರಿಗಳು ಪ್ರತಿಯೊಂದು ಸರಬರಾಜಿನ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ಊಡಿಕೆ ಮಾಡತಕ್ಕದ್ದು. ಸರಬರಾಜು ವಿವರಗಳನ್ನು "ಕರ್ನಾಟಕ ರಾಜ್ಯ ಪಾನೀಯಗಳ ನಿಗಮ ನಿಯಮಿತದ ಜಾಲತಾಣದಲ್ಲಿ" ಅನುವು ಮಾಡಲಾಗಿರುವ "ಕರ್ನಾಟಕ ರಾಜ್ಯ ಪಾನೀಯಗಳ ನಿಗಮ ನಿಯಮಿತಕ್ಕೆ ಸರಬರಾಜುಗಳ ಮಾಹಿತಿ" ಮಾಡ್ಯೂಲಿನಲ್ಲಿ ಊಡಿಕೆ ಮಾಡತಕ್ಕದ್ದು. ಊಡಿಕೆ ಮಾಡಲಾದ ಮಾಹಿತಿಯು ವಿವಿಧ ವಿವರಗಳನ್ನು, ಅವೆಂದರೆ ಸರಬರಾಜಿಗಾಗಿ ಆದೇಶ ಸಂಖ್ಯೆ, ಸರಬರಾಜಿಗಾಗಿ ಆದೇಶದ ದಿನಾಂಕ, ಸಾಗಾಣಿಕೆ ಪರವಾನಿಗೆ ಸಂಖ್ಯೆ. ಪರವಾನಿಗೆಯು ಊರ್ಜಿತಗೊಂಡಿರುವ ಅವಧಿ, ಡಿಪೋಗಳಿಗೆ ವಿತರಣೆ ನೀಡಲಾದ ವಾಹನದ ಸಂಖ್ಯೆ, ಯಾವ ಡಿಪೋಗೆ ವಿತರಣೆಯನ್ನು ಮಾಡಲಾಗುವುದು, ಇತ್ಯಾದಿಗಳನ್ನು ಒಳಗೊಂಡಿರತಕ್ಕದ್ದು. ಈ ಪರದೆಯಲ್ಲಿ ಊಡಿಕೆ ಮಾಡಲಾಗುವ ಒಂದು ಪ್ರಮುಖ ಮಾಹಿತಿಯೆಂದರೆ ಡಿಸ್ಟಿಲರಿಗಳು ತಯಾರಿಸಿದ ವಿವಿಧ ಪರಿಮಾಣಗಳ ಹಾಗೂ ವಿವಿಧ ಬ್ರ್ಯಾಂಡುಗಳ ಭಾರತೀಯ ಮದ್ಯದ ಬಾಟಲಿಗಳು/ಪ್ಯಾಕುಗಳ ಅಬಕಾರಿ ಅಂಟುಚೀಟಿಯ ಸಂಖ್ಯೆವಾರು ವಿವರಗಳು.

ಕರ್ನಾಟಕ ರಾಜ್ಯ ಪಾನೀಯಗಳ ನಿಗಮ ನಿಯಮಿತದ ಮೂಲಕ ಹರಿಸಲಾಗುವ ಕುಡಿಯಲು ಯೋಗ್ಯವಾದ ಮದ್ಯವು ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ನಿಂದ ನೀಡಲಾಗಿರುವ ಅಬಕಾರಿ

---

[33] ಅಗೋಚರ ಮುದ್ರಣ (*intaglio* printing) ಎಂದರೆ, ಪ್ರತಿಬಿಂಬವನ್ನು ಒಂದು ಮೇಲ್ಮೈಯ ಮೇಲೆ ಕೊರೆಯಲಾಗುವ ಮುದ್ರಣ ತಂತ್ರಜ್ಞಾನವಾಗಿರುತ್ತದೆ ಹಾಗೂ ಕೊರೆಯಲಾದ ರೇಖೆಯು ಅಥವಾ ನಿಮಗ್ನ/ಮೇಲ್ಮೈಯ ಕೆಳಗಿರುವ ಭಾಗವು ಇಂಕನ್ನು ಹಿಡಿದಿಟ್ಟುಕೊಳ್ಳುತ್ತದೆ.

[34] ಹೆಣಿಗೆ ಅಲಂಕಾರ ವಿನ್ಯಾಸವು (*guilloche)* ಒಂದು ಅಮೂಲ್ಯ, ಮತ್ತು ಪುನರಾವರ್ತಿತ ಮಾದರಿಯನ್ನು ಯಾಂತ್ರಿಕವಾಗಿ ಒಂದು ಒಳಪದರದ ಸಾಮಗ್ರಿಗೆ ಒಂದು ಅಲಂಕಾರಿಕ ತಂತ್ರಜ್ಞಾನವಾಗಿರುತ್ತದೆ.

ಅಂಟುಚೀಟಿಯನ್ನು ಹೊಂದಿರುವುದೇ ಎಂಬುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಲೆಕ್ಕಪರಿಶೋಧನೆಯು ಕರ್ನಾಟಕ ರಾಜ್ಯ ಪಾನೀಯಗಳ ನಿಗಮ ನಿಯಮಿತದ ದತ್ತಸಂಚಯವನ್ನು ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ನ ದತ್ತಸಂಚಯದೊಂದಿಗೆ ಪರಿಶೀಲಿಸಿತು. ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ನಿಂದ ನೀಡದಿರದ ಅಬಕಾರಿ ಅಂಟುಚೀಟಿಯೊಂದಿಗೆ ಕರ್ನಾಟಕ ರಾಜ್ಯ ಪಾನೀಯಗಳ ನಿಗಮ ನಿಯಮಿತದ ಮೂಲಕ ಕುಡಿಯಲು ಯೋಗ್ಯವಾದ ಮದ್ಯವನ್ನು ಹರಿಸಲಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಕೆಲವು ದೃಷ್ಟಾಂತ ಪ್ರಕರಣಗಳನ್ನು **ಕೋಷ್ಟಕ 3.10** ರಲ್ಲಿ ನೀಡಲಾಗಿದೆ:

**ಕೋಷ್ಟಕ 3.10**

**ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ನಿಂದ ನೀಡುವ ಅಬಕಾರಿ ಅಂಟುಚೀಟಿ ಇಲ್ಲದೆಯೇ ಕರ್ನಾಟಕ ರಾಜ್ಯ ಪಾನೀಯಗಳ ನಿಗಮ ನಿಯಮಿತದ ಮೂಲಕ ಮದ್ಯವನ್ನು ಹರಿಸಿದ್ದುದು**

| ಕ್ರಮ ಸಂಖ್ಯೆ | ಸರಬರಾಜಿಗಾಗಿ ಆದೇಶದ ಸಂಖ್ಯೆ ಮತ್ತು ದಿನಾಂಕ | (i) ಬಾಬಿನ ಸಂಕೇತ, (ii) ಭಾರತೀಯ ಮದ್ಯದ ಬ್ರ್ಯಾಂಡು (iii) ಬಾಟಲಿ/ಪ್ಯಾಕಿನಲ್ಲಿದ್ದ ಪರಿಮಾಣ | (i) ಅಂಟುಚೀಟಿ ಉಪಾದಿಸೂಚಕ (ಎಂಸಿಎಎಲ್‌ಗೆ ಸಂಬಂಧಿಸಿದಂತೆ ತಿಂಗಳಿನ ಸಂಕೇತ) (ii) ಅಬಕಾರಿ ಅಂಟುಚೀಟಿಯ ಸಂಖ್ಯೆ 'ಇಂದ' 'ವರೆಗೆ' (iii) ಬಾಟಲಿಗಳ ಸಂಖ್ಯೆ | ಟಿಪ್ಪಣಿ |
|---|---|---|---|---|
| 1. | ಪಿಯುಆರ್-141706 3/11/2014 | (i) 210100102<br>(ii) ಮೈಸೂರು ಲ್ಯಾನ್ಸರ್ ವಿಸ್ಕಿ<br>(iii) 375 ಮಿಲೀ ಲೀಟರು | (i) ಎಚ್‌ಎನ್‌ಕೆ<br>(ii) 2806816849 to 2806838448<br>**(iii) 21560** | ಎಚ್‌ಎನ್‌ಕೆ ಸರಣಿಗಳ ಅಬಕಾರಿ ಅಂಟು ಚೀಟಿಗಳನ್ನು ಎಂಸಿಐಎಲ್ ನೀಡಿರಲಿಲ್ಲ. ಅಲ್ಲದೆಯೇ, '2806816849'ರಿಂದ '2806838448'ವರೆಗಿನ ಕ್ರಮ ಸಂಖ್ಯೆಗಳಿಗೆ ಪ್ರತಿಯಾಗಿ 375 ಮಿಲೀ ಲೀಟರಿನ ಅಡಿಯಲ್ಲಿ ನವಂಬರ್ 2014ರಲ್ಲಿ ನಡೆಯುತ್ತಿದ್ದ ಅಬಕಾರಿ ಅಂಟು ಚೀಟಿಗಳ ಸರಣಿ ಸಂಖ್ಯೆಯು '190224000' ಆಗಿದ್ದಿತು. |
| 2. | ವೈಪಿಆರ್-141835 20/11/2014 | (i) 206898221<br>(ii) ಬ್ಲಾಕ್ ಅಂಡ್ ವೈಟ್ ಬ್ಲೆಂಡೆಡ್ ಸ್ಕಾಚ್ ವಿಸ್ಕಿ<br>(iii) 750 ಮಿಲೀ ಲೀಟರು | (i) ಎಎನ್‌ಆರ್<br>(ii) 206898221 to 206898940<br>**(iii) 720** | 750 ಮಿಲೀ ಲೀಟರಿನ ಅಡಿಯಲ್ಲಿ ಎಂಸಿಎಎಲ್ ನೀಡಿದ್ದ ಅಬಕಾರಿ ಅಂಟುಚೀಟಿಗಳಲ್ಲಿ ಎಎನ್‌ಆರ್ ಸರಣಿಗಳು ಇರಲಿಲ್ಲ. |
| 3. | ಬಿಎಲ್‌ಜಿ-140883 9/7/2014 | (i) 5080100204<br>(ii) ಬ್ಲ್ಯಾಕ್ ಬೆಲ್ಟ ಫೈನ್ ಓಲ್ಡ್ ವಿಸ್ಕಿ<br>(iii) 180 ಮಿಲೀ ಲೀಟರು | (i) ಇಡಿಸಿ<br>(ii) 528483745 to 528488544<br>**(iii) 4800** | ಇಡಿಸಿ ಸರಣಿಗಳನ್ನು ಎಂಸಿಎಎಲ್ ನೀಡಿರಲಿಲ್ಲ, ಇಎಎಲ್ ಸಂಖ್ಯೆಗಳು ಮೆ. ಜಾನ್ ಡಿಸ್ಟಿಲರೀಸ್‌ಗೆ ನೀಡಿದ್ದ 524448001ರಿಂದ 530208000 ರವರಿನ ಸರಣಿಗಳ ಅಡಿಯಲ್ಲಿ ಬರುತ್ತಿದ್ದವು. ಆದ್ದರಿಂದ, ಈ ಸರಬರಾಜಿನ ಅಡಿಯಲ್ಲಿ ನಮೂದಿಸಲಾಗಿದ್ದ ಸರಣಿಗಳು ತಪ್ಪುಗಳಿಂದ ಕೂಡಿದ್ದವು. |
| 4. | ಕೆಜಿಎಚ್142289 6/1/2015 | (i) 90290852<br>(ii) ಅಮೃತ್ಸ್ ಸಿಲ್ವರ್ ಕಪ್ ಬ್ರ್ಯಾಂಡಿ – ಆಸ್ಪೆಟಿಕ್ ಪ್ಯಾಕ್<br>(iii) 90 ಮಿಲೀ ಲೀಟರು | (i)ಎಸ್‌ಜಿಎಂ<br>(ii) 3805430785 to 3805449984<br>**(iii) 19200** | ಈ ಸರಣಿಯು ಎಸ್‌ಎಂಜಿ ಸರಣಿಗಳ ಅಡಿಯಲ್ಲಿ ಬರುತ್ತದೆಯಾದಲ್ಲಿ ಸರಬರಾಜು ವಿವರಗಳು ಎಸ್‌ಜಿಎಂ ಸರಣಿಗಳನ್ನು ತಿಳಿಸುತ್ತವೆ. |

ಆದ್ದರಿಂದ ಮೇಲೆ ತಿಳಿಸಲಾದಂತೆ, ಭಾರತೀಯ ಮದ್ಯದ 46,280 ಬಾಟಲಿಗಳ ಮೇಲೆ ಅಂಟಿಸಲಾಗಿದ್ದ ಅಬಕಾರಿ ಅಂಟುಚೀಟಿಗಳು ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ನಿಂದ ನೀಡಲ್ಪಟ್ಟಿರಲಿಲ್ಲ, ಅವುಗಳನ್ನು ಕರ್ನಾಟಕ ರಾಜ್ಯ ಪಾನೀಯಗಳ ನಿಗಮ ನಿಯಮಿವು ಚಿಲ್ಲರೆ ಮಾರಾಟಗಾರರಿಗೆ/ಮಾರುಕಟ್ಟೆಗೆ ನೀಡಿದ್ದಿತು.

ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ನಿಂದ ನೀಡಲ್ಪಟ್ಟಿರುವ ಅಂಟುಚೀಟಿಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಕರ್ನಾಟಕ ರಾಜ್ಯ ಪಾನೀಯಗಳ ನಿಗಮ ನಿಯಮಿತದ

ದತ್ತಸಂಚಯದೊಂದಿಗೆ ಅಂತರ–ಸಂಪರ್ಕದ ಅನುಪಸ್ಥಿಯ ಕಾರಣದಿಂದ ಆಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಸ್ಪಷ್ಟಪಡಿಸುತ್ತದೆ. ಆದ್ದರಿಂದ, ಡಿಸ್ಟಿಲರಿಗಳಿಗೆ ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ ನೀಡಿರುವ ಅಂಟುಚೀಟಿಗಳಿಗೆ ಸಂಬಂಧಿಸಿದಂತೆ ಊಡಿಕೆ ಮಾಡಲಾಗಿರುವ ಅಬಕಾರಿ ಅಂಟುಚೀಟಿ ಮಾಹಿತಿಯನ್ನು ಕರ್ನಾಟಕ ರಾಜ್ಯ ಪಾನೀಯಗಳ ನಿಗಮ ನಿಯಮಿತವು ಸ್ಥಿರೀಕರಿಸುವುದಿಲ್ಲ. ಅಂತಹ ಒಂದು ಸ್ಥಿರೀಕರಣವು ಹಾಗೂ ಆ ಮೂಲಕ ಹೊರತೆಗೆಯಲಾದ ವಿನಾಯಿತಿ ವರದಿಗಳು, ಲೆಕ್ಕಪರಿಶೋಧನೆಯಲ್ಲಿ ಸ್ಪಷ್ಟಪಡಿಸಲಾಗಿರುವ ಲೋಪದೋಷಗಳು ಮರುಕಳಿಸುವುದನ್ನು ತಡೆಯುತ್ತಿದವು. ಮಾರುಕಟ್ಟೆಗೆ ಮದ್ಯದ ಹರಿವನ್ನು ಬಿಡುವ/ವಿತರಣೆ ಮಾಡುವ ಸಂಸ್ಥೆಯಿಂದ ಸ್ಥಿರೀಕರಿಸುವಲ್ಲಿನ ಲೋಪದೋಷಗಳು ಕಳ್ಳಬಟ್ಟಿ ಮದ್ಯ ಮಾರಾಟದಲ್ಲಿ ತೊಡಗುವಲ್ಲಿ ವರ್ತಕರಿಗೆ ಅವಕಾಶಗಳನ್ನು ಮುಕ್ತಗೊಳಿಸುತ್ತದೆ ಹಾಗೂ ಮದ್ಯದ ಕಾನೂನುಬಾಹಿರ ವ್ಯಾಪಾರವನ್ನು ತಡೆಯುವ ಸಲುವಾಗಿ ಮಾಡಲಾದ ನಿಗಮದ ಸ್ಥಾಪನೆಯ ಉದ್ದೇಶದ ರಾಜಿ ಮಾಡಿಕೊಳ್ಳಲು ಮಾರ್ಗಗಳನ್ನು ಮುಕ್ತಗೊಳಿಸುತ್ತದೆ.

ಅಬಕಾರಿ ಅಂಟುಚೀಟಿಗಳಿಗೆ ಸಂಬಂಧಿಸಿದಂತೆ ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ ಹಾಗೂ ಕರ್ನಾಟಕ ರಾಜ್ಯ ಪಾನೀಯಗಳ ನಿಗಮ ನಿಯಮಿತದ ಮಾಹಿತಿಗಳನ್ನು ಆಗಸ್ಟ್ 2018ರ ವೇಳೆಗೆ ಅಂತರ–ಸಂಪರ್ಕ ಕಲ್ಪಿಸಲಾಗುವುದು ಎಂಬುದಾಗಿ ಇಲಾಖೆಯು ನಿರ್ಗಮನ ಮಟ್ಟದ ಸಭೆಯಲ್ಲಿ ತಿಳಿಸಿತು.

### 3.4.11.2 ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ ನಿರ್ವಹಿಸಿದ್ದ ಅಬಕಾರಿ ಅಂಟುಚೀಟಿಗಳ ದತ್ತಸಂಚಯದಲ್ಲಿ ಇದ್ದಂತಹ ತಪ್ಪುಗಳು

ಅಬಕಾರಿ ಅಂಟುಚೀಟಿಗಳ ಮೂಲಕ ಚಲಾಯಿಸಲಾಗುವ ನಿಯಂತ್ರಣಗಳು ಪರಿಣಾಮಕಾರಿತ್ವದಿಂದ ಕೂಡಿರುವ ಸಲುವಾಗಿ, ರಾಜ್ಯದಲ್ಲಿನ ಡಿಸ್ಟಿಲರಿಗಳಿಗೆ ನೀಡಲಾಗುವ ಅಬಕಾರಿ ಅಂಟುಚೀಟಿಗಳ ದತ್ತಸಂಚಯವನ್ನು ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ ನಿರ್ವಹಿಸತಕ್ಕದ್ದು.

ಇಲಾಖೆಯು ಮುಟ್ಟುಗೋಲು ಹಾಕಿಕೊಂಡಿದ್ದ ಮದ್ಯದ ಬಾಟಲಿಗಳು/ಪ್ಯಾಕೇಟುಗಳ ಮೇಲಿನ ಅಬಕಾರಿ ಅಂಟುಚೀಟಿ ಸಂಖ್ಯೆಗಳನ್ನು ಲೆಕ್ಕಪರಿಶೋಧನೆಯು ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ನ ದತ್ತಸಂಚಯದೊಂದಿಗೆ ಅಡ್ಡಪರಿಶೀಲನೆ ಮಾಡಿತು. ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ನ ಅಬಕಾರಿ ಅಂಟುಚೀಟಿಗಳನ್ನು ನೀಡದಿದ್ದಂತಹ ಮೂರು ದೃಷ್ಟಾಂತಗಳನ್ನು ಇದು ತೋರಿಸಿಕೊಟ್ಟಿತು. ಅವುಗಳ ವಿವರಗಳನ್ನು ***ಅನುಬಂಧ IV***ರಲ್ಲಿ ನೀಡಲಾಗಿದೆ. ಲೆಕ್ಕಪರಿಶೋಧನೆಯು ಇವುಗಳನ್ನು ನಕಲಿ ಅಬಕಾರಿ ಅಂಟುಚೀಟಿಗಳು ಎಂಬುದಾಗಿ ಸ್ಪಷ್ಟಪಡಿಸಿದಾಗ, ಅಂತಹ ಅಬಕಾರಿ ಅಂಟುಚೀಟಿಗಳನ್ನು ವಾಸ್ತವಿಕವಾಗಿ ಡಿಸ್ಟಿಲರಿಗಳಿಗೆ ನೀಡಲಾಗಿದ್ದಿತು, ಆದರೆ ಅವುಗಳು ದತ್ತಸಂಚಯದಲ್ಲಿ ಊಡಿಕೆ ಮಾಡಿರಲಿಲ್ಲ ಎಂಬುದಾಗಿ ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ ತಿಳಿಸಿತು. ಅಬಕಾರಿ ಅಂಟುಚೀಟಿಗಳ ಸರಬರಾಜಿಗೆ ಸಂಬಂಧಿಸಿದಂತೆ ತಮ್ಮ ದತ್ತಸಂಚಯದಲ್ಲಿ ತಪ್ಪುಗಳು ಇರುವುದನ್ನೂ ಸಹ ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ ಒಪ್ಪಿಕೊಂಡಿತು.

ಡಿಸ್ಟಿಲರಿಗಳಿಗೆ ನೀಡಿದ್ದ ಅಬಕಾರಿ ಅಂಟುಚೀಟಿಗಳಿಗೆ ಸಂಬಂಧಿಸಿದಂತೆ ಅದು ನಿರ್ವಹಿಸಿದ್ದ ದತ್ತಸಂಚಯವು ವಿಶ್ವಸನೀಯತೆಯಿಂದ ಕೂಡಿರಲಿಲ್ಲ ಎಂಬುದು ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ನ ಉತ್ತರದಿಂದ ಸುಸ್ಪಷ್ಟಗೊಳ್ಳುತ್ತದೆ.

### 3.4.11.3 ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ ಉತ್ಪತ್ತಿ ಮಾಡಿದ್ದ ಅಬಕಾರಿ ಅಂಟುಚೀಟಿಯ ಮೇಲೆ ಗುಣಮಟ್ಟದ ಭರವಸೆಯು ಇರದಿದ್ದುದು

ಅಬಕಾರಿ ಅಂಟುಚೀಟಿಗಳು ವಿವಿಧ ಭದ್ರತಾ ವೈಲಕ್ಷಣಗಳನ್ನು ಹೊಂದಿರುತ್ತವೆ. ಅಬಕಾರಿ ಅಂಟುಚೀಟಿಗಳನ್ನು ಡಿಸ್ಟಿಲರಿಗಳಿಗೆ ಸರಬರಾಜು ಮಾಡುವ ಮೊದಲು ಅವುಗಳಲ್ಲಿ ಎಲ್ಲಾ ಭದ್ರತಾ ವೈಲಕ್ಷಣಗಳನ್ನೂ ಯಥಾರ್ಥತೆಯಿಂದ ಸೇರಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ನ ಜವಾಬ್ದಾರಿಯಾಗಿರುತ್ತದೆ.

ಕಂಪನಿಯು ಒಪ್ಪಿಕೊಂಡಿರುವಂತೆ ದತ್ತಸಂಚಯದಲ್ಲಿನ ಲೋಪದೋಷಗಳ ಕಾರಣ ಅಬಕಾರಿ ಅಂಟುಚೀಟಿಗಳ ಮೇಲೆ ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಚಲಾಯಿಸಿದ್ದ ಪರೀಕ್ಷಣೆಗಳು ಸಮರ್ಪಕವಾಗಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಜೂನ್ 2011 ಮತ್ತು ಆಗಸ್ಟ್ 2015ರ ನಡುವೆ ಈ ಕೆಳಗೆ ತಿಳಿಸಿರುವ ಎರಡು ಸಂದರ್ಭಗಳಲ್ಲಿ ಲೋಪದೋಷಗಳಿಂದ ಕೂಡಿದ್ದ ಅಬಕಾರಿ ಅಂಟುಚೀಟಿಗಳನ್ನು ನೀಡಿದ್ದುದನ್ನೂ ಸಹ ಲೆಕ್ಕಪರಿಶೋಧನೆಯು ಗಮನಿಸಿತು.

- ಅಬಕಾರಿ ಅಂಟುಚೀಟಿಯ ವೈಲಕ್ಷಣಗಳಲ್ಲಿ ಒಂದೆಂದರೆ ಸರಣಿಗಳ ಜೊತೆಯಲ್ಲಿ ಅದರ ವಿಶಿಷ್ಟ ಸಂಖ್ಯೆ ಆದಾಗ್ಯೂ, ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ ಒಂದು ಡಿಸ್ಟಿಲರಿಗೆ[35] ಆಗಸ್ಟ್ 2015ರಲ್ಲಿ ಭಾರತೀಯ ಮದ್ಯದ 180 ಮಿಲೀ ಲೀಟರಿನ 2,640 ಅಬಕಾರಿ ಅಂಟುಚೀಟಿಗಳನ್ನು ಒಳಗೊಂಡಿದ್ದ ಆರು ತಂಡಗಳನ್ನು 2640ಕ್ಕೆ ಬದಲಾಗಿ ಕೇವಲ 13 ಸರಣಿ ಸಂಖ್ಯೆಗಳ ಜೊತೆಯಲ್ಲಿ ಒಂದು ಡಿಸ್ಟಿಲರಿಗೆ ಕಳುಹಿಸಿದ್ದಿತು, ಅಂದರೆ ಒಂದೇ ಸರಣಿ ಸಂಖ್ಯೆಯನ್ನು ವಿವಿಧ ಅಬಕಾರಿ ಅಂಟುಚೀಟಿಗಳಿಗೆ ಮನರಾವರ್ತಿಸಿದ್ದಿತು; ಹಾಗೂ

- ಭಾರತೀಯ ಮದ್ಯದ 90 ಮಿಲೀ ಲೀಟರು ಮತ್ತು 180 ಮಿಲೀ ಲೀಟರು ಪ್ಯಾಕುಗಳ 1,200 ಅಬಕಾರಿ ಅಂಟುಚೀಟಿಗಳನ್ನು ಒಳಗೊಂಡಂತೆ ಐದು ತಂಡಗಳನ್ನು ಹಾಲೋಗ್ರಾ್ಯಮ್ ಇಲ್ಲದೆಯೇ ಜೂನ್ ಮತ್ತು ಜುಲೈ 2011ರಲ್ಲಿ ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ ಮತ್ತೊಂದು ಡಿಸ್ಟಿಲರಿಗೆ[36] ಕಳುಹಿಸಿಕೊಟ್ಟಿದ್ದಿತು.

ಇದನ್ನು ಸ್ಪಷ್ಟಪಡಿಸಿದನಂತರ, ತಪ್ಪುಗಳು ಮತ್ತು ಕಣ್ತಪ್ಪಿನಿಂದಾಗಿ ಮೇಲಿನ ಲೋಪದೋಷಗಳು ಸಂಭವಿಸಿದ್ದವು ಎಂಬುದಾಗಿ ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ ತಿಳಿಸಿತು. ತಂತ್ರಾಂಶ ಅನ್ವಯವನ್ನು ಮೇಲ್ದರ್ಜೆಗೇರಿಸುವ ಮೂಲಕ ಪರಿಹಾರಕ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಹಾಗೂ ಸಂಪೂರ್ಣ ಪ್ರಕ್ರಿಯೆಯನ್ನು ಸ್ವಯಂಚಾಲಿತಗೊಳಿಸಲಾಗಿದೆ.

ಮೂಲದಿಂದ ಲೋಪದೋಷಗಳಿಂದ ಕೂಡಿದ ಅಂಟುಚೀಟಿಗಳನ್ನು ನೀಡಿದ್ದುದು ಮೂಲದಲ್ಲಿಯೇ ಗುಣಮಟ್ಟ ನಿಯಂತ್ರಣ ಪರೀಕ್ಷಣೆಗಳ ಕೊರತೆಯನ್ನು ಸೂಚಿಸುತ್ತದೆ ಹಾಗೂ ಅದು ದುರುಪಯೋಗಪಡಿಸುವಿಕೆಗಳಿಗೆ ಅವಕಾಶಗಳನ್ನು ನೀಡುತ್ತದೆ. ಆದ್ದರಿಂದ, ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ ತಪ್ಪುಗಳಿಂದ ಕೂಡಿದ ಮತ್ತು ಅಪೂರ್ಣತೆಯಿಂದ ಕೂಡಿದ ದತ್ತಸಂಚಯವನ್ನು ನಿರ್ವಹಿಸಿರುವುದು ಅಬಕಾರಿ ಅಂಟುಚೀಟಿಗಳ ಮೂಲಕ ಚಿಲ್ಲರೆ ಮಾರುಕಟ್ಟೆಗೆ ಅಧಿಕೃತ ಮತ್ತು ಸುಂಕ ಪಾವತಿಸಿದ ಮದ್ಯ ಸರಬರಾಜನ್ನು ಖಚಿತಪಡಿಸಿಕೊಳ್ಳುವಿಕೆಯನ್ನು ಪರಿಣಾಮಕಾರಿತ್ವದಿಂದ ಇರದಂತೆ ಮಾಡಿತು ಎಂಬುದಾಗಿ ಲೆಕ್ಕಪರಿಶೋಧನೆಯು ತೀರ್ಮಾನಕ್ಕೆ ಬರುತ್ತದೆ.

### 3.4.11.4 ಚಿಲ್ಲರೆ ಮಾರಾಟಗಾರರಿಗೆ ಮಾಡಲಾಗುವ ಮದ್ಯದ ಸರಬರಾಜನ್ನು ಪತ್ತೆಹಚ್ಚುವ ಸಲುವಾಗಿ ಮಾಹಿತಿಯ ಕೊರತೆ

ಅಬಕಾರಿ ಅಂಟುಚೀಟಿಗಳ ಸಂಖ್ಯೆಗಳು ರಾಜ್ಯದಲ್ಲಿ ತಯಾರಿಸಲಾದ ಮದ್ಯದ ಪ್ರತಿಯೊಂದು ಬಾಟಲಿ/ಪ್ಯಾಕೇಟಿಗೆ ವಿಶಿಷ್ಟ ಸಂಖ್ಯೆಯನ್ನು ಹೊಂದಿರುತ್ತವೆ. ಅಬಕಾರಿ ಅಂಟುಚೀಟಿ ಸಂಖ್ಯೆಗಳ ವೈಶಿಷ್ಟ್ಯತೆಯ ಅನುಕೂಲತೆಗಳನ್ನು ಪಡೆದುಕೊಳ್ಳುವ ಸಲುವಾಗಿ, ಕರ್ನಾಟಕ ರಾಜ್ಯ ಪಾನೀಯಗಳ ನಿಗಮ ನಿಯಮಿತವು ವಿವಿಧ ಚಿಲ್ಲರೆ ಮಾರಾಟಗಾರರಿಗೆ ಸರಬರಾಜು ಮಾಡಲಾದ ಮದ್ಯದ ಬಾಟಲಿಗಳು/ಪ್ಯಾಕೇಟುಗಳ ಮೇಲೆ ಅಂಟಿಸಲಾಗಿರುವ ಅಬಕಾರಿ ಅಂಟುಚೀಟಿಗಳ ವಿವರಗಳನ್ನು ನಿರ್ವಹಿಸತಕ್ಕದ್ದು, ಇದು ಮದ್ಯ ಮಾರಾಟದ ಕಡೆಯ ಹಂತದವರೆಗೆ ಮದ್ಯದ ಹರಿವಿನ ಜಾಡನ್ನು ಹಿಡಿಯುವಲ್ಲಿ ಸಹಾಯಕವಾಗುತ್ತದೆ ಹಾಗೂ ಸುಂಕವನ್ನು ಪಾವತಿಸದ ಅಥವಾ ಕಳ್ಳಬಟ್ಟಿ ಮದ್ಯಗಳು ಯಾವುದಾದರೂ ಇದ್ದಲ್ಲಿ, ಅಂತಹ ಪ್ರಕರಣಗಳನ್ನು ಪತ್ತೆಹಚ್ಚಲು ಅನುಕೂಲ ಕಲ್ಪಿಸುತ್ತದೆ.

ಕರ್ನಾಟಕ ರಾಜ್ಯ ಪಾನೀಯಗಳ ನಿಗಮ ನಿಯಮಿತದ ದತ್ತಸಂಚಯವು ಅಂತಹ ಯಾವುದೇ ಮಾಹಿತಿಯನ್ನೂ ಸೆರೆಹಿಡಿಯುತ್ತಿರಲಿಲ್ಲ ಅಥವಾ ಅದರ ತಂತ್ರಾಂಶ ಅನ್ವಯದ ಮೂಲಕ ಸಂಕಲಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಈ ಲೋಪದೋಷವು, ಓರ್ವ ಚಿಲ್ಲರೆ ಮಾರಾಟ ಪರವಾನಿಗೆದಾರರಲ್ಲಿ ಕಂಡುಬಂದಂತಹ ಯಾವುದೇ ಒಂದು ಮದ್ಯ ಬಾಟಲಿ/ಪ್ಯಾಕೇಟನ್ನು ಅಂತಹ ನಿರ್ದಿಷ್ಟ ಚಿಲ್ಲರೆ ಮಾರಾಟಗಾರರಿಗೆ ಸರಬರಾಜು ಮಾಡಲಾಗಿದ್ದಿತೆ ಅಥವಾ ಇಲ್ಲವೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿರಲಿಲ್ಲವಾದ್ದರಿಂದ ಅಬಕಾರಿ ಅಂಟುಚೀಟಿಯ ವ್ಯವಸ್ಥೆಯನ್ನು ಅಲ್ಪ ಪ್ರಮಾಣದಲ್ಲಿ ಪರಿಣಾಮಕಾರಿಯಾಗಿರುವಂತೆ ಮಾಡಿದ್ದಿತು.

ಅಂತಹ ದತ್ತಸಂಚಯದ ನಿರ್ವಹಣೆಯು ಹಾಗೂ ಸರಬರಾಜುಗಳನ್ನು ಜಾಡುಹಿಡಿಯುವ/ಗಮನಿಸುವ ಸಲುವಾಗಿ ಒಂದು ವ್ಯವಸ್ಥೆಯು ರಾಜ್ಯ ಅಬಕಾರಿ ಇಲಾಖೆಯ ಜಾರಿ ಕಾರ್ಯಚಟುವಟಿಕೆಗಳನ್ನು ಬಲಪಡಿಸುತ್ತದೆ ಎಂಬುದನ್ನು ಲೆಕ್ಕಪರಿಶೋಧನೆಯು ಸ್ಪಷ್ಟಪಡಿಸುತ್ತದೆ. ಕರ್ನಾಟಕ ರಾಜ್ಯ ಪಾನೀಯಗಳ ನಿಗಮ ನಿಯಮಿತವು ಸಂಪೂರ್ಣ ರಾಜ್ಯದಲ್ಲಿನ ಮದ್ಯ ಮತ್ತು ಅದರ ಉತ್ಪತ್ತಿಗಳ ಏಕೈಕ ಸಗಟು ಮಾರಾಟ ವಿತರಕರಾಗಿರುವುದರಿಂದ, ಅದು ಹೊಂದಿರುವ ಮಾಹಿತಿಯನ್ನು ಇನ್ನೂ ಹೆಚ್ಚಿನ ಪ್ರಮಾಣದ ವಿವೇಚನೆಯ ಮೂಲಕ ಉಪಯೋಗಿಸಿಕೊಂಡು ಇಲಾಖೆಯ ಜಾರಿ/ಗುಪ್ತಚರ ಕಾರ್ಯಚಟುವಟಿಕೆಗಳಿಗೆ ಸಹಾಯಕವಾಗುವಲ್ಲಿ ಒಂದು ಪ್ರಮುಖವಾದಂತಹ ಮತ್ತು ಇನ್ನೂ ಹೆಚ್ಚಿನ ಸಕ್ರಿಯ ಪಾತ್ರವನ್ನು ವಹಿಸಬಹುದಿತ್ತು ಎಂಬ ಅಂಶವನ್ನು

---

[35] ಮೆ. ರಾಡಿಕೊ ಖೈತಾನ್ ಪ್ರೈವೇಟ್ ಲಿಮಿಟೆಡ್, ಮೈಸೂರು.

[36] ಮೆ. ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್, ಹುಬ್ಬಳ್ಳಿ.

ಒತ್ತಿಹೇಳಲು ಲೆಕ್ಕಪರಿಶೋಧನೆಯು ಈ ಮೂಲಕ ಇಚ್ಛಿಸುತ್ತದೆ. ಕರ್ನಾಟಕ ರಾಜ್ಯ ಪಾನೀಯಗಳ ನಿಗಮ ನಿಯಮಿತವು ಈ ನಿಟ್ಟಿನಲ್ಲಿ ಸಮರ್ಪಕ ಕ್ರಮಗಳನ್ನು ತೆಗೆದುಕೊಂಡಿರಲಿಲ್ಲ.

ಆದಾಗ್ಯೂ, ಮಾಹಿತಿಯನ್ನು ಲಭ್ಯವಿರುವಷ್ಟರ ಮಟ್ಟಿಗೆ ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ನಿಂದ ನೀಡಲಾಗಿರುವ ಅಂಟುಚೀಟಿಗಳಿಗೆ ಸಂಬಂಧಿಸಿದಂತೆ, ಅಬಕಾರಿ ಅಂಟುಚೀಟಿಗಳನ್ನು ಪಡೆದಂತಹ ಡಿಸ್ಟಿಲರಿಗಳಲ್ಲಿ ಲಭ್ಯವಿರುವ ಮಾಹಿತಿ ಹಾಗೂ ಅದು ಸರಬರಾಜು ಮಾಡಿದ ಕರ್ನಾಟಕ ರಾಜ್ಯ ಪಾನೀಯಗಳ ನಿಗಮ ನಿಯಮಿತದ ಡಿಪೋ, ಇವುಗಳಲ್ಲಿ ಲಭ್ಯವಿರುವ ಮಾಹಿತಿಯ ಮಟ್ಟಿಗೆ ಅಡ್ಡ–ಪರಿಶೀಲನೆ ಮಾಡಬಹುದಿದ್ದಿತು. ಕರ್ನಾಟಕ ರಾಜ್ಯ ಪಾನೀಯಗಳ ನಿಗಮ ನಿಯಮಿತ ಮತ್ತು ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ನ ದತ್ತಸಂಚಯಗಳ ಪ್ರವೇಶ/ವೀಕ್ಷಣೆಯನ್ನು ಖಚಿತಪಡಿಸಿಕೊಳ್ಳುವಿಕೆಯು ಇಲಾಖೆಯ ಜಾರಿ ಅಧಿಕಾರಿಗಳು ಅಡ್ಡ–ಪರಿಶೀಲನೆ ಕಾರ್ಯಗಳನ್ನು ನಡೆಸಿಕೊಂಡು ಹೋಗಲು ಅನುಕೂಲ ಕಲ್ಪಿಸುತ್ತಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಸ್ಪಷ್ಟಪಡಿಸುತ್ತದೆ.

**ಶಿಫಾರಸ್ಸು 2: ಸರ್ಕಾರವು ಕರ್ನಾಟಕ ರಾಜ್ಯ ಪಾನೀಯಗಳ ನಿಗಮ ನಿಯಮಿತ ಮತ್ತು ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ಗೆ ಈ ಕೆಳಗಿನ ಅಂಶಗಳನ್ನು ಕಾರ್ಯಗತಗೊಳಿಸುವ ಬಗ್ಗೆ ನಿರ್ದೇಶನಗಳನ್ನು ನೀಡಬೇಕು**

- **(ಎ)ಕರ್ನಾಟಕ ರಾಜ್ಯ ಪಾನೀಯಗಳ ನಿಗಮ ನಿಯಮಿತದ ದತ್ತಸಂಚಯವನ್ನು ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ನ ದತ್ತಸಂಚಯದೊಂದಿಗೆ ಅಂತರ–ಸಂಪರ್ಕ ಕಲ್ಪಿಸುವುದು;**
- **(ಬಿ)ಗಮನಿಸಲಾಗುವ ಅಸಮಂಜಸತೆಗಳು ಅಬಕಾರಿ ಇಲಾಖೆಯ ಜಾರಿ ಅಧಿಕಾರಿಗಳಿಗೆ ಮಾಹಿತಿಯಾಗುವ ರೀತಿಯಲ್ಲಿ ಒಂದು ವಾಸ್ತವಿಕ ಸಮಯದ ಆಧಾರದ ಮೇರೆಗೆ ತನ್ನ ದತ್ತಸಂಚಯದಲ್ಲಿ ಡಿಸ್ಟಿಲರಿಗಳು ಆನ್‌ಲೈನ್ ಮೂಲಕ ಊಡಿಕೆ ಮಾಡುವ ಅಬಕಾರಿ ಅಂಟುಚೀಟಿ ವಿವರಗಳನ್ನು ಸ್ಥಿರೀಕರಿಸುವುದು;**
- **(ಸಿ)ಕಡೆಯ ಹಂತದ ಮಾರಾಟದವರೆಗೂ ಮದ್ಯ ಸರಬರಾಜಿನ ಜಾಡನ್ನು ಹಿಡಿಯುವ ಸಲುವಾಗಿ ಚಿಲ್ಲರೆ ಮಾರಾಟಗಾರಿಗೆ ಮಾಡಲಾಗುವ ಸರಬರಾಜಿನ ಅಬಕಾರಿ ಅಂಟುಚೀಟಿವಾರು ಮಾಹಿತಿಯನ್ನು ಸಂಕಲಿಸುವುದು; ಮತ್ತು**
- **(ಡಿ)ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ನಲ್ಲಿ ಲೋಪದೋಷಗಳಿಂದ ಕೂಡಿದ ಅಂಟುಚೀಟಿಗಳ ನೀಡಿಕೆಯನ್ನು ತೊಡೆದುಹಾಕುವ ಸಲುವಾಗಿ ಗುಣಮಟ್ಟ ನಿಯಂತ್ರಣದ ಖಚಿತಪಡಿಸಿಕೊಳ್ಳುವಿಕೆಯನ್ನು ಉತ್ತಮಗೊಳಿಸುವುದು.**

ನಿರ್ಗಮನ ಮಟ್ಟದ ಸಭೆಯಲ್ಲಿ, ಕರ್ನಾಟಕ ರಾಜ್ಯ ಪಾನೀಯಗಳ ನಿಗಮ ನಿಯಮಿತದ ದತ್ತಸಂಚಯವನ್ನು ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ನ ದತ್ತಸಂಚಯದ ಜೊತೆ ಅಂತರಸಂಪರ್ಕ ಕಲ್ಪಿಸುವಂತೆ ಸರ್ಕಾರವು ಕರ್ನಾಟಕ ರಾಜ್ಯ ಪಾನೀಯಗಳ ನಿಗಮ ನಿಯಮಿತಕ್ಕೆ ನಿರ್ದೇಶಿಸಿತು. ಆಗಸ್ಟ್ 2018ರ ಒಳಗೆ ಎರಡೂ ಕಂಪನಿಗಳ ದತ್ತಸಂಚಯವನ್ನು ಅಂತರಸಂಪರ್ಕಗೊಳಿಸುವುದಾಗಿ ಕರ್ನಾಟಕ ರಾಜ್ಯ ಪಾನೀಯಗಳ ನಿಗಮ ನಿಯಮಿತವು ಒಪ್ಪಿಕೊಂಡಿತು.

## 3.4.12 ಚಿಲ್ಲರೆ ಮಾರಾಟ ಪರವಾನಿಗೆದಾರರು ಪರವಾನಿಗೆ ಷರತ್ತುಗಳ ಉಲ್ಲಂಘನೆ ಮಾಡಿದ್ದುದು ಹಾಗೂ ಪರವಾನಿಗೆಯನ್ನು ಹೊಂದಿರದ ಚಿಲ್ಲರೆ ಮಾರಾಟಗಾರರು ಕುಡಿಯಲು ಯೋಗ್ಯವಾದ ಮದ್ಯ ಮಾರಾಟ ಮಾಡುತ್ತಿದ್ದುದು.

ಮದ್ಯದ ಚಿಲ್ಲರೆ ಮಾರಾಟಗಳಿಗಾಗಿ ಪರವಾನಿಗೆಗಳನ್ನು ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು 1968ರ ಅಡಿಯಲ್ಲಿ ನೀಡಲಾಗುವುದು. ಕರ್ನಾಟಕ ಅಬಕಾರಿ ಅಧಿನಿಯಮ, 1965ರ ಅನುವುಗಳಿಂದ ಹಾಗೂ ಅವುಗಳ ಅಡಿಯಲ್ಲಿ ರೂಪಿಸಲಾಗುವ ಯಾವುದೇ ಸಾಮಾನ್ಯ ಅಥವಾ ವಿಶೇಷ ನಿಯಮಗಳಿಂದ ಬದ್ಧವಾಗಿರುವ ಪರವಾನಿಗೆದಾರರುಗಳು, ಮಾರಾಟ ಮಾಡಲು ಅನುವು ಮಾಡಬಹುದಾದ ಮದ್ಯದ ಮಾದರಿ, ಓರ್ವ ಬಳಕೆದಾರರಿಗೆ ಮಾರಾಟ ಮಾಡಲು ಅವಕಾಶ ನೀಡಬಹುದಾದ ಮದ್ಯದ ಗರಿಷ್ಠ ಪ್ರಮಾಣ, ಚಿಲ್ಲರೆ ಮಾರಾಟದ ಗರಿಷ್ಠ ದರ (ಎಂಆರ್‌ಪಿ), ಇತ್ಯಾದಿಯಾಗಿ ಅನೇಕ ಷರತ್ತುಗಳನ್ನು ಮೇಲೆ ತಿಳಿಸಲಾದ ನಿಯಮಗಳು ನಿರ್ದಿಷ್ಟಪಡಿಸಿವೆ. ಮುಂದುವರೆದು, ಪರವಾನಿಗೆ ಇಲ್ಲದೆಯೇ ಸುಂಕವನ್ನು ವಿಧಿಸಬಹುದಾದ ಸರಕುಗಳು ಹಾಗೂ ಅಲ್ಲದೆಯೇ ಅನಧಿಕೃತ ಸಾರ್ವಜನಿಕ ಸ್ಥಳಗಳಲ್ಲಿ ಬಳಸುವುದು ಅಥವಾ ಬಳಸುವುದಕ್ಕೆ ಅನುಮತಿ ನೀಡುವುದನ್ನು ನಿಶೇಧಿಸಲಾಗಿರುತ್ತದೆ/ಪ್ರತಿಬಂಧಿಸಲಾಗಿರುತ್ತದೆ[37].

ಪರವಾನಿಗೆ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ, ಪರವಾನಿಗೆದಾರರಿಂದ ಐದು ಸಾವಿರ ರೂಪಾಯಿಗಳಿಗೆ ಕಡಿಮೆ ಇಲ್ಲದಂತೆ, ಆದರೆ ಮಾಡಿರಬಹುದಾದ ಅಪರಾದಗಳನ್ನು ಸಂಯೋಜನೆಗೊಳಿಸುವುದಕ್ಕಾಗಿ ಅದನ್ನು ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಒಂದು ಮೊತ್ತವನ್ನು ಒಪ್ಪಿಕೊಳ್ಳಲು ಕರ್ನಾಟಕ ಅಬಕಾರಿ

[37] ಕರ್ನಾಟಕ ಅಬಕಾರಿ ಅಧಿನಿಯಮದ ಪರಿಚ್ಛೇದ 15 ಮತ್ತು 15–ಎ.

ಅಧಿನಿಯಮವು ಪರಿಚ್ಛೇದ 45(1)ರ ಅಡಿಯಲ್ಲಿ ಅಬಕಾರಿ ಇಲಾಖೆಯ ಉಪ–ಆಯುಕ್ತರಿಗೆ ಅಧಿಕಾರವನ್ನು ನೀಡಿರುತ್ತದೆ. ಪರವಾನಿಗೆ ಷರತ್ತುಗಳನ್ನು ಉಲ್ಲಂಘಿಸಿದ್ದಕ್ಕಾಗಿ ಪರವಾನಿಗೆಯನ್ನು ರದ್ದುಪಡಿಸುವ ಅಧಿಕಾರವನ್ನೂ [38] ಸಹ ಅಬಕಾರಿ ಅಧಿಕಾರಿಗಳಿಗೆ ನೀಡಲಾಗಿದೆ.

ಪರವಾನಿಗೆದಾರರುಗಳು ಪರವಾನಿಗೆ ಷರತ್ತುಗಳನ್ನು ಅನುಸರಿಸುತ್ತಿರುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಜಾರಿ ವಿಭಾಗದ ಅಧಿಕಾರಿಗಳು ಪರವಾನಿಗೆಯನ್ನು ಪಡೆದಿರುವ ಸ್ಥಳಗಳನ್ನು/ಅಂಗಡಿಗಳನ್ನು ಪರೀಕ್ಷಣೆ ಮಾಡುವರು. ಚಿಲ್ಲರೆ ಮಾರಾಟದ ಪರವಾನಿಗೆದಾರರುಗಳು ಷರತ್ತುಗಳನ್ನು ಉತ್ತಮವಾಗಿ ಅನುಸರಿಸುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಇಲಾಖೆಗೆ ಸಮರ್ಪಕ ಅರ್ಹತೆಯಿರುವ ಸಿಬ್ಬಂದಿಯ ಅಗತ್ಯತೆಯಿರುತ್ತದೆ. ಇಲಾಖೆಯು ನಿರ್ವಹಿಸಿರುವ ಮಾನವ ಸಂಪನ್ಮೂಲ ನಿರ್ವಹಣೆ ಮತ್ತು ಆಡಳಿತದ ಬಗ್ಗೆ ಇಟ್ಟಿರುವ ಅಂಕಿಅಂಶಗಳ ಮಾಹಿತಿಯಿಂದ, 2012–13ರಿಂದ 2016–17ರ ಅವಧಿಯ ಐದು ವರ್ಷಗಳಲ್ಲಿ ಇಲಾಖೆಯು ಮಂಜೂರಾಗಿರುವ ಸಿಬ್ಬಂದಿ ಸಂಖ್ಯೆಯ ಕೇವಲ ಶೇಕಡಾ 57ರಷ್ಟು ಸಿಬ್ಬಂಧಿಯೊಂದಿಗೆ ಕಾರ್ಯನಿರ್ವಹಿಸುತ್ತಿದ್ದಿತು ಹಾಗೂ ಉಳಿದ ಶೇಕಡಾ 43ರಷ್ಟು[39] ಹುದ್ದೆಗಳು ಖಾಲಿ ಇದ್ದವು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಪರವಾನಿಗೆ ಷರತ್ತುಗಳನ್ನು ಅನುಸರಿಸಿರುವ ಮಟ್ಟ ಹಾಗೂ ಜಾರಿ ವಿಭಾಗದ ಅಧಿಕಾರಿಗಳು ಪರವಾನಿಗೆದಾರರುಗಳಿಂದ ಷರತ್ತುಗಳ ಅನುಸರಿಸಿರುವಿಕೆಯನ್ನು ಖಚಿತಪಡಿಸಿಕೊಳ್ಳುವಿಕೆಗಾಗಿ ತೆಗೆದುಕೊಂಡಿದ್ದ ಕ್ರಮಗಳನ್ನು ಖಚಿತಪಡಿಸಿಕೊಳ್ಳುವ ದೃಷ್ಟಿಯಿಂದ ಲೆಕ್ಕಪರಿಶೋಧನೆಯು ಒಂಬತ್ತು ಜಿಲ್ಲೆಗಳ 25 ವಲಯಗಳಲ್ಲಿ 2012–17ರ ಅವಧಿಯಲ್ಲಿ ಚಿಲ್ಲರೆ ಮಾರಾಟ ಪರವಾನಿಗೆದಾರರ ಪ್ರತಿಯಾಗಿ ದಾಖಲಿಸಲಾಗಿದ್ದ ಅಪರಾಧ ಪ್ರಕರಣಗಳನ್ನು ಸಮೀಕ್ಷಿಸಿತು. ಲೆಕ್ಕಪರಿಶೋಧನೆಯ ವಿಶ್ಲೇಷಣೆಯು ಈ ಕೆಳಗಿನ ಅಂಶಗಳನ್ನು ತೋರಿಸಿಕೊಟ್ಟಿತು:

- ಪರೀಕ್ಷಾ–ಪರಿಶೀಲನೆ ಮಾಡಲಾದ ವಲಯ ಕಚೇರಿಗಳಲ್ಲಿ, ಶೇಕಡಾ 83ರಿಂದ 100ರವರೆಗಿನ ಪರವಾನಿಗೆದಾರರುಗಳು ಪರವಾನಿಗೆ ಷರತ್ತುಗಳನ್ನು ಉಲ್ಲಂಘಿಸಿದ್ದರು. ಅಲ್ಲದೆಯೇ, ಶೇಕಡಾ 80ಕ್ಕಿಂತಲೂ ಅಧಿಕ ಪರವಾನಿಗೆದಾರರುಗಳು ಈ ಮೊದಲು ಪತ್ತೆಹಚ್ಚಿ ಸಂಯೋಜನೆಗೊಳಿಸಲಾಗಿದ್ದ ಅದೇ ಅಪರಾಧಗಳನ್ನು ಪುನರಾವರ್ತಿಸಿದ್ದರು. ಈ ವಲಯ ಕಚೇರಿಗಳ ಅಡಿಯಲ್ಲಿನ ಪರವಾನಿಗೆದಾರರುಗಳು 91 ಸಲದವರೆಗೂ ಅಪರಾಧಗಳನ್ನು ಪುನರಾವರ್ತಿಸಿದ್ದರು ಈ ವಲಯ ಕಚೇರಿಗಳಲ್ಲಿ 20ಕ್ಕೂ ಹೆಚ್ಚು ಸಲ ಅಪರಾಧಗಳನ್ನು ಪುನರಾವರ್ತಿಸಿರುವ ಪರವಾನಿಗೆದಾರರುಗಳ ಒಂದು ಪಟ್ಟಿಯನ್ನು **ಅನುಬಂಧ *V***ರಲ್ಲಿ ನೀಡಲಾಗಿದೆ;

- ಏಳು[40] ಜಿಲ್ಲೆಗಳಲ್ಲಿ, ಚಿಲ್ಲರೆ ಮಾರಾಟದ ಗರಿಷ್ಠ ದರವನ್ನು ಮೀರಿದಂತೆ ಮದ್ಯದ ಮಾರಾಟ, ಮಾರಾಟದ ಮಳಿಗೆ/ಸ್ಥಳದಲ್ಲಿಯೇ ಮದ್ಯ ಸೇವನೆ, ಇತ್ಯಾದಿ ಅಪರಾಧಗಳಿಗಾಗಿ ಕರ್ನಾಟಕ ಸರ್ಕಾರದ ಒಂದು ಉದ್ದಿಮೆಯಾಗಿರುವ ಮೆ. ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ (ಎಂಎಸ್‌ಐಎಲ್)[41] 25 ಮಾರಾಟ ಮಳಿಗೆಗಳ ವಿರುದ್ಧವಾಗಿ ಜಾರಿ ವಿಭಾಗದ ಅಧಿಕಾರಿಗಳು ಪ್ರಕರಣಗಳನ್ನು ದಾಖಲಿಸಿದ್ದರು.

- ಅಬಕಾರಿ ಇಲಾಖೆಯ ಆಯ್ದ ಒಂಬತ್ತು ಉಪ–ಆಯುಕ್ತರುಗಳ ಅಡಿಯಲ್ಲಿನ ಒಂಬತ್ತು ವಲಯ ಕಚೇರಿಗಳಲ್ಲಿ, ಏಪ್ರಿಲ್ 2012ರಿಂದ ಮಾರ್ಚ್ 2017ರ ಅವಧಿಯಲ್ಲಿ ಪರವಾನಿಗೆ ಇಲ್ಲದೆಯೇ ಮದ್ಯ ಮಾರಾಟ ಮಾಡಿದ್ದಕ್ಕಾಗಿ/ಕುಡಿಯಲು ಅವಕಾಶ ಮಾಡಿಕೊಟ್ಟದ್ದಕ್ಕಾಗಿ 10,784 ಪ್ರಕರಣಗಳನ್ನು ದಾಖಲಿಸಲಾಗಿದ್ದಿತು

ಶೇಕಡಾ 80ಕ್ಕಿಂತಲೂ ಅಧಿಕ ಪರವಾನಿಗೆದಾರರುಗಳಿಂದ ಹಾಗೂ ಸ್ವತ: ಒಂದು ಸರ್ಕಾರಿ ಕಂಪನಿಯಿಂದಲೇ ಪರವಾನಿಗೆ ಷರತ್ತುಗಳ ಪುನರಾವರ್ತಿತ ಉಲ್ಲಂಘನೆಗಳು ಪರವಾನಿಗೆ ಷರತ್ತುಗಳಿಗೆ ಬದ್ಧವಾಗಿರುವ ಕಡೆಗೆ ಶ್ರದ್ಧಾವಂತಿಕೆ/ಹೊಣೆಗಾರಿಕೆಯ ಕೊರತೆಯನ್ನು ತೋರಿಸುತ್ತಿದ್ದಿತು. ಅಪರಾಧ ಮಾಡುತ್ತಿರುವವರ ವಿರುದ್ಧವಾಗಿ ಇಲಾಖೆಯು ಪ್ರಯೋಗಿಸುತ್ತಿರುವ ದಂಡನೀಯ ಕ್ರಮಗಳು ಕಾನೂನುಬಾಹಿರ ಚಟುವಟಿಕೆಗಳನ್ನು ತಡೆಯುವಲ್ಲಿ ಸಮರ್ಪಕ ನಿರೋಧಕ ಶಕ್ತಿಯಾಗಿರುವುದಿಲ್ಲ ಎಂಬುದನ್ನೂ ಸಹ ಸೂಚಿಸುತ್ತದೆ. ಪರವಾನಿಗೆ ಷರತ್ತುಗಳ ಉಲ್ಲಂಘನೆಯ ಎಲ್ಲಾ ಪ್ರಕರಣಗಳಲ್ಲಿಯೂ, ಕರ್ನಾಟಕ ಅಬಕಾರಿ ಅಧಿನಿಯಮದ ಪರಿಚ್ಛೇದ 45 (1)ರ ಅಡಿಯಲ್ಲಿ ಅಬಕಾರಿ ಇಲಾಖೆಯ ಉಪ–ಆಯುಕ್ತರುಗಳಿಂದ ಅಪರಾಧಗಳನ್ನು ಯಾವಾಗಲೂ ₹ 5,000

[38] ಕರ್ನಾಟಕ ಅಬಕಾರಿ ಅಧಿನಿಯಮದ ಪರಿಚ್ಛೇದ 29(1) (ಬಿ).

[39] 31 ಮಾರ್ಚ್ 2017ರಲ್ಲಿದ್ದಂತೆ, ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಿಬ್ಬಂದಿಯ ಸಂಖ್ಯೆಯು ಮಂಜೂರಾತಿಗೊಂಡಿದ್ದ 5,485ಕ್ಕೆ ಪ್ರತಿಯಾಗಿ 3,115 ಆಗಿದ್ದಿತು.

[40] ಧಾರವಾಡ, ಗದಗ, ಕೋಲಾರ, ಕಲಬುರಗಿ, ಮಂಡ್ಯ, ಮೈಸೂರು ಮತ್ತು ಯಾದಗಿರಿ.

[41] ಎಂಎಸ್‌ಐಎಲ್ ಮದ್ಯದ ಅಂಗಡಿಗಳು ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968ರ ನಿಯಮ 3 (11–ಸಿ) ಅಡಿಯಲ್ಲಿ ಮದ್ಯವನ್ನು ಹೊಂದಿರಲು ಹಾಗೂ ಮಾರಾಟ ಮಾಡಲು ಸರ್ಕಾರದ ಪರವಾನಿಗೆಯನ್ನು ಹೊಂದಿರುವ ಚಿಲ್ಲರೆ ಮಾರಾಟದ ಅಂಗಡಿಗಳು.

ಮತ್ತು ₹ 30,000 ನಡುವಿನ ಮೊತ್ತಗಳಿಂದ ಸಂಯೋಜನೆಗೊಳಿಸಲಾಗಿದ್ದಿತು. ಅಪರಾಧಗಳ ಯಾವುದೇ ಒಂದು ಪ್ರಕರಣದಲ್ಲಿಯೂ ಕರ್ನಾಟಕ ಅಬಕಾರಿ ಅಧಿನಿಯಮದ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವಂತೆ ಗರಿಷ್ಠ ದಂಡ ₹ 50,000ದಷ್ಟು ಮೊತ್ತವನ್ನು ಇಲಾಖೆಯು ವಿಧಿಸಿರಲಿಲ್ಲ. ಇಲಾಖೆಯು ಬಹಳಷ್ಟು ಸಂಖ್ಯೆಯ ಅಪರಾಧಗಳನ್ನು ಮಾಡಿದ್ದ ಪರವಾನಿಗೆದಾರರುಗಳ ಪ್ರಕರಣಗಳಲ್ಲಿಯೂ ಪರವಾನಿಗೆಗಳನ್ನು ರದ್ದುಗೊಳಿಸುವಂತಹ ಕಠಿಣ ಕ್ರಮಗಳನ್ನು ತೆಗೆದುಕೊಂಡಿರಲಿಲ್ಲ.

## 3.4.13 ನಿರ್ಣಯ

ಆಲ್ಕೋಹಾಲು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಒಂದು ವಿಚಾರಾತ್ಮಕ/ವಿಮರ್ಶಾತ್ಮಕ ಹಾಗೂ ಒಂದು ಸೂಕ್ಷ್ಮ ಸಂವೇದನೆಯ ಉತ್ಪನ್ನವಾಗಿರುವುದರಿಂದ ರಾಜ್ಯವು ಚಲಾಯಿಸುವ ನಿಯಂತ್ರಣಗಳು ಕಠಿಣವಾಗಿರಬೇಕು, ಹಾಗೆಯೇ ಕಾರ್ಯಸಾಧ್ಯವಾಗಿರಬೇಕು. ಸರ್ಕಾರ ಮತ್ತು ಇಲಾಖೆಯು ಪ್ರಾಥಮಿಕ ಡಿಸ್ಟಿಲರಿಗಳಲ್ಲಿ ಕಚ್ಚಾ ಸಾಮಗ್ರಿಗಳ ಖರೀದಿಯಿಂದ ಪ್ರಾರಂಭಗೊಂಡು ಬಳಕೆದಾರರಿಗೆ ಕುಡಿಯಲು ಯೋಗ್ಯವಾದ ಮದ್ಯದ ವಿತರಣೆಯವರೆಗಿನ ಘಟನೆಗಳ ಸರಪಳಿಯಲ್ಲಿ ಅನೇಕ ನಿಯಂತ್ರಣಗಳನ್ನು ರೂಪಿಸಿರುತ್ತವೆ. "ಕರ್ನಾಟಕ ರಾಜ್ಯದಲ್ಲಿ ಆಲ್ಕಹಾಲಿನ ಉತ್ಪನ್ನಗಳ ತಯಾರಿಕೆ, ಹೊಂದಿರುವಿಕೆ, ಸಾಗಾಣಿಕೆ, ವಿತರಣೆ ಮತ್ತು ಮಾರಾಟಗಳು, ಇವುಗಳ ಮೇಲಿನ ನಿಬಂಧನೆ ಮತ್ತು ನಿಯಂತ್ರಣಗಳು" ಈ ವಿಷಯದ ಮೇಲಿನ ಒಂದು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯು ರೂಪಿಸಲಾಗಿರುವ ನಿಯಂತ್ರಣಗಳು ತಾತ್ವಿಕವಾಗಿ ಸಮರ್ಪಕವಾಗಿರುವುದಾಗಿ ಕಂಡುಬಂದರೂ, ಇಲಾಖೆಯು ಕೆಲವು ಕ್ಷೇತ್ರಗಳಲ್ಲಿ, ವಿಶೇಷವಾಗಿ ನಿಯಂತ್ರಣಗಳ ಅಂಶಗಳ ನಿರೂಪಿಸುವಿಕೆ ಮತ್ತು ಕಾರ್ಯಗತಗೊಳಿಸುವಿಕೆಗೆ ಸಂಬಂಧಿಸಿದಂತೆ ತನ್ನ ಕಾರ್ಯನಿರ್ವಹಣೆಯನ್ನು ಉತ್ತಮಗೊಳಿಸಬಹುದು. ಗಮನಿಸಲಾದ ಲೋಪದೋಷಗಳು ಈ ಕೆಳಗಿನಂತಿದ್ದವು:

- ಕಾಕಂಬಿಯಿಂದ ಮದ್ಯಸಾರದ ಉತ್ಪತ್ತಿಯ ಪ್ರಮಾಣಕಗಳನ್ನು ಡಿಸ್ಟಿಲರಿಗಳ ವಾಸ್ತವಿಕ ಉತ್ಪಾದನಾ ಸಾಮರ್ಥ್ಯಕ್ಕಿಂತ ಗಮನಾರ್ಹ ಪ್ರಮಾಣದಲ್ಲಿ ಕಡಿಮೆ ಮಟ್ಟದಲ್ಲಿಡಲಾಗಿದ್ದಿತು. ಇದು, ತತ್ಪರಿಣಾಮವಾಗಿ ತಮ್ಮ ಅನುಕೂಲಕ್ಕೆ ತಕ್ಕಂತೆ ಡಿಸ್ಟಿಲರಿಗಳು ಪಾತ್ರವಹಿಸಲು/ಕಾರ್ಯನಿರ್ವಹಿಸಲು ಗಮನಾರ್ಹ ಪ್ರಮಾಣದ ಅಧಿಕ ಉತ್ಪತ್ತಿಯನ್ನು ಮಾಡಿಕೊಳ್ಳಲು ಅನುವು ಮಾಡಿಕೊಟ್ಟಿದ್ದಿತು, ಇದು ಮದ್ಯಸಾರದ ಲೆಕ್ಕದಲ್ಲಿಡದ/ಕಾನೂನುಬಾಹಿರ ತಯಾರಿಕೆಯಲ್ಲಿ ಪರಿಣಮಿಸುತ್ತದೆ.

- ಆಲ್ಕೋಹಾಲಿನ ಉತ್ಪಾದನೆಯಲ್ಲಿ ವಾಸ್ತವಿಕ ಕಚ್ಚಾಸಾಮಗ್ರಿಯು ಅದರಲ್ಲಿರುವ ಒಟ್ಟಾರೆ ತಗ್ಗಿಸಬಲ್ಲ ಸಕ್ಕರೆಯಾಗಿರುವುದರಿಂದ ಕಾಕಂಬಿಯ ವರ್ಗೀಕರಣವನ್ನು ಆಧಾರಿತ ಪ್ರಮಾಣಕಗಳು ವೈಜ್ಞಾನಿಕವಾಗಿರಲಿಲ್ಲ. ಪ್ರಮಾಣಕಗಳ ಪ್ರಕಾರ, ದರ್ಜೆ III ರ (ಕಡಿಮೆ ಮಟ್ಟದ ದರ್ಜೆ) ಕಿಲೋಗ್ರಾಂ ಒಂದಕ್ಕೆ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪತ್ತಿಯು ದರ್ಜೆ Iಕ್ಕೆ (ಅಧಿಕ ಮಟ್ಟದ ದರ್ಜೆ) ನಿರ್ದಿಷ್ಟಪಡಿಸಲಾಗಿರುವ ಉತ್ಪತ್ತಿಗಿಂತ ಅಧಿಕವಾಗಿದ್ದಿತು, ಇದು, ಡಿಸ್ಟಿಲರಿಗಳು ಮದ್ಯಸಾರದ ಅಂತಿಮ ಉತ್ಪತ್ತಿಯನ್ನು ನಿಯಮಬಾಹಿರವಾಗಿ ದುರುಪಯೋಗ ಮಾಡಿಕೊಳ್ಳಬಹುದು.

- ಅಧಿನಿಯಮದ ಅಡಿಯಲ್ಲಿ ಅಗತ್ಯವಿದ್ದಂತೆ, ಡಿಸ್ಟಿಲರಿಗಳಲ್ಲಿ ನಿಯುಕ್ತಿ ಮಾಡಲಾಗಿದ್ದ ಡಿಸ್ಟಿಲರಿ ಅಧಿಕಾರಿಗಳು ಮಾದರಿಗಳನ್ನು ಪಡೆದುಕೊಳ್ಳುವಲ್ಲಿ ಹಾಗೂ ಕಾಕಂಬಿಯನ್ನು ರಸಾಯನಿಕವಾಗಿ ವಿಶ್ಲೇಷಣೆ ಮಾಡುವಲ್ಲಿ ವಿಫಲರಾಗಿದ್ದರು. ವಿಶ್ಲೇಷಣೆ ಮಾಡದಿದ್ದುದು, ಸಾಮಾನ್ಯ ನಿರೀಕ್ಷಿತ ಮಟ್ಟವನ್ನು ಮೀರಿದಂತೆ ಸಂವರ್ಧಕವಾಗಿರುವ ಸಕ್ಕರೆಯನ್ನು ಹೊಂದಿರುವ ಕಾಕಂಬಿಯನ್ನು ಪತ್ತೆಹಚ್ಚುವುದಕ್ಕಾಗಿ ನಿಯಂತ್ರಣದ ಜೊತೆ ರಾಜಿ ಮಾಡಿಕೊಳ್ಳಲಾಯಿತು; ಇದು ಮದ್ಯಸಾರದ ವಾಸ್ತವಿಕವಾಗಿ ಸಾಧ್ಯವಿರುವ ಉತ್ಪತ್ತಿಯನ್ನು ನಿರ್ಧಾರಣೆ ಮಾಡುವಲ್ಲಿ ಇಲಾಖೆಯನ್ನು ಅಸಾಮರ್ಥ್ಯಗೊಳಿಸಿತು.

- ಸಕ್ಕರೆ ಕಾರ್ಖಾನೆಗಳು ಕಾಕಂಬಿಯ ನೀಡಿಕೆಯನ್ನು ನಿಯಂತ್ರಿಸುವ ಸಲುವಾಗಿ ಯಾವುದೇ ಕಾರ್ಯನೀತಿಯೂ ಇರಲಿಲ್ಲ. ರಾಜ್ಯದಲ್ಲಿನ ಹತ್ತು ಸಕ್ಕರೆ ಕಾರ್ಖಾನೆಗಳಿಂದ ಖರೀದಿಸಿದ್ದ 19,555 ಮೆಟ್ರಿಕ್ ಟನ್ನುಗಳಷ್ಟು ಕಾಕಂಬಿಯನ್ನು ಮೂರು ಡಿಸ್ಟಿಲರಿಗಳು ಲೆಕ್ಕ ಇಟ್ಟಿರಲಿಲ್ಲ ಎಂಬುದನ್ನು ಸಕ್ಕರೆ ಕಾರ್ಖಾನೆಗಳು ಮತ್ತು ಡಿಸ್ಟಿಲರಿಗಳ ನಡುವಿನ ಅಂಕಿಸಂಖ್ಯೆಗಳ ಅಡ್ಡ–ಪರಿಶೀಲನೆಯು ತೋರಿಸಿಕೊಟ್ಟಿತು;

- ಮಾರುಕಟ್ಟೆಗೆ ಬಿಡುಗಡೆಗೊಳಿಸುವ ಪ್ರತಿಯೊಂದು ಬಾಟಲಿಯನ್ನು ವಿಶಿಷ್ಟತೆಯಿಂದ ಗುರುತಿಸುವ ಸಲುವಾಗಿ ಭಾರತೀಯ ಮದ್ಯ/ವೈನಿನ ಪ್ರತಿಯೊಂದು ಸೀಲು ಮಾಡಿದ ಬಾಟಲಿಗಳು/ಪ್ಯಾಕುಗಳ ಮೇಲೆ ಭದ್ರತಾ ವೈಲಕ್ಷಣಗಳನ್ನು ಹೊಂದಿದ್ದ ಅಬಕಾರಿ ಅಂಟುಚೀಟಿಗಳನ್ನು ಅಂಟಿಸಲಾಗುತ್ತದೆ. ಆದಾಗ್ಯೂ, ಅದರ ಜಾಲತಾಣಕ್ಕೆ ಡಿಸ್ಟಿಲರಿಗಳು ಊಡಿಕೆ ಮಾಡಿದ್ದ ಅಬಕಾರಿ ಅಂಟುಚೀಟಿಗೆ ಸ್ಥಿರೀಕರಣ ನಿಯಂತ್ರಣದ ಅನುಪಸ್ಥಿತಿ ಹಾಗೂ ಮಾರಾಟದ ಕಡೆಯ ಹಂತದವರೆಗೂ ಕುಡಿಯಲು ಯೋಗ್ಯವಾದ ಮದ್ಯಗಳ ಸರಬರಾಜಿನ ಜಾಡನ್ನು ಹಿಡಿಯುವ ಸಲುವಾಗಿ ಒಂದು ವ್ಯವಸ್ಥೆಯ

ಅನುಪಸ್ಥಿತಿಯು ಈ ಅಬಕಾರಿ ಅಂಟುಚೀಟಿಗಳ ಅತ್ಯುತ್ತಮ ಪ್ರಯೋಜನಗಳನ್ನು ಪಡೆದುಕೊಳ್ಳುವುದರಿಂದ ಇಲಾಖೆಯನ್ನು ತಡೆಹಿಡಿಯಿತು.

- ಅಲ್ಲದೆಯೇ, ತಮ್ಮ ಪರವಾನಿಗೆಗಳಿಗೆ ಹೊಂದಿಕೊಂಡಿದ್ದ ಷರತ್ತುಗಳನ್ನು ಗಮನಾರ್ಹ ಮಟ್ಟದಲ್ಲಿ ಅನುಸರಿಸದಿರುವುದನ್ನು ಚಿಲ್ಲರೆ ಮಾರಾಟ ಪರವಾನಿಗೆದಾರರುಗಳಲ್ಲಿ ಗಮನಿಸಲಾಯಿತು. ಚಿಲ್ಲರೆ ಮಾರಾಟಗಾರರ ಪೈಕಿ ಶೇಕಡಾ ಎಂಭತ್ತರಷ್ಟು ಚಿಲ್ಲರೆ ಮಾರಾಟಗಾರರು ಪುನರಾವರ್ತಿತ ತಪ್ಪಿತಸ್ತರಾಗಿದ್ದರು ಎಂಬುದು ಕಂಡುಬಂದಿತು, ಇದು ಉತ್ತಮಗೊಳಿಸಲ್ಪಟ್ಟ ಅನುಪಾಲನೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ಇಲಾಖೆಯ ಅಸಹಾಯಕತೆಯನ್ನು ಸೂಚಿಸುತ್ತಿದ್ದಿತು.

ಅಲ್ಲದೆಯೇ, ಕಂಡಿಕೆಗಳು 3.4.8ರಿಂದ 3.4.10.4ರವರೆಗಿನ ಕಂಡಿಕೆಗಳಲ್ಲಿ ಚರ್ಚಿಸಿರುವಂತೆ, ಇಲಾಖೆಯು ಚಲಾಯಿಸಿದ ನಿಯಂತ್ರಣಗಳಲ್ಲಿನ ಲೋಪದೋಷಗಳು ಲೆಕ್ಕಪರಿಶೋಧನೆಯಲ್ಲಿ ವಿಶ್ಲೇಷಿಸಿರುವಂತೆ ಸರ್ಕಾರಕ್ಕೆ 2012–13ರಿಂದ 2016–17ರ ಅವಧಿಯ ಐದು ವರ್ಷಗಳಲ್ಲಿ ಲೆಕ್ಕಪರಿಶೋಧನೆಯು ಮಾಡಿದ ಮಾದರಿ ಆಯ್ಕೆಯ ಒಳಗಡೆಯೇ (ರಾಜ್ಯದಲ್ಲಿನ ಒಟ್ಟಾರೆ ವ್ಯವಹಾರಗಳ ಶೇಕಡಾ 15) ₹ 830.73 ಕೋಟಿ ಹಾಗೂ ₹ 1,420.03 ಕೋಟಿ ಮೊತ್ತದಷ್ಟು ವರಮಾನದ ನಷ್ಟಕ್ಕೆ ಕಾರಣವಾಯಿತು.

# ಅಧ್ಯಾಯ –IV

# ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕ

# ಅಧ್ಯಾಯ –IV
# ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕ

## 4.1 ತೆರಿಗೆ ನಿರ್ವಹಣೆ

ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕದಿಂದ ಬರುವಂತಹ ಸ್ವೀಕೃತಿಗಳು ಭಾರತೀಯ ಮುದ್ರಾಂಕ ಅಧಿನಿಯಮ, 1899, ಕರ್ನಾಟಕ ಮುದ್ರಾಂಕ ಅಧಿನಿಯಮ, 1957, ನೋಂದಣಿ ಅಧಿನಿಯಮ, 1908 ಹಾಗೂ ಅವುಗಳ ಅಡಿಯಲ್ಲಿ ರೂಪಿಸಲಾಗಿರುವ ನಿಯಮಗಳಿಂದ ನಿಯಂತ್ರಿಸಲ್ಪಡುತ್ತವೆ. ಕರ್ನಾಟಕದಲ್ಲಿ, ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕದ ವಿಧಿಸುವಿಕೆ ಮತ್ತು ಸಂಗ್ರಹಣೆ/ವಸೂಲಾತಿಯು ಸರ್ಕಾರದ ಮಟ್ಟದಲ್ಲಿ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಂದ ನಿರ್ವಹಿಸಲ್ಪಡುತ್ತದೆ. ಕಂದಾಯ ಇಲಾಖೆಯ ಆಡಳಿತಾತ್ಮಕ ನಿಯಂತ್ರಣದ ಅಡಿಯಲ್ಲಿರುವ ಮುದ್ರಾಂಕಗಳು ಮತ್ತು ನೋಂದಣಿ ಇಲಾಖೆಯು ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕದ ವಿಧಿಸುವಿಕೆ ಮತ್ತು ವಸೂಲಾತಿ/ಸಂಗ್ರಹಣೆಯನ್ನು ನಿಯಂತ್ರಿಸುತ್ತದೆ.

## 4.2 ಆಂತರಿಕ ಲೆಕ್ಕಪರಿಶೋಧನೆ

ಆಂತರಿಕ ಲೆಕ್ಕಪರಿಶೋಧನಾ ಕೋಶವನ್ನು ಡಿಸೆಂಬರ್ 2012ರಲ್ಲಿ ರಚಿಸಲಾಯಿತಾದರೂ, ಸಿಬ್ಬಂದಿಯ ಕೊರತೆಯ ಕಾರಣ ಅದು ಇನ್ನೂ ಕಾರ್ಯಪ್ರವೃತ್ತಗೊಂಡಿಲ್ಲ (ನವಂಬರ್ 2017) ಎಂಬುದಾಗಿ ಇಲಾಖೆಯು ತಿಳಿಸಿತು.

## 4.3 ಲೆಕ್ಕಪರಿಶೋಧನೆಯ ಫಲಿತಾಂಶಗಳು

2016–17ರಲ್ಲಿ, ಆಸ್ತಿಗಳ ಅಪಮೌಲ್ಯೀಕರಣ (ಆಸ್ತಿಗಳ ಮೌಲ್ಯವನ್ನು ಕಡಿಮೆ ಪ್ರಮಾಣದಲ್ಲಿ ಮಾಡಿದ್ದುದು), ವಾಸ್ತವಾಂಶಗಳನ್ನು ಬಚ್ಚಿಟ್ಟಿದ್ದುದು ಹಾಗೂ ಇನ್ನಿತರೆ ನಿಯಮಬಾಹಿರತೆಗಳ ಕಾರಣ 194 ಕಂಡಿಕೆಗಳ ಮೂಲಕ ಸ್ಪಷ್ಟಪಡಿಸಲಾಗಿದ್ದ ₹ 34.85 ಕೋಟಿ ಮೊತ್ತದಷ್ಟು ಮುದ್ರಾಂಕ ಸುಂಕ, ನೋಂದಣಿ ಶುಲ್ಕವನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದನ್ನು ಮುದ್ರಾಂಕಗಳು ಮತ್ತು ನೋಂದಣಿ ಇಲಾಖೆಯ 94 ಘಟಕಗಳ/ಕಚೇರಿಗಳ ದಾಖಲೆಗಳ ಪರೀಕ್ಷಾ–ಪರಿಶೀಲನೆಯು ತೋರಿಸಿಕೊಟ್ಟಿತು, ಅವುಗಳು **ಕೋಷ್ಟಕ 4.1** ರಲ್ಲಿ ತೋರಿಸಲಾಗಿರುವ ಪ್ರವರ್ಗಗಳ ಅಡಿಯಲ್ಲಿ ಬರುತ್ತವೆ.

**ಕೋಷ್ಟಕ 4.1**
**ಲೆಕ್ಕಪರಿಶೋಧನೆಯ ಫಲಿತಾಂಶಗಳು**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ಪ್ರವರ್ಗ | ಕಂಡಿಕೆಗಳ ಸಂಖ್ಯೆ | ಮೊತ್ತ |
|---|---|---|---|
| 1. | ಆಸ್ತಿಗಳ ಮೌಲ್ಯವನ್ನು ಕಡಿಮೆ ಪ್ರಮಾಣದಲ್ಲಿ ಮಾಡಿದ್ದರ ಕಾರಣ ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕವನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು | 94 | 26.01 |
| 2. | ವಾಸ್ತವಾಂಶಗಳನ್ನು ಬಚ್ಚಿಟ್ಟಿದ್ದರ ಕಾರಣ ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕವನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು. | 46 | 3.01 |
| 3. | ಸರ್ಕಾರಕ್ಕೆ ಬರಬೇಕಿದ್ದ ಹಣಕಾಸನ್ನು ವಿಳಂಬವಾಗಿ ಪಡೆದಿದ್ದರ ಮೇಲೆ ಬಡ್ಡಿಯನ್ನು ವಿಧಿಸದಿದ್ದುದು/ವಸೂಲಾತಿ ಮಾಡದಿದ್ದುದು | 08 | 0.26 |
| 4. | ಇತರೆ ನಿಯಮಬಾಹಿರತೆಗಳು | 46 | 5.57 |
| | **ಒಟ್ಟು** | **194** | **34.85** |

ಪ್ರಸಕ್ತ ಸಾಲಿನಲ್ಲಿ, ಇಲಾಖೆಯು 27 ಕಂಡಿಕೆಗಳಲ್ಲಿನ ₹ 0.77 ಕೋಟಿ ಮೊತ್ತದಷ್ಟು ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು/ವಿಧಿಸದಿದ್ದವುಗಳನ್ನು ಒಪ್ಪಿಕೊಂಡಿತು. ಈ ಹಿಂದಿನ ಸಾಲುಗಳಿಗೆ ಸಂಬಂಧಿಸಿದ 40 ಕಂಡಿಕೆಗಳಲ್ಲಿನ ₹ 0.69 ಕೋಟಿ ಮೊತ್ತವನ್ನೂ ಸಹ ವಸೂಲಾತಿ ಮಾಡಿತು.

₹ 20.36 ಕೋಟಿ ಮೊತ್ತವು ಒಳಗೊಂಡಂತೆ ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕಗಳನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದಂತಹ ಕೆಲವು ದೃಷ್ಟಾಂತ ಪ್ರಕರಣಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

## 4.4 ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕದ ನಷ್ಟ

ರಾಜ್ಯದಲ್ಲಿನ ಯಾವುದೇ ಪ್ರದೇಶದಲ್ಲಿನ ಆಸ್ತಿಗಳ ಮಾರುಕಟ್ಟೆ ಮೌಲ್ಯ ಮಾರ್ಗಸೂಚಿಗಳನ್ನು ಅಂದಾಜು ಮಾಡುವುದಕ್ಕಾಗಿ, ಪ್ರಕಟಿಸುವುದಕ್ಕಾಗಿ ಹಾಗೂ ಪರಿಷ್ಕರಿಸುವುದಕ್ಕಾಗಿ ಕರ್ನಾಟಕ ಮುದ್ರಾಂಕ ಸುಂಕ ಅಧಿನಿಯಮ, 1957ರ ಪರಿಚ್ಛೇದ 45–ಬಿ(1)ರ ಪ್ರಕಾರ, ರಾಜ್ಯ ಸರ್ಕಾರವು ಒಂದು ಅಧಿಸೂಚನೆಯ ಮೂಲಕ, ಇನ್ಸ್‌ಪೆಕ್ಟರ್ ಜನರಲ್‌ರವರು ಹಾಗೂ ಮುದ್ರಾಂಕಗಳ ಆಯುಕ್ತರವರ ನೇತೃತ್ವದಲ್ಲಿರುವ/ಅಧ್ಯಕ್ಷತೆಯಲ್ಲಿರುವ ಒಂದು ಕೇಂದ್ರ ಮೌಲ್ಯಮಾಪನ ಸಮಿತಿಯನ್ನು ರಚಿಸತಕ್ಕದ್ದು. ರಾಜ್ಯದಲ್ಲಿನ ಮಾರುಕಟ್ಟೆ ಮೌಲ್ಯ ಮಾರ್ಗಸೂಚಿಗಳ ಕಾರ್ಯನೀತಿ, ವಿಧಾನ ಮತ್ತು ನಿರ್ವಹಣೆಗೆ ಸಂಬಂಧಿಸಿದಂತೆ ತೀರ್ಮಾನಗಳನ್ನು ತೆಗೆದುಕೊಳ್ಳುವಲ್ಲಿ ಕೇಂದ್ರ ಮೌಲ್ಯಮಾಪನ ಸಮಿತಿಯು ಅಂತಿಮ ಪ್ರಾಧಿಕಾರವಾಗಿರುತ್ತದೆ ಎಂಬುದಾಗಿ ಪರಿಚ್ಛೇದ 45–ಬಿ ಅಡಿಯಲ್ಲಿನ ಉಪ–ಪರಿಚ್ಛೇದ (2) ತಿಳಿಸುತ್ತದೆ.

ಎಲ್ಲಾ ಉಪ–ಜಿಲ್ಲೆಗಳಿಗೆ ಅನ್ವಯಗೊಳ್ಳುವ ರೀತಿಯಲ್ಲಿ ವಿವಿಧ ಮಾದರಿಗಳ ಕಟ್ಟಡಗಳು, ಕೃಷಿಯೇತರ ಬಳಕೆಗಾಗಿ ಅಥವಾ ಕೈಗಾರಿಕೆಗಳ ಬಳಕೆಗಾಗಿ ಪರಿವರ್ತಿಸಲಾದ ಭೂಮಿಗಾಗಿ ದರಗಳನ್ನು ಲೆಕ್ಕಹಾಕುವುದಕ್ಕಾಗಿ ಪ್ರತ್ಯೇಕವಾಗಿ ಒಂದೇ ಸಮನಾದ ಮಾರ್ಗಸೂಚಿಗಳನ್ನು ಕಂಡುಕೊಳ್ಳಬೇಕು ಹಾಗೂ ಆ ರೀತಿ ಅನುಮೋದಿಸಲಾದ ಹಾಗೂ ಪ್ರಕಟಿಸಲಾದ ಪ್ರತ್ಯೇಕ ಒಂದೇ ಸಮನಾದ ಮಾರ್ಗಸೂಚಿಗಳನ್ನು ಮಾರುಕಟ್ಟೆ ಮೌಲ್ಯ ಮಾರ್ಗಸೂಚಿಗಳಿಗೆ ಸೇರಿಸಬೇಕು ಎಂಬುದಾಗಿ ಕರ್ನಾಟಕ ಮುದ್ರಾಂಕ (ಆಸ್ತಿಗಳ ಮಾರುಕಟ್ಟೆ ಮೌಲ್ಯ ಮಾರ್ಗಸೂಚಿಗಳ ಅಂದಾಜು, ಪ್ರಕಟಣೆ ಮತ್ತು ಪರಿಷ್ಕರಣೆಗಾಗಿನ ಕೇಂದ್ರ ಮೌಲ್ಯಮಾಪನ ಸಮಿತಿಯ ರಚನೆ) ನಿಯಮಗಳು, 2003ರ ನಿಯಮ 8(2)(ಎ) ತಿಳಿಸುತ್ತದೆ. ಹೊಸ ಬಡಾವಣೆಗಳು, ಬಹುಮಹಡಿ ಕಟ್ಟಡಗಳು, ವಿಲ್ಲಾಗಳು, ಸಾಲು ಮನೆಗಳು, ಇತ್ಯಾದಿಗಳಿಗೆ ಒಂದು ನಿರ್ದಿಷ್ಟ ದರಗಳು ಇಲ್ಲದಿದ್ದಲ್ಲಿ, ಅಂತಹ ಪ್ರಕರಣಗಳನ್ನು ಮಾರುಕಟ್ಟೆ ಮೌಲ್ಯ ನಿಗದಿಗಾಗಿ ಕೇಂದ್ರ ಮೌಲ್ಯಮಾಪನ ಸಮಿತಿಗೆ ಕಳುಹಿಸಬೇಕು ಎಂಬುದಾಗಿ ಕೇಂದ್ರ ಮೌಲ್ಯಮಾಪನ ಸಮಿತಿಯ ಮಾರ್ಗಸೂಚಿ ಮೌಲ್ಯಗಳ ವಿಶೇಷ ನಿರ್ದೇಶನ ಸಂಖ್ಯೆ 11 ನಿರ್ದಿಷ್ಟಪಡಿಸಿದೆ.

ಶಿವಾಜಿನಗರದ ಉಪ–ನೋಂದಣಿ ಅಧಿಕಾರಿಯವರ ಕಚೇರಿಯ ದಾಖಲೆಗಳನ್ನು ಜನವರಿ 2017ರಲ್ಲಿ ಪರೀಕ್ಷಾ–ಪರಿಶೀಲನೆ ಮಾಡುವ ವೇಳೆಯಲ್ಲಿ, 2014–15 ಮತ್ತು 2015–16ನೇ ಸಾಲುಗಳಲ್ಲಿ ಪ್ರೆಸ್ಟೀಜ್ ಟೆಕ್ ಪಾರ್ಕ್ IIIರಲ್ಲಿನ ವಾಣಿಜ್ಯ ಬ್ಲಾಕುಗಳು/ಅಪಾರ್ಟ್‌ಮೆಂಟುಗಳನ್ನು ಮೆ. ವಾಲ್ಡೆಲ್ ಎಕ್ಸ್‌ಟೆಂಟ್ ಔಟ್‌ಸೌರ್ಸಿಂಗ್ ಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ (ಭೂ ಮಾಲೀಕರು) ಹಾಗೂ ಮೆ. ಪ್ರೆಸ್ಟೀಜ್ ಎಸ್ಟೇಟ್ಸ್ ಪ್ರಾಜೆಕ್ಟ್ಸ್ ಲಿಮಿಟೆಡ್ (ನಿರ್ಮಾಣಕಾರರು (ಬಿಲ್ಡರ್ಸ್)) ಇವರಿಂದ ವಿವಿಧ ಗ್ರಾಹಕರುಗಳಿಗೆ ಮಾರಾಟಗಳನ್ನು ಮಾಡಲಾಗಿದ್ದ 135 ಮಾರಾಟ ಪತ್ರಗಳನ್ನು ನೋಂದಣಿ ಮಾಡಿಸಲಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಪ್ರೆಸ್ಟೀಜ್ ಟೆಕ್ ಪಾರ್ಕ್ IIIನ್ನು ಬೆಂಗಳೂರು ಪೂರ್ವ ತಾಲ್ಲೂಕಿನ ವರ್ತೂರು ಹೋಬಳಿಯ ಅಮಾನೆ ಬೆಳ್ಳಂದೂರು ಖಾನೆ ಗ್ರಾಮದ ಸರ್ವೇ ಸಂಖ್ಯೆಗಳು 110/1, 110/2 ಮತ್ತು 110/3ರಲ್ಲಿರುವ 8–07 ಎಕರೆಗಳಷ್ಟು ಅಳತೆಯ ಭೂಮಿಯಲ್ಲಿ ನಿರ್ಮಿಸಲಾಗಿದೆ. ನೋಂದಣಿ ಮಾಡಿಸಲಾಗಿದ್ದ ಮಾರಾಟ ಪತ್ರಗಳನ್ನು ಪರಿಶೀಲಿಸಲಾಗಿ, ಮೇಲೆ ತಿಳಿಸಲಾದ ಪ್ರೆಸ್ಟೀಜ್ ಟೆಕ್ ಪಾರ್ಕ್ IIIಕ್ಕೆ ಕೇಂದ್ರ ಮೌಲ್ಯಮಾಪನ ಸಮಿತಿಯ ಮಾರ್ಗಸೂಚಿಗಳಲ್ಲಿ ಯಾವುದೇ ನಿರ್ದಿಷ್ಟ ದರಗಳನ್ನು ನಿರ್ದಿಷ್ಟಪಡಿಸಿರಲಿಲ್ಲ ಹಾಗೂ ಅಳವಡಿಸಿಕೊಳ್ಳಲಾಗಿದ್ದ ಮಾರುಕಟ್ಟೆ ಮೌಲ್ಯವು ಅಮಾನಿ ಬೆಳ್ಳಂದೂರು, ಖಾನೆ ಗ್ರಾಮಕ್ಕೆ ನಿಗದಿಗೊಳಿಸಲಾಗಿದ್ದ ಸಾಮಾನ್ಯ ದರದ ಮೇಲೆ ಆಧಾರಿತವಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು, ಅದು ವಾಣಿಜ್ಯ ಅಪಾರ್ಟ್‌ಮೆಂಟುಗಳಿಗೆ[1] ಚದರ ಅಡಿ ಒಂದಕ್ಕೆ ಅಂದಾಜು ₹ 3,000/– ಆಗುತ್ತಿದ್ದಿತು.

ಅದೇ ಹೋಬಳಿಯಲ್ಲಿ ಪ್ರೆಸ್ಟೀಜ್ ಟೆಕ್ ಪಾರ್ಕ್ I ಹಾಗೂ ಪ್ರೆಸ್ಟೀಜ್ ಟೆಕ್ ಪಾರ್ಕ್ II ಎಂಬ ಹೆಸರಿನಲ್ಲಿ ಅಪಾರ್ಟ್‌ಮೆಂಟ್ ಯೋಜನೆಗಳು/ಕಟ್ಟಡಗಳಿದ್ದವು ಹಾಗೂ ಮೇಲೆ ತಿಳಿಸಲಾದ ಪ್ರೆಸ್ಟೀಜ್ ಟೆಕ್ ಪಾರ್ಕ್ IIIರ ಕಟ್ಟಡವು ಪ್ರೆಸ್ಟೀಜ್ ಟೆಕ್ ಪಾರ್ಕ್ I ಹಾಗೂ ಪ್ರೆಸ್ಟೀಜ್ ಟೆಕ್ ಪಾರ್ಕ್ IIಕ್ಕೆ ಹೊಂದಿಕೊಂಡಂತಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಪ್ರೆಸ್ಟೀಜ್ ಟೆಕ್ ಪಾರ್ಕ್ III ಎಂಬುದಾಗಿ ನೋಂದಣಿ ಮಾಡಿಸಲಾಗಿದ್ದ ದಾಖಲೆಗಳಲ್ಲಿ ಮಾಡಲಾಗಿದ್ದ ವಿವರಣೆಗಳ ಪ್ರಕಾರ, ಎಲ್ಲಾ ಮೂರು ಟೆಕ್ ಪಾರ್ಕುಗಳನ್ನೂ ಆಂತರಿಕ ಚಾಲನಾ ಮಾರ್ಗಗಳು, ಪ್ರವೇಶ ಮತ್ತು ಹೊರ ಹೋಗುವಿಕೆಯ ದ್ವಾರಗಳು, ಇತ್ಯಾದಿಗಳೊಂದಿಗೆ ಒಂದಕ್ಕೊಂದು ಏಕರೂಪವಾಗಿ ಸಂಪರ್ಕ ಹೊಂದಿರುವ ವಿವಿಧ ಬ್ಲಾಕುಗಳೊಂದಿಗೆ ಒಂದು ಏಕೈಕ ಕ್ಯಾಂಪಸ್ ಆಗಿ ನಿರ್ವಹಿಸಲಾಗುವುದು ಎಂಬುದಾಗಿ ತಿಳಿಸಲಾಗಿದ್ದಿತು. ಪ್ರೆಸ್ಟೀಜ್ ಟೆಕ್ ಪಾರ್ಕ್ I ಹಾಗೂ ಪ್ರೆಸ್ಟೀಜ್ ಟೆಕ್ ಪಾರ್ಕ್

---

[1] ಕೇಂದ್ರ ಮೌಲ್ಯಮಾಪನ ಸಮಿತಿಯ ಮಾರ್ಗಸೂಚಿ ಮಾರುಕಟ್ಟೆ ಮೌಲ್ಯದ ವಿಶೇಷ ನಿರ್ದೇಶನ ಸಂಖ್ಯೆ 7ರ ಪ್ರಕಾರ, ವಾಣಿಜ್ಯ ಅಪಾರ್ಟ್‌ಮೆಂಟುಗಳಿಗೆ ಮಾರುಕಟ್ಟೆ ಮೌಲ್ಯವನ್ನು ವಸತಿ ಅಪಾರ್ಟ್‌ಮೆಂಟುಗಳಿಗೆ ನಿಗದಿಗೊಳಿಸಲಾಗಿರುವ ದರಗಳ ಮೇಲೆ ಶೇಕಡಾ 30ರಷ್ಟನ್ನು ಹೆಚ್ಚಳಗೊಳಿಸಿ ಲೆಕ್ಕಹಾಕತಕ್ಕದ್ದು.

IIಕ್ಕೆ ಅನುಕ್ರಮವಾಗಿ ಚದರ ಅಡಿ ಒಂದಕ್ಕೆ ₹ 6,200 ಮತ್ತು ₹ 6,000 ದರದಲ್ಲಿ ಪ್ರತ್ಯೇಕ ಮಾರ್ಗಸೂಚಿ ಮೌಲ್ಯಗಳನ್ನು ನಿಗದಿಗೊಳಿಸಲಾಗಿದ್ದಿತು.

ವರ್ತೂರು ಹೋಬಳಿಯು ಪ್ರೆಸ್ಟೀಜ್ ಟೆಕ್ ಪಾರ್ಕ್ I ಹಾಗೂ ಪ್ರೆಸ್ಟೀಜ್ ಟೆಕ್ ಪಾರ್ಕ್ IIನ್ನೂ ಒಳಗೊಂಡಂತೆ 14 ಟೆಕ್ ಪಾರ್ಕುಗಳನ್ನು ಹೊಂದಿರುವುದು ಹಾಗೂ 14 ಟೆಕ್ ಪಾರ್ಕುಗಳ ಪೈಕಿ ಅತೀ ಕಡಿಮೆ ದರವು ಚದರ ಅಡಿ ಒಂದಕ್ಕೆ ₹ 5,900 ಆಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಪ್ರೆಸ್ಟೀಜ್ ಟೆಕ್ ಪಾರ್ಕ್ IIIಕ್ಕೆ ಒಂದು ಪ್ರತ್ಯೇಕ ಮೌಲ್ಯದ ಅನುಪಸ್ಥಿತಿಯನ್ನು ಕೇಂದ್ರ ಮೌಲ್ಯಮಾಪನ ಸಮಿತಿಯ ಮಾರ್ಗಸೂಚಿಗಳ ವಿಶೇಷ ನಿರ್ದೇಶನಗಳ ಕ್ರಮ ಸಂಖ್ಯೆ 11ರ ಪ್ರಕಾರ ಪ್ರೆಸ್ಟೀಜ್ ಟೆಕ್ ಪಾರ್ಕ್ I ಹಾಗೂ ಪ್ರೆಸ್ಟೀಜ್ ಟೆಕ್ ಪಾರ್ಕ್ IIಕ್ಕೆ ಹೋಲಿಕೆ ಮಾಡಿದಂತೆ ಒಂದು ಮೌಲ್ಯವನ್ನು ಕಂಡುಕೊಳ್ಳುವ ರೀತಿಯಲ್ಲಿ ಕೇಂದ್ರ ಮೌಲ್ಯಮಾಪನ ಸಮಿತಿಗೆ ತಿಳಿಸಬೇಕಿದ್ದಿತು. ಅದಾಗ್ಯೂ, ಶಿವಾಜಿನಗರದ ಉಪ-ನೋಂದಣಿ ಅಧಿಕಾರಿಯವರು ಈ ವಿಷಯವನ್ನು ಕೇಂದ್ರ ಮೌಲ್ಯಮಾಪನ ಸಮಿತಿಯ ಗಮನಕ್ಕೆ ತರುವಲ್ಲಿ ವಿಫಲಗೊಂಡಿದ್ದರು, ಇದು ಟೆಕ್ ಪಾರ್ಕ್ IIIಕ್ಕೆ ನಿರ್ದಿಷ್ಟ ದರವನ್ನು ನಿರ್ದಿಷ್ಟಗೊಳಿಸದಿರುವಲ್ಲಿಗೆ ದಾರಿ ಮಾಡಿಕೊಟ್ಟಿತು. ಈ ರೀತಿಯಾಗಿ, ನಿರ್ದಿಷ್ಟ ದರವನ್ನು ನಿರ್ದಿಷ್ಟಪಡಿಸದಿದ್ದುದು ಸರ್ಕಾರದ ಬೊಕ್ಕಸಕ್ಕೆ ₹ 17.25 ಕೋಟಿ[2] ಮೊತ್ತದಷ್ಟು ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕದ ನಷ್ಟ ಸಂಭವಿಸುವಲ್ಲಿ ಪರಿಣಮಿಸಿತು.

ಲೆಕ್ಕಪರಿಶೋಧನೆಯು ಈ ಪ್ರಕರಣಗಳನ್ನು ಫೆಬ್ರವರಿ ಹಾಗೂ ಮೇ 2017ರಲ್ಲಿ ಇನ್ಸ್‌ಪೆಕ್ಟರ್ ಜನರಲ್‌ರವರು ಹಾಗೂ ಮುದ್ರಾಂಕಗಳ ಆಯುಕ್ತರವರು ಹಾಗೂ ಅಲ್ಲದೆಯೇ ಸರ್ಕಾರದ ಗಮನಕ್ಕೆ ತಂದಿತು ಜಿಲ್ಲಾ ನೋಂದಣಿ ಅಧಿಕಾರಿಯವರು (ಶಿವಾಜಿನಗರ) ಈ ಪ್ರಕರಣಗಳನ್ನು ಕರ್ನಾಟಕ ಮುದ್ರಾಂಕ ಅಧಿನಿಯಮ, 1957ರ ಪರಿಚ್ಛೇದ 45(ಎ)(3)ರ ಅಡಿಯಲ್ಲಿ ಕೈಗೆತ್ತಿಕೊಂಡಿರುವರು ಹಾಗೂ ನೋಟೀಸುಗಳನ್ನು ನೀಡಿರುವರು ಎಂಬುದಾಗಿ ಸರ್ಕಾರವು ಉತ್ತರಿಸಿತು (ಅಕ್ಟೋಬರ್ 2017).

## 4.5 ವಾಸ್ತವಾಂಶಗಳನ್ನು ಬಚ್ಚಿಟ್ಟಿದ್ದರ ಕಾರಣ ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕವನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು

ಯಾವುದೇ ಸಾಧನದ ಮೇಲೆ ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕವನ್ನು ವಿಧಿಸುವುದರ ಮೇಲೆ ಅಥವಾ ಒಂದು ಸಾಧನದ ಮೇಲೆ ವಿಧಿಸಬೇಕಾದ ಸುಂಕ/ಶುಲ್ಕದ ಮೊತ್ತದ ಮೇಲೆ ಪ್ರಭಾವವನ್ನು ಬೀರುವಂತಹ ಪ್ರತಿಫಲಗಳು (ಯಾವುದಾದರೂ ಇದ್ದಲ್ಲಿ) ಹಾಗೂ ಇತರೆ ಎಲ್ಲಾ ವಾಸ್ತವಾಂಶಗಳನ್ನು ಮತ್ತು ಸಂದರ್ಭಗಳನ್ನು ಪರಿಪೂರ್ಣವಾಗಿ ಹಾಗೂ ಸತ್ಯಾಸತ್ಯತೆಯಿಂದ ಕೂಡಿದಂತೆ ನಿರೂಪಿಸತಕ್ಕದ್ದು ಎಂಬುದಾಗಿ ಕರ್ನಾಟಕ ಮುದ್ರಾಂಕ ಅಧಿನಿಯಮ, 1957ರ ಪರಿಚ್ಛೇದ 28(1) ನಿರ್ದಿಷ್ಟಪಡಿಸಿದೆ. ಮುಂದುವರೆದು, ಕರ್ನಾಟಕ ಮುದ್ರಾಂಕ ಅಧಿನಿಯಮದ ಪರಿಚ್ಛೇದ 61(ಎ) ಅಡಿಯಲ್ಲಿ, ಯಾವುದೇ ವ್ಯಕ್ತಿಯು ಸರ್ಕಾರಕ್ಕೆ ವಂಚಿಸುವ ಉದ್ದೇಶದಿಂದಲೇ ಅಂತಹ ಸಾಧನದಲ್ಲಿ ಪರಿಚ್ಛೇದ 28ರ ಅಗತ್ಯತೆಯಂತೆ ಎಲ್ಲಾ ವಾಸ್ತವಾಂಶಗಳನ್ನು ಮತ್ತು ಸಂದರ್ಭಗಳನ್ನು ಪರಿಪೂರ್ಣವಾಗಿ ಮತ್ತು ಸತ್ಯಾಸತ್ಯತೆಯಿಂದ ಕೂಡಿದಂತೆ ನಿರೂಪಣೆಗಳನ್ನು ಮಾಡದಿದ್ದಲ್ಲಿ, ಅಂತಹ ವ್ಯಕ್ತಿಯು ಅಂತಹ ಸಾಧನದಲ್ಲಿ ಕೊರತೆಯಿಂದ ಕೂಡಿರುವ ಮುದ್ರಾಂಕ ಸುಂಕದ ಐದು ಪಟ್ಟಿನವರೆಗೂ ವಿಸ್ತರಿಸಬಹುದಾದ ದಂಡವನ್ನು ವಿಧಿಸುವಿಕೆಗೆ ಬಾಧ್ಯರಾಗಿರುತ್ತಾರೆ.

ಹದಿನೈದು[3] ಉಪ-ನೋಂದಣಿ ಅಧಿಕಾರಿಗಳ ಕಚೇರಿಗಳಲ್ಲಿ ಏಪ್ರಿಲ್ 2016 ಮತ್ತು ಮಾರ್ಚ್ 2017ರ ನಡುವಿನ ಅವಧಿಯಲ್ಲಿ ಪರೀಕ್ಷಾ-ಪರಿಶೀಲನೆಯ ವೇಳೆಯಲ್ಲಿ 24 ಸಾಧನಗಳಲ್ಲಿ (21 ಮಾರಾಟ ಪತ್ರಗಳು ಮತ್ತು ಮೂರು ಮಾರಾಟ ಒಡಂಬಡಿಕೆಗಳು), ವಾಸ್ತವಿಕವಾಗಿ ಸ್ವೀಕರಿಸಲಾದ ಪ್ರತಿಫಲ (ಮೊತ್ತ), ಕಟ್ಟಡದ ಇರುವಿಕೆ, ಆಸ್ತಿಯನ್ನು ಯಾವ ವಾಸ್ತವಿಕ ಉದ್ದೇಶಕ್ಕಾಗಿ ಬಳಸಲಾಗುತ್ತಿದೆ, ಆಸ್ತಿಯನ್ನು ನಿವೇಶನವನ್ನಾಗಿ ವರ್ಗೀಕರಿಸಿರುವುದು ಹಾಗೂ ವ್ಯವಹಾರಾಧಿಕಾರಗಳನ್ನು ನೋಂದಣಿ ಮಾಡಿಸಿರುವುದು/ಕಾರ್ಯಗತಗೊಳಿಸಿರುವುದು, ಇವೇ ಮುಂತಾದ ವಾಸ್ತವಾಂಶಗಳನ್ನು ಈ ಸಾಧನಗಳನ್ನು ನೋಂದಣಿ ಮಾಡಿಸುವ ವೇಳೆಯಲ್ಲಿ ಬಚ್ಚಿಡಲಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು, ಇದು **ಕೋಷ್ಟಕ 4.2**ರಲ್ಲಿ ವಿವರಿಸಿರುವಂತೆ ₹ 1.60 ಕೋಟಿ ಮೊತ್ತದಷ್ಟು ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕವನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸುವಲ್ಲಿ ಪರಿಣಮಿಸಿದ್ದಿತು.

---

2 14 ಟೆಕ್ ಪಾರ್ಕುಗಳ ಪೈಕಿ ಅತ್ಯಂತ ಕಡಿಮೆ ಪ್ರಮಾಣದಲ್ಲಿ ನಿರ್ದಿಷ್ಟಪಡಿಸಲಾಗಿದ್ದ ದರದ (ಚದರ ಅಡಿ ಒಂದಕ್ಕೆ ₹ 5,900/-) ಆಧಾರದ ಮೇರೆಗೆ 9,63,032 ಚದರ ಅಡಿಗಳಿಗೆ ನಷ್ಟವನ್ನು ಲೆಕ್ಕಹಾಕಲಾಯಿತು.

3 ಅರಕಲಗೂಡು, ಅತ್ತೀಬೆಲೆ, ಬಾಗೇಪಲ್ಲಿ, ಬಸವನಗುಡಿ, ಗೌರೀಬಿದನೂರು, ಜಿಗಣಿ, ಕೆಂಗೇರಿ, ಮಹದೇವಪುರ, ಮೈಸೂರು (ಉತ್ತರ), ಪಿರಿಯಾಪಟ್ಟಣ, ಸರ್ಜಾಪುರ, ಶಾಂತಿನಗರ, ಶಿವಾಜಿನಗರ, ತುಮಕೂರು ಮತ್ತು ಟೀ.ನರಸೀಪುರ.

**ಕೋಷ್ಟಕ 4.2**
**ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕವನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು**

**(₹ ಕೋಟಿಯಲ್ಲಿ)**

| ಸಾಧನದ ಸ್ವರೂಪ ಹಾಗೂ ಉಪ-ನೋಂದಣಿ ಕಚೇರಿ | ಸಾಧನದಲ್ಲಿ ಬಚ್ಚಿಡಲಾಗಿದ್ದ ವಾಸ್ತವಾಂಶಗಳು | ವಿಧಿಸಬೇಕಾಗಿದ್ದ ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕ | ವಿಧಿಸಲಾಗಿದ್ದ ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕ | ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು |
|---|---|---|---|---|
| ಮಾರಾಟ ಪತ್ರಗಳು (8)/ಅತ್ತೀಬೆಲೆ, ಜಿಗಣಿ ಮತ್ತು ಶಿವಾಜಿನಗರ | ಇದ್ದಂತಹ ಕಟ್ಟಡವನ್ನು ಮಾರಾಟ ಪತ್ರಗಳಲ್ಲಿ ತೋರಿಸಿರಲಿಲ್ಲ. | 3.89 | 3.01 | 0.88 |
| ಮಾರಾಟ ಪತ್ರಗಳು (9)/ ಬಸವನಗುಡಿ, ಮಹದೇವಪುರ, ಬಾಗೇಪಲ್ಲಿ, ಗೌರೀಬಿದನೂರು, ಮೈಸೂರು (ಉತ್ತರ) ಟಿ. ನರಸೀಪುರ ಹಾಗೂ ತುಮಕೂರು | ಮಾರಾಟ ಒಡಂಬಡಿಕೆಗಳ ಮೂಲಕ ಪಡೆದುಕೊಳ್ಳಲಾಗಿದ್ದ ಪ್ರತಿಫಲ/ಮೊತ್ತವನ್ನು ಮಾರಾಟ ಪತ್ರಗಳಲ್ಲಿ ತೋರಿಸಿರಲಿಲ್ಲ. | 0.24 | 0.18 | 0.06 |
| ಮಾರಾಟ ಒಡಂಬಡಿಕೆಗಳು (3)/ ಕೆಂಗೇರಿ ಮತ್ತು ಅರಕಲಗೂಡು | ಸಾಮಾನ್ಯ ವ್ಯವಹಾರಾಧಿಕಾರದ [4] ಕಾರ್ಯಗತಗೊಂಡಿರುವಿಕೆಯನ್ನು ಮಾರಾಟ ಒಡಂಬಡಿಕೆಗಳಲ್ಲಿ ತೋರಿಸಿರಲಿಲ್ಲ. | 0.30 | 0.01 | 0.29 |
| ಮಾರಾಟ ಪತ್ರ (04)/ ಅತ್ತೀಬೆಲೆ, ಪಿರಿಯಾಪಟ್ಟಣ ಮತ್ತು ಶಾಂತಿನಗರ | ವಾಣಿಜ್ಯ ಉದ್ದೇಶಗಳಿಗಾಗಿ ಕಟ್ಟಡದ ಬಳಕೆ, ಆಸ್ತಿಯನ್ನು ನಿವೇಶನವನ್ನಾಗಿ ವರ್ಗೀಕರಿಸಿರುವುದು ಹಾಗೂ ನಿವೇಶನವು ಇರುವ ಸ್ಥಳವನ್ನು ಮಾರಾಟ ಪತ್ರಗಳಲ್ಲಿ ತೋರಿಸಿರಲಿಲ್ಲ. | 1.32 | 0.95 | 0.37 |
| **ಒಟ್ಟು** | | **5.75** | **4.15** | **1.60** |

ವಾಸ್ತವಾಂಶಗಳನ್ನು ಬಚ್ಚಿಡುವುದರ ಕಾರಣ ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕಗಳ ನಷ್ಟ ಸಂಭವಿಸುವುದನ್ನು ತಪ್ಪಿಸುವ ರೀತಿಯಲ್ಲಿ ನೋಂದಣಿಯನ್ನು ಮಾಡಿಸುವ ತಂಡಗಳು ಆಸ್ತಿಗಳಿಗೆ ಸಂಬಂಧಿತ ಎಲ್ಲಾ ವಾಸ್ತವಾಂಶಗಳನ್ನು (ಪ್ರತಿಫಲ/ಮೊತ್ತವೂ ಒಳಗೊಂಡಂತೆ) ಬಹಿರಂಗಪಡಿಸುವುದನ್ನು ಹಾಗೂ ಅವುಗಳನ್ನು ಸಾಧನದಲ್ಲಿ ಯಥಾರ್ಥತೆಯಿಂದ ನಿರೂಪಿಸಿರುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಇಲಾಖೆಯಲ್ಲಿ ಯಾವುದೇ ವ್ಯವಸ್ಥೆಯೂ ಇರಲಿಲ್ಲ.

ಈ ಎಲ್ಲಾ ಪ್ರಕರಣಗಳಲ್ಲಿಯೂ ಕರ್ನಾಟಕ ಮುದ್ರಾಂಕ ಅಧಿನಿಯಮ, 1957ರ ಪರಿಚ್ಛೇದ 61(ಎ) ಅಡಿಯಲ್ಲಿ ಲೆಕ್ಕಪರಿಶೋಧನೆಯಲ್ಲಿ ಸ್ಪಷ್ಟಪಡಿಸಲಾಗಿರುವ ಮೊತ್ತದ ಐದು ಪಟ್ಟು ಮೊತ್ತದಷ್ಟು ದಂಡವನ್ನೂ ಸಹ ವಿಧಿಸಬೇಕಿದ್ದಿತು.

ಲೆಕ್ಕಪರಿಶೋಧನೆಯು ಈ ಪ್ರಕರಣಗಳನ್ನು ಫೆಬ್ರವರಿ ಮತ್ತು ಮೇ 2017ರಲ್ಲಿ ಇಲಾಖೆ ಹಾಗೂ ಸರ್ಕಾರದ ಗಮನಕ್ಕೆ ತಂದಿತು, ನಾಲ್ಕು ಪ್ರಕರಣಗಳಲ್ಲಿ ₹ 13.37 ಲಕ್ಷ ಮೊತ್ತವನ್ನು ವಸೂಲಾತಿ ಮಾಡಲಾಗಿದೆ, 12 ಪ್ರಕರಣಗಳಲ್ಲಿ ನೋಟೀಸುಗಳನ್ನು ನೀಡಲಾಗಿದೆ ಹಾಗೂ ಆರು ಪ್ರಕರಣಗಳಲ್ಲಿ ಸಂಬಂಧಿತ ಜಿಲ್ಲಾ ನೋಂದಣಿ ಅಧಿಕಾರಿಗಳು ಕೊರತೆಯಿಂದ ಕೂಡಿದ್ದ ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕದ ವಸೂಲಾತಿಗಾಗಿ ಆದೇಶಗಳನ್ನು ಜಾರಿಗೊಳಿಸಿರುವರು ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2017). ಉಳಿದ ಎರಡು ಪ್ರಕರಣಗಳಿಗೆ ಸಂಬಂಧಿಸಿದಂತೆ ಉತ್ತರವನ್ನು ನಿರೀಕ್ಷಿಸಲಾಗುತ್ತಿದೆ (ನವೆಂಬರ್ 2017).

## 4.6 ಕಡಿಮೆ ಪ್ರಮಾಣದಲ್ಲಿ ಮಾಡಿದ್ದ ಮೌಲ್ಯಮಾಪನದ ಕಾರಣ ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕವನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು

ಕರ್ನಾಟಕ ಮುದ್ರಾಂಕ ಅಧಿನಿಯಮ 1957ರ ಪರಿಚ್ಛೇದ 3ರ ಪ್ರಕಾರ, ಮುದ್ರಾಂಕ ಸುಂಕವನ್ನು ಮೇಲೆ ತಿಳಿಸಲಾದ ಅಧಿನಿಯಮದ ಷೆಡ್ಯೂಲಿನಲ್ಲಿನ ವಿವಿಧ ಕಲಮುಗಳ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ದರಗಳಲ್ಲಿ ವಿಧಿಸತಕ್ಕದ್ದು. ಕಲಮು 20ರ ಅಡಿಯಲ್ಲಿ, ಮಾರಾಟಗಳಿಗೆ ಸಂಬಂಧಿತ ಸಾಧನಗಳಿಗೆ, ಮುದ್ರಾಂಕ ಸುಂಕವನ್ನು ಪ್ರತಿಫಲ/ಮೊತ್ತದ ಅಥವಾ ಆಸ್ತಿಯ ಮಾರುಕಟ್ಟೆ ಮೌಲ್ಯದ, ಇವೆರಡರಲ್ಲಿ ಯಾವುದರ ಮೌಲ್ಯವು ಅಧಿಕವೋ,

---

[4] ಕರ್ನಾಟಕ ಮುದ್ರಾಂಕ ಅಧಿನಿಯಮ, 1957ರ ಅಡಿಯಲ್ಲಿನ ಕಲಮು 5(ಇ)(i) ಮತ್ತು 5(ಇ)(ii)ರ ಅನುಸಾರ, ಮಾರಾಟಕ್ಕಾಗಿನ ಒಂದು ಒಡಂಬಡಿಕೆಗೆ ಆಸ್ತಿಯ ಒಡೆತನವನ್ನು ವರ್ಗಾಯಿಸದಿದ್ದಲ್ಲಿ, ಅಂತಹ ಆಸ್ತಿಯ ಮಾರುಕಟ್ಟೆ ಮೌಲ್ಯದ ಪ್ರತೀ ₹ 100ಕ್ಕೆ 10 ಪೈಸೆಯ ದರದಲ್ಲಿ ಮುದ್ರಾಂಕ ಸುಂಕವನ್ನು ವಿಧಿಸಬೇಕಾಗುವುದು. ಆಸ್ತಿಯ ಒಡೆತನವನ್ನು ವರ್ಗಾಯಿಸಿದಲ್ಲಿ, ಮುದ್ರಾಂಕ ಸುಂಕವನ್ನು ಮಾರಾಟ ಎಂಬುದಾಗಿ ಪರಿಗಣಿಸಿ (ಕಲಮು 20(1)ರ ಅನುಸಾರ ಮಾರುಕಟ್ಟೆ ಮೌಲ್ಯದ ಶೇಕಡಾ ಐದರ ದರದಲ್ಲಿ) ವಿಧಿಸಬೇಕಾಗುವುದು. ಮುಂದುವರೆದು, ಆಸ್ತಿಯ ಒಡೆತನವನ್ನು ವರ್ಗಾಯಿಸದಿದ್ದರೂ ಸಹ, ಮಾರಾಟಗಾರರು ಒಡಂಬಡಿಕೆಯಲ್ಲಿ ಖರೀದಿದಾರರಿಗೆ ವ್ಯವಹಾರಾಧಿಕಾರದ ಬಗ್ಗೆ ಉಲ್ಲೇಖಿಸಿದ್ದಲ್ಲಿ, ಕಲಮಿನ ವಿವರಣೆ 1ರ ಅನುಸರ ಆಸ್ತಿಯ ಒಡೆತನದ ವರ್ಗಾವಣೆ ಮಾಡಲಾಗಿದೆ ಎಂಬುದಾಗಿ ಭಾವಿಸಲಾಗುವುದು.

ಅದರ ಒಂದು ಶೇಕಡಾವಾರಿನಂತೆ ವಿಧಿಸಲಾಗುವುದು. ರಾಜ್ಯದಲ್ಲಿರುವ ಆಸ್ತಿಗಳಿಗಾಗಿ ಕೇಂದ್ರ ಮೌಲ್ಯಮಾಪನ ಸಮಿತಿಯು ಕರ್ನಾಟಕ ಮುದ್ರಾಂಕ ಅಧಿನಿಯಮದ ಪರಿಚ್ಛೇದ 45–ಬಿ ಅಡಿಯಲ್ಲಿ ಮಾರುಕಟ್ಟೆ ಮೌಲ್ಯ ಮಾರ್ಗಸೂಚಿಗಳನ್ನು ನಿರ್ದಿಷ್ಟಪಡಿಸುತ್ತದೆ. ಮುದ್ರಾಂಕ ಸುಂಕವನ್ನು ವಿಧಿಸಬೇಕಾದ ದಸ್ತಾವೇಜುಗಳ/ಸಾಧನಗಳ ನೋಂದಣಿಯ ವೇಳೆಯಲ್ಲಿ ನೋಂದಣಿ ಅಧಿಕಾರಿಗಳು ಮಾರುಕಟ್ಟೆ ಮೌಲ್ಯವನ್ನು ಅಂದಾಜು ಮಾಡುವಲ್ಲಿ ಇದು ಆಧಾರವಾಗಿರುತ್ತದೆ.

ಎಂಟು [5] ಉಪ–ನೋಂದಣಿ ಅಧಿಕಾರಿಗಳ ಕಚೇರಿಗಳಲ್ಲಿ 2013–14ರಿಂದ 2015–16ರಲ್ಲಿ ನೋಂದಣಿ ಮಾಡಿಸಲಾಗಿದ್ದ ಮಾರಾಟ ಪತ್ರಗಳನ್ನು ಏಪ್ರಿಲ್ 2016 ಮತ್ತು ಜನವರಿ 2017ರ ನಡುವಿನ ಅವಧಿಯಲ್ಲಿ ಪರೀಕ್ಷಾ–ಪರಿಶೀಲನೆ ಮಾಡಲಾಗಿ, 19 ಪ್ರಕರಣಗಳಲ್ಲಿ ಮಾರುಕಟ್ಟೆ ಮೌಲ್ಯ ಮಾರ್ಗಸೂಚಿಗಳ ಯಥಾರ್ಥತೆಯಿಂದ ಕೂಡಿರದ/ತಪ್ಪು ದರಗಳನ್ನು ಅಳವಡಿಸಿಕೊಂಡಿದ್ದ ಕಾರಣದಿಂದಾಗಿ ಆಸ್ತಿಗಳನ್ನು ಕಡಿಮೆ ಪ್ರಮಾಣದಲ್ಲಿ ಮೌಲ್ಯಮಾಪನ ಮಾಡಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ತತ್ಪರಿಣಾಮವಾಗಿ ಕಡಿಮೆ ಪ್ರಮಾಣದಲ್ಲಿ ವಿಧಿಸಲಾಗಿದ್ದ ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕವು **ಕೋಷ್ಟಕ 4.3**ರಲ್ಲಿ ವಿವರಿಸಿರುವಂತೆ ₹ 1.51 ಕೋಟಿ ಆಗಿದ್ದಿತು.

**ಕೋಷ್ಟಕ 4.3**

**ಕಡಿಮೆ ಪ್ರಮಾಣದಲ್ಲಿ ಮಾಡಿದ್ದ ಮೌಲ್ಯಮಾಪನದ ಕಾರಣ ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕವನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ಉಪ–ನೋಂದಣಿ ಅಧಿಕಾರಿಗಳ ಕಚೇರಿಗಳು | ಪ್ರಕರಣಗಳ ಸಂಖ್ಯೆ | ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕ | ವಿಧಿಸಬೇಕಿದ್ದುದು | ವಿಧಿಸಿದ್ದುದು | ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು |
|---|---|---|---|---|---|---|
| 1 | ಧಾರವಾಡ, ಮೈಸೂರು (ಉತ್ತರ) | 07 | ಮುದ್ರಾಂಕ ಸುಂಕ | 1.00 | 0.56 | 0.44 |
| | | | ನೋಂದಣಿ ಶುಲ್ಕ | 0.18 | 0.09 | 0.09 |
| | | | | | ಒಟ್ಟು | 0.53 |
| | ಆರು ಪ್ರಕರಣಗಳಲ್ಲಿ, ಮಾರಾಟ/ವರ್ಗಾವಣೆ ಮಾಡಲಾಗಿದ್ದ ಆಸ್ತಿಗಳು ಅಧಿಸೂಚಿತ ಕೈಗಾರಿಕಾ ಪ್ರದೇಶದಲ್ಲಿದ್ದವು, ಆದ್ದರಿಂದ ಮಾರುಕಟ್ಟೆ ಮೌಲ್ಯ ಮಾರ್ಗಸೂಚಿಗಳಲ್ಲಿನ ವಿಶೇಷ ನಿರ್ದೇಶನಗಳ ಪ್ರಕಾರ, ಈ ಆಸ್ತಿಗಳನ್ನು ವಸತಿ ನಿವೇಶನಗಳ ದರಗಳಿಗಿಂತ ಶೇಕಡಾ 90ರಷ್ಟು ಅಧಿಕ ದರಗಳಲ್ಲಿ ಮೌಲ್ಯಮಾಪನ ಮಾಡಬೇಕಿದ್ದಿತು, ಆದರೆ ಇದನ್ನು ಅಳವಡಿಸಿಕೊಂಡಿರಲಿಲ್ಲ. ಒಂದು ಪ್ರಕರಣದಲ್ಲಿ, ವಸತಿ ಆಸ್ತಿಗೆ ಸಂಬಂಧಿಸಿದಂತೆ ನಿವೇಶನ ದರವನ್ನು (ಚದರ ಅಡಿಯೊಂದಕ್ಕೆ ದರ) ಅಳವಡಿಸಿಕೊಳ್ಳುವ ಬದಲು ಕೃಷಿ ಭೂಮಿಯ ದರದಲ್ಲಿ (ಎಕರೆಯೊಂದಕ್ಕೆ ದರದಲ್ಲಿ) ಅಳವಡಿಸಿಕೊಳ್ಳಲಾಗಿದ್ದಿತು. | | | | | |
| 2 | ಬಾಣಸವಾಡಿ, ಬೊಮ್ಮನಹಳ್ಳಿ, ಮೈಸೂರು (ಉತ್ತರ) | 05 | ಮುದ್ರಾಂಕ ಸುಂಕ | 1.34 | 1.03 | 0.31 |
| | | | ನೋಂದಣಿ ಶುಲ್ಕ | 0.23 | 0.18 | 0.05 |
| | | | | | ಒಟ್ಟು | 0.36 |
| | ನಾಲ್ಕು ಪ್ರಕರಣಗಳಲ್ಲಿ, ವಸತಿಯೇತರ ಆಸ್ತಿಗಳನ್ನು ವಸತಿಯೇತರ ವಾಣಿಜ್ಯ ಆಸ್ತಿಗಳಿಗೆ ಅನ್ವಯಗೊಳ್ಳುವ ರೀತಿಯಲ್ಲಿ ಶೇಕಡಾ 40ರಷ್ಟು ದರಗಳನ್ನು ಹೆಚ್ಚಳಗೊಳಿಸುವ ಬದಲು ವಸತಿ ದರಗಳಲ್ಲಿ (ಕಡಿಮೆ ಪ್ರಮಾಣದಲ್ಲಿ) ಮೌಲ್ಯಮಾಪನ ಮಾಡಲಾಗಿದ್ದಿತು ಹಾಗೂ ಒಂದು ಪ್ರಕರಣದಲ್ಲಿ, ವಾಣಿಜ್ಯ ಉದ್ದೇಶಕ್ಕೆ ಪರಿವರ್ತಿಸಲಾಗಿದ್ದ ಭೂಮಿಯನ್ನು ಮಾರುಕಟ್ಟೆ ಮೌಲ್ಯ ಮಾರ್ಗಸೂಚಿಗಳಿಗೆ ಲಗತ್ತಿಸಲಾಗಿರುವ ವಿಶೇಷ ನಿರ್ದೇಶನಗಳ ಅನುಸಾರ ಶೇಕಡಾ 75ರಷ್ಟು ದರಗಳನ್ನು ಹೆಚ್ಚಳಗೊಳಿಸುವ ಬದಲು ಕೃಷಿ ಭೂಮಿಯ ದರದಲ್ಲಿ (ಕಡಿಮೆ ಪ್ರಮಾಣದಲ್ಲಿ) ಪ್ರಮಾಣದ ಮೌಲ್ಯಮಾಪನ ಮಾಡಲಾಗಿದ್ದಿತು. | | | | | |
| 3 | ಕೆಂಗೇರಿ, ಜೆ.ಪಿ. ನಗರ, ಆನೇಕಲ್ಲು, ಬಿದರಹಳ್ಳಿ | 05 | ಮುದ್ರಾಂಕ ಸುಂಕ | 1.51 | 1.05 | 0.46 |
| | | | ನೋಂದಣಿ ಶುಲ್ಕ | 0.27 | 0.18 | 0.09 |
| | | | | | ಒಟ್ಟು | 0.55 |
| | ಐದು ಪ್ರಕರಣಗಳಲ್ಲಿ, ಮಾರಾಟ ಮಾಡಲಾದ/ವರ್ಗಾವಣೆ ಮಾಡಲಾದ ಆಸ್ತಿಗಳಿಗೆ ಸಂಬಂಧಿಸಿದಂತೆ ಮಾರುಕಟ್ಟೆ ಮೌಲ್ಯ ಮಾರ್ಗಸೂಚಿಗಳ ಪ್ರಕಾರ ಮೌಲ್ಯಮಾಪನ ಮಾಡುವ ಸಲುವಾಗಿ ನಿರ್ದಿಷ್ಟ ದರಗಳನ್ನು/ನಿರ್ದಿಷ್ಟ ನಿರ್ದೇಶನಗಳನ್ನು ನಿರ್ದಿಷ್ಟಪಡಿಸಲಾಗಿದ್ದಿತು, ಆದರೆ ಅವುಗಳನ್ನು ಅಳವಡಿಸಿಕೊಂಡಿರಲಿಲ್ಲ. | | | | | |
| 4 | ಮೈಸೂರು (ಉತ್ತರ) | 02 | ಮುದ್ರಾಂಕ ಸುಂಕ | 0.49 | 0.43 | 0.06 |
| | | | ನೋಂದಣಿ ಶುಲ್ಕ | 0.09 | 0.08 | 0.01 |
| | | | | | ಒಟ್ಟು | 0.07 |
| | ಎರಡು ಪ್ರಕರಣಗಳಲ್ಲಿ ಮಾರಾಟ/ವರ್ಗಾವಣೆ ಮಾಡಲಾಗಿದ್ದ ಆಸ್ತಿಗಳು ವರ್ತುಲ ರಸ್ತೆಗೆ ಅಂಟಿಕೊಂಡಿದ್ದವು, ಆದ್ದರಿಂದ ಮಾರುಕಟ್ಟೆ ಮೌಲ್ಯ ಮಾರ್ಗಸೂಚಿಗಳಲ್ಲಿನ ನಿರ್ದೇಶನಗಳ ಪ್ರಕಾರ ನಿರ್ದಿಷ್ಟ ದರಗಳನ್ನು ಶೇಕಡಾ 50ರಷ್ಟು ಹೆಚ್ಚಳಗೊಳಿಸಬೇಕಿದ್ದಿತು, ಆದರೆ ಅವುಗಳನ್ನು ಅಳವಡಿಸಿಕೊಂಡಿರಲಿಲ್ಲ. | | | | | |
| | **ಒಟ್ಟು ಮೊತ್ತ** | **19** | **ಮುದ್ರಾಂಕ ಸುಂಕ** | **4.34** | **3.07** | **1.27** |
| | | | **ನೋಂದಣಿ ಶುಲ್ಕ** | **0.77** | **0.53** | **0.24** |
| | | | | **5.11** | **3.60** | **1.51** |

[5] ಆನೇಕಲ್ಲು, ಬಾಣಸವಾಡಿ, ಬೊಮ್ಮನಹಳ್ಳಿ, ಬಿದರಹಳ್ಳಿ, ಧಾರವಾಡ, ಜೆ.ಪಿ.ನಗರ, ಕೆಂಗೇರಿ ಮತ್ತು ಮೈಸೂರು (ಉತ್ತರ).

ಲೆಕ್ಕಪರಿಶೋಧನೆಯು ಈ ಪ್ರಕರಣಗಳನ್ನು ಮಾರ್ಚ್ ಮತ್ತು ಜೂನ್ 2017ರಲ್ಲಿ ಇನ್ಸ್‌ಪೆಕ್ಟರ್ ಜನರಲ್‌ರವರು ಹಾಗೂ ಮುದ್ರಾಂಕಗಳ ಆಯುಕ್ತರವರು ಹಾಗೂ ಅಲ್ಲದೆಯೇ ಸರ್ಕಾರದ ಗಮನಕ್ಕೆ ತಂದಿತು. ಅದಕ್ಕೆ ಉತ್ತರವಾಗಿ, ಆರು ಪ್ರಕರಣಗಳಲ್ಲಿ ಮುದ್ರಾಂಕ ಸುಂಕದ ಕಡೆಗೆ ₹ 28.99 ಲಕ್ಷ ಹಾಗೂ ನೋಂದಣಿ ಶುಲ್ಕದ ಕಡೆಗೆ ₹ 5.14 ಲಕ್ಷ ಮೊತ್ತಗಳನ್ನು ವಸೂಲಾತಿ ಮಾಡಲಾಗಿದೆ ಹಾಗೂ ಉಳಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ಕೊರತೆಯಿಂದ ಕೂಡಿದ್ದ ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕದ ವಸೂಲಾತಿಗಾಗಿ ಸಂಬಂಧಪಟ್ಟ ಜಿಲ್ಲಾ ನೋಂದಣಿ ಅಧಿಕಾರಿಗಳು ನೋಟೀಸುಗಳನ್ನು ನೀಡಿರುವರು ಎಂಬುದಾಗಿ ಸರ್ಕಾರ/ಇಲಾಖೆಯು ತಿಳಿಸಿತು (ಜುಲೈ 2017).

# ಅಧ್ಯಾಯ-V : ಖನಿಜ ಸ್ವೀಕೃತಿಗಳು

# ಅಧ್ಯಾಯ–V
# ಖನಿಜ ಸ್ವೀಕೃತಿಗಳು

## 5.1 ತೆರಿಗೆ ನಿರ್ವಹಣೆ

ಖನಿಜ ಸಂಪನ್ಮೂಲಗಳ ನಿರ್ವಹಣೆಯ ಜವಾಬ್ದಾರಿಯನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು [1] ಹಂಚಿಕೊಳ್ಳುತ್ತವೆ. ಕೇಂದ್ರ ಸರ್ಕಾರವು ಜಾರಿಗೊಳಿಸಿರುವ ಗಣಿಗಳು ಮತ್ತು ಖನಿಜಗಳು (ವಿಕಸನ ಮತ್ತು ನಿಯಂತ್ರಣ) ಅಧಿನಿಯಮ, 1957 ಖನಿಜಗಳ ನಿಯಂತ್ರಣ ಮತ್ತು ವಿಕಸನಕ್ಕಾಗಿ [2] ಕಾನೂನಾತ್ಮಕ ಚೌಕಟ್ಟನ್ನು ನಿರ್ದಿಷ್ಟಪಡಿಸುತ್ತದೆ. ಖನಿಜಗಳ ಸಂರಕ್ಷಣೆ ಹಾಗೂ ವ್ಯವಸ್ಥಿತ ವಿಕಸನಕ್ಕಾಗಿ ಹಾಗೂ ಪರ್ಮಿಟ್ಟುಗಳು, ಪರವಾನಿಗೆಗಳು ಮತ್ತು ಗುತ್ತಿಗೆಗಳನ್ನು ನಿಯಂತ್ರಿಸುವುದಕ್ಕಾಗಿ ಖನಿಜ ರಿಯಾಯಿತಿ ನಿಯಮಗಳು, 1960, ಖನಿಜ ಸಂರಕ್ಷಣೆ ಮತ್ತು ವಿಕಸನ ನಿಯಮಗಳು, 1988, ಹಾಗೂ ಗ್ರಾನೈಟು ಸಂರಕ್ಷಣೆ ಮತ್ತು ವಿಕಸನ ನಿಯಮಗಳು, 1999, ಇವುಗಳನ್ನು ರೂಪಿಸಲಾಗಿದೆ.

ಅಪ್ರಧಾನ ಖನಿಜಗಳನ್ನು ಹೊರತೆಗೆಯುವ/ಉಪಯೋಗಕ್ಕೆ ಬರುವಂತೆ ಮಾಡುವುದಕ್ಕೆ ಸಂಬಂಧಿತ ಕಾನೂನನ್ನು ರೂಪಿಸುವ ಅಧಿಕಾರವನ್ನು ರಾಜ್ಯಗಳಿಗೆ ನೀಡಲಾಗಿದೆ. ಅದರಂತೆಯೇ ರಾಜ್ಯ ಸರ್ಕಾರವು ಕರ್ನಾಟಕ ಅಪ್ರಧಾನ ಖನಿಜ ರಿಯಾಯಿತಿ ನಿಯಮಗಳು, 1994ನ್ನು ರೂಪಿಸಿದೆ.

## 5.2 ಆಂತರಿಕ ಲೆಕ್ಕಪರಿಶೋಧನೆ

ಇಲಾಖೆಯಲ್ಲಿ ಆಂತರಿಕ ಲೆಕ್ಕಪರಿಶೋಧನಾ ವಿಭಾಗವು 1985ರಿಂದ ಕಾರ್ಯನಿರ್ವಹಿಸುತ್ತಿದೆ. ಅದು ರಾಜ್ಯ ಲೆಕ್ಕಪತ್ರಗಳ ಇಲಾಖೆಯಿಂದ ನಿಯೋಜನೆಯ ಮೇಲೆ ಕಾರ್ಯನಿರ್ವಹಿಸುತ್ತಿರುವ ಓರ್ವ ಲೆಕ್ಕಾಧಿಕಾರಿಗಳ ನೇತೃತ್ವದಲ್ಲಿ ಹಾಗೂ ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶಕರವರ ಒಟ್ಟಾರೆ ನಿಯಂತ್ರಣದಲ್ಲಿದೆ.

ಇಲಾಖೆಯು ಒದಗಿಸಿರುವ ಮಾಹಿತಿಯಂತೆ, 2016–17ರಲ್ಲಿ ಲೆಕ್ಕಪರಿಶೋಧನೆಗೆ ಒಳಪಡಿಸಲು ಬಾಧ್ಯವಾಗಿದ್ದಂತಹ 33 ಕಚೇರಿಗಳ ಪೈಕಿ ಒಂದು ಕಚೇರಿಯನ್ನು ಮಾತ್ರ ಲೆಕ್ಕಪರಿಶೋಧನೆಗೆ ಒಳಪಡಿಸಲಾಗಿದ್ದಿತು. ಕಚೇರಿಗಳನ್ನು ಲೆಕ್ಕಪರಿಶೋಧನೆಗೆ ವ್ಯಾಪಿಸುವಲ್ಲಿನ ಕೊರತೆಗೆ ವಿಭಾಗದಲ್ಲಿನ ಸಿಬ್ಬಂದಿಯ ಕೊರತೆಯ ಕಾರಣವನ್ನು ನೀಡಲಾಗಿದ್ದಿತು. ಇಲಾಖೆಯು ಒದಗಿಸಿದ ಮಾಹಿತಿಯಂತೆ, ತೆರಿಗೆ ಮೊತ್ತದ ಪ್ರಭಾವದೊಂದಿಗೆ ಆಂತರಿಕ ಲೆಕ್ಕಪರಿಶೋಧನೆಯು ಗಮನಿಸಲಾಗಿದ್ದಂತಹ ಅಂಶಗಳ ಸಂಖ್ಯೆ, ಇತ್ಯರ್ಥಗೊಂಡವುಗಳು ಹಾಗೂ ಬಾಕಿಗಳ ವರ್ಷವಾರು ವಿವರಗಳನ್ನು ಇಲಾಖೆಯು ಒದಗಿಸಿಲ್ಲ.

## 5.3 ಲೆಕ್ಕಪರಿಶೋಧನೆಯ ಫಲಿತಾಂಶಗಳು

2016–17ರಲ್ಲಿ ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯ 13 ಕಚೇರಿಗಳ ದಾಖಲೆಗಳ ಪರೀಕ್ಷಾ–ಪರಿಶೀಲನೆಯು, 24 ಕಂಡಿಕೆಗಳ ಮೂಲಕ ಸ್ಪಷ್ಟಪಡಿಸಲಾಗಿರುವಂತೆ ₹ 102.03 ಕೋಟಿ ಮೊತ್ತವು ಒಳಗೊಂಡಂತೆ ಖನಿಜ ರವಾನೆ ಪರ್ಮಿಟ್ಟುಗಳನ್ನು ಹೊಂದಿರದೆಯೇ ಖನಿಜಗಳನ್ನು ಸಾಗಣೆ ಮಾಡಿದ್ದಕ್ಕಾಗಿ ದಂಡವನ್ನು ವಿಧಿಸದಿದ್ದುದು, ರಾಜಧನ/ನಿಷ್ಕ್ರಿಯ ಬಾಡಿಗೆಯನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು ಹಾಗೂ ಇನ್ನಿತರೆ ನಿಯಮಬಾಹಿರತೆಗಳನ್ನು ತೋರಿಸಿಕೊಟ್ಟಿತು, ಅವುಗಳು **ಕೋಷ್ಟಕ 5.1**ರಲ್ಲಿ ತೋರಿಸಿರುವಂತೆ, ಈ ಕೆಳಗಿನ ಪ್ರವರ್ಗಗಳ ಅಡಿಯಲ್ಲಿ ಬರುತ್ತವೆ.

---

[1] ಭಾರತದ ಸಂವಿಧಾನದ ಕಲಮು ಏಳರ ಕೇಂದ್ರ ಪಟ್ಟಿಯ (ಪಟ್ಟಿ I) ದಾಖಲೆ ಸಂಖ್ಯೆ 54 ಹಾಗೂ ರಾಜ್ಯ ಪಟ್ಟಿಯ (ಪಟ್ಟಿ II) ದಾಖಲೆ ಸಂಖ್ಯೆ 23 ಮತ್ತು 50.

[2] ಪೆಟ್ರೋಲಿಯಂ ಹಾಗೂ ಪ್ರಾಕೃತಿಕ ಅನಿಲ ಹಾಗೂ ಪರಮಾಣು ಖನಿಜಗಳನ್ನು ಹೊರತುಪಡಿಸಿದಂತೆ.

**ಕೋಷ್ಟಕ 5.1**
**ಲೆಕ್ಕಪರಿಶೋಧನೆಯ ಫಲಿತಾಂಶಗಳು**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ಪ್ರವರ್ಗ | ಕಂಡಿಕೆಗಳ ಸಂಖ್ಯೆ | ಮೊತ್ತ |
|---|---|---|---|
| 1. | **ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳಿಂದ ಅಪ್ರಧಾನ ಖನಿಜಗಳ ಮೇಲೆ ರಾಜಧನವನ್ನು ಮೂಲದಲ್ಲಿಯೇ ಕಡಿದುಕೊಂಡಿರುವುದರ ಮೇಲೆ ವಿಷಯಾಧಾರಿತ ಲೆಕ್ಕಪರಿಶೋಧನೆ** | **1** | **45.60** |
| 2. | ಖನಿಜ ರವಾನೆ ಪರ್ಮಿಟ್ಟುಗಳನ್ನು ಹೊಂದಿರದೆಯೇ ಖನಿಜಗಳನ್ನು ಸಾಗಣೆ ಮಾಡಿದ್ದಕ್ಕಾಗಿ ದಂಡವನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು | 11 | 52.17 |
| 3. | ರಾಜಧನ ಮತ್ತು ನಿಷ್ಕ್ರಿಯ ಬಾಡಿಗೆಯನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು | 5 | 2.92 |
| 4. | ಇತರೆ ನಿಯಮಬಾಹಿರತೆಗಳು | 7 | 1.34 |
| | **ಒಟ್ಟು** | **24** | **102.03** |

ಪ್ರಸಕ್ತ ಸಾಲಿನಲ್ಲಿ, ಇಲಾಖೆಯು ಮೂರು ಕಂಡಿಕೆಗಳಿಗೆ ಸಂಬಂಧಿಸಿದಂತೆ ₹ 18.11 ಕೋಟಿ ಮೊತ್ತವು ಒಳಗೊಂಡಂತೆ ಕಡಿಮೆ ಪ್ರಮಾಣದಲ್ಲಿ ಮಾಡಲಾಗಿದ್ದಂತಹ ನಿರ್ಧಾರಣೆಗಳು ಹಾಗೂ ಇನ್ನಿತರ ಲೋಪದೋಷಗಳನ್ನು ಒಪ್ಪಿಕೊಂಡಿತು. ಹಿಂದಿನ ಸಾಲುಗಳಲ್ಲಿ ಸ್ಪಷ್ಟಪಡಿಸಲಾಗಿದ್ದಂತಹ ಒಂಬತ್ತು ಕಂಡಿಕೆಗಳಲ್ಲಿ ₹ 0.96 ಕೋಟಿ ಮೊತ್ತವನ್ನು ಪ್ರಸಕ್ತ ಸಾಲಿನಲ್ಲಿ ವಸೂಲಾತಿ ಮಾಡಿದ್ದಿತು.

₹ 45.60 ಕೋಟಿ ಮೊತ್ತವು ಒಳಗೊಂಡಂತೆ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ ಸಂಸ್ಥೆಗಳಿಂದ ಅಪ್ರಧಾನ ಖನಿಜಗಳ ಮೇಲೆ ರಾಜಧನವನ್ನು ಮೂಲದಲ್ಲಿಯೇ ಕಡಿದುಕೊಂಡಿರುವುದರ ಮೇಲಿನ ವಿಷಯಾಧಾರಿತ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳನ್ನು ಹಾಗೂ ₹ 54.22 ಕೋಟಿ ಮೊತ್ತವು ಒಳಗೊಂಡಂತೆ ರಾಜಧನ ಮತ್ತು ದಂಡವನ್ನು ವಿಧಿಸದಿರುವುದರ ಮೇಲಿನ ಕೆಲವು ದೃಷ್ಟಾಂತ ಪ್ರಕರಣಗಳನ್ನು ಮುಂದಿನ ಕಂಡಿಕೆಗಳಲ್ಲಿ ತಿಳಿಸಲಾಗಿದೆ.

## 5.4 'ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳಿಂದ ಅಪ್ರಧಾನ ಖನಿಜಗಳ ಮೇಲೆ ರಾಜಧನವನ್ನು ಮೂಲದಲ್ಲಿಯೇ ಕಡಿದುಕೊಳ್ಳುವಿಕೆ' ಈ ವಿಷಯದ ಮೇಲೆ ವಿಷಯಾಧಾರಿತ ಲೆಕ್ಕಾಪರಿಶೋಧನೆ

### ಮುಖ್ಯಾಂಶಗಳು

ಕಾನೂನಾತ್ಮಕ ಗಣಿ ಗುತ್ತಿಗೆ/ಪರವಾನಿಗೆಗಳನ್ನು ಹೊಂದಿರುವವರಿಂದ ರಾಜಧನದ ಪಾವತಿಗಾಗಿ ತಗಾದೆಯನ್ನು ಸೃಷ್ಟಿಸಲು ಆಧಾರವಾಗಿದ್ದಂತಹ ಅಗೆದ ಹೊಂಡದ ಅಳತೆಯ ಮೂಲಕ ಕೇವಲ ಶೇಕಡಾ 21ರಿಂದ 26ರಷ್ಟು ಅಪ್ರಧಾನ ಖನಿಜಗಳ ಪ್ರಮಾಣವನ್ನು ಮಾತ್ರ ಗಣಿ ಮತ್ತು ಭೂವಿಜ್ಞಾನ ಇಲಾಖೆಯು ನೇರವಾಗಿ ನಿರ್ಧಾರಣೆ ಮಾಡಿದ್ದಿತು. ಉಳಿದ ಅಪ್ರಧಾನ ಖನಿಜಗಳ ಪರಿಮಾಣವನ್ನು ಖನಿಜ ರವಾನೆ ಪರವಾನಿಗೆಗಳನ್ನು ಹೊಂದಿರದೆಯೇ ಸಾಗಾಣಿಕೆ ಮಾಡಲಾಗುತ್ತಿದ್ದಿತು ಹಾಗೂ ಕಾಮಗಾರಿಗಳನ್ನು ಕಾರ್ಯಗತಗೊಳಿಸುತ್ತಿದ್ದ ಇಲಾಖೆಗಳು/ಸಂಸ್ಥೆಗಳು ಗಣಿಗಾರಿಕೆಯ ಮೂಲಗಳನ್ನು ಖಚಿತಪಡಿಸಿಕೊಳ್ಳದೆಯೇ ರಾಜಧನವನ್ನು ವಿಧಿಸುತ್ತಿದ್ದವು/ಮೂಲದಲ್ಲಿಯೇ ಕಡಿದುಕೊಳ್ಳುತ್ತಿದ್ದವು. ಇದು, ರಾಜ್ಯದಲ್ಲಿ ಅಧಿಕ ಪ್ರಮಾಣದಲ್ಲಿನ ನಿಯಮಬಾಹಿರ ಗಣಿಗಾರಿಕೆಯ ಸಂಭಾವ್ಯತೆಯನ್ನು ಸೂಚಿಸುತ್ತಿದ್ದಿತು ಹಾಗೂ ಇದರ ಬಗ್ಗೆ ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯು ತನಿಖೆಯನ್ನು ನಡೆಸುವ ಅಗತ್ಯತೆಯಿರುತ್ತದೆ.

(ಕಂಡಿಕೆ 5.4.2)

ಪರೀಕ್ಷಾ-ಪರಿಶೀಲನೆ ಮಾಡಲಾದ ಹತ್ತು ಜಿಲ್ಲೆಗಳ ಪೈಕಿ, ಏಳು ಜಿಲ್ಲೆಗಳ ನಿರ್ಮಿತಿ ಕೇಂದ್ರಗಳು ಹಾಗೂ ಎಲ್ಲಾ ಹತ್ತು ಜಿಲ್ಲೆಗಳಲ್ಲಿನ ಮೆ. ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ನಿಯಮಿತವು ರಾಜಧನವನ್ನು ಮೂಲದಲ್ಲಿಯೇ ಕಡಿದುಕೊಂಡಿರಲಿಲ್ಲ. ಏಳು ನಿರ್ಮಿತಿ ಕೇಂದ್ರಗಳ ಪೈಕಿ ನಾಲ್ಕು ನಿರ್ಮಿತಿ ಕೇಂದ್ರಗಳು ಹಾಗೂ ಮೆ.ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತದ ಹತ್ತು ಕಚೇರಿಗಳ ಪೈಕಿ ಆರು ಕಚೇರಿಗಳು ತಾವು ಬಳಸಿಕೊಂಡ ಅಪ್ರಧಾನ ಖನಿಜಗಳ ಯಾವುದೇ ಲೆಕ್ಕಪತ್ರಗಳನ್ನು ಇಟ್ಟಿರಲಿಲ್ಲ/ತಮ್ಮ ವರದಿಗಳಲ್ಲಿ ತೋರಿಸಿರಲಿಲ್ಲ. ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇತರೆ ಏಳು ಇಲಾಖೆಗಳು/ಸಂಸ್ಥೆಗಳೂ ಸೇರಿದಂತೆ ನಿರ್ಮಿತಿ ಕೇಂದ್ರಗಳು ಮತ್ತು ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತದ ಅಡಿಯಲ್ಲಿ ವಿಧಿಸದಿದ್ದಂತಹ ಒಟ್ಟಾರೆ ರಾಜಧನದ ಮೊತ್ತವು ₹ 3.66 ಕೋಟಿ ಆಗಿದ್ದಿತು.

(ಕಂಡಿಕೆ 5.4.3.1)

ಪರೀಕ್ಷಾ–ಪರಿಶೀಲನೆ ಮಾಡಲಾದ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ 87 ಇಲಾಖೆಗಳು/ಸಂಸ್ಥೆಗಳ ಪೈಕಿ:

- ಹತ್ತು ಜಿಲ್ಲೆಗಳಲ್ಲಿ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ 19 ಇಲಾಖೆಗಳು/ಸಂಸ್ಥೆಗಳು ಕಾಮಗಾರಿ ಸ್ಥಳಗಳಲ್ಲಿ ತಾವು ಪಡೆದುಕೊಳ್ಳಲಾದ ಹಾಗೂ ಕಾಮಗಾರಿಗಳಲ್ಲಿ ಬಳಸಿಕೊಳ್ಳಲಾದ ಅಪ್ರಧಾನ ಖನಿಜಗಳಿಗೆ ಸಂಬಂಧಿಸಿದಂತೆ ರಾಜಧನವನ್ನು ಮೂಲದಲ್ಲಿಯೇ ಕಡಿದುಕೊಂಡಿರಲಿಲ್ಲ, ಇದು ₹ 39.56 ಕೋಟಿ ಮೊತ್ತದಷ್ಟು ರಾಜಧನವನ್ನು ಮೂಲದಲ್ಲಿಯೇ ಕಡಿದುಕೊಳ್ಳದಿರುವಲ್ಲಿ ಪರಿಣಮಿಸಿತು;
- ಏಳು ಜಿಲ್ಲೆಗಳಲ್ಲಿ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಒಂಬತ್ತು ಇಲಾಖೆಗಳು/ಸಂಸ್ಥೆಗಳು ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ವೇಳೆಯಲ್ಲಿ 40.06 ಲಕ್ಷ ಘನ ಮೀಟರುಗಳಷ್ಟು ಮುರ್ರಂ ಅನ್ನು ಹೊರತೆಗೆದಿದ್ದವು. ಹೊರತೆಗೆಯಲಾದ ಮುರ್ರಂನ ಸಾಗಾಣಿಕೆ/ಬಳಕೆಯು ₹ 12.02 ಕೋಟಿ ಮೊತ್ತದಷ್ಟು ರಾಜಧನವನ್ನು ಆಕರ್ಷಿಸುತ್ತಿದ್ದಿತು, ಆದಾಗ್ಯೂ, ಬಳಕೆಗಳ ಬಗ್ಗೆ ವರದಿಗಳು ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳಲ್ಲಿ ಅಥವಾ ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಾಗಲೀ ಲಭ್ಯವಿರಲಿಲ್ಲ.
- ಏಳು ಜಿಲ್ಲೆಗಳಲ್ಲಿ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ 12 ಇಲಾಖೆಗಳು/ಸಂಸ್ಥೆಗಳು ಪರಿಷ್ಕರಣಾ–ಪೂರ್ವ ದರಗಳಲ್ಲಿ ರಾಜಧನವನ್ನು ವಸೂಲಾತಿ ಮಾಡಿದ್ದವು, ಇದು ₹ 2.38 ಕೋಟಿ ಮೊತ್ತದಷ್ಟು ರಾಜಧನವನ್ನು ಕಡಿಮೆ ಪ್ರಮಾಣದಲ್ಲಿ ವಸೂಲಾತಿ ಮಾಡುವಲ್ಲಿ ಪರಿಣಮಿಸಿತು.

(ಕಂಡಿಕೆ 5.4.3.2 ಮತ್ತು 5.4.4)

ಖನಿಜ ರವಾನೆ ಪರವಾನಿಗೆಗಳ ಹೊರತಾಗಿ ಅಪ್ರಧಾನ ಖನಿಜಗಳ ಸಾಗಣೆಗಾಗಿ ದಂಡವನ್ನು ವಿಧಿಸುವ ಷರತ್ತನ್ನು ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳ ಮೇಲೆ ವಿಧಿಸುವಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯು ವಿಫಲಗೊಂಡಿದ್ದಿತು. ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳು ಬಳಸಿಕೊಂಡಿದ್ದ ಅಪ್ರಧಾನ ಖನಿಜಗಳ ಮೂಲಗಳನ್ನು ಗುರುತಿಸಿರಲಿಲ್ಲ, ಇದು ಕಾನೂನುಬಾಹಿರ ಗಣಿಗಾರಿಕೆಯ ಸಾಧ್ಯತೆಗೆ/ಸಂಭಾವ್ಯತೆಗೆ ಹಾಗೂ ಖನಿಜ ರವಾನೆ ಪರವಾನಿಗೆಗಳ ಹೊರತಾಗಿ ಅಪ್ರಧಾನ ಖನಿಜಗಳ ಅನಿರ್ಬಂಧಿತ ರವಾನೆಗೆ ದಾರಿ ಮಾಡಿಕೊಟ್ಟಿದ್ದಿತು.

(ಕಂಡಿಕೆ 5.4.6)

### 5.4.1 ಪೀಠಿಕೆ

ಕರ್ನಾಟಕ ಸರ್ಕಾರವು ಸಾರ್ವಜನಿಕ ಲೋಕೋಪಯೋಗಿ ಇಲಾಖೆ, ನಿರ್ಮಿತಿ ಕೇಂದ್ರಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಜಿಲ್ಲಾ ಪಂಚಾಯತಿಗಳು, ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ, ಇತ್ಯಾದಿಗಳಂತಹ ಒಟ್ಟಾರೆಯಾಗಿ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳು ಎಂಬುದಾಗಿ ಹೆಸರಾಗಿರುವ ವಿವಿಧ ಇಲಾಖೆಗಳು/ಸಂಸ್ಥೆಗಳ ಮೂಲಕ ಅಣೆಕಟ್ಟೆಗಳು, ರಸ್ತೆಗಳು, ಕಟ್ಟಡಗಳು, ಇತ್ಯಾದಿಗಳಿಗೆ ಸಂಬಂಧಿಸಿದಂತೆ ವಿವಿಧ ಕಾಮಗಾರಿಗಳು ಮತ್ತು ಯೋಜನೆಗಳನ್ನು ಕಾರ್ಯಗತಗೊಳಿಸುತ್ತವೆ. ಈ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳು ತದನಂತರ ಈ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಸಲುವಾಗಿ ವಿವಿಧ ಗುತ್ತಿಗೆದಾರರುಗಳಿಗೆ ವಹಿಸುತ್ತವೆ. ಕಾರ್ಯಗತಗೊಳಿಸುವ ವೇಳೆಯಲ್ಲಿ, ಗುತ್ತಿಗೆದಾರರುಗಳು, ಇನ್ನಿತರವುಗಳ ಜೊತೆಗೆ ಮರಳು, ಸೈಜು ಕಲ್ಲುಗಳು[3], ಜೆಲ್ಲಿ[4], ಮುರ್ರಂ[5], ಮುಂತಾದವುಗಳಂತಹ ಅಪ್ರಧಾನ ಖನಿಜಗಳನ್ನು ಬಳಸುವರು, ಈ ಅಪ್ರಧಾನ ಖನಿಜಗಳನ್ನು ಗಣಿಗಾರಿಕೆ ಪರವಾನಿಗೆಯನ್ನು ಹೊಂದಿರುವವರಿಂದ ಅಥವಾ ಕೆಲವು ಪ್ರಕರಣಗಳಲ್ಲಿ ಗುತ್ತಿಗೆದಾರರುಗಳು ತಮ್ಮ ಸ್ವಂತ ಗಣಿಗಳಿಂದ ತರುವರು.

ಅಪ್ರಧಾನ ಖನಿಜಗಳನ್ನು ನಿರ್ದಿಷ್ಟಪಡಿಸಲಾಗಿರುವ[6] ಮತ್ತು ನಿರ್ದಿಷ್ಟಪಡಿಸಿರದ[7] ಎಂಬುದಾಗಿ ವರ್ಗೀಕರಿಸಲಾಗಿದೆ. ಕರ್ನಾಟಕ ಅಪ್ರಧಾನ ಖನಿಜ ರಿಯಾಯಿತಿ (ಕೆಎಂಎಂಸಿ) ನಿಯಮಗಳ ಅನುವುಗಳ ಅನುಸಾರ, ಎಲ್ಲಾ ಅಪ್ರಧಾನ ಖನಿಜಗಳ ಮೇಲೆ ರಾಜಧನವನ್ನು ಮೂಲದಲ್ಲಿಯೇ (ಗಣಿಗಳಲ್ಲಿ) ಮುಂಗಡವಾಗಿ ಪಾವತಿಸತಕ್ಕದ್ದು ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಖನಿಜ ರವಾನೆ ಪರವಾನಿಗೆಗಳನ್ನು (ಎಂಡಿಪಿಗಳು) ಪಡೆದುಕೊಂಡನಂತರವಷ್ಟೇ ರವಾನಿಸತಕ್ಕದ್ದು. ಆದಾಗ್ಯೂ, ಖನಿಜ ರವಾನೆ ಪರವಾನಿಗೆಗಳನ್ನು ಪಡೆದುಕೊಳ್ಳದೆಯೇ ನಿರ್ದಿಷ್ಟಪಡಿಸಿರದ ಅಪ್ರಧಾನ ಖನಿಜಗಳನ್ನು ಸಾಗಾಣಿಕೆ ಮಾಡುವ ಪ್ರಕರಣಗಳು ರಾಜ್ಯದಲ್ಲಿ ಸರ್ವೇಸಾಮಾನ್ಯವಾಗಿರುತ್ತದೆ. ಆದ್ದರಿಂದ, ವಿವಿಧ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳು ತಾವು ಕಾರ್ಯಗತಗೊಳಿಸಿರುವ ಕಾಮಗಾರಿಗಳಲ್ಲಿ ಬಳಸಿಕೊಳ್ಳಲಾಗಿರುವ ಅಪ್ರಧಾನ ಖನಿಜಗಳ ಮೇಲೆ ರಾಜಧನವನ್ನು ವಸೂಲಾತಿ ಮಾಡುವ ದೃಷ್ಟಿಯಿಂದ, ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆಯು ಅಪ್ರಧಾನ ಖನಿಜಗಳ ಮೇಲೆ ರಾಜಧನವನ್ನು ಪಾವತಿಸಿರುವ ಬಗ್ಗೆ ದಾಖಲೆಗಳ ಸಾಕ್ಷ್ಯಾಧಾರಗಳನ್ನು ಒದಗಿಸದ ಅಪ್ರಧಾನ ಖನಿಜಗಳ ಮೇಲೆ ಗುತ್ತಿಗೆದಾರರುಗಳ ಬಿಲ್ಲುಗಳಿಂದ ರಾಜಧನವನ್ನು ಮೂಲದಲ್ಲಿಯೇ ಕಡಿದುಕೊಳ್ಳುವಂತೆ ವಿವಿಧ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳಿಗೆ ನಿರ್ದೇಶನಗಳನ್ನು ನೀಡಿ ಸುತ್ತೋಲೆಗಳನ್ನು (ಆಗಸ್ಟ್ 2003, ಮೇ 2004 ಮತ್ತು ಡಿಸೆಂಬರ್ 2007) ಹೊರಡಿಸಿರುವುದು.

ಅಪ್ರಧಾನ ಖನಿಜಗಳ ಮೇಲಿನ ರಾಜಧನಕ್ಕೆ ಸಂಬಂಧಿತ ವರಮಾನದ ಪ್ರಮುಖ ಭಾಗವು ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳ ಮೂಲಕ (ಬಳಕೆ ಹಂತದಲ್ಲಿಯೇ ರಾಜಧನವನ್ನು ಕಡಿದುಕೊಳ್ಳುವಿಕೆ) ಬರುತ್ತಿದಿತು, ಆದ್ದರಿಂದ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳು ಮೂಲದಲ್ಲಿಯೇ ರಾಜಧನವನ್ನು ಕಡಿದುಕೊಳ್ಳುವಲ್ಲಿ ಸಂಭವಿಸಬಹುದಾದ ನ್ಯೂನತೆಗಳು/ಕೊರತೆಗಳು ಸರ್ಕಾರದ ವರಮಾನದಲ್ಲಿನ ಭಾರಿ ಪ್ರಮಾಣದಲ್ಲಿನ ಸೋರಿಕೆಯಲ್ಲಿ ಪರಿಣಮಿಸಬಹುದು. ಇದು, ಈ ಲೆಕ್ಕಪರಿಶೋಧನೆಯನ್ನು ಮೇಲೆ ತಿಳಿಸಲಾದಂತಹ ಲೆಕ್ಕಪರಿಶೋಧನಾ ಉದ್ದೇಶದೊಂದಿಗೆ ಕೈಗೆತ್ತಿಕೊಳ್ಳಲು ಕಾರಣವಾಗಿದ್ದಿತು.

ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯು ಸರ್ಕಾರದ ಕಾರ್ಯದರ್ಶಿಯವರು, ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆ, ಕರ್ನಾಟಕ ಸರ್ಕಾರ, ಇವರ ಆಡಳಿತಾತ್ಮಕ ನಿಯಂತ್ರಣದಲ್ಲಿರುವುದು ಹಾಗೂ ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶಕರ ನೇತೃತ್ವದಲ್ಲಿರುವುದು. ನಿರ್ದೇಶಕರವರು ಇಬ್ಬರು ಜಂಟಿ ನಿರ್ದೇಶಕರುಗಳ (ಪ್ರತಿಯೊಬ್ಬರೂ ಉತ್ತರ ಮತ್ತು ದಕ್ಷಿಣ ವಲಯದಲ್ಲಿನ ಕ್ಷೇತ್ರ ಕಚೇರಿಗಳ ಉಸ್ತುವಾರಿಯನ್ನು ನೋಡಿಕೊಳ್ಳುವ) ಹಾಗೂ 30 ಜಿಲ್ಲೆಗಳಲ್ಲಿನ 31 ಕಚೇರಿಗಳ (ಬಳ್ಳಾರಿಯಲ್ಲಿರುವ ಎರಡು ಕಚೇರಿಗಳನ್ನು ಹೊರತುಪಡಿಸಿದಂತೆ 30 ಜಿಲ್ಲೆಗಳಲ್ಲಿ ಪ್ರತಿಯೊಂದರಲ್ಲಿಯೂ ಒಂದು ಕಚೇರಿಯಿರುವುದು) ಸಹಾಯದಿಂದ ಕಾರ್ಯ ನಿರ್ವಹಿಸುವರು.

---

[3] ದೊಡ್ಡ ಗಾತ್ರದ ಕಟ್ಟಡ ಕಲ್ಲು.

[4] ಜಲ್ಲಿ – ಜಜ್ಜಿ ಸಣ್ಣ ಚೂರುಗಳನ್ನಾಗಿ ಮಾಡಿರುವ ಕಲ್ಲು.

[5] ಮುರ್ರಂ – ರಸ್ತೆ ಮೇಲ್ಪದರಕ್ಕೆ ಬಳಸಲಾಗುವ ಲ್ಯಾಟರೈಟಿನ ಒಂದು ನಮೂನೆ (ಮಣ್ಣಿನ ಸಾಮಗ್ರಿ).

[6] ನಿರ್ದಿಷ್ಟಪಡಿಸಲಾಗಿರುವ ಅಪ್ರಧಾನ ಖನಿಜಗಳು ಎಂದರೆ ರಾಜ್ಯ ಸರ್ಕಾರವು ಕಾಲಾನುಕಾಲಕ್ಕೆ ನಿರ್ದಿಷ್ಟಪಡಿಸಿರುವುದು. ಒಂದು ಉದಾಹರಣೆಗೆ ಗ್ರಾನೈಟು, ಮಾರ್ಬಲ್ಲು, ಫೆಲ್‌ಸೈಟು, ಕ್ವಾರ್ಟ್‌ಝೈಟು, ಮರಳುಕಲ್ಲು (ಸ್ಯಾಂಡ್ ಸ್ಟೋನ್) ಹಾಗೂ ಸ್ಪಟಿಕ ಶಿಲೆಗಳು ಮುಂತಾದ ಕೆಲವು ಅಲಂಕಾರಿಕ ಹಾಗೂ ಸುಂದರ ಜೋಡಣೆಗಾಗಿ ಉಪಯೋಗಿಸುವ ಕಟ್ಟಡ ಕಲ್ಲುಗಳು.

[7] ನಿರ್ದಿಷ್ಟಪಡಿಸಿರದ ಅಪ್ರಧಾನ ಖನಿಜಗಳು ಎಂದರೆ ಕಟ್ಟಡ ಕಲ್ಲು, ಮರಳು, ಮುರ್ರಂ, ಇತ್ಯಾದಿ ಕಡಿಮೆ ಮೌಲ್ಯದ ಖನಿಜಗಳು.

ಗಣಿಗಳಿಂದ ಹೊರತೆಗೆಯಲಾದ ಅಥವಾ ಅಪ್ರಧಾನ ಖನಿಜಗಳ ಮೇಲೆ ಗಣಿಗಾರಿಕೆ ಗುತ್ತಿಗೆಯನ್ನು ಹೊಂದಿರುವವರ ಮೇಲೆ ರಾಜಧನವನ್ನು ವಿಧಿಸಲು ಅಥವಾ ತಾವು ಕಾರ್ಯಗತಗೊಳಿಸುವ ಕಾಮಗಾರಿಗಳಲ್ಲಿ ಬಳಸಲಾದ ಅಪ್ರಧಾನ ಖನಿಜಗಳ ಮೇಲೆ ಗುತ್ತಿಗೆದಾರರುಗಳ ಬಿಲ್ಲುಗಳಿಂದ ಮೂಲದಲ್ಲಿಯೇ ಕಡಿದುಕೊಳ್ಳುವ ರಾಜಧನವನ್ನು ವಸೂಲಾತಿ ಮಾಡುವಲ್ಲಿ ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯು ಜವಾಬ್ದಾರಿಯುತವಾಗಿರುತ್ತದೆ.

ಈ ವಿಷಯಾಧಾರಿತ ಲೆಕ್ಕಪರಿಶೋಧನೆಯಲ್ಲಿ, ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ ಸಂಸ್ಥೆಗಳಿಂದ ಅಪ್ರಧಾನ ಖನಿಜಗಳ ಮೇಲಿನ ರಾಜಧನವನ್ನು ಯಥಾರ್ಥತೆಯಿಂದ ಮತ್ತು ಸಮಯೋಚಿತವಾಗಿ ವಸೂಲಾತಿ ಮಾಡುವುದು ಇಲಾಖೆಗೆ ಸಾಧ್ಯವಾಯಿತೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಲೆಕ್ಕಪರಿಶೋಧನೆಯ ಪ್ರಮುಖ ಉದ್ದೇಶವಾಗಿದ್ದಿತು. ವಿಷಯಾಧಾರಿತ ಲೆಕ್ಕಪರಿಶೋಧನೆಯು 2012–13ರಿಂದ 2016–17ರ ಐದು ವರ್ಷಗಳ ಅವಧಿಯನ್ನು ವ್ಯಾಪಿಸಿತು.

ಉಪ–ನಿರ್ದೇಶಕರುಗಳು/ಹಿರಿಯ ಭೂವಿಜ್ಞಾನಿಗಳ 31 ಕಚೇರಿಗಳ ಪೈಕಿ 10 ಜಿಲ್ಲಾ ಮಟ್ಟದ ಕಚೇರಿಗಳನ್ನು[8] (ಪ್ರತಿಯೊಂದು ವಲಯದಲ್ಲಿಯೂ ಐದು ಜಿಲ್ಲಾ ಮಟ್ಟದ ಕಚೇರಿಗಳು) ಯಾದೃಚ್ಛಿಕ ಮಾದರಿ ಆಯ್ಕೆ ಪದ್ಧತಿಯ ಮೂಲಕ ಆಯ್ಕೆ ಮಾಡಲಾಯಿತು. ಆಯ್ಕೆ ಮಾಡಲಾದ ಕಚೇರಿಯ ಅಧಿಕಾರ ವ್ಯಾಪ್ತಿಯ ಅಡಿಯಲ್ಲಿನ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳು ಮಾಡಿರುವ ಪಾವತಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಸಂಗ್ರಹಿಸಲಾಯಿತು ಹಾಗೂ ಅವುಗಳು ಗುತ್ತಿಗೆದಾರರುಗಳ ಬಿಲ್ಲುಗಳಿಂದ ಮೂಲದಲ್ಲಿಯೇ ಕಡಿದುಕೊಂಡಿರುವ ರಾಜಧನದ ಯಥಾರ್ಥತೆಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಅಂತಹ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಮಾದರಿ ಇಲಾಖೆಗಳು/ಸಂಸ್ಥೆಗಳಿಗೆ ಭೇಟಿ ನೀಡಲಾಯಿತು.

ಪ್ರವೇಶ ಮಟ್ಟದ ಸಭೆಯನ್ನು ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶಕರವರೊಂದಿಗೆ ಏಪ್ರಿಲ್ 2017ರಲ್ಲಿ ನಡೆಸಲಾಯಿತು ಹಾಗೂ ಮಾದರಿ ಆಯ್ಕೆಯೂ ಸೇರಿದಂತೆ ಲೆಕ್ಕಪರಿಶೋಧನೆಯ ವ್ಯಾಪ್ತಿ, ವಿಧಾನ ಮತ್ತು ಲೆಕ್ಕಪರಿಶೋಧನೆಯ ಉದ್ದೇಶಗಳನ್ನು ಇಲಾಖೆಗೆ ವಿವರಿಸಲಾಯಿತು. ಕರಡು ಲೆಕ್ಕಪರಿಶೋಧನಾ ವರದಿಯನ್ನು ಸರ್ಕಾರಕ್ಕೆ ಮತ್ತು ಇಲಾಖೆಗೆ ಆಗಸ್ಟ್ 2017ರಲ್ಲಿ ಕಳುಹಿಸಿಕೊಡಲಾಯಿತು ಹಾಗೂ ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶಕರವರೊಂದಿಗೆ ಆಗಸ್ಟ್ 2017ರಲ್ಲಿ ನಡೆಸಲಾದ ನಿರ್ಗಮನ ಮಟ್ಟದ ಸಭೆಯಲ್ಲಿ ಚರ್ಚಿಸಲಾಯಿತು. ಇಲಾಖೆಯಿಂದ ಸ್ವೀಕರಿಸಲಾಗಿರುವ ಉತ್ತರಗಳನ್ನು ಸಂಬಂಧಿತ ಕಂಡಿಕೆಗಳಲ್ಲಿ ಸೇರಿಸಲಾಗಿದೆ.

ಲೆಕ್ಕಪರಿಶೋಧನೆಗಾಗಿ ಅಗತ್ಯ ಮಾಹಿತಿ ಹಾಗೂ ದಾಖಲೆಗಳನ್ನು ಒದಗಿಸುವಲ್ಲಿ ಗಣಿಗಳು ಮತ್ತು ಭೂ ವಿಜ್ಞಾನ ಇಲಾಖೆ ಹಾಗೂ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳು ನೀಡಿದ ಸಹಕಾರಕ್ಕಾಗಿ ಭಾರತೀಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರಗಳ ಇಲಾಖೆಯು ಈ ಮೂಲಕ ಕೃತಜ್ಞತೆಗಳನ್ನು ಸಲ್ಲಿಸುತ್ತಿದೆ.

[8] ಉತ್ತರ ವಲಯ: ಬಾಗಲಕೋಟೆ, ಚಿತ್ರದುರ್ಗ, ಧಾರವಾಡ, ಕಲಬುರಗಿ ಮತ್ತು ಕೊಪ್ಪಳ.
ದಕ್ಷಿಣ ವಲಯ: ಮಡಿಕೇರಿ, ಮೈಸೂರು, ಶಿವಮೊಗ್ಗ, ತುಮಕೂರು ಮತ್ತು ಉಡುಪಿ.

## ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳು

### 5.4.2 ಮೂಲದಲ್ಲಿಯೇ ರಾಜಧನವನ್ನು ಕಡಿದುಕೊಳ್ಳದಿದ್ದುದು ರಾಜ್ಯದಲ್ಲಿ ಕಾನೂನುಬಾಹಿರ ಗಣಿಗಾರಿಕೆ ಇರುವುದನ್ನು ಸೂಚಿಸುತ್ತದೆ

2012–2013ರಿಂದ 2016–2017 ಸಾಲುಗಳಲ್ಲಿ ಕಾನೂನಾತ್ಮಕ ಗಣಿಗಾರಿಕೆ ಗುತ್ತಿಗೆ/ಪರವಾನಿಗೆಯನ್ನು ಹೊಂದಿರುವವರಿಂದ ಅಪ್ರಧಾನ ಖನಿಜಗಳ ಮೇಲೆ ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯು ನೇರವಾಗಿ ನಿರ್ಧಾರಣೆ ಮಾಡಿದ್ದ ಹಾಗೂ ಪಾವತಿಗಾಗಿ ತಗಾದೆಯನ್ನು ಸೃಷ್ಟಿಸಿದ್ದ ರಾಜಧನ ಹಾಗೂ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳು ತಮ್ಮ ಗುತ್ತಿಗೆದಾರರುಗಳ ಬಿಲ್ಲುಗಳಿಂದ ಮೂಲದಲ್ಲಿಯೇ ಕಡಿದುಕೊಂಡಿದ್ದ ರಾಜಧನದ ಮೊತ್ತವನ್ನು **ಕೋಷ್ಟಕ 5.2**ರಲ್ಲಿ ವಿವರಿಸಲಾಗಿದೆ.

**ಕೋಷ್ಟಕ 5.2**

**ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳಿಂದ ಅಪ್ರಧಾನ ಖನಿಜಗಳ ಮೇಲೆ ವಸೂಲಾತಿಯಾದ ಶೇಕಡಾವಾರು ರಾಜಧನ ಹಾಗೂ ಅದಕ್ಕೆ ಪರಸ್ಪರ ಅನುಗುಣವಾಗಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯು ಅಪ್ರಧಾನ ಖನಿಜಗಳ ಮೇಲೆ ನಿರ್ಧರಿಸಿದ್ದ/ಪಾವತಿಗಾಗಿ ತಗಾದೆಯನ್ನು ಸೃಷ್ಟಿಸಿದ್ದ ಒಟ್ಟಾರೆ ರಾಜಧನ**

**(₹ ಕೋಟಿಯಲ್ಲಿ)**

| ವರ್ಷ | ಗಣಿಗಾರಿಕೆ ಗುತ್ತಿಗೆ/ಪರವಾನಿಗೆ ಹೊಂದಿರುವವರಿಂದ ಗಣಿ ಮತ್ತು ಭೂವಿಜ್ಞಾನ ಇಲಾಖೆಯು ನಿರ್ಧಾರಣೆ ಮಾಡಿದ್ದ ಹಾಗೂ ಪಾವತಿಗಾಗಿ ತಗಾದೆ ಸೃಷ್ಟಿಸಿದ್ದ ಒಟ್ಟಾರೆ ವರಮಾನ | ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳ ಮೂಲಕ ವಸೂಲಾತಿ ಮಾಡಲಾದ ರಾಜಧನ | ಸಂಗ್ರಹಿಸಲಾದ ಒಟ್ಟಾರೆ ರಾಜಧನ (2+3) | ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳ ಮೂಲಕ ಶೇಕಡಾವಾರು ವರಮಾನ ಹಾಗೂ ಅದಕ್ಕೆ ಅನುಗುಣವಾಗಿ ಅಪ್ರಧಾನ ಖನಿಜಗಳ ಮೇಲಿನ ಒಟ್ಟಾರೆ ವರಮಾನ |
|---|---|---|---|---|
| 1 | 2 | 3 | 4 | 5 |
| 2012-2013 | 133.66 | 449.41 | 583.07 | 77.08 |
| 2013-2014 | 149.84 | 433.14 | 582.98 | 74.30 |
| 2014-2015 | 204.37 | 632.32 | 836.69 | 75.57 |
| 2015-2016 | 235.01 | 708.21 | 943.22 | 75.08 |
| 2016-2017 [9] | 226.24 | 843.74 | 1,069.98 | 78.86 |

ಅಪ್ರಧಾನ ಖನಿಜಗಳ ಮೇಲೆ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳ ಮೂಲಕ ಸಂಗ್ರಹಿಸಲಾದ ರಾಜಧನವು ರಾಜಧನದಿಂದ ಬಂದಿದ್ದಂತಹ ಒಟ್ಟಾರೆ ವರಮಾನದ ಶೇಕಡಾ 74ರಿಂದ 79ರಷ್ಟಿದ್ದಿತು ಎಂಬುದನ್ನು ಮೇಲಿನ ಕೋಷ್ಟಕವು ತೋರಿಸುತ್ತದೆ.

ಕರ್ನಾಟಕ ಅಪ್ರಧಾನ ಖನಿಜಗಳ ರಿಯಾಯಿತಿ ನಿಯಮಗಳ ನಿಯಮ 42ರ ಜೊತೆಯಲ್ಲಿ ಓದಲ್ಪಡುವ ನಿಯಮ 36ರ ಅನುಸಾರ, ಅಪ್ರಧಾನ ಖನಿಜಗಳ ಮೇಲಿನ ರಾಜಧನವನ್ನು ಖನಿಜವನ್ನು ಹೊರತೆಗೆಯುವ/ಬಳಸುವ ಮೊದಲು ಪಾವತಿಸತಕ್ಕದ್ದು ಹಾಗೂ ಖನಿಜ ರವಾನೆ ಪರವಾನಿಗೆಯ (ಎಂಡಿಪಿ) ಅಡಿಯಲ್ಲಿ ಅಥವಾ ಅದರ ಅನುಸಾರವಲ್ಲದೇ ಯಾವುದೇ ಅಪ್ರಧಾನ ಖನಿಜವನ್ನೂ ಸಾಗಣೆ ಮಾಡಲು ಯಾವುದೇ ವ್ಯಕ್ತಿಯೂ ಕಾರಣವಾಗಕೂಡದು. ಅಗೆಯಲಾಗಿರುವ ಹೊಂಡದ ಅಳತೆಯ ಆಧಾರದ ಮೇರೆಗೆ ರಾಜಧನವನ್ನು ಮೂಲದಲ್ಲಿಯೇ ಕಡಿದುಕೊಳ್ಳಲಾಗಿದೆ ಹಾಗೂ ಸಾಗಾಣಿಕೆ ಮಾಡಲಾಗಿರುವ ಅಪ್ರಧಾನ ಖನಿಜಗಳಿಗೆ ರಾಜಧನವನ್ನು ಪಾವತಿಸಿದನಂತರವಷ್ಟೇ ಅಪ್ರಧಾನ ಖನಿಜಗಳ ರವಾನೆ ಪರವಾನಿಗೆಯನ್ನು ನೀಡಲಾಗಿದೆ ಎಂಬುದಾಗಿ ಪರಿಗಣಿಸಿದಂತೆ, ಇರುವಂತಹ ಕಾನೂನು/ನಿಯಮಗಳ ವ್ಯವಸ್ಥೆಯ ಪ್ರತಿಯಾಗಿ ಅಪ್ರಧಾನ ಖನಿಜಗಳ ಒಂದು ಗಮನಾರ್ಹ ಭಾಗವು ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳಿಗೆಅಪ್ರಧಾನ ಖನಿಜಗಳ ರವಾನೆ ಪರವಾನಿಗೆಯ ಹೊರತಾಗಿ ಸಾಗಣೆ ಮಾಡಲಾಗಿರುತ್ತದೆ. ಅಂಕಿಅಂಶಗಳ ಪ್ರಕಾರ ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯ ಅಡಿಯಲ್ಲಿನ ಕಾನೂನಾತ್ಮಕ ಗಣಿಗಳಿಂದ ಹೊರತೆಗೆಯಲಾದ ಅಪ್ರಧಾನ ಖನಿಜಗಳ ಪರಿಮಾಣವು ರಾಜ್ಯದಲ್ಲಿನ ಅಪ್ರಧಾನ ಖನಿಜಗಳ ಒಟ್ಟಾರೆ ಬಳಕೆಗಿಂತ ಬಹಳಷ್ಟು ಪ್ರಮಾಣದಲ್ಲಿ ಕಡಿಮೆಯಿದ್ದಿತು. ಇದು ರಾಜ್ಯದಲ್ಲಿ ಅಪ್ರಧಾನ ಖನಿಜಗಳ ನಿಯಮಬಾಹಿರ ಗಣಿಗಾರಿಕೆಯ ಭಾರೀ ಸಂಭಾವ್ಯತೆಯನ್ನು ಸೂಚಿಸುತ್ತದೆ, ಇದರ ಬಗ್ಗೆ ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯು ತನಿಖೆ ನಡೆಸುವ ಅಗತ್ಯತೆಯಿರುತ್ತದೆ. ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳಲ್ಲಿನ ಬಳಕೆಯು ಸರ್ಕಾರಿ ಇಲಾಖೆಗಳು/ಸಂಸ್ಥೆಗಳು ಕೈಗೆತ್ತಿಕೊಳ್ಳುವ ಕಾಮಗಾರಿಗಳಿಗಾಗಿ ಆಗಿರುತ್ತದೆ ಹಾಗೂ ಖಾಸಗಿ ಬಳಕೆಯನ್ನು ಒಟ್ಟಾರೆಯಾಗಿ ಲೆಕ್ಕಕ್ಕೆ ತೆಗೆದುಕೊಂಡಿರುವುದಿಲ್ಲ ಹಾಗೂ ಅದು

[9] ಅದನ್ನು ವ್ಯವಸ್ಥಾಪನಾ ಮಾಹಿತಿ ವ್ಯವಸ್ಥೆಯಿಂದ (ಎಂಐಎಸ್) ಪಡೆದುಕೊಳ್ಳಲಾಯಿತಾದ್ದರಿಂದ ಹಾಗೂ ಎಲ್ಲಾ ಕ್ಷೇತ್ರ ಕಚೇರಿಗಳ ಪಾವತಿಗಾಗಿ ತಗಾದೆ, ವಾಸೂಲಾತಿ ಮತ್ತು ಬಾಕಿ ತ:ಖ್ತೆಗಳನ್ನು ಇನ್ನೂ ಅಂತಿಮ ರೂಪಕ್ಕೆ ತರಬೇಕಾಗಿರುವುದರಿಂದ ಅದು ತಾತ್ಕಾಲಿಕ ಅಂಕಿಸಂಖ್ಯೆಯಾಗಿರುತ್ತದೆ.

**ಕೋಷ್ಟಕ 5.2** ರಲ್ಲಿ ತಿಳಿಸಲಾಗಿರುವ ಅಂಕಿಅಂಶಗಳಿಗಿಂತಲೂ ಅಧಿಕ ಪ್ರಮಾಣದಲ್ಲಿ ನಿಯಮಬಾಹಿರ ಗಣಿಗಾರಿಕೆಯು ಸವಿಸ್ತಾರವಾಗಿ ಹರಡಿಕೊಂಡಿರುವುದು ಎಂಬುದನ್ನು ಗಮನಕ್ಕೆ ತೆಗೆದುಕೊಳ್ಳಬೇಕು.

ಅಲ್ಲದೆಯೇ, ರಾಜಧನದ ಪ್ರಮುಖ ಭಾಗವು ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳ ಮೂಲಕ ವಸೂಲಾತಿಯಾಗುತ್ತಿರುವುದು ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯ ಅರಿವಿನಲ್ಲಿದ್ದರೂ ಸಹ, ಗಣಿಗಳ ಗುತ್ತಿಗೆದಾರರು/ಪರವಾನಿಗೆದಾರರುಗಳಿಂದ ಬೃಹತ್ ಮೊತ್ತದಷ್ಟು ರಾಜಧನವು ಮೂಲದಲ್ಲಿಯೇ ವಸೂಲಾತಿಯಾಗದಿರಲು ಕಾರಣಗಳನ್ನು ತಿಳಿದುಕೊಳ್ಳಲು ಯಾವುದೇ ಕ್ರಮವನ್ನೂ ತೆಗೆದುಕೊಂಡಿರುವುದಿಲ್ಲ.

ಲೆಕ್ಕಪರಿಶೋಧನೆಯು ಇದನ್ನು ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶಕರ ಗಮನಕ್ಕೆ ತಂದಿತು (ನವಂಬರ್ 2017).

ಬೃಹತ್ ಮೊತ್ತದಷ್ಟು ರಾಜಧನವು ಮೂಲದಲ್ಲಿಯೇ ವಸೂಲಾತಿಯಾಗದಿರಲು ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯು ಕಾರಣಗಳನ್ನು ತಿಳಿದುಕೊಳ್ಳಲು ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬುದಾಗಿ ಈ ಮೂಲಕ ಶಿಫಾರಸು ಮಾಡಲಾಗುತ್ತಿದೆ.

## 5.4.3 ರಾಜಧನವನ್ನು ಮೂಲದಲ್ಲಿಯೇ ಕಡಿದುಕೊಳ್ಳದಿದ್ದುದು

ಕರ್ನಾಟಕ ಅಪ್ರಧಾನ ಖನಿಜಗಳ ರಿಯಾಯಿತಿ ನಿಯಮಗಳ ನಿಯಮ 42ರ ಜೊತೆಯಲ್ಲಿ ಓದಲ್ಪಡುವ ನಿಯಮ 36ರ ಅನುಸಾರ, ಅಪ್ರಧಾನ ಖನಿಜಗಳ ಮೇಲಿನ ರಾಜಧನವನ್ನು ಖನಿಜವನ್ನು ಹೊರತೆಗೆಯುವ/ ಬಳಸುವ ಮೊದಲು ಪಾವತಿಸತಕ್ಕದ್ದು ಹಾಗೂ ಖನಿಜ ರವಾನೆ ಪರವಾನಿಗೆಯ (ಎಂಡಿಪಿ) ಅಡಿಯಲ್ಲಿ ಅಥವಾ ಅದರ ಅನುಸಾರವಲ್ಲದೇ ಯಾವುದೇ ಅಪ್ರಧಾನ ಖನಿಜವನ್ನೂ ಸಾಗಣೆ ಮಾಡಲು ಯಾವುದೇ ವ್ಯಕ್ತಿಯೂ ಕಾರಣವಾಗಕೂಡದು. ಮುಂದುವರೆದು, ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆಯು ನೀಡಿರುವ (ಡಿಸೆಂಬರ್ 2007) ಸುತ್ತೋಲೆ ನಿರ್ದೇಶನಗಳ ಅನುಸಾರ, *"ಗಣಿ ಗುತ್ತಿಗೆ ಹೊಂದಿರುವವರು ಅಥವಾ ಖಾಸಗಿ ಗಣಿ ಮಾಲೀಕರಂತಹ ಖಾಸಗಿ ಮೂಲಗಳಿಂದ ಅಪ್ರಧಾನ ಖನಿಜಗಳನ್ನು ಖರೀದಿಸಿದ್ದಲ್ಲಿ, ಈ ನಿಟ್ಟಿನಲ್ಲಿ ದಾಖಲೆಗಳು/ಖನಿಜ ರವಾನೆ ಪರವಾನಿಗೆಗಳನ್ನು ಒದಗಿಸಿದಲ್ಲಿ, ಗುತ್ತಿಗೆದಾರರು ರಾಜಧನ ಶುಲ್ಕಗಳನ್ನು ಪಾವತಿಸಲು ಬಾಧ್ಯರಾಗಿರುವುದಿಲ್ಲ."* ಆದ್ದರಿಂದ, ಗುತ್ತಿಗೆದಾರರು ತಾವು ಬಳಸಿದ ಅಪ್ರಧಾನ ಖನಿಜಗಳು ಮತ್ತು ನಿರ್ಮಾಣ ಸಾಮಗ್ರಿಗಳನ್ನು ಗಣಿ ಗುತ್ತಿಗೆ ಹೊಂದಿರುವವರು ಅಥವಾ ಖಾಸಗಿ ಗಣಿ ಗುತ್ತಿಗೆ ಮಾಲೀಕರುಗಳಿಂದ ಖರೀದಿಸಲ್ಪಟ್ಟವುಗಳು ಎಂಬುದನ್ನು ಸಾಬೀತುಪಡಿಸುವ ಸಲುವಾಗಿ ದಾಖಲೆಗಳನ್ನು ಒದಗಿಸುವ ಅಗತ್ಯತೆಯಿರುತ್ತದೆ.

ಅಲ್ಲದೆಯೇ, ಸುತ್ತೋಲೆಯ (ಮಾರ್ಚ್ 2013) ಅನುಸಾರ, ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯು ಖನಿಜ ರವಾನೆ ಪರವಾನಿಗೆಗಳನ್ನು ಒದಗಿಸದಿದ್ದಲ್ಲಿ, ಗುತ್ತಿಗೆದಾರರ ಬಿಲ್ಲುಗಳಿಂದ ರಾಜಧನದ ಐದು ಪಟ್ಟು ಮೊತ್ತದಷ್ಟು ದಂಡವನ್ನು ಕಡಿದುಕೊಳ್ಳುವುದನ್ನು ಅನುಕೂಲ ಕಲ್ಪಿಸುವ ರೀತಿಯಲ್ಲಿ ಗುತ್ತಿಗೆಯಲ್ಲಿ ಷರತ್ತನ್ನು ಸೇರಿಸುವಂತೆ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳಿಗೆ ನಿರ್ದೇಶಿಸಿದ್ದಿತು. ಅಂತಹ ಕಾಮಗಾರಿಗಳಿಗೆ ಅಗತ್ಯತೆಯಿರುವ ಕಾಮಗಾರಿಗಳ ಅಂದಾಜು ಪ್ರಮಾಣದ ವಿವರಗಳ ಜೊತೆಯಲ್ಲಿ ವಿವಿಧ ಕಾಮಗಾರಿಗಳನ್ನು ವಹಿಸಲ್ಪಟ್ಟಿರುವ ಗುತ್ತಿಗೆದಾರರುಗಳ ವಿವರಗಳನ್ನು ಒದಗಿಸುವಂತೆಯೂ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳಿಗೆ ನಿರ್ದೇಶಿಸಲಾಗಿದ್ದಿತು.

ಆದ್ದರಿಂದ, ಪ್ರಸಕ್ತ ಚಾಲ್ತಿಯಲ್ಲಿದ್ದಂತಹ ನಿಯಮಗಳು ಮತ್ತು ನಿರ್ದೇಶನಗಳ ಅನುಸಾರ, ಖನಿಜ ರವಾನೆ ಪರವಾನಿಗೆಗಳನ್ನು ಒದಗಿಸದಿರುವೆಡೆಗಳಲ್ಲಿ, ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆ/ಸಂಸ್ಥೆಗಳು ರಾಜಧನ ಮತ್ತು ದಂಡವನ್ನು ಮೂಲದಲ್ಲಿಯೇ ಕಡಿದುಕೊಳ್ಳಬೇಕಿದ್ದಿತು. ಇದು, ಖನಿಜ ರವಾನೆ ಪರವಾನಿಗೆಯನ್ನು ಪಡೆಯದಿರುವಂತಹ ಹಾಗೂ ರಾಜಧನವನ್ನು ವಸೂಲಾತಿ ಮಾಡದಿರುವಂತಹ ಅಪ್ರಧಾನ ಖನಿಜಗಳಿಗೆ ಸಂಬಂಧಿಸಿದಂತೆ ರಾಜಧನದ ವಸೂಲಾತಿಯನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಆಗಿದ್ದಿತು. ಮುಂದುವರೆದು, ಖನಿಜ ರವಾನೆ ಪರವಾನಿಗೆಗಳನ್ನು ಒದಗಿಸದಿದ್ದುದು, ಕಾನೂನುಬಾಹಿರ ಗಣಿಗಾರಿಕೆಗಳು ಇರುವಂತಹ ಸಂಭಾವ್ಯತೆಗಳನ್ನು ಹಾಗೂ ಅಂತಹ ಸಂಭಾವ್ಯತೆಗಳನ್ನು ತಡೆಯುವುದಕ್ಕಾಗಿ ರಾಜಧನದ ಐದು ಪಟ್ಟು ದರದಲ್ಲಿ ದಂಡವನ್ನು ವಿಧಿಸುವಂತೆ ನಿರ್ದೇಶಿಸಲಾಗಿದ್ದಿತು ಎಂಬುದನ್ನು ಸೂಚಿಸುತ್ತಿದ್ದಿತು.

ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳ ಮೂಲಕ ರಾಜಧನ ವಸೂಲಾತಿಯಲ್ಲಿ ಲೆಕ್ಕಪರಿಶೋಧನೆಯು ಗಮನಿಸಿದ ಲೋಪದೋಷಗಳು/ನ್ಯೂನತೆಗಳನ್ನು ಈ ಕೆಳಗೆ ತಿಳಿಸಲಾಗಿದೆ:

### 5.4.3.1 ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳು ಗುತ್ತಿಗೆದಾರರುಗಳ ಬಿಲ್ಲುಗಳಿಂದ ಅಪ್ರಧಾನ ಖನಿಜಗಳ ಮೇಲೆ ರಾಜಧನವನ್ನು ಮೂಲದಲ್ಲಿಯೇ ಕಡಿದುಕೊಳ್ಳದಿದ್ದುದು

- ಹತ್ತು ಜಿಲ್ಲೆಗಳಲ್ಲಿ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳ ದಾಖಲೆಗಳನ್ನು ಪರೀಕ್ಷಾ–ಪರಿಶೀಲನೆ ಮಾಡಲಾಗಿ, ಏಳು ಜಿಲ್ಲೆಗಳ [10] ನಿರ್ಮಿತಿ ಕೇಂದ್ರಗಳು ರಾಜಧನವನ್ನು ಮೂಲದಲ್ಲಿಯೇ ಕಡಿದುಕೊಳ್ಳುತ್ತಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಅಲ್ಲದೆಯೇ, ಏಳು ನಿರ್ಮಿತಿ ಕೇಂದ್ರಗಳ ಪೈಕಿ ನಾಲ್ಕು ನಿರ್ಮಿತಿ ಕೇಂದ್ರಗಳು ತಮ್ಮ ವರದಿಗಳಲ್ಲಿ ಅಪ್ರಧಾನ ಖನಿಜಗಳ ಯಾವುದೇ ಲೆಕ್ಕಪತ್ರಗಳನ್ನೂ ನಿರ್ವಹಿಸಿರಲಿಲ್ಲ ಎಂಬುದನ್ನೂ ಸಹ ಗಮನಿಸಲಾಯಿತು;
- ಅದೇ ರೀತಿಯಲ್ಲಿ, 10 ಜಿಲ್ಲೆಗಳಲ್ಲಿ ಮೆ. ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತದ ದಾಖಲೆಗಳನ್ನು ಪರೀಕ್ಷಾ–ಪರಿಶೀಲನೆ ಮಾಡಲಾಗಿ, ರಾಜಧನದ ಯಾವುದೇ ಮೊತ್ತವನ್ನೂ ಮೂಲದಲ್ಲಿಯೇ ಕಡಿದುಕೊಂಡಿರಲಿಲ್ಲ ಎಂಬುದನ್ನು ಗಮನಿಸಲಾಯಿತು. ಆದಾಗ್ಯೂ, 10 ಜಿಲ್ಲೆಗಳ ಪೈಕಿ ಆರರಲ್ಲಿ[11] ತಾವು ಉಪಯೋಗಿಸಿದ ಅಪ್ರಧಾನ ಖನಿಜಗಳ ಯಾವುದೇ ಲೆಕ್ಕಪತ್ರಗಳನ್ನೂ ನಿರ್ವಹಿಸಿರಲಿಲ್ಲ; ಹಾಗೂ
- ಅಲ್ಲದೆಯೇ, ಐದು ಜಿಲ್ಲೆಗಳಲ್ಲಿನ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇತರೆ ಏಳು [12] ಇಲಾಖೆಗಳು/ಸಂಸ್ಥೆಗಳಲ್ಲಿ ರಾಜಧನವನ್ನು ಮೂಲದಲ್ಲಿಯೇ ಕಡಿದುಕೊಂಡಿರದಿದ್ದುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ತತ್ಪರಿಣಾಮವಾಗಿ, ಮೇಲೆ ತಿಳಿಸಲಾದ ಪ್ರಕರಣಗಳಲ್ಲಿ ರಾಜಧನವನ್ನು ಕಡಿದುಕೊಳ್ಳದಿದ್ದುದು ₹ 3.66 ಕೋಟಿ ಮೊತ್ತದಷ್ಟು ಆಗಿದ್ದಿತು. ವಿವರಗಳನ್ನು ಈ ಕೆಳಗಿನ **ಕೋಷ್ಟಕ 5.3**ರಲ್ಲಿ ನೀಡಲಾಗಿದೆ:

**ಕೋಷ್ಟಕ 5.3**
**ರಾಜಧನವನ್ನು ವಿಧಿಸದಿದ್ದುದರ ವಿವರಗಳು**

**(₹ ಲಕ್ಷದಲ್ಲಿ)**

| ಅಪ್ರಧಾನ ಖನಿಜಗಳ ಹೆಸರು | ಬಳಸಿಕೊಳ್ಳಲಾಗಿದ್ದ ಪರಿಮಾಣ ಘನ ಮೀಟರುಗಳಲ್ಲಿ | ರಾಜಧನದ ದರ ಘನ ಮೀಟರು ಒಂದಕ್ಕೆ | ರಾಜಧನವನ್ನು ವಿಧಿಸದಿದ್ದುದು |
|---|---|---|---|
| 2012-13ರಿಂದ ಫೆಬ್ರವರಿ 2014 | | | |
| ಕಟ್ಟಡದ ಕಲ್ಲು (ಸೈಜು ಕಲ್ಲು) | 6,752.11 | 79 | 5.33 |
| ಕಟ್ಟಡದ ಕಲ್ಲು (ಜೆಲ್ಲಿ, ಗಾರೆಗೆ ಉಪಯೋಗಿಸುವ (ಅಗ್ರಿಗೇಟ್ಸ್), ಲೋಹ, ಇತ್ಯಾದಿ | 60,223.67 | 54 | 32.52 |
| ಸಾಮಾನ್ಯ ಮರಳು | 33,683.88 | 52 | 17.52 |
| ಮುರ್ರಂ | 76,679.92 | 15 | 11.50 |
| ಮಾರ್ಚ್ 2014ರಿಂದ ಮಾರ್ಚ್ 2017 | | | |
| ಕಟ್ಟಡದ ಕಲ್ಲು (ಸೈಜು ಕಲ್ಲು) | 23,555.82 | 158 | 37.2 |
| ಕಟ್ಟಡದ ಕಲ್ಲು (ಜೆಲ್ಲಿ, ಗಾರೆಗೆ ಉಪಯೋಗಿಸುವ (ಅಗ್ರಿಗೇಟ್ಸ್) ಲೋಹಗಳು, ಇತ್ಯಾದಿ) | 1,56,649.63 | 108 | 169.18 |
| ಸಾಮಾನ್ಯ ಮರಳು | 59,968.05 | 104 | 61.77 |
| ಮುರ್ರಂ | 1,01,607.68 | 30 | 30.48 |
| **ಒಟ್ಟು** | | | **365.50** |

ಮೇಲಿನ ಕೋಷ್ಟಕದಲ್ಲಿ ತೋರಿಸಲಾಗಿರುವ ಹಣಕಾಸಿನ ಮೌಲ್ಯವು ಅಪ್ರಧಾನ ಖನಿಜಗಳ ಬಳಕೆಯ ಲೆಕ್ಕಗಳನ್ನು ಸೂಚಿಸುತ್ತವೆಯಾದರೂ ಮೇಲೆ ತಿಳಿಸಿರುವಂತೆ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಅನೇಕ ಇಲಾಖೆಗಳು/ಸಂಸ್ಥೆಗಳಲ್ಲಿ ಇವುಗಳ ವಿವರಗಳು ಲಭ್ಯವಿರಲಿಲ್ಲ ಮತ್ತು ಆದ್ದರಿಂದ, ರಾಜಧನವನ್ನು ವಿಧಿಸದಿರುವ ವಾಸ್ತವಿಕ ಅಂಕಿಸಂಖ್ಯೆಗಳು **ಕೋಷ್ಟಕ 5.3**ರಲ್ಲಿ ಸೇರಿಸಲಾಗಿರುವ ಅಂಕಿಸಂಖ್ಯೆಗಳಿಗಿಂತ ಅನೇಕ ಪಟ್ಟು ಆಗಿರಬಹುದು.

ಅಲ್ಲದೆಯೇ, ಗುತ್ತಿಗೆದಾರರುಗಳು ಖನಿಜ ರವಾನೆ ಪರವಾನಿಗೆಗಳನ್ನು ಸಲ್ಲಿಸದಿದ್ದರಿಂದ ಈ ಎಲ್ಲಾ ಪ್ರಕರಣಗಳಲ್ಲಿಯೂ ರಾಜಧನದ ಐದು ಪಟ್ಟು ದಂಡವನ್ನು ವಿಧಿಸಬೇಕಿದ್ದಿತು. ಆದಾಗ್ಯೂ, ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳು ಇದನ್ನು ಕಾರ್ಯಗತಗೊಳಿಸಲಿಲ್ಲ ಅಥವಾ ಗಣಿ ಮತ್ತು

---

10 ಬಾಗಲಕೋಟೆ, ಧಾರವಾಡ, ಕಲಬುರಗಿ, ಕೊಪ್ಪಳ, ಮೈಸೂರು, ಶಿವಮೊಗ್ಗ ಮತ್ತು ತುಮಕೂರು.

11 ಚಿತ್ರದುರ್ಗ, ಧಾರವಾಡ, ಕೊಪ್ಪಳ, ಮೈಸೂರು, ತುಮಕೂರು ಮತ್ತು ಉಡುಪಿ.

12 ಕೇಂದ್ರ ಲೋಕೋಪಯೋಗಿ ಕಾಮಗಾರಿಗಳ ಇಲಾಖೆ – ಬೆಂಗಳೂರು, ಬಸ್ಸು ರಾಪಿಡ್ ಟ್ರನ್ಸಿಟ್ ಸಿಸ್ಟಂ – ಧಾರವಾಡ, ಪಂಚಾಯತಿ ರಾಜ್ ಮತ್ತು ಗ್ರಾಮೀಣ ಅಭಿವೃದ್ಧಿ (ಧಾರವಾಡ ಮತ್ತು ಕಲಬುರಗಿ), ಲೋಕೋಪಯೋಗಿ ಕಾಮಗಾರಿಗಳ ಇಲಾಖೆ (ಕಲಬುರಗಿ, ಕೊಪ್ಪಳ ಮತ್ತು ಉಡುಪಿ).

ಭೂವಿಜ್ಞಾನ ಇಲಾಖೆಯು ಈ ಪ್ರಕರಣಗಳನ್ನು ವಸೂಲಾತಿಗಾಗಿ ಅನುಸರಿಸಲಿಲ್ಲವಾದ್ದರಿಂದ ಅಪ್ರಧಾನ ಖನಿಜಗಳನ್ನು ಕಾನೂನುಬಾಹಿರವಾಗಿ ಸಾಗಾಣಿಕೆ ಮಾಡುವಲ್ಲಿ ಪರಿಣಮಿಸಿತು.

### 5.4.3.2 ಮುರ್ರಂನ ಆಂತರಿಕ (ಕ್ಯಾಪ್ಟೀವ್) ಬಳಕೆಯ ಮೇಲೆ ರಾಜಧನ ಕಡಿದುಕೊಳ್ಳದಿದ್ದುದು

ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯು ನೀಡಿರುವ (ಫೆಬ್ರವರಿ 2015) ಸುತ್ತೋಲೆ [13] ನಿರ್ದೇಶನಗಳ ಅನುಸಾರ, *ಒರಿಸ್ಸಾ ರಾಜ್ಯ vs ಭಾರತ ಸರ್ಕಾರ* (ಎಐಆರ್ 2001 ಎಸ್‌ಸಿ 410(2001) 1 ಎಸ್‌ಸಿಸಿ 429 ದಿನಾಂಕ 24 ನವಂಬರ್ 2000), ಈ ಪ್ರಕರಣದಲ್ಲಿ ಭಾರತದ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪನ್ನು ಆಧರಿಸಿದಂತೆ ಕಾಮಗಾರಿಯ ಸ್ಥಳದಲ್ಲಿ ಲಭ್ಯವಿರುವ/ನಿವೇಶನದಿಂದ ಪಡೆಯಲಾದ ಹಾಗೂ ಗುತ್ತಿಗೆದಾರರುಗಳು ಕಾರ್ಯಗತಗೊಳಿಸಲಾದ ಕಾಮಗಾರಿಗಳಲ್ಲಿ ಆಂತರಿಕವಾಗಿ ಬಳಸಿಕೊಳ್ಳಲಾದ ಅಪ್ರಧಾನ ಖನಿಜಗಳ ಮೇಲೆ ರಾಜಧನವನ್ನು ಪಾವತಿಸತಕ್ಕದ್ದು.

ಈ ನಿರ್ದೇಶನಗಳನ್ನು ಇಲಾಖೆಯಲ್ಲಿ ಆಂತರಿಕವಾಗಿ ಸುತ್ತೋಲೆ ಹೊರಡಿಸಲಾಯಿತೇ ಹೊರತು ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳಿಗೆ ನೀಡಿರಲಿಲ್ಲ ಹಾಗೂ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳು ಗುತ್ತಿಗೆದಾರರುಗಳು ಕಾಮಗಾರಿಗಳಲ್ಲಿ ಆಂತರಿಕವಾಗಿ ಬಳಸಿದ ಅಪ್ರಧಾನ ಖನಿಜಗಳ ಮೇಲೆ ರಾಜಧನವನ್ನು ಮೂಲದಲ್ಲಿಯೇ ಕಡಿದುಕೊಂಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಕಾಮಗಾರಿಗಳನ್ನು ಕಾರ್ಯಗತಗೊಳಿಸುವ 87 ಇಲಾಖೆಗಳು/ಸಂಸ್ಥೆಗಳ ದಾಖಲೆಗಳನ್ನು ಪರೀಕ್ಷಾ–ಪರಿಶೀಲನೆ ಮಾಡುವ ವೇಳೆಯಲ್ಲಿ, 10 ಜಿಲ್ಲೆಗಳಲ್ಲಿ [14], ಕಾಮಗಾರಿಗಳನ್ನು ಕಾರ್ಯಗತಗೊಳಿಸುವ 19 ಇಲಾಖೆಗಳು/ ಸಂಸ್ಥೆಗಳಿಗಾಗಿ [15] ಕಾಮಗಾರಿಗಳನ್ನು ಕಾರ್ಯಗತಗೊಳಿಸಿದ ಗುತ್ತಿಗೆದಾರರುಗಳು ಮಣ್ಣು/ಮುರ್ರಂ ಮುಂತಾದ ತಮ್ಮ ಕಾಮಗಾರಿ ನಿವೇಶನಗಳಲ್ಲಿ ಲಭ್ಯವಿದ್ದ ಅಪ್ರಧಾನ ಖನಿಜಗಳನ್ನು ತಾವು ಕಾರ್ಯಗತಗೊಳಿಸುತ್ತಿದ್ದ ಕಾಮಗಾರಿಗಳಲ್ಲಿ ಬಳಸಿಕೊಂಡಿದ್ದರು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಆದಾಗ್ಯೂ, ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಈ ಇಲಾಖೆಗಳು/ಸಂಸ್ಥೆಗಳು ಕಾಮಗಾರಿ ಸ್ಥಳದಲ್ಲಿ ಲಭ್ಯವಿದ್ದ ಹಾಗೂ ಕಾಮಗಾರಿಗಳಲ್ಲಿ ಬಳಸಿಕೊಳ್ಳಲಾದ ಅಪ್ರಧಾನ ಖನಿಜಗಳ ಮೇಲೆ ರಾಜಧನವನ್ನು ಮೂಲದಲ್ಲಿಯೇ ಕಡಿದುಕೊಂಡಿರಲಿಲ್ಲ. ಇದರಿಂದಾಗಿ ₹ 39.56 ಕೋಟಿ [16] ಮೊತ್ತದಷ್ಟು ರಾಜಧನವನ್ನು ಮೂಲದಲ್ಲಿಯೇ ಕಡಿದುಕೊಳ್ಳದಿರುವಲ್ಲಿ ಪರಿಣಮಿಸಿತು.

ಮುಂದುವರೆದು, ಏಳು ಜಿಲ್ಲೆಗಳಲ್ಲಿ [17] ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ವೇಳೆಯಲ್ಲಿ 40.06 ಲಕ್ಷ ಘನ ಮೀಟರುಗಳಷ್ಟು ಮುರ್ರಂ ಅನ್ನು ಹೊರತೆಗೆಯಲಾಗಿದ್ದಿತು ಎಂಬುದನ್ನು ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಒಂಬತ್ತು ಇಲಾಖೆಗಳು/ಸಂಸ್ಥೆಗಳ [18] (ಕಾಮಗಾರಿಗಳನ್ನು ಕಾರ್ಯಗತಗೊಳಿಸುವ 87 ಇಲಾಖೆಗಳು/ ಸಂಸ್ಥೆಗಳ ಪೈಕಿ) ಚಾಲ್ತಿ ಲೆಕ್ಕ ಬಿಲ್ಲುಗಳಿಂದ ಲೆಕ್ಕಪರಿಶೋಧನೆಯು ಗಮನಿಸಿತು. ಆದಾಗ್ಯೂ, ಆ

---

[13] ಸುತ್ತೋಲೆ ಸಂಖ್ಯೆ ಗಭೂಇ/ಡಿಸಿಬಿ/ಕಾಮಗಾರಿಗಳು–01/2014–15 ದಿನಾಂಕ 27 ಫೆಬ್ರವರಿ 2015.

[14] ಬಾಗಲಕೋಟೆ, ಬೆಂಗಳೂರು, ಚಿತ್ರದುರ್ಗ, ಧಾರವಾಡ, ಕಲಬುರಗಿ, ಕೊಪ್ಪಳ, ಮೈಸೂರು, ಶಿವಮೊಗ್ಗ, ತುಮಕೂರು ಹಾಗೂ ಉಡುಪಿ.

[15] ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ, ಮೆ. ಕಾವೇರಿ ನೀರಾವರಿ ನಿಗಮ ನಿಯಮಿತ, ಉಪ–ಆಯುಕ್ತರುಗಳು, ಜಿಲ್ಲಾ ನಗರ ಅಭಿವೃದ್ಧಿ ಕೋಶ (ಡಿಯುಡಿಎ) – ಬಾಗಲಕೋಟೆ ಮತ್ತು ಮೈಸೂರು, ನಗರ ಭೂ ಅಭಿವೃದ್ಧಿ ನಿರ್ದೇಶನಾಲಯ (ಬಸ್ ರಾಪಿಡ್ ಟ್ರಾನ್ಸಿಟ್ ಸಿಸ್ಟಂ), ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಮತ್ತು ಸುಧಾರಣಾ ಯೋಜನೆ, ಮೆ. ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಮೆ. ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ, ಮೆ. ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ಸಂಸ್ಥೆ, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಕರ್ನಾಟಕ ರಾಜ್ಯ ಹೆದ್ದಾರಿ ಉನ್ನತೀಕರಣ ಯೋಜನೆ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಸಣ್ಣ ನೀರಾವರಿಗಳು, ಕಲಬುರಗಿ, ಮಹಾನಗರ ಪಾಲಿಕೆ (ಕಲಬುರಗಿ, ಮೈಸೂರು ಮತ್ತು ಉಡುಪಿ) ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ – (ಬೆಂಗಳೂರು, ಚಿತ್ರದುರ್ಗ ಮತ್ತು ಕಲಬುರಗಿ), ಪಂಚಾಯತಿ ರಾಜ್ ತಾಂತ್ರಿಕ ವಿಭಾಗ, ಲೋಕೋಪಯೋಗಿ ಕಾಮಗಾರಿಗಳ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿ ರಾಜ್, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಬಾಗಲಕೋಟೆ, ಜಲ ಸಂಪನ್ಮೂಲಗಳ ಇಲಾಖೆ – ಹೇಮಾವತಿ ಯೋಜನೆ.

[16] 8.16 ಘನ ಮೀಟರುಗಳ ಪರಿಮಾಣ ಏಪ್ರಿಲ್ 2012ರಿಂದ ಫೆಬ್ರವರಿ 2014ರವರೆಗೆ ಘನ ಮೀಟರು ಒಂದಕ್ಕೆ ₹ 15ರ ದರದಲ್ಲಿ ಹಾಗೂ 127.77 ಲಕ್ಷ ಘನ ಮೀಟರುಗಳ ಪರಿಮಾಣ, ಮಾರ್ಚ್ 2014ರಿಂದ ಮಾರ್ಚ್ 2017ರವರೆಗೆ ಘನ ಮೀಟರು ಒಂದಕ್ಕೆ ₹ 30ರ ದರದಲ್ಲಿ.

[17] ಬೆಂಗಳೂರು, ಚಿತ್ರದುರ್ಗ, ಧಾರವಾಡ, ಕೊಪ್ಪಳ, ಮೈಸೂರು, ಶಿವಮೊಗ್ಗ ಮತ್ತು ಉಡುಪಿ.

[18] ಮೆ. ಕಾವೇರಿ ನೀರಾವರಿ ನಿಗಮ ನಿಯಮಿತ, ಉಪ–ಆಯುಕ್ತರು, ಮೈಸೂರು (ಜಿಲ್ಲಾ ನಗರ ಅಭಿವೃದ್ಧಿ ಕೋಶ), ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಮತ್ತು ಸುಧಾರಣಾ ಯೋಜನೆ, ಮೆ. ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಕರ್ನಾಟಕ ರಾಜ್ಯ ಹೆದ್ದಾರಿ ಉನ್ನತೀಕರಣ ಯೋಜನೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಲೋಕೋಪಯೋಗಿ ಕಾಮಗಾರಿಗಳ ಇಲಾಖೆ–ಮೈಸೂರು ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿ ರಾಜ್.

ರೀತಿ ಹೊರತೆಗೆಯಲಾದ ಮುರ್‍ರಂ ಅನ್ನು ಕಾರ್ಯಗತಗೊಳಿಸಲಾದ ಇತರೆ ಕಾಮಗಾರಿಗಳಲ್ಲಿ ಬಳಸಿಕೊಳ್ಳಲಾಯಿತೆ ಅಥವಾ ಬೇರೆ ಯಾವುದಾದರೂ ರೀತಿಯಲ್ಲಿ ವಿಲೇವಾರಿ ಮಾಡಲಾಯಿತೆ ಎಂಬುದು ದಾಖಲೆಗಳಿಂದ ಕಂಡುಬರುತ್ತಿರಲಿಲ್ಲ. ನಿಯಮಗಳ ಅನುಸಾರ, ಮುರ್‍ರಂನ ಬಳಕೆ/ಹೊರತೆಗೆಯುವಿಕೆಯು ರಾಜಧನದ ವಿಧಿಸುವಿಕೆಯನ್ನು ಆಕರ್ಷಿಸುತ್ತದೆ. ಆದಾಗ್ಯೂ, ಗಣಿ ಮತ್ತು ಭೂವಿಜ್ಞಾನ ಇಲಾಖೆಯು ಅಂತಹ ಮಾಹಿತಿಯನ್ನು ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಸಂಬಂಧಿತ ಇಲಾಖೆಗಳು/ಸಂಸ್ಥೆಗಳಿಂದ ಪಡೆದುಕೊಂಡಿರಲಿಲ್ಲ ಮತ್ತು ಆದ್ದರಿಂದ ಅಂತಹ ಖನಿಜಗಳ ಬಳಕೆಯನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆಯು ಖಚಿತಪಡಿಸಿಕೊಂಡಿರಲಿಲ್ಲ. ಮೇಲೆ ತಿಳಿಸಿದಂತೆ ಹೊರತೆಗೆಯಲಾದ ಮುರ್‍ರಂನ ಬಳಕೆ/ಸಾಗಣೆಯಿಂದ ₹ 12.02 ಕೋಟಿ ಮೊತ್ತದಷ್ಟು ಸಂಭಾವ್ಯ ರಾಜಧನವನ್ನು ವಸೂಲಾತಿ ಮಾಡಲು ಸಾಧ್ಯವಿದ್ದಿತು.

ಇದನ್ನು ಲೆಕ್ಕಪರಿಶೋಧನೆಯಲ್ಲಿ ಸ್ಪಷ್ಟಪಡಿಸಿದನಂತರ, ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯು ಅಪ್ರಧಾನ ಖನಿಜಗಳ ಆಂತರಿಕ ಬಳಕೆಯ ಬಗ್ಗೆ ಸುತ್ತೋಲೆ ನಿರ್ದೇಶನಗಳನ್ನು ಕಾಮಗಾರಿಗಳನ್ನು ಕಾರ್ಯಗತಗೊಳಿಸುವ 67 ಇಲಾಖೆಗಳು/ಸಂಸ್ಥೆಗಳಿಗೆ ಕಳುಹಿಸಿಕೊಟ್ಟಿತು.

5.4.3.1ರಿಂದ 5.4.3.2 ಕಂಡಿಕೆಗಳಲ್ಲಿ ತಿಳಿಸಿರುವ ರಾಜಧನವನ್ನು ಮೂಲದಲ್ಲಿಯೇ ಕಡಿದುಕೊಳ್ಳದಿರಲು, ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳು ಬಳಸಿಕೊಳ್ಳುವ ಅಪ್ರಧಾನ ಖನಿಜಗಳ ಮಾಹಿತಿಯ ಸಂಗ್ರಹಣೆಗಾಗಿ ಒಂದು ವ್ಯವಸ್ಥೆಯ ಅನುಪಸ್ಥಿತಿಯು ಕಾರಣವಾಗಿದ್ದಿತು ಎಂಬ ತೀರ್ಮಾನಕ್ಕೆ ಲೆಕ್ಕಪರಿಶೋಧನೆಯು ಬಂದಿರುತ್ತದೆ.

### 5.4.4 ಪರಿಷ್ಕರಣಾ–ಪೂರ್ವ ದರಗಳನ್ನು ಅಳವಡಿಸಿಕೊಂಡ ಕಾರಣ ರಾಜಧನವನ್ನು ಕಡಿಮೆ ಪ್ರಮಾಣದಲ್ಲಿ ಕಡಿದುಕೊಂಡಿದ್ದು

ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆಯ ಅಧಿಸೂಚನೆಯ ಅನುಸಾರ, 5 ಮಾರ್ಚ್ 2014ರಿಂದ ಜಾರಿಗೆ ಬಂದಂತೆ ಅಪ್ರಧಾನ ಖನಿಜಗಳ ಮೇಲಿನ ರಾಜಧನವನ್ನು ಪರಿಷ್ಕರಿಸಲಾಯಿತು. ಮುರ್‍ರಂ, ಸಾಮಾನ್ಯ ಮರಳು ಮತ್ತು ಕಟ್ಟಡ ಕಲ್ಲುಗಳು ಹಾಗೂ ಸೈಜು ಕಲ್ಲುಗಳಿಗೆ ರಾಜಧನದ ಪರಿಷ್ಕೃತ ದರಗಳು ಘನ ಮೀಟರು ಒಂದಕ್ಕೆ ಅನುಕ್ರಮವಾಗಿ ₹ 30, ₹ 103 ಹಾಗೂ ₹ 108 ಹಾಗೂ ₹ 158 ಆಗಿದ್ದವು. ಆಯ್ದ 10 ಜಿಲ್ಲೆಗಳಲ್ಲಿ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ 87 ಇಲಾಖೆಗಳು/ಸಂಸ್ಥೆಗಳ ದಾಖಲೆಗಳನ್ನು ಪರೀಕ್ಷಾ–ಪರಿಶೀಲನೆ ಮಾಡುವ ವೇಳೆಯಲ್ಲಿ, ಏಳು ಜಿಲ್ಲೆಗಳಲ್ಲಿ [19] ಕಾಮಗಾರಿಗಳನ್ನು ಕಾರ್ಯಗತಗೊಳಿಸುವ 12 ಇಲಾಖೆಗಳು/ಸಂಸ್ಥೆಗಳು [20] ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆಯು ನೀಡಿದ್ದ (5 ಮಾರ್ಚ್ 2014) ಅಧಿಸೂಚನೆಯಲ್ಲಿ ಸೈಜು ಕಲ್ಲು, ಜೆಲ್ಲಿ, ಸಾಮಾನ್ಯ ಮರಳು ಹಾಗೂ ಮುರ್‍ರಂಗೆ ನಿರ್ದಿಷ್ಟಪಡಿಸಲಾಗಿದ್ದ ದರಗಳಿಗೆ ಪ್ರತಿಯಾಗಿ 2014–2017ರ ಅವಧಿಯಲ್ಲಿ ಕಾರ್ಯಗತಗೊಳಿಸಲಾದ ವಿವಿಧ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಗುತ್ತಿಗೆದಾರರುಗಳ ಬಿಲ್ಲುಗಳಿಂದ ಪರಿಷ್ಕರಣಾ–ಪೂರ್ವ ದರಗಳಲ್ಲಿ ರಾಜಧನವನ್ನು ಮೂಲದಲ್ಲಿಯೇ ಕಡಿದುಕೊಂಡಿದ್ದವು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಕಾಮಗಾರಿಗಳಲ್ಲಿ ಬಳಸಲಾಗಿದ್ದ ಸೈಜು ಕಲ್ಲು (0.15 ಲಕ್ಷ ಘನ ಮೀಟರುಗಳು), ಜಲ್ಲಿ (2.24 ಲಕ್ಷ ಘನ ಮೀಟರುಗಳು), ಸಾಮಾನ್ಯ ಮರಳು (0.45 ಲಕ್ಷ ಘನ ಮೀಟರುಗಳು) ಹಾಗೂ ಮುರ್‍ರಂ (4.73 ಲಕ್ಷ ಘನ ಮೀಟರುಗಳು) ಮೇಲೆ ಪರಿಷ್ಕೃತ ದರಗಳಲ್ಲಿ ಮೂಲದಲ್ಲಿಯೇ ಕಡಿದುಕೊಳ್ಳಬೇಕಿದ್ದ ರಾಜಧನವು ₹ 4.54 ಕೋಟಿ [21] ಆಗುತ್ತದೆಯಾದಲ್ಲಿ, ಕೇವಲ ₹ 2.16 ಕೋಟಿ ಮೊತ್ತವನ್ನು ಮಾತ್ರ ಮೂಲದಲ್ಲಿಯೇ ಕಡಿದುಕೊಳ್ಳಲಾಗಿದ್ದಿತು, ಇದರಿಂದಾಗಿ ₹ 2.38 ಕೋಟಿ ಮೊತ್ತದಷ್ಟು ರಾಜಧನವನ್ನು ಕಡಿಮೆ ಪ್ರಮಾಣದಲ್ಲಿ ಕಡಿದುಕೊಳ್ಳುವಲ್ಲಿ ಪರಿಣಮಿಸಿತು.

ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯು ತಾವು ಕಾರ್ಯಗತಗೊಳಿಸಿದ ಕಾಮಗಾರಿಗಳಲ್ಲಿ ಬಳಸಿರುವ ವಿವಿಧ ಅಪ್ರಧಾನ ಖನಿಜಗಳ ಪರಿಮಾಣಗಳ ಬಗ್ಗೆ ಮಾಹಿತಿಯನ್ನು ಒದಗಿಸುವಂತೆ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳಿಗೆ ನಿರ್ದೇಶನವನ್ನು (ಸುತ್ತೋಲೆ ಸಂಖ್ಯೆ 23 ಮಾರ್ಚ್ 2013)

---

[19] ಚಿತ್ರದುರ್ಗ, ಧಾರವಾಡ, ಕಲಬುರಗಿ, ಕೊಪ್ಪಳ, ಮಡಿಕೇರಿ, ತುಮಕೂರು ಮತ್ತು ಉಡುಪಿ.

[20] ಜಿಲ್ಲಾ ನಗರ ಅಭಿವೃದ್ಧಿ ಕೋಶ, ಚಿತ್ರದುರ್ಗ, ಕಾರ್ಯಾನಿರ್ವಾಹಕ, ಇಂಜಿನಿಯರ್, ಪಂಚಾಯತಿರಾಜ್ ತಾಂತ್ರಿಕ ವಿಭಾಗ (ಮಡಿಕೇರಿ ಮತ್ತು ಕಲಬುರಗಿ), ಕಾರ್ಯನಿರ್ವಾಹಕ ಇಂಜಿನಿಯರ್‌ರವರು – ಯೋಜನಾ ವಿಭಾಗ (ಚಿತ್ರದುರ್ಗ, ಧಾರವಾಡ, ಕೊಪ್ಪಳ, ತುಮಕೂರು ಮತ್ತು ಉಡುಪಿ), ಮೆ. ಕರ್ನಾಟಕ ವಿದ್ಯುತ್ ಪ್ರಸರಣ ನಿಯಂತ್ರಣ ನಿಯಮಿತ, ಹೊಸಅಂಗಡಿ, ಉಡುಪಿ, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಧಾರವಾಡ, ನಿರ್ಮಿತಿ ಕೇಂದ್ರ, ಚಿತ್ರದುರ್ಗ ಹಾಗೂ ಲೋಕೋಪಯೋಗಿ ಕಾಮಗಾರಿಗಳ ಇಲಾಖೆ ಹಾಗೂ ಒಳನಾಡು ಜಲ ಸಾರಿಗೆ ವಿಭಾಗ, ಉಡುಪಿ.

[21] ರಾಜಧನ: ಸೈಜು ಕಲ್ಲು: 14,538.75 x ₹ 158 = ₹ 22,97,123, ಜೆಲ್ಲಿ: 224339.37 x ₹ 108 = ₹2,42,28,652 ಸಾಮಾನ್ಯ ಮರಳು: 45399.52 x ₹ 103 = ₹ 46,76,151 ಹಾಗೂ ಮುರ್‍ರಂ: 4,72,926.08 x ₹ 30 = ₹1,41,87,782.

ನೀಡಿದ್ದಿತಾದರೂ, ಅಂತಹ ಮಾಹಿತಿಯನ್ನು ಸಂಗ್ರಹಿಸುವುದಕ್ಕಾಗಿ ಯಾವುದೇ ವ್ಯವಸ್ಥೆಯೂ ಇರಲಿಲ್ಲ. ಅಲ್ಲದೆಯೇ, ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳು ನಿರ್ದೇಶನಗಳನ್ನು ಕಡ್ಡಾಯವಾಗಿ ಅನುಸರಿಸುವುದನ್ನು ಒತ್ತಾಯಿಸುವುದಕ್ಕಾಗಿ ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯು ಯಾವುದೇ ಅನುಸರಣಾ ಕ್ರಮಗಳನ್ನು ತೆಗೆದುಕೊಂಡಿರಲಿಲ್ಲ. ಈ ಕಾರಣದಿಂದಾಗಿ, ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳು ತಾವು ಬಳಸಿಕೊಂಡ ಅಪ್ರಧಾನ ಖನಿಜಗಳ ಸ್ವರೂಪ ಹಾಗೂ ಪರಿಮಾಣವನ್ನು ಹಾಗೂ ರಾಜಧನವನ್ನು ಯಾವ ದರದಲ್ಲಿ ಮೂಲದಲ್ಲಿಯೇ ಕಡಿದುಕೊಳ್ಳಲಾಗಿದೆ ಎಂಬುದರ ಬಗ್ಗೆ ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯು ಖಚಿತಪಡಿಸಿಕೊಳ್ಳಲಾಗಲಿಲ್ಲ. ಇದರಿಂದಾಗಿ ರಾಜಧನವನ್ನು ಕಡಿಮೆ ಪ್ರಮಾಣದಲ್ಲಿ ಕಡಿದುಕೊಳ್ಳುವಲ್ಲಿ ಪರಿಣಮಿಸಿತು, ಇದು ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯ ಗಮನದಿಂದ ತಪ್ಪಿಸಿಕೊಂಡಿದ್ದಿತು.

ಅಲ್ಲದೆಯೇ, ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯು ನೀಡಿದ್ದ ಸುತ್ತೋಲೆಯ (ಮಾರ್ಚ್ 2013) ಅನುಸಾರ ರಾಜಧನದ ಐದು ಪಟ್ಟು ಮೊತ್ತದಷ್ಟು ದಂಡವನ್ನು ವಿಧಿಸಬೇಕಿದ್ದಿತಾದರೂ, ಖನಿಜ ರವಾನೆ ಪರವಾನಿಗೆಯನ್ನು ಹೊಂದಿರದೆಯೇ ಅಪ್ರಧಾನ ಖನಿಜಗಳ ರವಾನೆಗಾಗಿ ಗುತ್ತಿಗೆದಾರರ ಮೇಲೆ ಅದನ್ನು ವಿಧಿಸಿರಲಿಲ್ಲ.

ಅಪ್ರಧಾನ ಖನಿಜಗಳ ಮಾದರಿ/ಸ್ವರೂಪ, ಬಳಸಿಕೊಳ್ಳಲಾದ/ಹೊರತೆಗೆಯಲಾದ ಪರಿಮಾಣ, ಯಾವ ದರದಲ್ಲಿ ರಾಜಧನವನ್ನು ಮೂಲದಲ್ಲಿಯೇ ಕಡಿದುಕೊಳ್ಳಲಾಗಿದೆ ಹಾಗೂ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳಿಗೆ ವಿವಿಧ ಗುತ್ತಿಗೆದಾರರಗಳು ಅಪ್ರಧಾನ ಖನಿಜಗಳನ್ನು ಯಾವ ಮೂಲಗಳಿಂದ ಸರಬರಾಜು ಮಾಡಿರುವರು, ಇವೇ ಮುಂತಾದ ಮಾಹಿತಿಯನ್ನು ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳಿಂದ ಸಂಗ್ರಹಿಸುವ ಸಲುವಾಗಿ ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯು ಒಂದು ವ್ಯವಸ್ಥೆಯನ್ನು ಸ್ಥಾಪಿಸಬೇಕು ಎಂಬುದಾಗಿ ಈ ಮೂಲಕ ಶಿಫಾರಸ್ಸು ಮಾಡಲಾಗುತ್ತಿದೆ.

## 5.4.5 ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳು ರಾಜಧನವನ್ನು ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಗೆ ವಿಳಂಬವಾಗಿ ಪಾವತಿಸಿದ್ದುದು/ಪಾವತಿಸದಿದ್ದುದು

ಕರ್ನಾಟಕ ಹಣಕಾಸು ಸಂಹಿತೆಯ ಕಲಮು 4ರ ಅನುಸಾರ, ಯಾವುದೇ ಸರ್ಕಾರಿ ನೌಕರರು ತಮ್ಮ ಅಧಿಕೃತ ಸಾಮರ್ಥ್ಯದಂತೆ ತಮಗೆ ಸಂಬಂಧಿಸಿರುವ ಎಲ್ಲಾ ವ್ಯವಹಾರಗಳನ್ನೂ ಯಾವುದೇ ಷರತ್ತುಗಳ ಹೊರತಾಗಿ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು ಹಾಗೂ ಸ್ವೀಕರಿಸಲಾದ ಎಲ್ಲಾ ಹಣಕಾಸುಗಳನ್ನೂ ಯಾವುದೇ ಸಂದರ್ಭಗಳಲ್ಲಿಯೂ ಅನಗತ್ಯ ವಿಳಂಬ ಮಾಡದೆಯೇ ಎರಡು ದಿನಗಳ ಒಳಗೆ ಸರ್ಕಾರಿ ಖಜಾನೆಗೆ ಪಾವತಿಸತಕ್ಕದ್ದು.

ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳು ತಾವು ಮೂಲದಲ್ಲಿಯೇ ಕಡಿದುಕೊಂಡಂತಹ ರಾಜಧನವನ್ನು ಸರ್ಕಾರದ ಲೆಕ್ಕಕ್ಕೆ ಪಾವತಿಸುವಲ್ಲಿನ ಸಮಯ ಪ್ರಜ್ಞೆಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಯಾವುದೇ ಮೇಲ್ವಿಚಾರಣಾ ವ್ಯವಸ್ಥೆಯನ್ನೂ ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯು ಹೊಂದಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಈ ನಿಟ್ಟಿನಲ್ಲಿ ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು:

- ಕಲಬುರಗಿ ಮಹಾನಗರ ಪಾಲಿಕೆಯು 2009-10ರಿಂದ 2013-14ರ ಅವಧಿಗೆ ಗುತ್ತಿಗೆದಾರರುಗಳ ಬಿಲ್ಲುಗಳಿಂದ ಮೂಲದಲ್ಲಿಯೇ ಕಡಿದುಕೊಂಡಿದ್ದ ₹ 1.46 ಕೋಟಿ ಮೊತ್ತದಷ್ಟು ರಾಜಧನವನ್ನು 57 ತಿಂಗಳಿಂದ ಒಂಬತ್ತು ತಿಂಗಳುಗಳಿಂದ ಒಂಬತ್ತು ತಿಂಗಳುಗಳವರೆಗಿನ ವಿಳಂಬದ ನಂತರ ಜನವರಿ 2015ರಲ್ಲಿ ಪಾವತಿಸಿದ್ದಿತು.
- ಕರ್ನಾಟಕ ಉಗ್ರಾಣ ಮಳಿಗೆ ನಿಗಮ ನಿಯಮಿತ, ಬೆಂಗಳೂರು, ಇದು ತಾನು 2006-07ರಿಂದ 2014-15 ಸಾಲುಗಳಲ್ಲಿ ಮೂಲದಲ್ಲಿಯೇ ಕಡಿದುಕೊಂಡಿದ್ದ ₹ 2.37 ಕೋಟಿ ಮೊತ್ತದಷ್ಟು ರಾಜಧನವನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ 85 ತಿಂಗಳುಗಳಿಂದ 15 ತಿಂಗಳುಗಳ ವಿಳಂಬದ ನಂತರ ಜನವರಿ 2014ರಿಂದ ಜೂನ್ 2014ರ ಅವಧಿಯಲ್ಲಿ ಪಾವತಿಸಿದ್ದಿತು.
- ಅಲ್ಲದೆಯೇ, ಪುರ ಸಭೆ, ವಾಡಿ, ಇದು ತಾನು 2014-15ರಲ್ಲಿ ಮೂಲದಲ್ಲಿಯೇ ಕಡಿದುಕೊಂಡಿದ್ದ ₹ 6.06 ಲಕ್ಷ ಮೊತ್ತದಷ್ಟು ರಾಜಧನವನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಪಾವತಿಸಿರಲಿಲ್ಲ.

ಇಲ್ಲಿಯೂ ಕೂಡ, ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳು ರಾಜಧನವನ್ನು ಮೂಲದಲ್ಲಿಯೇ ಕಡಿದುಕೊಳ್ಳುವಿಕೆಯನ್ನು ಗುರುತಿಸುವಲ್ಲಿ ಮತ್ತು ಸಕಾಲಕ್ಕೆ ಸರ್ಕಾರಿ ಖಾತೆಗೆ ಜಮೆ ಮಾಡುವುದನ್ನು ಖಚಿತಪಡಿಸಿಕೊಳ್ಳುವಲ್ಲಿ ಭೂವಿಜ್ಞಾನ ಇಲಾಖೆಗೆ ಸಹಾಯಕವಾಗಿರುವುದಿಲ್ಲ. ಮೇಲೆ ತಿಳಿಸಲಾದಂತೆ, ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಕೆಲವು ಇಲಾಖೆಗಳು/ಸಂಸ್ಥೆಗಳು ತಾವು ಸಂಗ್ರಹಿಸಿದ್ದ ರಾಜಧನವನ್ನು ದೀರ್ಘಾವಧಿಯವರೆಗೆ ತಮ್ಮಲ್ಲಿಯೇ ಉಳಿಸಿಕೊಂಡಿದ್ದವು ಮತ್ತು ಆದ್ದರಿಂದ, ಈ ಹಣಕಾಸನ್ನು ಇನ್ನಿತರೆ ಉದ್ದೇಶಗಳಿಗಾಗಿ ಬಳಸಿಕೊಳ್ಳುವ ಎಲ್ಲಾ ಸಂಭಾವ್ಯತೆಗಳೂ ಇದ್ದವೂ ಹಾಗೂ ಇದು ಸರ್ಕಾರದ ಹಣಕಾಸನ್ನು ತಾತ್ಕಾಲಿಕವಾಗಿ ದುರುಪಯೋಗ ಮಾಡಿಕೊಂಡಂತಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು

ಗಮನಿಸಿತು. ರಾಜಧನವನ್ನು ಮೂಲದಲ್ಲಿಯೇ ಕಡಿದುಕೊಳ್ಳುವಿಕೆಯ ಬಗ್ಗೆ ವಿವರಗಳನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆಯು ಅರಿತಿರಲಿಲ್ಲವಾದ್ದರಿಂದ ಅಂತಹ ಸಂಭಾವ್ಯತೆಗಳು ಗಣನೀಯ ಪ್ರಮಾಣದಲ್ಲಿದ್ದವು.

ಅಲ್ಲದೆಯೇ, ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳು ರಾಜಧನವನ್ನು ವಿಳಂಬವಾಗಿ ಪಾವತಿಸಿದ್ದಕ್ಕಾಗಿ ವಿವಿಧ ಇಲಾಖೆಗಳು/ಸಂಸ್ಥೆಗಳು ಕಾರ್ಯಗತಗೊಳಿಸಿದ ಕಾಮಗಾರಿಗಳ ಮೇಲೆ ಮೂಲದಲ್ಲಿಯೇ ಕಡಿದುಕೊಳ್ಳಲಾದ ತೆರಿಗೆ ಪಾವತಿಯಲ್ಲಿನ ವಿಳಂಬಕ್ಕೆ ತಿಂಗಳು ಒಂದಕ್ಕೆ ಶೇಕಡಾ 1.50 ದರದಲ್ಲಿ ಬಡ್ಡಿಯನ್ನು ವಿಧಿಸುವ ಅನುವನ್ನು ಹೊಂದಿರುವ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ರ ಪರಿಚ್ಛೇದ 9-ಎ(7)ರ ರೀತಿಯಲ್ಲಿ ದಂಡ/ಬಡ್ಡಿಯನ್ನು ವಿಧಿಸುವ ಯಾವುದೇ ಅನುವನ್ನೂ ಕರ್ನಾಟಕ ಅಪ್ರಧಾನ ಖನಿಜಗಳ ರಿಯಾಯಿತಿ ನಿಯಮಗಳು ಹೊಂದಿರುವುದಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ರಾಜಧನವನ್ನು ಪಾವತಿಸುವಲ್ಲಿನ ವಿಳಂಬಗಳನ್ನು ತಡೆಯುವುದಕ್ಕಾಗಿ ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯು ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬುದಾಗಿ ಈ ಮೂಲಕ ಶಿಫಾರಸು ಮಾಡಲಾಗುತ್ತಿದೆ.

## 5.4.6 ಅಪ್ರಧಾನ ಖನಿಜಗಳ ಮೂಲಗಳನ್ನು ಹಾಗೂ ಅಪ್ರಧಾನ ಖನಿಜಗಳನ್ನು ಖನಿಜ ರವಾನೆ ಪರವಾನಿಗೆಗಳನ್ನು ಹೊಂದಿರದೆಯೇ ಸಾಗಣೆ ಮಾಡುವುದನ್ನು ಗುರುತಿಸುವಲ್ಲಿನ/ಪತ್ತೆಹಚ್ಚುವಲ್ಲಿನ ವಿಫಲತೆ

ಕರ್ನಾಟಕ ಅಪ್ರಧಾನ ಖನಿಜಗಳ ರಿಯಾಯಿತಿ ನಿಯಮಗಳು, 1994ರ ನಿಯಮ 3ರ ಅನುಸಾರ, ಊರ್ಜಿತ ಪರವಾನಿಗೆ/ನಿಯಮಗಳ ಅಡಿಯಲ್ಲಿ ಯಾವುದೇ ವ್ಯಕ್ತಿಯು ನೀಡಲಾದ ಪರವಾನಿಗೆಯನ್ನು ಹೊಂದಿರದೆಯೇ ಯಾವುದೇ ಭೂಮಿಯಲ್ಲಿಯೂ ಯಾವುದೇ ಅಪ್ರಧಾನ ಖನಿಜವನ್ನೂ ಗಣಿಗಾರಿಕೆ ಮಾಡುವಂತಿಲ್ಲ. ಅಲ್ಲದೆಯೇ, ಖನಿಜ ರವಾನೆ ಪರವಾನಿಗೆಯನ್ನು ಹೊಂದಿರದೆಯೇ ಯಾವುದೇ ಖನಿಜವನ್ನೂ ಸಾಗಣೆ ಮಾಡುವಂತಿಲ್ಲ ಎಂಬುದಾಗಿಯೂ ಮೇಲೆ ತಿಳಿಸಲಾದ ನಿಯಮಗಳ ನಿಯಮ 42 ತಿಳಿಸುತ್ತದೆ.

ಮಾರ್ಚ್ 2013ರಲ್ಲಿ ನೀಡಲಾಗಿದ್ದ ಸುತ್ತೋಲೆಯ ಷರತ್ತು ಸಂಖ್ಯೆ 5ರ ಪ್ರಕಾರ, ಗುತ್ತಿಗೆದಾರರುಗಳು ತಾವು ಕಾರ್ಯಗತಗೊಳಿಸಿದ ಕಾಮಗಾರಿಗಳಲ್ಲಿ ಬಳಸಿಕೊಂಡಿದ್ದ ಅಪ್ರಧಾನ ಖನಿಜಗಳ ಮೇಲಿನ ರಾಜಧನವನ್ನು ಪಾವತಿಸಿರುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಗುತ್ತಿಗೆದಾರರುಗಳಿಂದ ಖನಿಜ ರವಾನೆ ಪರವಾನಿಗೆಗಳನ್ನು ಸಂಗ್ರಹಿಸುವಂತೆ ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯು ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳಿಗೆ ನಿರ್ದೇಶನವನ್ನು ನೀಡಿದ್ದಿತು. ಮುಂದುವರೆದು, ಕಂಡಿಕೆ 5.4.3ರಲ್ಲಿ ತಿಳಿಸಿರುವಂತೆ, ಖನಿಜ ರವಾನೆ ಪರವಾನಿಗೆಗಳನ್ನು ಒದಗಿಸದಿದ್ದಲ್ಲಿ, ಗುತ್ತಿಗೆದಾರರುಗಳಿಂದ ರಾಜಧನದ ಐದು ಪಟ್ಟು ಮೊತ್ತವನ್ನು ದಂಡದ ರೂಪದಲ್ಲಿ ವಸೂಲಾತಿ ಮಾಡಬೇಕಿದ್ದಿತು.

ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳು ಗುತ್ತಿಗೆಗಳಲ್ಲಿನ ಮೇಲೆ ತಿಳಿಸಲಾದ ಷರತ್ತುಗಳನ್ನೂ ಒಳಗೊಂಡಂತೆ ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯ ಸುತ್ತೋಲೆಗಳು/ನಿರ್ದೇಶನಗಳನ್ನು ಅನುಸರಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಲೆಕ್ಕಪರಿಶೋಧನೆ ಮಾಡಲಾದ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳ ದಾಖಲೆಗಳಿಂದ ಗಮನಿಸಲಾದಂತೆ, ಗುತ್ತಿಗೆದಾರರುಗಳು ಖನಿಜ ರವಾನೆ ಪರವಾನಿಗೆಗಳನ್ನಾಗಲೀ ಅಥವಾ ಗಣಿ ಗುತ್ತಿಗೆದಾರರಿಂದ ಅಥವಾ ಕಲ್ಲು ಪುಡಿ ಮಾಡುವ ಘಟಕಗಳು, ಇತ್ಯಾದಿ ಇತರೆ ವರ್ತಕರಿಂದ ಪಡೆದ ಇನ್ವಾಯ್ಸುಗಳು, ಇತ್ಯಾದಿ ಮತ್ತಿತರೆ ಯಾವುದೇ ದಾಖಲೆಗಳನ್ನಾಗಲೀ ಒದಗಿಸುತ್ತಿರಲಿಲ್ಲ. ಅಲ್ಲದೆಯೇ, ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳು ತಾವು ಕಾರ್ಯಗತಗೊಳಿಸಿದ ಕಾಮಗಾರಿಗಳಲ್ಲಿ ಬಳಸಿಕೊಂಡ ಅಪ್ರಧಾನ ಖನಿಜಗಳ ಮೂಲಗಳ ಬಗ್ಗೆ ವಿವರಗಳನ್ನು ಇಟ್ಟಿರಲಿಲ್ಲ. ಅಲ್ಲದೆಯೇ, ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳಿಂದ ಅಂತಹ ಮಾಹಿತಿಯನ್ನು ಸಂಗ್ರಹಿಸುವ ಸಲುವಾಗಿ ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯು ಯಾವುದೇ ಅನುಸರಣಾ ಪ್ರಯತ್ನಗಳನ್ನು ಮಾಡಿರಲಿಲ್ಲ. ಈ ಕಾರಣದಿಂದಾಗಿ, ಇಲಾಖೆಯು ಈ ಖನಿಜಗಳ ಮೂಲಗಳನ್ನು ಗುರುತಿಸಲು ಸಾಧ್ಯವಾಗಲಿಲ್ಲ ಹಾಗೂ ಈ ಮೂಲಗಳು ಕಾನೂನಾತ್ಮಕವಾಗಿದ್ದವೆ ಅಥವಾ ಇಲ್ಲವೇ ಎಂಬುದರ ಬಗ್ಗೆ ಖಚಿತಪಡಿಸಿಕೊಳ್ಳಲಾಗಲಿಲ್ಲ.

ಖನಿಜ ಮೂಲಗಳನ್ನು ಗುರುತಿಸುವುದು ಕಾನೂನುಬಾಹಿರ ಗಣಿಗಾರಿಕೆಯನ್ನು ತಡೆಯುವುದಕ್ಕಾಗಿ ಮಾತ್ರವಲ್ಲದೇ ಪರಿಸರ ಮತ್ತು ಸಂಬಂಧಿತ ಪರಿಸರ-ವ್ಯವಸ್ಥೆಗಳ ಮೇಲೆ ಗಣಿಗಾರಿಕೆಯ ಪ್ರತಿಕೂಲ ಪರಿಣಾಮಗಳನ್ನು ಕಡಿಮೆಗೊಳಿಸುವಲ್ಲಿ ಪ್ರಮುಖವಾಗಿರುತ್ತದೆ ಎಂಬುದನ್ನು ಲೆಕ್ಕಪರಿಶೋಧನೆಯು ಸ್ಪಷ್ಟಪಡಿಸುತ್ತದೆ.

## 5.4.7 ನಿರ್ಣಯ

ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳ ಮೂಲಕ ಸಂಗ್ರಹಿಸಲಾಗಿದ್ದ ರಾಜಧನವು ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯಿಂದ ವಸೂಲಾತಿಯಾಗಿದ್ದ/ಸಂಗ್ರಹಿಸಲಾಗಿದ್ದ ರಾಜಧನದ ಮೊತ್ತಕ್ಕಿಂತ ಬಹಳ ಅಧಿಕ ಪ್ರಮಾಣದಲ್ಲಿದ್ದಿತು, ಇದು ರಾಜ್ಯದಲ್ಲಿ ಕಾನೂನುಬಾಹಿರ ಗಣಿಗಾರಿಕೆಯು ಗಮನಾರ್ಹ ಪ್ರಮಾಣದಲ್ಲಿ ವೃದ್ಧಿಗೊಂಡಿರುವುದು ಎಂಬುದಾಗಿ ನಾವು ತೀರ್ಮಾನಕ್ಕೆ ಬರಲು ದಾರಿ ಮಾಡಿಕೊಟ್ಟಿದೆ. ರಾಜಧನವನ್ನು ಮೂಲದಲ್ಲಿಯ ಕಡಿದುಕೊಳ್ಳುವುದರ ಮೂಲಕ ವರಮಾನ ಸಂಗ್ರಹಣೆಯನ್ನು

ಅತ್ಯುತ್ತಮಗೊಳಿಸುವ ಸಲುವಾಗಿ ರಾಜ್ಯದಲ್ಲಿ ಖನಿಜಗಳು ಬಳಕೆಯಾಗುವ ಸಂದರ್ಭಗಳು/ಘಟನೆಗಳನ್ನು ಗುರುತಿಸುವ ಸಲುವಾಗಿ ಇಲಾಖೆಯಲ್ಲಿ ಯಾವುದೇ ವ್ಯವಸ್ಥೆಯೂ ಇರಲಿಲ್ಲ. ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯು ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳು ರಾಜಧನಕ್ಕೆ ಸಂಬಂಧಿಸಿದಂತೆ ಎಷ್ಟು ಮೊತ್ತವನ್ನು ಪಾವತಿಸುತ್ತವೆಯೋ ಅಷ್ಟು ಮೊತ್ತವನ್ನು ಮಾತ್ರ ಸ್ವೀಕರಿಸಲು ಸಾಧ್ಯವಾಗಿದ್ದಿತು ಹಾಗೂ ರಾಜಧನವನ್ನು ಮೂಲದಲ್ಲಿಯೇ ಕಡಿದುಕೊಳ್ಳುವ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಎಲ್ಲಾ ಇಲಾಖೆಗಳು/ಸಂಸ್ಥೆಗಳು ಅದನ್ನು ಸರ್ಕಾರಕ್ಕೆ ಪಾವತಿಸುತ್ತಿರುವವೇ ಎಂಬುದನ್ನು ಗುರುತಿಸುವ ಅಥವಾ ಅಂತಹ ಮೂಲದಲ್ಲಿಯೇ ಕಡಿದುಕೊಳ್ಳುವಿಕೆಗಳ ಯಥಾರ್ಥತೆಯನ್ನು ಮತ್ತು/ಅಥವಾ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳು ಅಂತಹ ಪಾವತಿಗಳನ್ನು ಸಮಯೋಚಿತವಾಗಿ ಪಾವತಿಸಿರುವುದನ್ನು ಖಚಿತಪಡಿಸಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯು ರಾಜ್ಯದಲ್ಲಿ ಕೈಗೊಳ್ಳಲಾಗಿರುವ ವಿವಿಧ ಕಾಮಗಾರಿಗಳ ಬಗ್ಗೆ ಯಾವುದೇ ಮಾಹಿತಿಯನ್ನು ಅಥವಾ ರಾಜ್ಯದಲ್ಲಿ ಬಳಸಲಾಗಿರುವ ಅಪ್ರಧಾನ ಖನಿಜಗಳ ಪರಿಮಾಣದ ಬಗ್ಗೆ ಯಾವುದೇ ಮಾಹಿತಿಯನ್ನು ಸಂಗ್ರಹಿಸುವುದಿಲ್ಲ. ಅಲ್ಲದೆಯೇ, ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳ ಮೂಲಕ ಬಳಸಲಾದಂತಹ ಅಪ್ರಧಾನ ಖನಿಜಗಳ ಮೂಲಗಳ ಬಗ್ಗೆ ಮಾಹಿತಿಯ ಸಂಗ್ರಹಣೆಯಲ್ಲಿ ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯು ವಿಫಲಗೊಂಡಿದ್ದಿತು. ಇದು ಕಾನೂನುಬಾಹಿರ ಗಣಿಗಾರಿಕೆಯನ್ನು ಪತ್ತೆಹಚ್ಚದಿರುವಲ್ಲಿ/ ಗುರುತಿಸದಿರುವಲ್ಲಿ ಪರಿಣಮಿಸಿತು ಹಾಗೂ ಇದರ ತತ್ಪರಿಣಾಮವಾಗಿ ಅಂತಹ ಕಾನೂನುಬಾಹಿರ ಚಟುವಟಿಕೆಗಳನ್ನು ತಡೆಯುವಲ್ಲಿ ವಿಫಲಗೊಂಡಿದ್ದಿತು.

## 5.5 ಖನಿಜ ರವಾನೆ ಪರವಾನಿಗೆಗಳನ್ನು ಪಡೆಯದೆಯೇ ರವಾನಿಸಲಾದ ಅಪ್ರಧಾನ ಖನಿಜಗಳ ಮೇಲೆ ರಾಜಧನವನ್ನು ವಿಧಿಸದಿದ್ದುದು

ಗಣಿಗಾರಿಕೆಯ ಗುತ್ತಿಗೆಯನ್ನು ಅಥವಾ ಪರವಾನಿಗೆಯನ್ನು ಹೊಂದಿರುವವರು ತಾವು ಗಣಿಗಳಿಂದ ಹೊರತೆಗೆಯಲಾದ ಅಥವಾ ಬಳಸಿದ ಅಪ್ರಧಾನ ಖನಿಜಗಳ ಮೇಲೆ ನಿಯಮಗಳ ಷೆಡ್ಯೂಲು IIರಲ್ಲಿ ನಿರ್ದಿಷ್ಟಪಡಿಸಲಾಗಿರುವ ದರಗಳಲ್ಲಿ ರಾಜಧನವನ್ನು ಪಾವತಿಸತಕ್ಕದ್ದು ಎಂಬುದಾಗಿ ಕರ್ನಾಟಕ ಅಪ್ರಧಾನ ಖನಿಜಗಳ ರಿಯಾಯಿತಿ ನಿಯಮಗಳು, 1994ರ ನಿಯಮ 36 ನಿರ್ದಿಷ್ಟಪಡಿಸಿದೆ. ವಿದ್ಯುನ್ಮಾನ ನಮೂನೆಯಲ್ಲಿ (ಇ–ಪರವಾನಿಗೆ ಅಥವಾ ಎಂ–ಪರವಾನಿಗೆ) ಗಣಕಯಂತ್ರದಿಂದ ಹೊರತೆಗೆಯಲಾದ ಖನಿಜ ರವಾನೆ ಪರವಾನಿಗೆಯ ಅಡಿಯಲ್ಲಿ ಅಥವಾ ಅದರ ಅನುಸಾರವಲ್ಲದೇ ಮತ್ಯಾವ ರೀತಿಯಲ್ಲಿಯೂ ಯಾವುದೇ ವ್ಯಕ್ತಿಯು ಯಾವುದೇ ಅಪ್ರಧಾನ ಖನಿಜವನ್ನು ಸಾಗಣೆ ಮಾಡುವಂತಿಲ್ಲ ಅಥವಾ ಇತರರು ಸಾಗಿಸಲು ತಾವು ಕಾರಣವಾಗುವಂತಿಲ್ಲ ಎಂಬ ಅಗತ್ಯತೆಯನ್ನು ಕರ್ನಾಟಕ ಅಪ್ರಧಾನ ಖನಿಜಗಳ ರಿಯಾಯಿತಿ ನಿಯಮಗಳ ನಿಯಮ 42(1) ಹೊಂದಿರುತ್ತದೆ. ಹೆಚ್ಚುವರಿಯಾಗಿ, ಗಣಿಗಾರಿಕೆ ಗುತ್ತಿಗೆ ಷರತ್ತು ಪತ್ರದ ಭಾಗ Vರ ಷರತ್ತು ಸಂಖ್ಯೆ 4ರ ಪ್ರಕಾರ, ಖನಿಜ ರವಾನೆ ಪರವಾನಿಗೆಯನ್ನು ಪಡೆಯದೆಯೇ ಅಪ್ರಧಾನ ಖನಿಜ ರವಾನೆಗಾಗಿ ಗುತ್ತಿಗೆಯನ್ನು ಹೊಂದಿರುವವರು ಖನಿಜ ರವಾನೆ ಪರವಾನಿಗೆಯನ್ನು ಪಡೆಯದೆಯೇ ಅಪ್ರಧಾನ ಖನಿಜಗಳ ಸಾಗಣೆಗಾಗಿ ರಾಜಧನದ ಐದು ಪಟ್ಟು ಮೊತ್ತವನ್ನು ದಂಡದ ರೂಪದಲ್ಲಿ ಪಾವತಿಸಲು ಬಾಧ್ಯರಾಗಿರುತ್ತಾರೆ. ಮುಂದುವರೆದು, ಖನಿಜ ರವಾನೆ ಪರವಾನಿಗೆಗಳನ್ನು ಪಡೆಯದೆಯೇ ಅಪ್ರಧಾನ ಖನಿಜಗಳನ್ನು ಸಾಗಣೆ ಮಾಡಿದ್ದಕ್ಕಾಗಿ ರಾಜಧನದ ಐದು ಪಟ್ಟು ಮೊತ್ತವನ್ನು ದಂಡದ ರೂಪದಲ್ಲಿ ವಿಧಿಸುವುದಕ್ಕಾಗಿ ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶಕರವರು ಇಲಾಖೆಯ ಎಲ್ಲಾ ಕಚೇರಿಗಳಿಗೆ ಸುತ್ತೋಲೆ[22] ನಿರ್ದೇಶನಗಳನ್ನು ನೀಡಿರುವರು (ಮೇ 2016).

ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯ ಮೂರು[23] ಉಪ–ನಿರ್ದೇಶಕರುಗಳು ಹಾಗೂ ಒಂದು[24] ಹಿರಿಯ ಭೂವಿಜ್ಞಾನಿಯವರ ಕಚೇರಿಗಳ ತಗಾದೆ, ವಸೂಲಾತಿ ಮತ್ತು ಬಾಕಿಗಳ ತ:ಖ್ತೆಗಳು, ಉತ್ಪಾದನೆಗೆ ಸಂಬಂಧಿತ ನಿರ್ಧಾರಣಾ ದಾಖಲೆಗಳು, ಪರವಾನಿಗೆ ನೀಡಿಕೆ ವಹಿಗಳು ಹಾಗೂ ಗಣಿಗಾರಿಕೆ ಗುತ್ತಿಗೆಯನ್ನು ಹೊಂದಿರುವವರು ಪಡೆದಿದ್ದ ಇ–ಪರವಾನಿಗಳನ್ನು ನವಂಬರ್ 2016 ಮತ್ತು ಮಾರ್ಚ್ 2017ರ ನಡುವಿನ ಅವಧಿಯಲ್ಲಿ ಪರೀಕ್ಷಾ–ಪರಿಶೀಲನೆ ಮಾಡುವ ವೇಳೆಯಲ್ಲಿ 4,52,527.20 ಮೆಟ್ರಿಕ್ ಟನ್ನುಗಳಷ್ಟು ಕಟ್ಟಡ ಕಲ್ಲುಗಳು ಮತ್ತು 39,007 ಚದರ ಮೀಟರುಗಳಷ್ಟು ಶಹಬಾದ್ ಕಲ್ಲುಗಳನ್ನು 2015–16 ಸಾಲಿನಲ್ಲಿ ಖನಿಜ ರವಾನೆ ಪರವಾನಿಗೆಗಳನ್ನು ಪಡೆದುಕೊಳ್ಳದೆಯೇ ಗಣಿಗಾರಿಕೆ ಗುತ್ತಿಗೆಯನ್ನು ಹೊಂದಿದ್ದವರು ಸಾಗಣೆ ಮಾಡಿದ್ದರು ಹಾಗೂ ಅದಕ್ಕಾಗಿ

---

[22] ಸುತ್ತೋಲೆ ಸಂಖ್ಯೆ ಎಂ ಅಂಡ್ ಜಿ: ಡಿಸಿಬಿ/ಎಸ್‌ಕ್ಯುಎಲ್–1/22/ಡಿಸಿಬಿ/ಡಿಸಿಬಿ ವಿಭಾಗ/2016–2017 ದಿನಾಂಕ 3 ಮೇ 2016.

[23] ಚಿತ್ರದುರ್ಗ, ಕಲಬುರಗಿ ಮತ್ತು ಹೊಸಪೇಟೆ.

[24] ಹಾವೇರಿ.

ರಾಜಧನದ ಐದು ಪಟ್ಟು ಮೊತ್ತವನ್ನು ದಂಡದ ರೂಪದಲ್ಲಿ ವಿಧಿಸಲಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಆದಾಗ್ಯೂ, ₹ 2.77 ಕೋಟಿ[25] ಮೊತ್ತದಷ್ಟು ರಾಜಧನವನ್ನು ವಿಧಿಸಿರಲಿಲ್ಲ.

ಲೆಕ್ಕಪರಿಶೋಧನೆಯು ಈ ಪ್ರಕರಣಗಳನ್ನು ನವಂಬರ್ 2016 ಮತ್ತು ಮಾರ್ಚ್ 2017ರಲ್ಲಿ ಸ್ಪಷ್ಟಪಡಿಸಿದನಂತರ ನಿರ್ದೇಶಕರವರು ಮೇ 2016ರಲ್ಲಿ ನೀಡಿರುವ ಸುತ್ತೋಲೆಯ ಅನುಸಾರ ರಾಜಧನದ ಐದು ಪಟ್ಟು ಮೊತ್ತವನ್ನು ದಂಡದ ರೂಪದಲ್ಲಿ ವಿಧಿಸಲಾಗಿದ್ದಿತು ಎಂಬುದಾಗಿ ಚಿತ್ರದುರ್ಗ ಮತ್ತು ಹೊಸಪೇಟೆಯ್ಯ ಉಪ–ನಿರ್ದೇಶಕರುಗಳು ತಿಳಿಸಿದರು, ಅಲ್ಲದೆಯೇ, ದಂಡದ ಜೊತೆಗೆ ರಾಜಧನವನ್ನು ವಿಧಿಸುವುದರ ಬಗ್ಗೆ ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶಕರವರಿಂದ ಸ್ಪಷ್ಟನೆಯನ್ನು ಮಾಡಿಕೊಳ್ಳಲಾಗುವುದು ಎಂಬುದಾಗಿ ಹೊಸಪೇಟೆಯ ಉಪ–ನಿರ್ದೇಶಕರು ತಿಳಿಸಿದರು. ಸಾಗಣೆ/ಬಳಕೆಯ ಮೊದಲು ಯಾವುದೇ ಅಪ್ರಧಾನ ಖನಿಜಗಳ ಮೇಲೆ ರಾಜಧನವನ್ನು ವಿಧಿಸುವಿಕೆಯು ಕರ್ನಾಟಕ ಅಪ್ರಧಾನ ಖನಿಜಗಳ ರಿಯಾಯಿತಿ ನಿಯಮಗ್ಗಳ ನಿಯಮ 36ರ ಅನುಸಾರ ಸುಸ್ಪಷ್ಟವಾಗಿರುತ್ತದೆ ಮತ್ತು ಕಂಡಿಕೆಯಲ್ಲಿ ಸ್ಪಷ್ಟಪಡಿಸಲಾಗಿರುವ ಎಲ್ಲಾ ಪ್ರಕರಣಗಳಲ್ಲಿಯೂ ಅದನ್ನು ವಿಧಿಸುವುದರಿಂದ ಕೈಬಿಡಲಾಗಿದೆ ಎಂಬುದನ್ನು ಲೆಕ್ಕಪರಿಶೋಧನೆಯು ಸ್ಪಷ್ಟಪಡಿಸಿತು.

ವಿಷಯವನ್ನು ಪರಿಶೀಲಿಸುವುದಾಗಿ ಕಲಬುರಗಿಯ ಉಪ–ನಿರ್ದೇಶಕರು ಮತ್ತು ಹಾವೇರಿಯ ಹಿರಿಯ ಭೂವಿಜ್ಞಾನಿಯವರು ತಿಳಿಸಿದರು.

ಲೆಕ್ಕಪರಿಶೋಧನೆಯು ಏಪ್ರಿಲ್ ಮತ್ತು ಮೇ 2017ರಲ್ಲಿ ಈ ಪ್ರಕರಣಗಳನ್ನು ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶಕರು ಮತ್ತು ಸರ್ಕಾರದ ಗಮನಕ್ಕೆ ತಂದಿತು. ಉತ್ತರವನ್ನು ನಿರೀಕ್ಷಿಸಲಾಗುತ್ತಿದೆ (ನವಂಬರ್ 2017).

## 5.6 ಅಪ್ರಧಾನ ಖನಿಜಗಳ ಅನಧಿಕೃತ ಸಾಗಣೆಗಾಗಿ ದಂಡವನ್ನು ವಿಧಿಸದಿದ್ದುದು

ಕಂಡಿಕೆ 5.5ರಲ್ಲಿ ತಿಳಿಸಿರುವಂತೆ, ವಿದ್ಯುನ್ಮಾನ ನಮೂನೆಯಲ್ಲಿ (ಇ–ಪರವಾನಿಗೆ ಅಥವಾ ಎಂ–ಪರವಾನಿಗೆ) ಗಣಕಯಂತ್ರದಿಂದ ಹೊರತೆಗೆಯಲಾದ ಖನಿಜ ರವಾನೆ ಪರವಾನಿಗೆಯ ಅಡಿಯಲ್ಲಿ ಅಥವಾ ಅದರ ಅನುಸಾರವಲ್ಲದೇ ಮತ್ಯಾವ ರೀತಿಯಲ್ಲಿಯೂ ಯಾವುದೇ ವ್ಯಕ್ತಿಯು ಯಾವುದೇ ಅಪ್ರಧಾನ ಖನಿಜವನ್ನು ಸಾಗಣೆ ಮಾಡುವಂತಿಲ್ಲ ಅಥವಾ ಇತರರು ಸಾಗಿಸಲು ತಾವು ಕಾರಣವಾಗುವಂತಿಲ್ಲ ಎಂಬ ಅಗತ್ಯತೆಯನ್ನು ಕರ್ನಾಟಕ ಅಪ್ರಧಾನ ಖನಿಜಗಳ ರಿಯಾಯಿತಿ ನಿಯಮಗಳ ನಿಯಮ 42(1) ಅಗತ್ಯತೆಯನ್ನು ಹೊಂದಿರುತ್ತದೆ.

ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯ ಇಬ್ಬರು[26] ಉಪ–ನಿರ್ದೇಶಕರುಗಳು ಹಾಗೂ ಏಳು[27] ಹಿರಿಯ ಭೂವಿಜ್ಞಾನಿಯವರ ಕಚೇರಿಗಳ ತಗಾದೆ, ವಸೂಲಾತಿ ಮತ್ತು ಬಾಕಿಗಳ ತ:ಖ್ತೆಗಳು, ಉತ್ಪಾದನೆಗೆ ಸಂಬಂಧಿತ ನಿರ್ಧಾರಣಾ ದಾಖಲೆಗಳು, ಪರವಾನಿಗೆ ನೀಡಿಕೆ ವಹಿಗಳು ಹಾಗೂ ಗಣಿಗಾರಿಕೆ ಗುತ್ತಿಗೆಯನ್ನು ಹೊಂದಿರುವವರು ಪಡೆದಿದ್ದ ಇ–ಪರವಾನಿಗಳನ್ನು ನವಂಬರ್ 2016 ಮತ್ತು ಮಾರ್ಚ್ 2017ರ ನಡುವಿನ ಅವಧಿಯಲ್ಲಿ ಪರೀಕ್ಷಾ–ಪರಿಶೀಲನೆ ಮಾಡುವ ವೇಳೆಯಲ್ಲಿ 33,87,255 ಮೆಟ್ರಿಕ್ ಟನ್ನುಗಳು, 27,800 ಮೆಟ್ರಿಕ್ ಟನ್ನುಗಳು, ಹಾಗೂ 62,524 ಮೆಟ್ರಿಕ್ ಟನ್ನುಗಳಷ್ಟು ಅನುಕ್ರಮವಾಗಿ ಕಟ್ಟಡ ಕಲ್ಲುಗಳು, ಮುರ್ರಂ ಹಾಗೂ ಸಾಮಾನ್ಯ ಮಣ್ಣನ್ನು ಗಣಿಗಾರಿಕೆ ಗುತ್ತಿಗೆದಾರರುಗಳು 2012–13ರಿಂದ 2015–16ರ ಅವಧಿಯಲ್ಲಿ ಸಾಗಾಣಿಕೆ ಮಾಡಿದ್ದರು ಎಂಬುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಯಿತು. ಗಣಿಗಾರಿಕೆ ಗುತ್ತಿಗೆದಾರರು, ಆದಾಗ್ಯೂ, ಕೇವಲ 13,49,909 ಮೆಟ್ರಿಕ್ ಟನ್ನುಗಳು, 2500 ಮೆಟ್ರಿಕ್ ಟನ್ನುಗಳು ಹಾಗೂ 50,370 ಮೆಟ್ರಿಕ್ ಟನ್ನುಗಳಷ್ಟು ಅನುಕ್ರಮವಾಗಿ ಕಟ್ಟಡ ಕಲ್ಲು, ಮುರ್ರಂ ಹಾಗೂ ಸಾಮಾನ್ಯ ಮಣ್ಣಿಗೆ ಪರವಾನಿಗೆಗಳನ್ನು ಪಡೆದುಕೊಂಡಿದ್ದರು. ಆದ್ದರಿಂದ, 20,37,346 ಮೆಟ್ರಿಕ್ ಟನ್ನುಗಳಷ್ಟು ಕಟ್ಟಡ ಕಲ್ಲು, 25,300 ಮೆಟ್ರಿಕ್ ಟನ್ನುಗಳಷ್ಟು ಮುರ್ರಂ ಹಾಗೂ 12,154 ಮೆಟ್ರಿಕ್ ಟನ್ನುಗಳಷ್ಟು ಸಾಮಾನ್ಯ ಮಣ್ಣನ್ನು ಖನಿಜ ರವಾನೆ ಪರವಾನಿಗೆಗಳನ್ನು ಪಡೆದುಕೊಳ್ಳದೆಯೇ ಸಾಗಾಣಿಕೆ ಮಾಡಲಾಗಿದ್ದಿತು. ಈ ಎಲ್ಲಾ ಪ್ರಕರಣಗಳಲ್ಲಿಯೂ ರಾಜಧನವನ್ನು ವಿಧಿಸಲಾಗಿದ್ದಿತಾದರೂ, ಖನಿಜ ರವಾನೆ ಪರವಾನಿಗೆಗಳಿಲ್ಲದೆಯೇ ಮಾಡಲಾಗಿದ್ದ ಸಾಗಾಣಿಕೆಗಳಿಗೆ ಗುತ್ತಿಗೆ ಒಡಂಬಡಿಕೆಯ ಅನುವುಗಳ ಪ್ರಕಾರ ರಾಜಧನದ ಐದು ಪಟ್ಟು ಅಂದರೆ ₹ 58.22 ಕೋಟಿ ಮೊತ್ತವನ್ನು ವಿಧಿಸಬೇಕಿದ್ದಿತು. ಆದಾಗ್ಯೂ, ಆರು[28] ಕಚೇರಿಗಳು ಯಾವುದೇ ದಂಡವನ್ನು ವಿಧಿಸಿರಲಿಲ್ಲವಾದಲ್ಲಿ ಇತರೆ ಮೂರು[29] ಕಚೇರಿಗಳು 2013–14 ಮತ್ತು

[25] ಕಟ್ಟಡಕಲ್ಲು ಹಾಗೂ ಶಹಬಾದ ಕಲ್ಲಿಗೆ ಅನುಕ್ರಮವಾಗಿ ಮೆಟ್ರಿಕ್ ಟನ್ನು ಒಂದಕ್ಕೆ ₹ 60 ಹಾಗೂ ಚದರ ಮೀಟರು ಒಂದಕ್ಕೆ ₹ 15 ಆಗಿದ್ದಿತು.

[26] ಬೆಳಗಾವಿ ಮತ್ತು ಹೊಸಪೇಟೆ.

[27] ಬಳ್ಳಾರಿ, ಧಾರವಾಡ, ದಾವಣಗೆರೆ, ಗದಗ, ಕೊಪ್ಪಳ, ರಾಯಚೂರು ಮತ್ತುಯಾದಗಿರಿ.

[28] ಬಳ್ಳಾರಿ, ದಾವಣಗೆರೆ, ಕೊಪ್ಪಳ, ರಾಯಚೂರು, ಹೊಸಪೇಟೆ ಮತ್ತು ಯಾದಗಿರಿ.

[29] ಬಳ್ಳಾರಿ, ಧಾರವಾಡ ಮತ್ತು ಗದಗ.

2015–16ರಲ್ಲಿ ₹ 6.77 ಕೋಟಿ ಮೊತ್ತದಷ್ಟು ದಂಡವನ್ನು ವಿಧಿಸಿದ್ದವು. ಇದರಿಂದಾಗಿ, ₹ 51.45 ಕೋಟಿ ಮೊತ್ತದಷ್ಟು ದಂಡವನ್ನು ವಿಧಿಸದಿರುವಲ್ಲಿ/ಕಡಿಮೆ ಪ್ರಮಾಣದಲ್ಲಿ ವಿಧಿಸುವಲ್ಲಿ ಪರಿಣಮಿಸಿದ್ದಿತು.

ಲೆಕ್ಕಪರಿಶೋಧನೆಯು ಅದೇ ರೀತಿಯ ಲೋಪದೋಶಗಳನ್ನು ಹಿಂದಿನ ಲೆಕ್ಕಪರಿಶೋಧನಾ ಸಂದರ್ಭಗಳಲ್ಲಿಯೂ [30] ಸಹ ಸ್ಪಷ್ಟಪಡಿಸಿದ್ದಿತು ಹಾಗೂ ಇಲಾಖೆಯು ಕರ್ನಾಟಕ ಅಪ್ರಧಾನ ಖನಿಜಗಳ ರಿಯಾಯಿತಿ ನಿಯಮಗಳು, 1994ರ ನಿಯಮ 42(1)ರ ಅನುವುಗಳು ನಿರ್ದಿಷ್ಟ ಪಡಿಸದಿರುವ ಅಪ್ರಧಾನ ಖನಿಜಗಳಿಗೆ ಅನ್ವಯಿಸುವುದಿಲ್ಲ ಎಂಬುದಾಗಿಯೇ ತಿಳಿಸುತ್ತಾ ಬಂದಿರುತ್ತದೆ. ಲೆಕ್ಕಪರಿಶೋಧನೆಯು ಈ ವಾದವನ್ನು ಒಪ್ಪಿಕೊಂಡಿರುವುದಿಲ್ಲ ಹಾಗೂ ಖನಿಜ ರವಾನೆ ಪರವಾನಿಗೆಯು ಒಂದು ನಿಯಂತ್ರಕ ಕ್ರಮವಾಗಿದ್ದು ಖನಿಜಗಳ ಸಾಗಣಿಕೆಯನ್ನು ನಿಯಂತ್ರಿಸುವಲ್ಲಿ ಅತ್ಯಗತ್ಯವಾಗಿರುತ್ತದೆ ಎಂಬುದನ್ನು ಸ್ಪಷ್ಟಪಡಿಸಿರುತ್ತದೆ. ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶಕರವರು ಲೆಕ್ಕಪರಿಶೋಧನೆಯ ಅಭಿಪ್ರಾಯವನ್ನು ಒಪ್ಪಿಕೊಂಡರು ಹಾಗೂ ಖನಿಜ ರವಾನೆ ಪರವಾನಿಗೆಯನ್ನು ಹೊಂದಿರದೆಯೇ ಸಾಗಾಣಿಕೆ ಮಾಡಿದ ಖನಿಜಗಳ ರವಾನೆಗಾಗಿ ರಾಜಧನದ ಐದು ಪಟ್ಟು ಮೊತ್ತವನ್ನು ದಂಡದ ರೂಪದಲ್ಲಿ ವಿಧಿಸುವುದನ್ನು ಒತ್ತಿ ಹೇಳಿದಂತೆ ಒಂದು ಸುತೋಲೆಯನ್ನು ನೀಡಿದರು (ಮೇ 2016).

ಲೆಕ್ಕಪರಿಶೋಧನೆಯು ಈ ಪ್ರಕರಣಗಳನ್ನು ನವಂಬರ್ 2016 ಮತ್ತು ಮಾರ್ಚ್ 2017ರ ನಡುವೆ ಸ್ಪಷ್ಟಪಡಿಸಿದಾಗ, ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶಕರು ನೀಡಿರುವ ಸುತ್ತೋಲೆಯ (ಮೇ 2016) ಅನುಸಾರ ರಾಜಧನದ ಐದು ಪಟ್ಟು ಮೊತ್ತವನ್ನು ದಂಡದ ರೂಪದಲ್ಲಿ ವಿಧಿಸಲಾಗಿದೆ ಎಂಬುದಾಗಿ ಬೆಳಗಾವಿಯ ಉಪ–ನಿರ್ದೇಶಕರವರು ಹಾಗೂ ಧಾರವಾಡದ ಹಿರಿಯ ಭೂವಿಜ್ಞಾನಿಯವರು ಉತ್ತರಿಸಿದರು. ಆದಾಗ್ಯೂ, ರಾಜಧನದ ಒಂದು ಪಟ್ಟನ್ನು ತಗಾದೆ, ವಸೂಲಾತಿ ಮತ್ತು ಬಾಕಿ ವಹಿಯಲ್ಲಿ ಸಮರ್ಪಕ ರಾಜಧನದ ಕಡೆಗೆ ಹೊಂದಾಣಿಕೆ ಮಾಡಿಕೊಂಡಿದ್ದರಿಂದ ದಂಡವನ್ನು ರಾಜಧನದ ನಾಲ್ಕು ಪಟ್ಟು ವಿಧಿಸಿರುವುದು ಕಂಡು ಬಂದಿತು. ಗುತ್ತಿಗೆ ಒಡಂಬಡಿಕೆಯ ಅನುವುಗಳು ಮತ್ತು ನಿರ್ದೇಶಕರು ನೀಡಿರುವ ಸುತ್ತೋಲೆಯು ರಾಜಧನದ ಐದು ಪಟ್ಟು ಮೊತ್ತವನ್ನು ದಂಡದ ರೂಪದಲ್ಲಿ ವಿಧಿಸುವ ಅಗತ್ಯತೆಯನ್ನು ಹೊಂದಿರುವುದರಿಂದ ಹಾಗೂ ಯಾವುದೇ ಒಂದು ಖನಿಜವು ಕರ್ನಾಟಕ ಅಪ್ರಧಾನ ಖನಿಜಗಳ ರಿಯಾಯಿತಿ ನಿಯಮಗಳ ನಿಯಮ 36ರ ಅನುಸಾರ ನಿಯಮಗಳ ಷೆಡ್ಯೂಲು IIರ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ದರಗಳಲ್ಲಿ ರಾಜಧನವನ್ನು ವಿಧಿಸಲ್ಪಟ್ಟಿರಬೇಕಾಗಿರುವುದರಿಂದ ವಾದವನ್ನು ಒಪ್ಪುವಂತಿಲ್ಲ.

ಉಳಿದ ಎಲ್ಲಾ ಪ್ರಕರಣಗಳಿಗೆ ಸಂಬಂಧಿಸಿದಂತೆ, ವಿಷಯವನ್ನು ಪರಿಶೀಲಿಸುವುದಾಗಿ ಉಪ–ನಿರ್ದೇಶಕರುಗಳು/ಹಿರಿಯ ಭೂವಿಜ್ಞಾನಿಗಳು ಉತ್ತರಿಸಿದರು.

ಈ ಪ್ರಕರಣಗಳನ್ನು ಲೆಕ್ಕಪರಿಶೋಧನೆಯು ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶಕರವರಿಗೆ ಹಾಗೂ ಸರ್ಕಾರಕ್ಕೆ ಫೆಬ್ರವರಿ ಮತ್ತು ಮೇ 2017ರಲ್ಲಿ ತಿಳಿಸಿತು. ಉತ್ತರವನ್ನು ನಿರೀಕ್ಷಿಸಲಾಗುತ್ತಿದೆ (ನವಂಬರ್ 2017).

---

[30] 2014–15 ಸಾಲಿನ ಲೆಕ್ಕಪರಿಶೋಧನಾ ವರದಿಯ ಕಂಡಿಕೆ 6.6 (2015ರ ವರದಿ ಸಂಖ್ಯೆ 3) ಹಾಗೂ 2015–16 ಸಾಲಿನ ಲೆಕ್ಕಪರಿಶೋಧನಾ ವರದಿಯ ಕಂಡಿಕೆ 6.4 (2016ರ ವರದಿ ಸಂಖ್ಯೆ 5).

# ಅಧ್ಯಾಯ-VI : ಭೂ ಕಂದಾಯ

# ಅಧ್ಯಾಯ–VI
# ಭೂ ಕಂದಾಯ

## 6.1 ತೆರಿಗೆ ನಿರ್ವಹಣೆ

ಭೂ ಕಂದಾಯದಿಂದ ಬರುವಂತಹ ಸ್ವೀಕೃತಿಗಳು, ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 ಹಾಗೂ ಅದರ ಅಡಿಯಲ್ಲಿ ರೂಪಿಸಿರುವಂತಹ ನಿಯಮಗಳ ಅಡಿಯಲ್ಲಿ ನಿಯಂತ್ರಿಸಲ್ಪಡುತ್ತವೆ ಹಾಗೂ ಸರ್ಕಾರದ ಮಟ್ಟದಲ್ಲಿ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಂದ ನಿಯಂತ್ರಿಸಲ್ಪಡುತ್ತವೆ. ಪ್ರಧಾನ ಕಾರ್ಯದರ್ಶಿಯವರು, ನಾಲ್ಕು ಪ್ರಾದೇಶಿಕ ಆಯುಕ್ತರುಗಳು (ರೀಜನಲ್ ಕಮಿಷನರ್‌ಗಳು), 30 ಜಿಲ್ಲಾಧಿಕಾರಿಗಳು (ಡಿಸಿಗಳು), 44 ಸಹಾಯಕ ಆಯುಕ್ತರುಗಳು (ಎಸಿಗಳು) ಹಾಗೂ 179 ತಹಸೀಲುದಾರರುಗಳ ಸಹಾಯದಿಂದ ಕಾರ್ಯನಿರ್ವಹಿಸುವರು.

## 6.2 ಆಂತರಿಕ ಲೆಕ್ಕಪರಿಶೋಧನೆ

ಒಂದು ಆಂತರಿಕ ಲೆಕ್ಕಪರಿಶೋಧನಾ ವಿಭಾಗದ ಉದ್ದೇಶವು, ಆಗಿರುವ ತಪ್ಪುಗಳನ್ನು ಖಚಿತವಾಗಿ ತೋರಿಸಿ ಹಾಗೂ ಸಮಯವು ನಷ್ಟವಾಗದ ರೀತಿಯಲ್ಲಿ ಪರಿಹಾರಕ ಕ್ರಮಗಳನ್ನು ಖಚಿತಪಡಿಸುವ ಒಂದು ನಿರೋಧಕ ಹಾಗೂ ಸುಧಾರಣಾ ಫಲಿತಾಂಶವನ್ನು ಹೊಂದಿರುತ್ತದೆ

ಇಲಾಖೆಯು ಆಂತರಿಕ ಲೆಕ್ಕಪರಿಶೋಧನಾ ವಿಭಾಗವನ್ನು ಸ್ಥಾಪಿಸಿಲ್ಲವಾದ್ದರಿಂದ, ಅದು ನಿಯಂತ್ರಣ ವಿಫಲತೆಗಳ ಅಪಾಯಕ್ಕೆ ಗುರಿಯಾಗುವ ಸಂಭಾವ್ಯತೆಯಿರುತ್ತದೆ.

ಆಂತರಿಕ ನಿಯಂತ್ರಣಗಳ ಸಮರ್ಪಕತೆಯ ಮೇಲೆ ಒಂದು ನ್ಯಾಯಸಮ್ಮತ ಭರವಸೆಯನ್ನು ಒದಗಿಸುವ ರೀತಿಯಲ್ಲಿ ನಿಯಮಗಳು ಮತ್ತು ಕಾರ್ಯವಿಧಾನಗಳ ಜೊತೆಯಲ್ಲಿ ಅನುಪಾಲನಾ ಕ್ರಮಗಳ ಮಟ್ಟವನ್ನು ಪರೀಕ್ಷಿಸುವುದಕ್ಕಾಗಿ ಹಾಗೂ ಮೌಲ್ಯಮಾಪನ ಮಾಡುವುದಕ್ಕಾಗಿ ಇಲಾಖೆಯಲ್ಲಿ ಆಂತರಿಕ ಲೆಕ್ಕಪರಿಶೋಧನಾ ವಿಭಾಗವನ್ನು ಸ್ಥಾಪಿಸಬೇಕೆಂಬುದಾಗಿ ಲೆಕ್ಕಪರಿಶೋಧನೆಯು ಈ ಮೂಲಕ ಶಿಫಾರಸು ಮಾಡುತ್ತಿದೆ.

## 6.3 ಲೆಕ್ಕಪರಿಶೋಧನೆಯ ಫಲಿತಾಂಶಗಳು

2016–17ರಲ್ಲಿ, ಭೂ ಕಂದಾಯ ಇಲಾಖೆಯ 46 ಕಚೇರಿಗಳ ದಾಖಲೆಗಳ ಪರೀಕ್ಷಾ–ಪರಿಶೀಲನೆಯು, 38 ಕಂಡಿಕೆಗಳ ಮೂಲಕ ₹ 5.23 ಕೋಟಿ ಮೊತ್ತವು ಒಳಗೊಂಡಂತೆ ಭೂಮಿಯ ಮೌಲ್ಯ, ಗುತ್ತಿಗೆ ಬಾಡಿಗೆ, ಪರಿವರ್ತನಾ ದಂಡ, ಸಂಯೋಜನಾ ದಂಡವನ್ನು ವಸೂಲಾತಿ ಮಾಡದಿದ್ದುದು/ಕಡಿಮೆ ಪ್ರಮಾಣದಲ್ಲಿ ವಸೂಲಾತಿ ಮಾಡಿದ್ದುದು ಹಾಗೂ ಇನ್ನಿತರೆ ನಿಯಮಬಾಹಿರತೆಗಳನ್ನು ತೋರಿಸಿಕೊಟ್ಟಿತು, ಅವುಗಳು **ಕೋಷ್ಟಕ 6.1**ರಲ್ಲಿ ನೀಡಲಾಗಿರುವಂತೆ ಈ ಕೆಳಗಿನ ಪ್ರವರ್ಗಗಳ ಅಡಿಯಲ್ಲಿ ಬರುತ್ತವೆ.

**ಕೋಷ್ಟಕ 6.1**
**ಲೆಕ್ಕಪರಿಶೋಧನೆಯ ಫಲಿತಾಂಶಗಳು**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ಪ್ರವರ್ಗ | ಕಂಡಿಕೆಗಳ ಸಂಖ್ಯೆ | ಮೊತ್ತ |
|---|---|---|---|
| 1. | ಭೂಮಿಯ ಮೌಲ್ಯವನ್ನು ಹಾಗೂ ಗುತ್ತಿಗೆ ಬಾಡಿಗೆಯನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು | 09 | 3.00 |
| 2. | ಪರಿವರ್ತನಾ ದಂಡ ಮತ್ತು ಸಂಯೋಜನಾ ಶುಲ್ಕವನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು/ವಿಧಿಸದಿದ್ದುದು | 20 | 1.28 |
| 3. | ಇತರೆ ನಿಯಮ ಬಾಹಿರತೆಗಳು | 09 | 0.95 |
| | **ಒಟ್ಟು** | **38** | **5.23** |

ಪ್ರಸಕ್ತ ಸಾಲಿನಲ್ಲಿ, ಇಲಾಖೆಯು ನಾಲ್ಕು ಕಂಡಿಕೆಗಳಲ್ಲಿ ₹ 6.41 ಲಕ್ಷ ಮೊತ್ತದಷ್ಟು ಕರನಿರ್ಧಾರಣೆಗಳನ್ನು ಕಡಿಮೆ ಪ್ರಮಾಣದಲ್ಲಿ ಮಾಡಿದ್ದುದನ್ನು ಒಪ್ಪಿಕೊಂಡಿತು. ಹಿಂದಿನ ಸಾಲುಗಳಲ್ಲಿ ಸ್ಪಷ್ಟಪಡಿಸಲಾಗಿದ್ದಂತಹ 31 ಕಂಡಿಕೆಗಳಲ್ಲಿನ ₹1.53 ಕೋಟಿ ಮೊತ್ತವನ್ನೂ ಸಹ ವಸೂಲಾತಿ ಮಾಡಿತು.

₹ 1.11 ಕೋಟಿ ಮೊತ್ತವು ಒಳಗೊಂಡಂತೆ ಸಂಯೋಜನಾ ಮೊತ್ತವು ವಸೂಲಾತಿಯಾಗದಿರುವ/ಕಡಿಮೆ ಪ್ರಮಾಣದಲ್ಲಿ ವಸೂಲಾತಿಯಾಗಿರುವ ಕೆಲವು ದೃಷ್ಟಾಂತ ಪ್ರಕರಣಗಳನ್ನು ಮುಂದಿನ ಕಂಡಿಕೆಯಲ್ಲಿ ಚರ್ಚಿಸಲಾಗಿದೆ.

## 6.4 ಸಂಯೋಜನಾ ಮೊತ್ತವನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು

ಜಿಲ್ಲಾಧಿಕಾರಿಯವರ ಅನುಮತಿಯನ್ನು ಪಡೆಯುವುದರೊಂದಿಗೆ ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಗಳಿಗಾಗಿ ಪರಿವರ್ತಿಸಿಕೊಳ್ಳುವುದಕ್ಕೆ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಪರಿಚ್ಛೇದ 95 (2) ಅನುವು ಮಾಡಿರುತ್ತದೆ. ಮುಂದುವರೆದು, ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಪರಿಚ್ಛೇದ 96(4)ರ ಪ್ರಕಾರ, ಅನುಮತಿಯನ್ನು ಪಡೆಯದೆಯೇ ಪರಿವರ್ತನೆಗಳನ್ನು ಮಾಡಿದ್ದಲ್ಲಿ, ಜಿಲ್ಲಾಧಿಕಾರಿಯವರು ಅಂತಹ ಪರಿವರ್ತನೆಗಳನ್ನು ಸಂಯೋಜನಾ ಮೊತ್ತವನ್ನು ವಸೂಲಾತಿ ಮಾಡುವುದರೊಂದಿಗೆ ಪರಿವರ್ತನೆಗೊಳಿಸಬಹುದು. ಪರಿವರ್ತನಾ ಮೊತ್ತದ ದರಗಳನ್ನು ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 107–ಎ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿದೆ.

ಮೂರು ತಹಸೀಲ್ದಾರುಗಳು ಮತ್ತು ಆರು ಜಿಲ್ಲಾಧಿಕಾರಿಗಳ ದಾಖಲೆಗಳನ್ನು ಆಗಸ್ಟ್ 2015 ಮತ್ತು ಡಿಸೆಂಬರ್ 2016ರ ನಡುವಿನ ಅವಧಿಯಲ್ಲಿ ಪರೀಕ್ಷಾ–ಪರಿಶೀಲನೆ ಮಾಡುವ ವೇಳೆಯಲ್ಲಿ, 13 ಪ್ರಕರಣಗಳಲ್ಲಿ 2012–13ರಿಂದ 2015–16 ಸಾಲುಗಳಲ್ಲಿ ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಗಳಿಗಾಗಿ ಪರಿವರ್ತಿಸಿಕೊಳ್ಳುವ ಸಲುವಾಗಿ ಜಿಲ್ಲಾಧಿಕಾರಿಯವರು ಅನುಮತಿಯನ್ನು ನೀಡಿದ್ದರು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಸಂಬಂಧಿತ ತಹಸೀಲ್ದಾರುಗಳ ಭೂಮಿ ಪರೀಕ್ಷಣಾ ವರದಿಗಳನ್ನು ಪರಿಶೀಲಿಸುವ ವೇಳೆಯಲ್ಲಿ, ಆದಾಗ್ಯೂ, ಇವುಗಳು ಕೃಷಿ ಭೂಮಿ ಆಗಿದ್ದವು ಹಾಗೂ ಇವುಗಳನ್ನು ಕೃಷಿಯೇತರ ಉದ್ದೇಶಗಳಿಗಾಗಿ ಪರಿವರ್ತನೆಗೊಂಡಿದ್ದವಾದರೂ, ಪರಿವರ್ತನೆಗಾಗಿ ಜಿಲ್ಲಾಧಿಕಾರಿಯವರಿಂದ ಅನುಮತಿಯನ್ನು ಪಡೆಯುವ ಮೊದಲು ಈ ಭೂಮಿಯಲ್ಲಿ ಕಟ್ಟಡಗಳನ್ನು ನಿರ್ಮಿಸುವ ಮೂಲಕ ಗಣಿಗಾರಿಕೆ ಹಾಗೂ ಇತರೆ ಕೈಗಾರಿಕಾ ಚಟುವಟಿಕೆಗಳು, ಇತ್ಯಾದಿಗಳನ್ನು ನಡೆಸಿಕೊಂಡು ಹೋಗಲಾಗುತ್ತಿದ್ದಿತು ಎಂಬುದನ್ನು ಗಮನಿಸಲಾಯಿತು. ಈ ಪ್ರಕರಣಗಳು ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಗಳಿಗಾಗಿ ಜಿಲ್ಲಾಧಿಕಾರಿಯವರ ಪೂರ್ವಾನುಮತಿಯನ್ನು ಪಡೆಯದೆಯೇ ಪರಿವರ್ತನೆ ಮಾಡಲಾಗಿದ್ದ ಪ್ರಕರಣಗಳಾಗಿದ್ದವಾದ್ದರಿಂದ, ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಪರಿಚ್ಛೇದ 96(4)ರ ಪ್ರಕಾರ ಈ ಎಲ್ಲಾ ಪ್ರಕರಣಗಳಲ್ಲಿಯೂ ಒಂದು ನಿರ್ದಿಷ್ಟ ದರಗಳಲ್ಲಿ ಸಂಯೋಜನಾ ಮೊತ್ತವನ್ನು ವಿಧಿಸಬೇಕಿದ್ದಿತು. ಮೇಲೆ ತಿಳಿಸಲಾದ ಪ್ರಕರಣಗಳ ಪೈಕಿ, ಆರು ಪ್ರಕರಣಗಳಲ್ಲಿ ₹ 61.88 ಲಕ್ಷ ಮೊತ್ತದಷ್ಟು ಸಂಯೋಜನಾ ಮೊತ್ತವನ್ನು ವಿಧಿಸಿರಲಿಲ್ಲ ಹಾಗೂ ಉಳಿದ ಏಳು ಪ್ರಕರಣಗಳಲ್ಲಿ ₹ 48.81 ಲಕ್ಷ ಮೊತ್ತದಷ್ಟು ಸಂಯೋಜನಾ ಮೊತ್ತವನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸಲಾಗಿದ್ದಿತು.

ವಿಧಿಸದಿದ್ದಂತಹ/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದಂತಹ ಒಟ್ಟಾರೆ ಸಂಯೋಜನಾ ಮೊತ್ತವು **ಕೋಷ್ಟಕ 6.2**ರಲ್ಲಿ ನೀಡಲಾಗಿರುವಂತೆ ₹ 1.11 ಕೋಟಿ ಆಗಿದ್ದಿತು.

**ಕೋಷ್ಟಕ 6.2**
**ಸಂಯೋಜನಾ ಮೊತ್ತವನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದನ್ನು ತೋರಿಸುವ ವಿವರಗಳು**

(₹ ಲಕ್ಷದಲ್ಲಿ)

| ಕಚೇರಿಯ ಹೆಸರು | ಪ್ರಕರಣಗಳ ಸಂಖ್ಯೆ | ವಿಧಿಸಬೇಕಾಗಿದ್ದ / ವಿಧಿಸಲಾಗಿದ್ದ ಸಂಯೋಜನಾ ಮೊತ್ತ | ವಿಧಿಸಲಾಗಿದ್ದ ಸಂಯೋಜನಾ ಮೊತ್ತ | ಸಂಯೋಜನಾ ಮೊತ್ತವನ್ನು ವಿಧಿಸದಿದ್ದುದು/ ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು |
|---|---|---|---|---|
| ತಹಸೀಲ್ದಾರರು, ಬೆಂಗಳೂರು ಉತ್ತರ ತಾಲ್ಲೂಕು | 02 | 9.06 | 1.81 | 7.25 |
| ಸಂಯೋಜನಾ ಮೊತ್ತವನ್ನು ವಸತಿಯೇತರ ಉದ್ದೇಶಗಳಿಗಾಗಿ ವಿಧಿಸುವ ಬದಲು ವಸತಿ ಉದ್ದೇಶಗಳಿಗಾಗಿ ನಿರ್ದಿಷ್ಟಪಡಿಸಲಾಗಿರುವ ದರಗಳಲ್ಲಿ ವಿಧಿಸಲಾಗಿದ್ದಿತು. | | | | |
| ತಹಸೀಲ್ದಾರರು, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್. ಪುರಂ | 01 | 14.62 | 1.12 | 13.50 |
| ಸಂಯೋಜನಾ ಮೊತ್ತವನ್ನು 25,434 ಚದರ ಅಡಿಗಳಿಗೆ ವಿಧಿಸುವ ಬದಲು 1,955 ಚದರ ಅಡಿಗಳಿಗೆ ವಿಧಿಸಲಾಗಿದ್ದಿತು. | | | | |
| ಜಿಲ್ಲಾಧಿಕಾರಿಯವರು, ಬೆಂಗಳೂರು ನಗರ | 02 | 8.32 | 1.14 | 7.18 |
| ಒಂದು ಪ್ರಕರಣದಲ್ಲಿ ಸಂಯೋಜನಾ ಮೊತ್ತವನ್ನು 13,068 ಚದರ ಅಡಿಗಳಿಗೆ ವಿಧಿಸುವ ಬದಲು 1,980 ಚದರ ಅಡಿಗಳಿಗೆ ವಿಧಿಸಲಾಗಿದ್ದಿತು. ಮತ್ತೊಂದು ಪ್ರಕರಣದಲ್ಲಿ 1,406 ಚದರ ಅಡಿಗಳಿಗೆ ಸಂಯೋಜನಾ ಮೊತ್ತವನ್ನು ವಿಧಿಸಿರಲಿಲ್ಲ. (0.81 ಲಕ್ಷ). | | | | |
| ಜಿಲ್ಲಾಧಿಕಾರಿಯವರು, ಬಿದರ್ | 02 | 50.53 | ಯಾವುದೇ ಮೊತ್ತವನ್ನೂ ವಿಧಿಸಿರಲಿಲ್ಲ | 50.53 |
| ಕಲ್ಲು ಪುಡಿ ಮಾಡುವ/ಅರೆಯುವ ಉದ್ದೇಶಗಳಿಗೆ ಭೂಮಿಯನ್ನು ಅನಧಿಕೃತವಾಗಿ/ನಿಯಮಬಾಹಿರವಾಗಿ ಬಳಸಿಕೊಂಡದ್ದಕ್ಕೆ ಸಂಯೋಜನಾ ಮೊತ್ತವನ್ನು ವಿಧಿಸಿರಲಿಲ್ಲ. | | | | |
| ಜಿಲ್ಲಾಧಿಕಾರಿಯವರು, ಚಾಮರಾಜನಗರ | 01 | 1.16 | ಯಾವುದೇ ಮೊತ್ತವನ್ನೂ ವಿಧಿಸಿರಲಿಲ್ಲ | 1.16 |
| ಗ್ರಾನೈಟು ಗಣಿಗಾರಿಕೆಗಾಗಿ ಭೂಮಿಯನ್ನು ಅನಧಿಕೃತವಾಗಿ/ನಿಯಮಬಾಹಿರವಾಗಿ ಬಳಸಿಕೊಂಡದ್ದಕ್ಕೆ ಸಂಯೋಜನಾ ತೆರಿಗೆಯನ್ನು ವಿಧಿಸಿರಲಿಲ್ಲ. | | | | |
| ಜಿಲ್ಲಾಧಿಕಾರಿಯವರು, ದಾವಣಗೆರೆ | 02 | 12.73 | 4.84 | 7.89 |
| ಸಂಯೋಜನಾ ಮೊತ್ತವನ್ನು ವಸತಿಯೇತರ ಉದ್ದೇಶಗಳಿಗಾಗಿ ನಿರ್ದಿಷ್ಟಪಡಿಸಲಾಗಿರುವ ದರಗಳಲ್ಲಿ ವಿಧಿಸುವ ಬದಲು ವಸತಿ ಉದ್ದೇಶಗಳಿಗಾಗಿ ನಿರ್ದಿಷ್ಟಪಡಿಸಲಾಗಿದ್ದ ದರಗಳಲ್ಲಿ ವಿಧಿಸಲಾಗಿದ್ದಿತು. | | | | |

| ಕಚೇರಿಯ ಹೆಸರು | ಪ್ರಕರಣಗಳ ಸಂಖ್ಯೆ | ವಿಧಿಸಬೇಕಾಗಿದ್ದ / ವಿಧಿಸಲಾಗಿದ್ದ ಸಂಯೋಜನಾ ಮೊತ್ತ | ವಿಧಿಸಲಾಗಿದ್ದ ಸಂಯೋಜನಾ ಮೊತ್ತ | ಸಂಯೋಜನಾ ಮೊತ್ತವನ್ನು ವಿಧಿಸದಿದ್ದುದು/ ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು |
|---|---|---|---|---|
| ತಹಸೀಲ್ದಾರರು, ಹಾಸನ | 01 | 7.38 | ಯಾವುದೇ ಮೊತ್ತವನ್ನೂ ವಿಧಿಸಿರಲಿಲ್ಲ | 7.38 |
| ಅನಧಿಕೃತ/ನಿಯಮಬಾಹಿರ ಕಲ್ಲುಗಣಿಗಾರಿಕೆ ಚಟುವಟಿಕೆಗಳಿಗಾಗಿ ಬಳಸಿಕೊಳ್ಳಲಾಗಿದ್ದ ಭೂಮಿಗೆ ಸಂಬಂಧಿಸಿದಂತೆ ಸಂಯೋಜನಾ ಮೊತ್ತವನ್ನು ವಿಧಿಸಿರಲಿಲ್ಲ. | | | | |
| ಜಿಲ್ಲಾಧಿಕಾರಿಯವರು, ಹಾಸನ | 01 | 2.00 | ಯಾವುದೇ ಮೊತ್ತವನ್ನೂ ವಿಧಿಸಿರಲಿಲ್ಲ | 2.00 |
| ಅನಧಿಕೃತ/ನಿಯಮಬಾಹಿರ ಕಲ್ಲುಗಣಿಗಾರಿಕೆ ಚಟುವಟಿಕೆಗಳಿಗಾಗಿ ಬಳಸಿಕೊಳ್ಳಲಾಗಿದ್ದ ಭೂಮಿಗೆ ಸಂಬಂಧಿಸಿದಂತೆ ಸಂಯೋಜನಾ ಮೊತ್ತವನ್ನು ವಿಧಿಸಿರಲಿಲ್ಲ. | | | | |
| ಜಿಲ್ಲಾಧಿಕಾರಿಯವರು, ತುಮಕೂರು | 01 | 17.40 | 3.60 | 13.80 |
| ಸಂಯೋಜನಾ ಮೊತ್ತವನ್ನು ವಸತಿಯೇತರ ಉದ್ದೇಶಗಳಿಗಾಗಿ ನಿರ್ದಿಷ್ಟಪಡಿಸಲಾಗಿರುವ ದರಗಳಲ್ಲಿ ವಿಧಿಸುವ ಬದಲು ವಸತಿ ಉದ್ದೇಶಗಳಿಗಾಗಿ ನಿರ್ದಿಷ್ಟಪಡಿಸಲಾಗಿದ್ದ ದರಗಳಲ್ಲಿ ವಿಧಿಸಲಾಗಿದ್ದಿತು. | | | | |
| **ಒಟ್ಟು** | **13** | **123.20** | **12.51** | **110.69** |

ಈ ಪ್ರಕರಣಗಳನ್ನು ಫೆಬ್ರವರಿ ಹಾಗೂ ಮಾರ್ಚ್ 2017ರಲ್ಲಿ ಇಲಾಖೆ ಹಾಗೂ ಸರ್ಕಾರದ ಗಮನಕ್ಕೆ ತಂದನಂತರ, ಭೂಮಿಯನ್ನು ವಸತಿ ಗೃಹಗಳ ನಿರ್ಮಾಣದ ಉದ್ದೇಶಕ್ಕಾಗಿ ಪರಿವರ್ತಿಸಲಾಗಿದ್ದಿತಾದ್ದರಿಂದ ವಸತಿ ಉದ್ದೇಶಗಳಿಗೆ ಅನ್ವಯಗೊಳ್ಳುವ ದರಗಳಲ್ಲಿ ಸಂಯೋಜನಾ ತೆರಿಗೆಯನ್ನು ವಿಧಿಸಲಾಗಿದ್ದಿತು ಎಂಬುದಾಗಿ ತುಮಕೂರಿನ ಜಿಲ್ಲಾಧಿಕಾರಿಯವರು ತಿಳಿಸಿದರು. ಭೂಮಿಯನ್ನು ಕೃಷಿಯೇತರ ಉದ್ದೇಶಗಳಿಗಾಗಿ (ಕೈಗಾರಿಕೆ) ಮಾರ್ಗಾಂತರಣ ಮಾಡಲಾಗಿದ್ದಿತಾದ್ದರಿಂದ ಮತ್ತು ವಸತಿ ಉದ್ದೇಶಕ್ಕೆ ಆಗಿರಲಿಲ್ಲವಾದ್ದರಿಂದ ತುಮಕೂರಿನ ಜಿಲ್ಲಾಧಿಕಾರಿಯವರ ಉತ್ತರವು ಒಪ್ಪುವಂತಿಲ್ಲ. ಉಳಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ಉತ್ತರವನ್ನು ನಿರೀಕ್ಷಿಸಲಾಗುತ್ತಿದೆ (ನವಂಬರ್ 2017).

**(ಬಿಜಿತ್ ಕುಮಾರ್ ಮುಖರ್ಜಿ)**

**ಬೆಂಗಳೂರು** **ಮಹಾಲೇಖಾಪಾಲರು**

**ದಿನಾಂಕ** **(ಆರ್ಥಿಕ ಮತ್ತು ರಾಜಸ್ವ ವಲಯ ಲೆಕ್ಕಪರಿಶೋಧನೆ)**

**ಕರ್ನಾಟಕ**

**ಮೇಲುಸಹಿ ಮಾಡಲಾಗಿದೆ**

**ನವದೆಹಲಿ** **(ರಾಜೀವ್ ಮೆಹ್ರಿಷಿ)**

**ದಿನಾಂಕ** **ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು**

# ಅನುಬಂಧಗಳು

| ಅನುಬಂಧ - I (ಕಂಡಿಕೆ 3.4.8) | | | | | | |
|---|---|---|---|---|---|---|
| ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಪ್ರಮಾಣಕಗಳನ್ನು ಪರಿಷ್ಕರಿಸುವಲ್ಲಿನ ವಿಳಂಬದ ಕಾರಣ ವರಮಾನದ ಸಂಭಾವ್ಯ ನಷ್ಟದ ವಿವರಗಳನ್ನು ತೋರಿಸುವ ತ:ಖ್ತೆ | | | | | | |
| ಕ್ರಮ ಸಂಖ್ಯೆ | ಡಿಸ್ಟಿಲರಿಯ ಹೆಸರು | ಉತ್ಪದನೆಯ ಅವಧಿ | ಬಳಸಲಾದ ಕಾಕಂಬಿಯ ಪರಿಮಾಣ ಮೆಟ್ರಿಕ್ ಟನ್ನುಗಳಲ್ಲಿ | ಉತ್ಪಾದನೆಯ ಲೆಕ್ಕಪತ್ರಗಳಲ್ಲಿ ತೋರಿಸಲಾಗಿರುವಂತೆ ಕಾಕಂಬಿಯ ಮೆಟ್ರಿಕ್ ಟನ್ನು ಒಂದಕ್ಕೆ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪಾದನೆ | ಕಾಕಂಬಿಯ ಮೆಟ್ರಿಕ್ ಟನ್ನು ಒಂದಕ್ಕೆ 240 ಬೃಹತ್ ಲೀಟರುಗಳ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಪರಿಷ್ಕೃತ ಪರಿಮಾಣಕ್ಕೆ ಹೋಲಿಸಿದಲ್ಲಿ ಸಂಭವಿಸಿರುವ ಕೊರತೆ | ಪರಿಷ್ಕೃತ ಪರಿಮಾಣಕ್ಕೆ ಹೋಲಿಸಿದಂತೆ ಪ್ರಸಕ್ತ ತಿಂಗಳಿಗೆ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಒಟ್ಟಾರೆ ಕೊರತೆಯ ಉತ್ಪಾದನೆ (ಬೃಹತ್ ಲೀಟರುಗಳಲ್ಲಿ) |
| 1. | ಚಾಮುಂಡಿ ಡಿಸ್ಟಿಲರೀಸ್, ಮೈಸೂರು | ಆಗಸ್ಟ್-12 | 127.000 | 220.20 | 19.80 | 2,514.600 |
| | | ಸೆಪ್ಟಂಬರ್-12 | 1,219.000 | 222.37 | 17.63 | 21,490.970 |
| | | ಅಕ್ಟೋಬರ್-12 | 2,256.000 | 224.30 | 15.70 | 35,419.200 |
| | | ನವಂಬರ್-12 | 2,337.000 | 236.66 | 3.34 | 7,805.580 |
| | | ಮಾರ್ಚ್-14 | 2,085.000 | 236.3 | 3.70 | 7,714.500 |
| 2. | ಕೋರ್ ಗ್ರೀನ್, ಯದಗಿರಿ | ಆಗಸ್ಟ್-12 | 2,074.830 | 237.62 | 2.38 | 4,938.095 |
| | | ಏಪ್ರಿಲ್-13 | 4,960.589 | 232.05 | 7.95 | 39,436.683 |
| | | ಮೇ-13 | 1,722.000 | 235.28 | 4.72 | 8,127.840 |
| | | ಸೆಪ್ಟಂಬರ್-13 | 2,710.000 | 229.62 | 10.38 | 28,129.800 |
| | | ಅಕ್ಟೋಬರ್ -13 | 3,902.000 | 222.12 | 17.88 | 69,767.760 |
| | | ಜನವರಿ-14 | 5,412.000 | 238.89 | 1.11 | 6,007.320 |
| | | ಫೆಬ್ರವರಿ-14 | 5,748.000 | 238.55 | 1.45 | 8,334.600 |
| | | ಮಾರ್ಚ್-14 | 5,990.000 | 237.59 | 2.41 | 14,435.900 |
| | | ಜುಲೈ-14 | 1,866.000 | 228.07 | 11.93 | 22,261.380 |
| | | ಆಗಸ್ಟ್-14 | 3,958.000 | 227.04 | 12.96 | 51,295.680 |
| 3. | ಇಐಡಿ ಪ್ಯಾರಿ | ನವಂಬರ್-12 | 3,648.230 | 221.02 | 18.98 | 69,248.690 |
| 4. | ಇಂಡಿಯನ್ ಶುಗರ್ ಮ್ಯಾನ್ಯುಫ್ಯಾಕ್ಚರಿಂಗ್ ಕಂಪನಿ ಲಿಮಿಟೆಡ್ | ಜುಲೈ–14 | 2,021.000 | 237.86 | 2.14 | 4,324.000 |
| 5. | ಜೆ.ಪಿ. ಡಿಸ್ಟಿಲರೀಸ್ | ಏಪ್ರಿಲ್-12 | 2,829.000 | 226.422 | 13.58 | 38,412.162 |
| | | ಮೇ-12 | 3,034.000 | 236.034 | 3.97 | 12,032.844 |
| | | ಜುಲೈ -13 | 3,936.000 | 239.718 | 0.28 | 1,109.952 |
| | | ಆಗಸ್ಟ್ -13 | 3,825.000 | 239.719 | 0.28 | 1,074.825 |
| | | ಸೆಪ್ಟಂಬರ್-13 | 2,614.000 | 236.48 | 3.52 | 9,201.280 |
| | | ಅಕ್ಟೋಬರ್ -13 | 4,008.000 | 233.44 | 6.56 | 26,292.480 |
| | | ನವಂಬರ್ -13 | 1,773.000 | 234.517 | 5.48 | 9,721.359 |
| 6. | ಮಲಪ್ರಭಾ (ಸಹಕಾರಿ ಸಕ್ಕರೆ ಕಾರ್ಖಾನ್ ನಿಯಮಿತ) | ಏಪ್ರಿಲ್ -12 | 1,977.000 | 222.71 | 17.29 | 34,182.330 |
| | | ಫೆಬ್ರವರಿ-14 | 2,847.880 | 225.14 | 14.86 | 42,319.497 |
| | | ಜನವರಿ -15 | 2,642.640 | 238.02 | 1.98 | 5,232.427 |
| | | ಮಾರ್ಚ್ -15 | 2,341.140 | 218.39 | 21.61 | 50,592.035 |
| 7. | ಎನ್ಎಸ್ಎಲ್ ಶುಗರ್ಸ್ ಮಂಡ್ಯ | ಸೆಪ್ಟಂಬರ್-12 | 2,947.000 | 236.57 | 3.43 | 10,108.210 |
| 8. | ಸ್ಯಾಮ್ಸನ್ ಡಿಸ್ಟಿಲರೀಸ್ | 2011-12 | 28,462.000 | 235.62 | 4.38 | 1,24,623.000 |
| | | ಏಪ್ರಿಲ್ -13 | 1,053.000 | 235.90 | 4.10 | 4,314.000 |
| | | ಫೆಬ್ರವರಿ-14 | 5,732.000 | 239.87 | 0.13 | 770.000 |
| | | ಮಾರ್ಚ್ -14 | 6,449.000 | 237.07 | 2.93 | 18,897.000 |

**ಅನುಬಂಧ - I (ಕಂಡಿಕೆ 3.4.8)**

**ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಪ್ರಮಾಣಕಗಳನ್ನು ಪರಿಷ್ಕರಿಸುವಲ್ಲಿನ ವಿಳಂಬದ ಕಾರಣ ವರಮಾನದ ಸಂಭಾವ್ಯ ನಷ್ಟದ ವಿವರಗಳನ್ನು ತೋರಿಸುವ ತ:ಖ್ತೆ**

| ಕ್ರಮ ಸಂಖ್ಯೆ | ಡಿಸ್ಟಿಲರಿಯ ಹೆಸರು | ಉತ್ಪದನೆಯ ಅವಧಿ | ಬಳಸಲಾದ ಕಾಕಂಬಿಯ ಪರಿಮಾಣ ಮೆಟ್ರಿಕ್ ಟನ್ನುಗಳಲ್ಲಿ | ಉತ್ಪಾದನೆಯ ಲೆಕ್ಕಪತ್ರಗಳಲ್ಲಿ ತೋರಿಸಲಾಗಿರುವಂತೆ ಕಾಕಂಬಿಯ ಮೆಟ್ರಿಕ್ ಟನ್ನು ಒಂದಕ್ಕೆ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಉತ್ಪಾದನೆ | ಕಾಕಂಬಿಯ ಮೆಟ್ರಿಕ್ ಟನ್ನು ಒಂದಕ್ಕೆ 240 ಬೃಹತ್ ಲೀಟರುಗಳ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಪರಿಷ್ಕೃತ ಪರಿಮಾಣಕ್ಕೆ ಹೋಲಿಸಿದಲ್ಲಿ ಸಂಭವಿಸಿರುವ ಕೊರತೆ | ಪರಿಷ್ಕೃತ ಪರಿಮಾಣಕ್ಕೆ ಹೋಲಿಸಿದಂತೆ ಪ್ರಸಕ್ತ ತಿಂಗಳಿಗೆ ಶುದ್ಧೀಕರಿಸಲ್ಪಟ್ಟ ಮದ್ಯಸಾರದ ಒಟ್ಟಾರೆ ಕೊರತೆಯ ಉತ್ಪಾದನೆ (ಬೃಹತ್ ಲೀಟರುಗಳಲ್ಲಿ) |
|---|---|---|---|---|---|---|
| | | 2014-15 | 47,861.000 | 234.27 | 5.73 | 2,74,397.000 |
| 9. | ಎಸ್‌ಎಲ್‌ಎನ್ ಡಿಸ್ಟಿಲರೀಸ್ | ಮೇ -12 | 2,215.000 | 234.50 | 5.50 | 12,173.820 |
| | | ಜೂನ್-12 | 2,530.000 | 229.61 | 10.39 | 26,287.860 |
| | | ಆಗಸ್ಟ್ -12 | 1,774.000 | 234.38 | 5.62 | 9,978.720 |
| | | ಸೆಪ್ಟಂಬರ್-12 | 749.000 | 234.64 | 5.36 | 4,014.300 |
| | | ಅಕ್ಟೋಬರ್ -12 | 1,716.000 | 233.54 | 6.46 | 11,079.720 |
| | | ಜೂನ್ -13 | 2,070.000 | 239.27 | 0.73 | 1,507.560 |
| | | ಜುಲೈ -13 | 1,836.000 | 234.48 | 5.52 | 10,138.140 |
| | | ಆಗಸ್ಟ್ -13 | 2,325.000 | 232.71 | 7.29 | 16,943.580 |
| | | ಸೆಪ್ಟಂಬರ್ -13 | 1,418.000 | 232.48 | 7.52 | 10,659.120 |
| | | ಮೇ -14 | 2,324.000 | 233.16 | 6.84 | 15,902.460 |
| | | ಜೂನ್ -14 | 1,822.000 | 233.64 | 6.36 | 11,584.860 |
| | | ಜುಲೈ -14 | 1,530.000 | 234.90 | 5.10 | 7,797.540 |
| | | ಆಗಸ್ಟ್ -14 | 2,348.000 | 235.68 | 4.32 | 10,146.360 |
| | | ಸೆಪ್ಟಂಬರ್ -14 | 734.000 | 236.30 | 3.70 | 2,717.520 |
| | | ಅಕ್ಟೋಬರ್ -14 | 1,101.000 | 233.11 | 6.89 | 7,581.180 |
| | | ನವಂಬರ್ -14 | 1,876.000 | 235.83 | 4.17 | 7,821.480 |
| | | ಡಿಸೆಂಬರ್-14 | 2,595.000 | 238.87 | 1.13 | 2,933.400 |
| 10. | ವಿಜಯನಗರ ಶುಗರ್ಸ್ ಪ್ರೈವೇಟ್ ಲಿಮಿಟೆಡ್ | ಏಪ್ರಿಲ್-12 | 8,170.290 | 237.79 | 2.21 | 18,056.341 |
| | | ಮೇ -12 | 9,926.800 | 230.93 | 9.07 | 90,036.076 |
| | | ಜೂನ್-12 | 1,158.310 | 213.00 | 27.00 | 31,274.370 |
| | | ಮೇ -13 | 4,154.000 | 230.48 | 9.52 | 39,546.080 |
| | | ಜೂನ್-13 | 8,162.300 | 238.26 | 1.74 | 14,202.402 |
| | | ಜುಲೈ -13 | 7,742.000 | 236.91 | 3.09 | 23,922.780 |
| | | ಜೂನ್-14 | 13,941.000 | 238.04 | 1.96 | 27,324.360 |
| | | ಸೆಪ್ಟಂಬರ್ -14 | 12,442.000 | 237.25 | 2.75 | 34,215.500 |
| | | ಅಕ್ಟೋಬರ್ -14 | 10,263.000 | 227.07 | 12.93 | 1,32,700.590 |
| | | ನವಂಬರ್-14 | 877.000 | 218.19 | 21.81 | 19,127.370 |
| | | ಮೇ -15 | 11,158.000 | 231.05 | 8.95 | 99,864.100 |
| | | ಜೂನ್ -15 | 13,266.000 | 239.87 | 0.13 | 1,724.580 |
| 11. | ಶ್ರೀ ರೇಣುಕಾ ಶುಗರ್ಸ್ ಲಿಮಿಟೆಡ್, ಮನೋಳಿ | ಮೇ-13 | 5,383.070 | 235.54 | 4.46 | 24,008.492 |
